ಬಂಗಾರದ ಜಿಂಕೆ

ನಿರಂಜನ



i

ಬಂಗಾರದ ಜಿಂಕೆ

ನಿರಂಜನ

ಬಂಗಾರದ ಜಿಂಕೆ.

ಪ್ರಕಾಶ ಪ್ರಕಾಶನ
ಉಡುಪಿ

ಪ್ರಥಮ ಮುದ್ರಣ: ನವೆಂಬರ್, ೧೯೭೩

ಮುಖಚಿತ್ರ:
ಎಸ್. ರಮೇಶ್

[illegible]
[illegible]

ಮುದ್ರಣ:
ಮಣಿಪಾಲ ಪವರ್ ಪ್ರೆಸ್

ಪ್ರಕಾಶನ:
ಪ್ರಕಾಶ ಪ್ರಕಾಶನ, ಉಡುಪಿ

ನಾಲ್ವತ್ತನಾಲ್ಕನೆಯ
ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ

ಡಾ. ರಂ. ಶ್ರೀ. ಮುಗಳಿ

–ಅವರಿಗೆ

ನೆನಕೆ

ಕನ್ನಡದಲ್ಲಿ ಯಾವುದೇ ಸಾಪ್ತಾಹಿಕ ಜನಪ್ರಿಯವಾಗಬೇಕಾದರೆ ರಾಜಧಾನಿಯಿಂದ ಅದು ಪ್ರಕಟವಾಗಬೇಕು – ಎನ್ನುವ ಕಾಲ ಒಂದಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ಉಡುಪಿಯಿಂದ ಹೊರಡುತ್ತಿರುವ 'ಪ್ರಕಾಶ' ಹೊಸ ಹಾದಿಯನ್ನು ತುಳಿದು, ಕನ್ನಡ ವಾರಪತ್ರಿಕೆಗಳ ಸಮುದಾಯದಲ್ಲಿ ಅಗ್ರಶ್ರೇಣಿಯನ್ನು ಅಲಂಕರಿಸಿದೆ.

ಆ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸುವುದಕ್ಕೋಸ್ಕರ ಕಾದಂಬರಿಯೊಂದನ್ನು ಬರೆದುಕೊಡಬೇಕೆಂದು ಶ್ರೀ. ಯು. ವ್ಯಾಸರಾಯರು ಕೇಳಿದಾಗ ನಾನು ಸಂತೋಷದಿಂದ ಒಪ್ಪಿಕೊಂಡೆ.

ಹಾಗೆ ಬರೆದ 'ಬಂಗಾರದ ಜಿಂಕೆ' ಪ್ರಕಾಶದಲ್ಲಿ ಈಗ ಧಾರಾವಾಹಿಯಾಗಿ ಪ್ರಕಟವಾಗುತ್ತಿರುವುದಷ್ಟೇ ಅಲ್ಲ, ಪುಸ್ತಕರೂಪದಲ್ಲೂ ಅದು ಹೊರಬೀಳುತ್ತಿದೆ. ಕಮರ್ಶಿಯಲ್ ಕಾರ್ಪೊರೇಷನ್ ಆಫ್ ಇಂಡಿಯಾ, ಪ್ರೈವೇಟ್ ಲಿಮಿಟೆಡ್‌ನ ಡೈರೆಕ್ಟರರಾದ ಶ್ರೀ. ಟಿ. ಮೋಹನದಾಸ ಪೈಯವರು ಈ ಸುಂದರ ಪ್ರಕಟಣೆಗೆ ಕಾರಣರಾಗಿದ್ದಾರೆ.

ಸಂಪಾದಕರಾದ ಶ್ರೀ. ಎ. ಜೆ. ಅಲ್ಸೆಯವರೂ 'ಪ್ರಕಾಶ'ದ ಈ ಹೊಸ ಸಾಧನೆಗೆ ಪ್ರೇರಕಶಕ್ತಿಯಾಗಿದ್ದಾರೆ.

ಸಂಭ್ರಮದ ಸಂಗತಿಯೆಂದರೆ ಕೈಯಿಂದ ಮೊಳೆ ಜೋಡಿಸದೆಯೇ ಅಚ್ಚಾಗುತ್ತಿರುವ ಮೊದಲ ಕನ್ನಡ ಗ್ರಂಥ, ಇದು. ಇಲ್ಲಿರುವುದು ಮೊನೊಟೈಪ್ ಮುದ್ರಣ ವಿನ್ಯಾಸ. ಮಣಿಪಾಲ ಪವರ್ ಪ್ರೆಸ್ಸಿನವರು ಈ ಅಂದವಾದ ಮುದ್ರಣವನ್ನು ಕನ್ನಡ ಗ್ರಂಥಲೋಕಕ್ಕೆ ಪ್ರಥಮ ಕಾಣಿಕೆಯಾಗಿ ಸಲ್ಲಿಸುತ್ತಿದ್ದಾರೆ.

ಒಳಗಿನ ಅಂದಕ್ಕೆ ಹೊಂದಿಕೆಯಾಗುವಂತಹ ರಕ್ಷಾಕವಚವನ್ನು ಕಲಾವಿದ ಶ್ರೀ. ರಮೇಶ್ ರಚಿಸಿದ್ದಾರೆ.

–ಇವರೆಲ್ಲರಿಗೆ ನನ್ನ ನೆನಕೆಗಳು ಸಲ್ಲುತ್ತವೆ.

ದೀಪಾವಳಿ, ೧೯೬೩
ಜಯನಗರ
ಬೆಂಗಳೂರು—೧೧

—ನಿರಂಜನ

'ಪ್ರಕಾಶ' ನುಡಿ

ಓದುಗರ ಬಯಕೆಯೇ "ಪ್ರಕಾಶ"ದ ಬದುಕು. ಈ ನಿಟ್ಟಿನಲ್ಲಿ ಪ್ರಕಾಶವೂ ಧಾರಾವಾಹಿ ಕಾದಂಬರಿಯೊಂದನ್ನು ಪ್ರಕಟಿಸಬಯಸಿತು. ಕನ್ನಡದ ಜನಪ್ರಿಯ ಕಾದಂಬರಿಕಾರ ಶ್ರೀ ನಿರಂಜನರ "ಬಂಗಾರದ ಜಿಂಕೆ" ಕಾದಂಬರಿಯನ್ನೆ ಧಾರಾವಾಹಿಯಾಗಿ ಪ್ರಕಟಿಸುವ ಅವಕಾಶ ದೊರೆತದ್ದು ನಮ್ಮ ಹೆಮ್ಮೆಗೆ ಹೇತುವೆನಿಸಿದೆ. ಇದಕ್ಕೆ ಕಾರಣರಾದ ಶ್ರೀ ನಿರಂಜನರಿಗೆ 'ಪ್ರಕಾಶ'ದ ನೆನಕೆಗಳು.

ಬಂಗಾರದ ಜಿಂಕೆಯನ್ನು ಓದಿ ಮೆಚ್ಚಿದ ಜನ ಅದು ಪುಸ್ತಕವಾಗಿರುವುದನ್ನು ಕಾಣಬಯಸಿತು. ಎಂತಲೆ ಅದೀಗ ಪುಸ್ತಕವಾಗಿ ಪ್ರಕಟಗೊಂಡಿದೆ.

ಇದರ ಪ್ರಕಟಣೆಗೆ ಆತ್ಮೀಯ ಭಾವದಿಂದ ಸಹಕಾರವಿತ್ತ ಮಣಿಪಾಲ ಪವರ್ ಪ್ರೆಸ್ಸಿನವರಿಗೂ ಆಕರ್ಷಕ ಮುಖಪೃಷ್ಠವನ್ನು ಬರೆದುಕೊಟ್ಟ ಚಿತ್ರಗಾರ ರಮೇಶ್‌ರವರಿಗೂ ಕೃತಜ್ಞತಾಸ್ಮರಣೆಗಳು.

ಬಂಗಾರದ ಜಿಂಕೆಗೆ ಕನ್ನಡದ ರಸಿಕರು ತುಂಬು ಹೃದಯದ ಸ್ವಾಗತ ವಿತ್ತಾರೆಂದು ಭರವಸೆಯಿದೆ. ಅಂಥ ಸ್ವಾಗತವೆ 'ಪ್ರಕಾಶ'ದ ಮುಂದಿನ ಹೆಜ್ಜೆಗಳಿಗೆ ಬೆಂಬಲ.

ಉಡುಪಿ

ತಾ. ೨೬–೧೧–೧೯೬೩

— ಪ್ರಕಾಶಕರು

ಬಂಗಾರದ ಜಿಂಕೆ

ಬಂಗಾರದ ಜಿಂಕೆ

ನಿರಂಜನ

ಪ್ರಕಾಶ ಪ್ರಕಾಶನ
ಉಡುಪಿ

ಪ್ರಥಮ ಮುದ್ರಣ: ನವೆಂಬರ್, ೧೯೬೩

ಮುಖಚಿತ್ರ:

ಎಸ್. ರಮೇಶ್

ಬೆಲೆ:

ರೂ. ೨–೫೦

ಮುದ್ರಣ:

ಮಣಿಪಾಲ ಪವರ್ ಪ್ರೆಸ್

ಪ್ರಕಾಶನ:

ಪ್ರಕಾಶ ಪ್ರಕಾಶನ, ಉಡುಪಿ

ನಾಲ್ವತ್ತನಾಲ್ಕನೆಯ

ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ

ಡಾ. ರಂ. ಶ್ರೀ. ಮುಗಳಿ

–ಅವರಿಗೆ

ನೆನಕೆ

ಕನ್ನಡದಲ್ಲಿ ಯಾವುದೇ ಸಾಪ್ತಾಹಿಕ ಜನಪ್ರಿಯವಾಗಬೇಕಾದರೆ ರಾಜಧಾನಿಯಿಂದ ಅದು ಪ್ರಕಟವಾಗಬೇಕು – ಎನ್ನುವ ಕಾಲ ಒಂದಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ಉಡುಪಿಯಿಂದ ಹೊರಡುತ್ತಿರುವ 'ಪ್ರಕಾಶ' ಹೊಸ ಹಾದಿಯನ್ನು ತುಳಿದು, ಕನ್ನಡ ವಾರಪತ್ರಿಕೆಗಳ ಸಮುದಾಯದಲ್ಲಿ ಅಗ್ರಶ್ರೇಣಿಯನ್ನು ಅಲಂಕರಿಸಿದೆ.

ಆ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸುವುದಕ್ಕೋಸ್ಕರ ಕಾದಂಬರಿಯೊಂದನ್ನು ಬರೆದುಕೊಡಬೇಕೆಂದು ಶ್ರೀ. ಯು. ವ್ಯಾಸರಾಯರು ಕೇಳಿದಾಗ ನಾನು ಸಂತೋಷದಿಂದ ಒಪ್ಪಿಕೊಂಡೆ.

ಹಾಗೆ ಬರೆದ 'ಬಂಗಾರದ ಜಿಂಕೆ' ಪ್ರಕಾಶದಲ್ಲಿ ಈಗ ಧಾರಾವಾಹಿಯಾಗಿ ಪ್ರಕಟವಾಗುತ್ತಿರುವುದಷ್ಟೇ ಅಲ್ಲ, ಪುಸ್ತಕರೂಪದಲ್ಲೂ ಅದು ಹೊರಬೀಳುತ್ತಿದೆ. ಕಮರ್ಶಿಯಲ್ ಕಾರ್ಪೊರೇಷನ್ ಆಫ್ ಇಂಡಿಯಾ, ಪ್ರೈವೇಟ್ ಲಿಮಿಟೆಡ್‌ನ ಡೈರೆಕ್ಟರರಾದ ಶ್ರೀ. ಟಿ. ಮೋಹನದಾಸ ಪೈಯವರು ಈ ಸುಂದರ ಪ್ರಕಟಣೆಗೆ ಕಾರಣರಾಗಿದ್ದಾರೆ.

ಸಂಪಾದಕರಾದ ಶ್ರೀ. ಎ. ಜೆ. ಅಲ್ಸೆಯವರೂ 'ಪ್ರಕಾಶ'ದ ಈ ಹೊಸ ಸಾಧನೆಗೆ ಪ್ರೇರಕಶಕ್ತಿಯಾಗಿದ್ದಾರೆ.

ಸಂಭ್ರಮದ ಸಂಗತಿಯೆಂದರೆ ಕೈಯಿಂದ ಮೊಳೆ ಜೋಡಿಸದೆಯೇ ಅಚ್ಚಾಗುತ್ತಿರುವ ಮೊದಲ ಕನ್ನಡ ಗ್ರಂಥ ಇದು. ಇಲ್ಲಿರುವುದು ಮೊನೊಟೈಪ್ ಮುದ್ರಣ ವಿನ್ಯಾಸ. ಮಣಿಪಾಲ ಪವರ್ ಪ್ರೆಸ್ಸಿನವರು ಈ ಅಂದವಾದ ಮುದ್ರಣವನ್ನು ಕನ್ನಡ ಗ್ರಂಥಲೋಕಕ್ಕೆ ಪ್ರಥಮ ಕಾಣಿಕೆಯಾಗಿ ಸಲ್ಲಿಸುತ್ತಿದ್ದಾರೆ.

ಒಳಗಿನ ಅಂದಕ್ಕೆ ಹೊಂದಿಕೆಯಾಗುವಂತಹ ರಕ್ಷಾಕವಚವನ್ನು ಕಲಾವಿದ ಶ್ರೀ. ರಮೇಶ್ ರಚಿಸಿದ್ದಾರೆ.

–ಇವರೆಲ್ಲರಿಗೆ ನನ್ನ ನೆನಕೆಗಳು ಸಲ್ಲುತ್ತವೆ.

ದೀಪಾವಳಿ, ೧೯೬೩
ಜಯನಗರ
ಬೆಂಗಳೂರು–೧೧

— ನಿರಂಜನ

'ಪ್ರಕಾಶ' ನುಡಿ

ಓದುಗರ ಬಯಕೆಯೇ "ಪ್ರಕಾಶ"ದ ಬದುಕು. ಈ ನಿಟ್ಟಿನಲ್ಲಿ ಪ್ರಕಾಶವೂ ಧಾರಾವಾಹಿ ಕಾದಂಬರಿಯೊಂದನ್ನು ಪ್ರಕಟಿಸಬಯಸಿತು. ಕನ್ನಡದ ಜನಪ್ರಿಯ ಕಾದಂಬರಿಕಾರ ಶ್ರೀ ನಿರಂಜನರ "ಬಂಗಾರದ ಜಿಂಕೆ" ಕಾದಂಬರಿಯನ್ನೆ ಧಾರಾವಾಹಿಯಾಗಿ ಪ್ರಕಟಿಸುವ ಅವಕಾಶ ದೊರೆತದ್ದು ನಮ್ಮ ಹೆಮ್ಮೆಗೆ ಹೇತುವೆನಿಸಿದೆ. ಇದಕ್ಕೆ ಕಾರಣರಾದ ಶ್ರೀ ನಿರಂಜನರಿಗೆ 'ಪ್ರಕಾಶ'ದ ನೆನಕೆಗಳು.

ಬಂಗಾರದ ಜಿಂಕೆಯನ್ನು ಓದಿ ಮೆಚ್ಚಿದ ಜನ ಅದು ಪುಸ್ತಕವಾಗಿರುವುದನ್ನು ಕಾಣಬಯಸಿತು. ಎಂತಲೆ ಅದೀಗ ಪುಸ್ತಕವಾಗಿ ಪ್ರಕಟಗೊಂಡಿದೆ.

ಇದರ ಪ್ರಕಟಣೆಗೆ ಆತ್ಮೀಯ ಭಾವದಿಂದ ಸಹಕಾರವಿತ್ತ ಮಣಿಪಾಲ ಪವರ್ ಪ್ರೆಸ್ಸಿನವರಿಗೂ ಆಕರ್ಷಕ ಮುಖಪೃಷ್ಠವನ್ನು ಬರೆದುಕೊಟ್ಟ ಚಿತ್ರಗಾರ ರಮೇಶ್‌ರವರಿಗೂ ಕೃತಜ್ಞತಾಸ್ಮರಣೆಗಳು.

ಬಂಗಾರದ ಜಿಂಕೆಗೆ ಕನ್ನಡದ ರಸಿಕರು ತುಂಬು ಹೃದಯದ ಸ್ವಾಗತವಿತ್ತಾರೆಂದು ಭರವಸೆಯಿದೆ. ಅಂಥ ಸ್ವಾಗತವೆ 'ಪ್ರಕಾಶ'ದ ಮುಂದಿನ ಹೆಜ್ಜೆಗಳಿಗೆ ಬೆಂಬಲ.

ಉಡುಪಿ
ತಾ. ೨೬-೧೧-೧೯೬೩

— ಪ್ರಕಾಶಕರು

ಬಂಗಾರದ ಜಿಂಕೆ

೧

೧

ಭಾಗ್ಯನಗರದ ಪೂರ್ವ ವಿಸ್ತರಣ. ಅಲ್ಲಿ ಯಾವ ಮೂಲೆಯಿಂದ ನೋಡಿದರೂ ಒಂದು ಕಟ್ಟಡ ಎದ್ದು ಕಾಣಿಸುತಿತ್ತು. ಅದು ಸಾಹುಕಾರ ಶ್ರೀಕಂಠಯ್ಯನವರ ಬಂಗಲೆ. ನಾಲ್ಕು ದೊಡ್ಡ ಸೈಟುಗಳನ್ನು ಕೂಡಿಸಿ ಮಾಡಿದ್ದ ವಿಶಾಲವಾದ ನಿವೇಶನದಲ್ಲಿ ಆ ಭವ್ಯ ಸೌಧ ವಿರಾಜಮಾನವಾಗಿತ್ತು.

ಅದೊಂದು ಮಾಯಾ ಪ್ರಪಂಚದ ಸೃಷ್ಟಿ. ಆ ವಿಸ್ತರಣದ ಜನ ನೋಡಿರಲಿಲ್ಲವೆ? ಎರಡು ವರ್ಷಗಳಿಗೆ ಹಿಂದೆ ಅಲ್ಲಿ ಏನಿತ್ತು? ಕಲ್ಲು ಬಂಡೆ, ಕುರುಚಲು ಗಿಡ, ಬರಿ ಮಣ್ಣು. ಆ ಸ್ಥಳ ಶ್ರೀಕಂಠಯ್ಯನವರಿಗೆ ಸೇರಿದುದೆಂಬುದೂ ಜನರಿಗೆ ತಿಳಿದಿರಲಿಲ್ಲ. ಸುತ್ತುಮುತ್ತೆಲ್ಲ ಮಧ್ಯಮ ವರ್ಗದವರು, ಇದ್ದುಬದ್ದುದನ್ನು ಮಾರಿಯೋ ಸಾಲ ಮಾಡಿಯೋ ಮನೆಗಳನ್ನು ಕಟ್ಟಿಸಿಕೊಂಡಿದ್ದರು. ಹಗಲು ಕೊಲೆಗಳಿಗೂ ಹಳ್ಳಬಾವಿಗಳಿಗೂ ಹೆಸರಾಗಿದ್ದ ಆ ಪ್ರದೇಶ ಕ್ರಮಕ್ರಮವಾಗಿ ನಾಗರಿಕವೆನಿಸಿಕೊಂಡಿತ್ತು. ಅಂತಹ ಪರಿಸರದ ನಡುವಿನಲ್ಲಿದ್ದ ಏಕಮಾತ್ರ ಖಾಲಿ ನಿವೇಶನ ಆ ಪ್ರದೇಶದ ನಿವಾಸಿಗಳ ಗಮನ ಸೆಳೆದುದು ಸ್ವಾಭಾವಿಕವೇ.

ಮುಂದೆ ಇದ್ದಕ್ಕಿದ್ದಂತೆ ಸಿಡಿಮದ್ದಿನ ಸ್ಫೋಟದಿಂದ ಬಂಡೆಗಳು ಒಡೆದುವು; ಬುಲ್‌ಡೋಜರುಗಳು ಏರುತಗ್ಗುಗಳನ್ನು ಸಮತಟ್ಟುಗೊಳಿಸಿದುವು. ನೀಲಿನಕಾಶೆಯೊಡನೆ ಇಂಜಿನಿಯರುಗಳು ಬಂದರು. ಆಳುಗಳು ನೂರುಗಟ್ಟಲೆಯಲ್ಲಿ ಮೇಸ್ತ್ರಿಗಳನ್ನು ಸುತ್ತುಗಟ್ಟಿದರು. ಹಗಲು ಕೆಲಸ. ಇರುಳು ಕೂಡಾ. ಬಿಸಿಲೊ, ಮಳೆಯೊ– ನಿರ್ಮಾಣಕಾರ್ಯ ನಿಂತುದಿಲ್ಲ. ದಾರಿಹೋಕರು ಒಂದು ಕ್ಷಣ ತಡೆದು ಆ ಜೇನುತೊಟ್ಟಿಯನ್ನು ನೋಡಿಹೋಗುತಿದ್ದರು, ಪ್ರತಿದಿ[illegible]

[illegible]ಂದೇ ವರ್ಷದ ಅವಧಿಯಲ್ಲಿ ಸೌಧ ಸಿದ್ಧವಾಗಿ, ಆ [illegible]

[illegible]ಂತಾಯಿತು.

ಹೊಸದಾಗಿ ಅದನ್ನು ಕಂಡವರಿಗೆ, ಸ್ವಲ್ಪ ಸಮಯದ ಹಿಂದೆ ಅಲ್ಲಿ ಆ ಭವನವಿರಲಿಲ್ಲವೆಂದು ಊಹಿಸುವುದು ಕೂಡಾ ಸಾಧ್ಯವಿರಲಿಲ್ಲ. ಅದು ಯಾವಾಗಲೂ ಅಲ್ಲಿಯೇ ಇದ್ದಿತೇನೊ ಎಂಬ ಭ್ರಮೆಯುಂಟಾಗುತಿತ್ತು.

ಶ್ರೀಕಂಠಯ್ಯನವರಾದರೂ ಅಷ್ಟೆ. ಎರಡು ದಶಕಗಳಿಗೆ ಹಿಂದೆ ಅವರೊಬ್ಬ ಸಾಮಾನ್ಯ ಮನುಷ್ಯನಾಗಿದ್ದರು ಎಂದರೆ ನಂಬುವುದು ಹೇಗೆ? ಯೌವನಾವಸ್ಥೆಯನ್ನು ದಾಟಿದ್ದ ಕುರುಚಲು ಗಡ್ಡದ ಒಬ್ಬ ಬಡವ, ಸುತ್ತಲಿನವರು ನೋಡನೋಡುತ್ತಿದ್ದಂತೆಯೆ ಸಾಹುಕಾರ ಶ್ರೀಕಂಠಯ್ಯನವರಾಗಿ ಮಾರ್ಪಟ್ಟುದು ಮಾಯಾ ಪ್ರಪಂಚದ ಒಂದು ಘಟನೆಯೇ.

ಶ್ರೀಸದನ. ಎದುರಿಗೊಂದು ಕಾರಂಜಿಕಟ್ಟೆ. ಎಡದಲ್ಲಿ, ಬಲದಲ್ಲಿ, ಮುಂಭಾಗದಲ್ಲೆಲ್ಲ ಬಣ್ಣ ಬಣ್ಣದ ಹೂಗಳು, ಬಣ್ಣ ಬಣ್ಣದ ಎಲೆಗಳು. ಇವು ಅಂದಕ್ಕೆ, ಚಂದಕ್ಕೆ. ಭವನದ ಹಿಂಭಾಗದಲ್ಲಿ ಪೂಜಾಪುಷ್ಪಗಳನ್ನು ಹೊತ್ತ ಗಿಡಬಳ್ಳಿಗಳು. ಇವು ದೇವರಿಗೆ ಮೀಸಲು. ಒಂದೆರಡು ಚಿಕ್ಕು ಗಿಡಗಳು. ಒಂದೆರಡು ದ್ರಾಕ್ಷೆಬಳ್ಳಿಗಳು. ಸೇವಕರ ವಸತಿಗಳು ಹಿತ್ತಲ ಮೂಲೆಯಲ್ಲಿ. ಪಕ್ಕದಲ್ಲಿ ಕಾರ್ ಶೆಡ್ಡುಗಳು.

ಬೆಳ್ಳಿಯಂತೆ ಮಿನುಗುತಿದ್ದ ಕಬ್ಬಿಣದ ಗೇಟುಗಳು ಎರಡು: ಒಂದು ಇನ್; ಒಂದು ಔಟ್.

ಎರಡಂತಸ್ತುಗಳ ಆ ಭವನದ ದ್ವಾರಮಂಟಪಕ್ಕೆ ನುಣುಪುಕಲ್ಲಿನ ಜೋಡಿ ಕಂಬಗಳಿದ್ದುವು. ಆ ಮಂಟಪದ ಮುಂಭಾಗದ ಮೋಟು ಗೋಡೆ, ತುದಿಯಲ್ಲಿ ಅಗಲವಾಗಿ ಹರಡಿತ್ತು. ಅದರ ಮೇಲೊಂದು ಅಲ್ಸೇಷನ್ ನಾಯಿ; ಚಾಚಿದ ಮುಂಗಾಲುಗಳ ಮೇಲೆ ಅದರ ಮೂತಿ.........

—ಆ ನಾಯಿ ಇದ್ದಕ್ಕಿದ್ದಂತೆ ಬಗುಳಿತು. ಒಮ್ಮೆ, ಮತ್ತೊಮ್ಮೆ. ಗಟ್ಟಿಯಾಗಿ.

ನಾಯಿ ಬಗುಳಿದೊಡನೆ ಆವರಣದ ಉದ್ದಗಲ ಜೀವ ತಳೆಯಿತು.

...ಲೆಯುಡಕೆ ಮೆಲ್ಲುತ್ತಿದ್ದ ಮಾಲಿಯ ಬಳಿ ಬೀಡಿ ಸೇದುತ್ತ ಕುಳಿತಿದ್ದ ...ದ್ದು ನಿಂತ. ಸಾಹುಕಾರರಲ್ಲ—ಕಾರಿನ ಸದ್ದಿರಲಿಲ್ಲ. ...ವೇ ...ಗೂ? ಯಾರ ಸುಳಿವೂ ಇರಲಿಲ್ಲ.

ಅವನೆಂದ:

"ಎಲಾ. ಇದಕ್ಕೇನ್ಬಂತು ರೋಗ? ಸುಮ್‌ಸುಮ್ಕೆ ಬಗುಳ್ತೇತಲ್ಲಾ..."

ಚುರುಟಿ ತೆಗೆದಿರಿಸಲೆಂದು ಅಣಿಗೊಳಿಸಿದ್ದ ಬೀಡಿಯೊಡನೆ ಜಗ್ಗ ಮತ್ತೆ ಹುಲ್ಲಿನ ಮೇಲೆ ಕುಳಿತ.

ಜಗ್ಗ ಎದ್ದೊಡನೆ ಗಿಡಗಳ ಆರೈಕೆಯಲ್ಲಿ ತಾನು ನಿರತನಾಗಲು ಹವಣಿಸಿದ ಮಾಲಿ ಮಾರಣ್ಣ, ಪೀಕ್ ಎಂದು ಪಕ್ಕಕ್ಕೆ ಉಗುಳಿ, ಛೇಡಿಸುವ ಧ್ವನಿಯಲ್ಲಿ ಅಂದ:

"ಬೋ ಧೈರ್ವಸ್ತ ಕಣಪ್ಪ ನೀನು! ಏಸು ಎದರ್‍ಕೊಂತಿಯೊ ಸಾವ್ಕಾರ್‍ರಿಗೆ!"

"ಅಲ್ಲ ಮಾರಣ್ಣ. ಈ ಸೀಜರ್‌ಗೆ ಏನಾಗೈತೆ ಅಂತೀನಿ. ಯಾಕೋ ಒಂ ತರಾ ಮಳ್ಳ್‌ಮಳ್ಳಾಗಿಲ್ಲ?"

ಮಾರಣ್ಣ ನಕ್ಕ.

"ಮರ್‍ತೋಯ್ತೇನ್ಲೆ ಜಗ್ಗ? ಮದುವೆಗ್ಮುಂಚೆ ನೀ ಎಂಗ್ಮಾಡ್ತಿ...
ಸೀಜರ್‌ಗೆ ಎಣ್ಣಿನ್ಹುಚ್ಚು ಕಣಪ್ಪ. ಸಾವ್ಕಾರ್‍ರಿಗೆ ಯೋಳು. ಜೋಡಿ ಕರ್‍ಕಂ...

ಬೀಡಿಯನ್ನು ಕೊನೆಯ ಬಾರಿಗೊಮ್ಮೆ ಎಳೆದು, ಗಿಡದ ಬುಡಕ್ಕೆ...
ವಿಕಾರವಾಗಿ ಬಾಯುಗಲಿಸಿ ಒಳಗಿನ ಸಂದಿ ಸಂದಿಯಿಂದಲೂ ಹೊಗೆಯುಗು...
ಜಗ್ಗನೆಂದ:

"ಬಲೇ ಜೋಡಿ ಏಚ್ಕೆ ಮಾಡಾಂವಾ ನೀನು......"

ಮಾರಣ್ಣ ವಿಧುರ. ಪ್ರಾಯಭರಿತೆಯಾದ ಮಗಳ ತಂದೆ. ಚಿಕ್ಕ ಹೈದ ನೊಬ್ಬ ಓಡಿಹೋದ ಮೇಲೆ ಲಚ್ಚಿಯೇ ಅವನ ಸರ್ವಸ್ವ. ತೀರದ ಚಪಲ ಹೆಣ್ಣನ್ನು ಕುರಿತು ಅವನ ಬಾಯಿಯಿಂದ ಮಾತು ಆಡಿಸುತಿತ್ತು. ಆದರೆ ಮಗಳಿ ಗೊಬ್ಬ ವರನನ್ನು ಹುಡುಕುವುದು ತನ್ನ ಹೊಣೆ ಎಂದು ಅವನಿಗೆ ಅನಿಸುತ್ತಿರ ಲಿಲ್ಲ. ಆತನ ಈ ನಿರಾಸಕ್ತಿ ಜಗ್ಗನನ್ನು ಕೆರಳಿಸುತಿತ್ತು.

"ಇನ್ನೂ ಯಾಕಿರಿಸ್ಕೊಂಡವ್ನೊ ಮಗಳ್ನ,"

–ಎಂದು ಜಗ್ಗನ ಹೆಂಡತಿಯೂ ಆಗಾಗ್ಗೆ ಆಡುತಿದ್ದಳು.

ಆದರೆ ವಯಸ್ಸಿನಲ್ಲಿ ತನಗಿಂತ ಹಿರಿಯನಾದ ಮಾರಣ್ಣನೊಡನೆ ಬಹಿರಂಗ ವಾಗಿ ಆ ಬಗೆಗೆ ಜಗ್ಗ ಪ್ರಸ್ತಾಪ ಮಾಡಲಾರ.

ಮಾರಣ್ಣ ಒಂದು ಕ್ರೋಟನ್ ಗಿಡದ ಬಳಿ ಸೊಂಟಕ್ಕೆ ಅಂಗೈ ಊರಿ ಎದ್ದು ನಿಂತ. ಇನ್ನೊಂದು ಕೈಯಿಂದ ರಂಗುರಂಗಿನ ಎಲೆಗಳನ್ನು ನೇವರಿಸಿ,

"ಏಸು ಸೊಂಪಾಗಿ ಬೆಳೆದೈತೆ,"

—ಎಂದು ರಾಗವೆಳೆದ.

ನಾಲಿಗೆಯಲ್ಲಿ ಬೀಡಿ ಎಲೆಯ ಕಹಿ ಕಂಡಿತೆಂದು ಜಗ್ಗ ಕ್ಯಾಕರಿಸಿ ಉಗಿದ.

—ನಾಯಿ ಬಗುಳಿದಾಗ ಕಮಲಮ್ಮ ಒಳಗಡೆ ಅಡುಗೆಯವನಿಗೆ ನಿರ್ದೇಶ ನೀಡುತ್ತ ನಿಂತಿದ್ದರು. ಶ್ವಾನದ ಆಳಗಂಟಲ ಬವ್ ಬವ್ ಕೇಳಿದಾಗಲೆಲ್ಲ ಕಮಲಮ್ಮನ ನಾಭಿಯಲ್ಲೆ ನಡುಕ ಹುಟ್ಟುತಿತ್ತು.

ಅವರು ಬೆಚ್ಚಿಬಿದ್ದು ನಡುಮನೆಯತ್ತ ಹೊರಳಿ ಕೂಗಿ ನುಡಿದರು:

"ಜಯಾ ! ಜಯಾ ! ಯಾರು ಬಂದ್ರು ನೋಡೆ......"

ಮಗಳಿಂದ ಉತ್ತರ ಬರಲಿಲ್ಲ. ಆದರೂ ತಮ್ಮ ಕರ್ತವ್ಯ ತಾವು ಮಾಡಿ ು ಕಮಲಮ್ಮನಿಗೆ ಸಮಾಧಾನ. ಒಂದು ಗಂಡು ಒಂದು ಹೆಣ್ಣು ಹೆತ್ತ . ಲಕ್ಷಾಧಿಪತಿಯ [ಕೋಟ್ಯಧೀಶನ ?] ಪತ್ನಿ. ಇಳಿವಯಸ್ಸಿನಲ್ಲಿ ಇನ್ನೇನು ಅವರಿಗೆ? ಈಕೆಯದೀಗ ನಿಜವಾದ ಸುಖ—ಎನ್ನುವಂತಿತ್ತು ಯಾರಾದರೂ. ರೆ ವಾಸ್ತವವಾಗಿ ಸುಖಿಯೆ ಆಕೆ ?

ಕಮಲಮ್ಮನ ಮನಸ್ಸು ಅಳುತಿತ್ತು. ಕೌಮಾರ್ಯ ಕಳೆಯುವುದಕ್ಕೆ ಮುನ್ನವೇ ಪತಿಗೃಹಕ್ಕೆ ಬಂದಿದ್ದರು. ವಠಾರವೊಂದರ ಎಂಟು ರೂಪಾಯಿ ಬಾಡಿಗೆಯ ಮನೆ. ಅಲ್ಲಿ ಮೂರು ಬಿಂದಿಗೆ ನೀರಿಗೆ ಎಂಟಾಣೆ. [ಭಾಗ್ಯನಗರದ ಯಾವ ಭಾಗದಲ್ಲಿದೆ ಆ ವಠಾರ? ಆ ಕೊಂಪೆಯನ್ನು ನಿರ್ಮೂಲ ಮಾಡಿ ರಸ್ತೆ ನಿರ್ಮಿಸಿದರಂತಲ್ಲ? ಆ ರಸ್ತೆಗೆ ರಾಷ್ಟ್ರಪತಿಯ ಹೆಸರಿಟ್ಟರಂತಲ್ಲ ?] ಒಪ್ಪೊತ್ತಿನ ಊಟ. ಬಡತನ ನಿಜ. ಆದರೆ ಹಾಗೆಂದು ತಿಳಿದಿತ್ತೆ ತನಗೆ?

ಮುಂದೆ ಎಷ್ಟೊಂದು ಮನೆ ಬದಲಾಯಿಸಿದ್ದಾಯಿತು ! ಹದಿನೈದು ರೂಪಾಯಿಗಳದೊಂದು. ಇಪ್ಪತ್ತೇಳರದೊಂದು. ನಾಲ್ವತ್ತೈದರದು, ನೂರ ಮೂವತ್ತರದು. ಆ ಮೇಲೆ ಹಳೆಯ ಮನೆಯೊಂದರ ಖರೀದಿ. ಅದರ ಜೀರ್ಣೋದ್ಧಾರ. ಅಲ್ಲಿಂದ ಈ ಅರಮನೆಗೆ. ಬಾಡಿಗೆದಾರ ಮಾಲಿಕನ ಪಾತ್ರದಲ್ಲಿ. ನಗರದಲ್ಲಿ ಅದೆಲ್ಲೋ ಬೇರೆ ಬೇರೆ ಕಡೆ ಹತ್ತಿಪ್ಪತ್ತು ಮನೆಗಳನ್ನು ಕಟ್ಟಿಸಿ ಇವರು ಬಾಡಿಗೆಗೆ ಕೊಟ್ಟಿರುವರಂತಲ್ಲ? ತಾನು ಕಂಡಿಲ್ಲ. ತನಗೆ ಅದು ತಿಳಿಯದು.

ಕಮಲಮ್ಮನಿಗೆ ವ್ಯಥೆ. ಈಕೆ ಅಧಿಕಾರ ಕಳೆದುಕೊಂಡಿರುವ ಗೃಹಸಚಿವೆ. ಬಡತನದ ಜೀವನವೇ ಚೆನ್ನಾಗಿತ್ತು–ಬಹಳ ವರ್ಷ ಮಕ್ಕಳಿರಲಿಲ್ಲ ಎಂಬ ಕೊರತೆಯೊಂದನ್ನು ಬಿಟ್ಟರೆ. ಮೊದಲ ಹತ್ತಿಪ್ಪತ್ತು ವರ್ಷ ಅಡುಗೆ ಮನೆಯ ಆಧಿಪತ್ಯ ತನ್ನದಾಗಿತ್ತು. ಸಂತಾನ ಭಾಗ್ಯವೂ ಲಭಿಸಿದ ಮೇಲೆ ಈಗಿರುವ ಅಲ್ಪ ಸುಖ ಹೀಗೆಯೇ ಇರಲಿ ಎಂದು ದೇವರನ್ನು ಯಾಚಿಸಿದ್ದರು. ಮುಂದೆ ಎಂಟು ವರ್ಷಗಳಲ್ಲಿ ಆತ ಒಬ್ಬಳು ಮಗಳನ್ನು ದಯಪಾಲಿಸಿದ. ಆದರೆ ಅಷ್ಟಕ್ಕೇ ಸುಮ್ಮನಿರದೆ, ಇದನ್ನು –ಸಿರಿವಂತಿಕೆಯನ್ನು–ಕೊಟ್ಟ.

ಅಕೋ, ಆರಂಭವಾಯಿತು ಆ ಘಳಿಗೆಯಿಂದ ಕಮಲಮ್ಮನ ದುಗುಡ, ದುಃಖ. ಮೊದಲ ಸಾರೆ ನೆಲ ಬಿಟ್ಟು ಮಂಚದ ಮೇಲೆ ಮಲಗಿದಾಗ ಅವರಿಗೆ ಹೇಗೆ ಹೇಗೋ ಅನಿಸಿತ್ತು. ಇದು ಆಕಾಶ, ಬಿದ್ದೇ ಹೋಗುತ್ತೇನೆ, ನೆಲದ ಮೇಲೆ ಭದ್ರವಾಗಿರುವುದೇ ಲೇಸು–ಎಂದು ತೋರಿತ್ತು. ಅಲ್ಲಿಂದ ಇಲ್ಲಿಗೆ ಬಹಳ ದೂರ. ಅಡುಗೆಮನೆಯ ಒಡೆತನವಿಲ್ಲ. ಕಸ ಗುಡಿಸುವಂತಿಲ್ಲ ತಾನು. ಕಾರು ಬಂದು ನಿಲ್ಲುವ ದ್ವಾರಮಂಟಪದಲ್ಲಿ ರಂಗೋಲೆಗೆ ಸ್ಥಾನವಿಲ್ಲ. ವಿದ್ಯುತ್ತಿನ–ಗ್ಯಾಸಿನ–ಒಲೆಗಳ ದೆಸೆಯಿಂದ ನಿಗಿ ನಿಗಿ ಕೆಂಡವನ್ನು ಕಾಣುವಂತಿಲ್ಲ......

ಕಮಲಮ್ಮನಿಗೆ ಇದ್ದಕ್ಕಿದ್ದಂತೆ ದಿಗಿಲಾಗುತ್ತಿತ್ತು: ಈ ಕೃತಕ ಜೀವನ ಕ್ಷಣಿಕ, ಕ್ಷಣಿಕ. ನಾಳೆ ಏನಾಗುವುದೊ? ಯಾಕೆ ಇನ್ನೊಂದು ಘಳಿಗೆಯಲ್ಲೇ ಏನಾಗಿ ಬಿಡುವುದೊ? ಮಗನಾದರೂ ಒಮ್ಮೆ ಹಿಂತಿರುಗಿದ್ದರೆ? ತಾಯಿಯ ಮಡಿಲಿಗೆ ಆತ ಮರಳಿದ್ದರೆ?......

ಅಡುಗೆಮನೆಯಾಚೆಗಿನ ಹೊರ ಕೊಠಡಿಯಲ್ಲಿ ಸ್ಟೇನ್‌ಲೆಸ್ ಸ್ಟೀಲಿನ ಟಿಫಿನ್ ಕ್ಯಾರಿಯರ್ ಫಳಫಳನೆ ಹೊಳೆಯುತಿತ್ತು. ಅದು ಕಣ್ಣಿಗೆ ಬೀಳಲು, ಕಮಲಮ್ಮ ಕೇಳಿದರು, ಅದರತ್ತ ಬೊಟ್ಟುಮಾಡಿ:

"ಯಾಕೆ ಇಲ್ಲಿದೆ?"

ಅಡುಗೆಯವನೆಂದ:

"ಚಿಕ್ಕಮ್ಮಣ್ಣಿ ಊಟ ವಾಪ್ಸು ಕಳಿಸ್ಬಿಟ್ರು ಅಮ್ಮಾವ್ರೇ."

"ಯಾತಕ್ಕೆ?"

"ಕಾಲೇಜು ಬೇಗ್ನೆ ಬಿಡುತ್ತೆ, ಬೇಡ–ಅಂದ್ರಂತೆ."

"ನಾನು ಮಲಕೊಂಡ್ಬಿಟ್ಟಿದ್ದೆ. ಎಷ್ಟು ಘಂಟೆಗೆ ಬಂದ್ಲು ಹಾಗಾದ್ರೆ?"

"ಬಸ್ನಲ್ಲಿ ಬಂದ್ರಂತೆ. ಮೂರು ಘಂಟೆ ಇದ್ದಾತು."

"ಬಂದ್ಮೇಲೆ ಊಟ ಮಾಡಿದ್ಲೋ ಇಲ್ವೋ ?"

ಅಡುಗೆಯುವನು ತುಸು ಅನುಮಾನಿಸಿ, ತಗ್ಗಿದ ಧ್ವನಿಯಲ್ಲಿ ಅಂದ:

"ಇಲ್ಲ. ಬರ್‍ತಾ ಫರಾಳವ್ರೋ ಏನೋ ಆಯ್ತಂತೆ."

"ಸರಿಹೋಯ್ತು. ಇದೆಂಥಾ ಅವಸ್ಥೆ ಅಂತೀನಿ. ಜಯಾ ! ಏ ಜಯಾ !"

ಕಮಲಮ್ಮನ ಕರೆಗೆ ಉತ್ತರ ಬರಲಿಲ್ಲ. ಮಗಳನ್ನು ಹುಡುಕುತ್ತ ಅವರು ನಡುಮನೆಗೆ ಬಂದರು.

–ನಾಯಿ ಬಗುಳಿದಾಗ ಜಯಶ್ರೀ, "ಮಧುಬನ್ ಮೇ ರಾಧಿಕಾ ನಾಚೇ ರೇ" ಎಂದು ತನ್ನಷ್ಟಕ್ಕೇ ಗುಣುಗುಣಿಸುತ್ತಾ, ಮಹಡಿ ಮೇಲಿನ ತನ್ನ ಕೊಠಡಿಯಲ್ಲಿ ನಿಲುವುಗನ್ನಡಿಯ ಎದುರು ತನ್ನನ್ನು ಸಿಂಗರಿಸಿಕೊಳ್ಳುತಿದ್ದಳು.

ಸಣ್ಣ ಮರಿಯಾಗಿ ಮನೆಗೆ ಬಂದು, ಕೆಲವೇ ತಿಂಗಳಲ್ಲಿ ದೈತ್ಯಾಕಾರ ತಳೆದ ಸೀಸರ್ ಅವಳಿಗೆ ಅಚ್ಚುಮೆಚ್ಚು. ಆತನಿಗೆ ಆ ಹೆಸರನ್ನಿಟ್ಟವಳೇ ಆಕೆ. ಸಾಹುಕಾರರ ಸೂಚನೆಯಂತೆ ಮರಿಯನ್ನು ತಂದವನು ಅಜೀಜ್–ಡ್ರೈವರ್. ಜಯಶ್ರೀ ಕೇಳಿದ್ದಳು:

"ಗಂಡೋ ? ಹೆಣ್ಣೋ ?"

ಮರಿಯ ಹಿಂಗಾಲುಗಳನ್ನೆತ್ತಿ ತೋರಿಸಿ ಅಜೀಜ್ ನುಡಿದಿದ್ದ:

"ಗಂಡು, ಚಿಕ್ಕಮ್ಮಣ್ಣಿ."

"ಹೆಸರೇನು ?"

"ಏನೂ ಮಡಗ್ದಾಂಗೆ ಕಾಣ್ನಿಲ್ಲ."

"ಸೀಸರ್ ಅಂತಿಡೋಣ. ಚೆನ್ನಾಗಿರುತ್ತೆ."

"ರುಸ್ತುಂ ಎಸ್ರು."

"ಏನೆಂದೆ ? ರುಸ್ತುಂ ಅಂತಿಡ್ಬೇಕಾ ?"

"ಅಂಗಲ್ರಮ್ಮಣ್ಣಿ. ಸೀಜರ್ ಎಸ್ರು ಪಸಂದಾಗೈತೆ ಅಂದೆ."

"ಅಲ್ದೆ ! ನಾನಿಟ್ಟ ಹೆಸರು ಪಸಂದಾಗೇ ಇರುತ್ತೆ."

ಮಗಳು ಸೀಸರ್ ಸೀಸರ್ ಎಂದು ಕೂಗಿ ಕರೆಯುವುದನ್ನು ಕೇಳಿ ಕೇಳಿ ಶ್ರೀಕಂಠಯ್ಯನವರೂ ಅದೇ ಹೆಸರಿನಿಂದ ನಾಯಿಯನ್ನು ಸಂಬೋಧಿಸತೊಡಗಿದರು.

ಮುಖ ಗಂಟಿಕ್ಕಿದವರು ಕಮಲಮ್ಮ ಒಬ್ಬರೇ.
"ಅಸಹ್ಯ ! ಕಟ್ಟಾಕಿ ಅದನ್ನ. ದೇವರಮನೆ ಅಡುಗೆಮನೆ ಕಡೆ ಬಂದ್ಬಿಟ್ರೇತು."
–ಎಂದು ಮಗಳೆದುರು ಅವರು ಗೋಗರೆದರು.
ಆ ನಾಯಿಗೆ ತನ್ನ ತಾಯಿ ಬೆದರುವುದನ್ನು ಕಂಡಾಗ ಜಯಶ್ರೀಗೆ ಕಚಗುಳಿ ಇಟ್ಟಂತಾಗುತ್ತಿತ್ತು.
"ಅಮ್ಮ ಬರೇ ಪುಕ್ಕಲು"
–ಎಂದು, ಒಮ್ಮೆಯಾದರೂ ಜಯಶ್ರೀ ಹೇಳದ ದಿನವಿರಲಿಲ್ಲ.
ಹೊರಗೆ ನಾಯಿ ಬಗುಳಿದರೆ, ಯಾಕೆ–ಎಂದು ತಲೆ ಎತ್ತಿ ನೋಡುವವಳಲ್ಲ ಜಯಶ್ರೀ. ಯಾರು ಬಂದರೇನು? ಜಗ್ಗ ಇಲ್ಲವೆ? ಕಾರ್ಡೋ ಹೆಸರು ಬರೆದ ಚೀಟಿಯೋ ಒಳಗೆ ಬರುವುದಿಲ್ಲವೆ? ತನ್ನ ಗೆಳತಿಯರೇ "ಬಂದರು" ಎಂದಿಟ್ಟುಕೊಳ್ಳೋಣ? ಲಚ್ಚಿ ಇಲ್ಲವೆ ಸುದ್ದಿ ಮುಟ್ಟಿಸಲು?
ಮೊನ್ನೆ ಜಗ್ಗ ಅಂದಿದ್ದ:
"ಇನ್ನು ಸೀಜರ್ನ ಅಗಲೊತ್ತು ಕಟ್ಟಾಕ್ಬೇಕ್ರಮ್ಮಣ್ಣಿ."
ಬಂದವರ ಮೇಲೆ ಕಾವಲಿನವನ ಕಣ್ಣು ತಪ್ಪಿಸಿ ಹರಿಹಾಯಬಹುದು, ಕಚ್ಚಬಹುದು, ಎನ್ನುವ ಭಯ. ಅದಕ್ಕಾಗಿ ಸರಪಣಿ ಸಿದ್ಧವಾಗಿತ್ತು. ತಾನು ಒಪ್ಪಿದರೆ ಸಾಕು ಹಗಲು ಹೊತ್ತು ಸೀಸರನಿಗಿನ್ನು ಸೆರೆಮನೆ.
ಜಯಶ್ರೀಗನಿಸುತ್ತಿತ್ತು–ತನ್ನ ಕೊಠಡಿಯಲ್ಲೇ ಸೀಸರನನ್ನು ಕೂಡಹಾಕಿ ಕದವೆಳೆದುಕೊಂಡು ಕಾಲೇಜಿಗೆ ಯಾಕೆ ಹೋಗಬಾರದು ತಾನು? ಕೊರಳಿಗೆ ಸಂಕೋಲೆ ತೊಡಿಸುವುದಕ್ಕಿಂತ ಈ ಸೀಮಿತ ಸ್ವಾತಂತ್ರ್ಯ ಮೇಲಲ್ಲವೆ?
ಒಂದರ ಬಗೆಗೆ ಜಯಶ್ರೀಗೆ ಕೊರಗು. ಅವಳ ಸ್ನೇಹಿತೆಯೊಬ್ಬಳ ಮನೆ ನಾಯಿಗೆ ಹುಚ್ಚು ಹಿಡಿದು, ಸಾಯಿಸಬೇಕಾಗಿ ಬಂತಂತೆ. ಕಚ್ಚಿಸಿಕೊಂಡ ಆಕೆಯ ತಂದೆ ಹದಿನಾಲ್ಕು ಇಂಜೆಕ್ಷನ್ ತೆಗೆದುಕೊಂಡರಂತೆ. ಹೊಟ್ಟೆಗೆ. ಹೊಕ್ಕಳದಿಂದ ಹಿಡಿದು, ಸುತ್ತಲೂ.
ಆಕೆ ಬಣ್ಣಿಸಿದುದನ್ನು ಸ್ಮರಿಸಿಕೊಂಡಾಗಲೆಲ್ಲ ಜಯಶ್ರೀಗೆ ಜುಮ್ಮೆನ್ನುತಿತ್ತು.
ಒಂದು ವೇಳೆ ಸೀಸರ್‌ಗೇ ಹುಚ್ಚು ಹಿಡಿದರೆ? ಇನ್ನೊಬ್ಬರು ಅದನ್ನು ಗುಂಡಿಕ್ಕಿ ಕೊಲ್ಲುವ ದೃಶ್ಯ. ಊಹೂಂ. ಅದನ್ನು ತಾನು ನೋಡಲಾರೆ,

ಸಹಿಸಲಾರೆ. ಸಾವು ಅನಿವಾರ್ಯವೆಂದಾದರೆ ತನ್ನ ಕೈಯಿಂದಲೇ ಸೀಸರ್‌ಗೆ ಅದು ಪ್ರಾಪ್ತವಾಗಬೇಕು. ತಂದೆಯ ಕೊಠಡಿಯಲ್ಲಿ ಮೇಜಿನ ಕೆಳ ಡ್ರಾಯರಲ್ಲಿರುವ ರಿವಾಲ್ವರನ್ನು ತಾನು ಹೊರತೆಗೆದು, ಸೀಸರ್‌ಗೆ ಗುರಿಯಿಟ್ಟು, ಕಣ್ಣುಮುಚ್ಚಿ–

ಹಾರಿಸುವುದು ಹೇಗೆ? ಗುರಿ ತಪ್ಪಿದರೊ? ರಿವಾಲ್ವರ್ ತನ್ನ ಕೈಯಿಂದ ಜಾರಿ ಬಿದ್ದರೊ?

ಚಲಚ್ಚಿತ್ರಗಳಲ್ಲಿ ನೋಡಿಲ್ಲವೆ ತಾನು? ಎಷ್ಟೊಂದು ಸುಲಭ! ಆದರೂ ಒಮ್ಮೆ ಪ್ರಯೋಗ ನಡೆಸಬೇಕು.

ಅಮ್ಮನ ಕರೆ:

"ಜಯಾ! ಏ ಜಯಾ! ಬಾರೇ ಇಲ್ಲಿ. ಅದೇನ್ಮಾಡ್ತಿದೀಯಾ ಮೇಲ್ಗಡೆ?"

ಅಸಹನೆಯಿಂದ ಜಯಶ್ರೀ ಅಂದಳು:

"ಬಂದ್ನೆಮ್ಮ!"

ಇವಳೆಂದುದು ಕೇಳಿಸಿತೋ ಇಲ್ಲವೋ. ಕಮಲಮ್ಮ ಗಟ್ಟಿಯಾಗಿ ಅಂದರು:

"ಕಾಲೇಜ್ನಿಂದ ಬಂದೋಳ್ಗೆ ತಾಯಿೊನ ಮಾತಾಡಿಸ್ಬೇಕೂಂತಲೂ ಅನಿಸೋಲ್ವೇನೆ ನಿಂಗೆ?"

ಜಯಶ್ರೀ ಮುಂಗುರುಳನ್ನು ತಿದ್ದಿ, ನಿಲುವುಗನ್ನಡಿಯ ಎದುರು ಮೈ ನಿಡಿದು ನಿಂತಳು. ವಕ್ಷಸ್ಥಲ ಇನ್ನೂ ಒಂದಿಷ್ಟು ತುಂಬಿ ಬಂದಿದ್ದರೆ ಎಂದು ನಿತ್ಯದ ಕಸಿವಿಸಿ ವೀಣೆ ನುಡಿಸಿತು. ದ್ವಂದ್ವವೀಣೆ. ಆದರೆ ಈ ಎತ್ತರ ಯಾರಿಗಿದೆ? ತಾನು ಕುಳ್ಳಲ್ಲ. ['ಕುಳ್ಳೂ ಅಲ್ಲ, ಮೆಳ್ಳೂ ಅಲ್ಲ.'] ವೈಟಲ್ ಸ್ಟ್ಯಾಟಿಸ್ಟಿಕ್ಸ್. ಅದೇನು ತಮಾಷೆಯೋ ಒಮ್ಮೆ ಅಳೆದು ನೋಡಬೇಕು! ಮಿಸ್ ಯೂನಿವರ್ಸ್ ಆದೇನೆ ಎಂದಾದರೂ? ಈ ಅಪ್ಪಯ್ಯ ಬಿಡಬೇಕಲ್ಲ. ಇನ್ನು ಅಮ್ಮನೊ–

"ಜಯಾ! ಬರಬಾರ್ದೇನೇ ಕೆಳಗೆ?"

ಜಯಶ್ರೀ ಕೊಠಡಿಯಿಂದ ಹೊರಡುತ್ತ ಧ್ವನಿ ಏರಿಸಿ ಅಂದಳು:

"ಬಂದೇ ಬಂದೆ."

ಮಹಡಿಯ ಸೋಪಾನಗಳ ಮೇಲಿಂದ, ದಂಡೆಯ ಮೇಲೆ ಕೈ ಇರಿಸಿ ಕುಪ್ಪಳಿಸುತ್ತ, ಕುಪ್ಪಳಿಸುತ್ತ, ಜಯಶ್ರೀ ಇಳಿದಳು.

ಹಜಾರದ ಮಧ್ಯದಲ್ಲಿ ನಿಂತು ಆ ಅವರೋಹಣವನ್ನು ಕಮಲಮ್ಮ ದಿಟ್ಟಿಸಿದರು.

ಧ್ವನಿಯನ್ನು ಮಿದುಗೊಳಿಸಿ ಅವರೆಂದರು;

"ಹೀಗೆ ಜಿಕ್ಕೊಂಡು ಬರಬಾರ್ದು, ಜಯಾ. ನೀನೇನು ಎಳೇ ಹುಡುಗೀನಾ? ಇಪ್ಪತ್ತು ವರ್ಷ ದಾಟಿದ್ಮೇಲೂ ಗಂಭೀರವಾಗಿ ಮೆಟ್ಟಲು ಹತ್ತೋಕೆ ಇಳಿಯೋಕೆ ಬರಲ್ವಾ?"

ಕೊನೆಯ ಎರಡು ಮೆಟ್ಟಲುಗಳನ್ನು ನಿಧಾನವಾಗಿ ಇಳಿದು ಜಯಶ್ರೀ ಅಂದಳು:

"ಹಗಲೂ ರಾತ್ರೆ ನಿನ್ನ ಬುದ್ಧಿವಾದ ಕೇಳಿ ಕೇಳಿ... ಹುಂ. ಅನ್ನು, ಇನ್ನೂ ಏನಾದರೂ ಅನ್ನು."

ಕಮಲಮ್ಮ ಕಣ್ಣರಳಿಸಿದರು. ಮಗಳು ಇದಿರಾಡುವುದು ಅವರ ಪಾಲಿಗೆ ಹೊಸ ಅನುಭವವಲ್ಲ. ಆದರೂ ಅವರು ಅಳುಕಿದರು. ಮಳೆಗಾಲದ ಕಳ್ಳ ಬಿಸಿಲಾಗಿ ಒಂದು ಕ್ಷಣ ಬಂದಿತ್ತು ಸಿಟ್ಟು. ಒಂದೇ ಕ್ಷಣ. ಮತ್ತೆ ಮೊದಲಿನಂತೆಯೇ–ಎಲ್ಲವೂ ಜಲಮಯ.

ಅಳಲು ಅಣಿಯಾಗುತ್ತ ಅವರೆಂದರು:

"ಅಯ್ಯೋ! ಹಯ್ಯೋ! ನನಗೆ, ನಿನ್ನ ಹೆತ್ತ ತಾಯಿಗೆ ಅಂತಿಯೇನೆ? ನಾನಲ್ದೆ ನಿನಗೆ ಬುದ್ಧಿವಾದ ಇನ್ಯಾರೇ ಹೇಳ್ಬೇಕು? ನಾಯಿ ಬಗುಳಿತು, ಯಾಕೋ ನೋಡು–ಅಂದೆ......"

ಜಯಶ್ರೀ ನುಡಿದಳು:

"ಬಗುಳಿತು, ಏನಾಯಿತು? ಆಕಾಶ ಕೆಳಗ್ಬಿತ್ತೆ?"

"ಇಲ್ಲವಮ್ಮಾ, ಇಲ್ಲ......ನಿನ್ನ ವಿಚಾರವಾದರೂ ಕೇಳ್ಬೌದಾ? ಊಟದ ಡಬ್ಬ ವಾಪ್ಸು ಕಳಿಸಿದೆಯಂತೆ–"

"ಡಬ್ಬ–ಡಬ್ಬ! ಅದರ ಹೆಸರು ಟಿಫಿನ್ ಕ್ಯಾರಿಯರೂಂತ ಅದೆಷ್ಟು ಸಲ ಹೇಳಿದೀನಿ."

"ಟಿಪಿನು. ಅದ್ಯಾಕೆ ಹಾಗ಼್ಾಡ್ದೆ? ಬೆಳೆಯೋ ಹುಡುಗಿ ಬರೀ ಹೊಟ್ಟೇಲಿದ್ರೆ ಹ್ಯಾಗೆ ಜಯಾ?"

"ಯಾಕಿರ್ತೀನಿ ಬರಿ ಹೊಟ್ಟೇಲಿ?"

"ಇನ್ನೇನು? ಹೋಟ್ಲಿಗೆ ಹೋದ್ಯೇನೇ?"

ನೇರ ಉತ್ತರ ಕೊಡಲಿಚ್ಛಿಸದೆ ಜಯಶ್ರೀ ಅಂದಳು:

"ಯಾಕಮ್ಮ ಸುಮ್ಸುಮ್ನೆ ತಲೆ ಕೆಡಿಸ್ಕೋತಿಯಾ ನೀನು?"

ಜಯಶ್ರೀ ಹಜಾರ ದಾಟಿದಳು. ಮೂಲೆಯಲ್ಲಿ ಎತ್ತರ ಪೀಠದ ಮೇಲೆ ಫೋನಿತ್ತು. ಏಳು ನಾಲ್ಕು, ಮೂರು......ಎಂದು ಜ್ಞಾಪಿಸಿಕೊಳ್ಳುತ್ತ ಅದರ ಬಳಿ ಸಾರಿದಳು.

ರಿಸೀವರನ್ನು ಮಗಳು ಕೈಗೆತ್ತಿಕೊಂಡಾಗ ಕಮಲಮ್ಮ ಕೇಳಿದರು:

"ಯಾರಿಗೆ ಫೋನ್ಮಾಡ್ತಿದೀಯೆ?"

ಮಗಳ ಹಣೆಯಲ್ಲಿ ಮೂರು ಗೆರೆ ಮೂಡಿ ಕುಂಕುಮದ ಚುಕ್ಕೆ ಮಿಸುಕಿತು.

"ನಳಿನಿಗೆ. ಇನ್ಯಾರಿಗ್ಮಾಡ್ಲಿ?"

"ಮಾಡು, ಮಾಡು. ಏನ್ಸಮಾಚಾರ?"

ತಾಯಿಗೆ ಉತ್ತರವೀಯದೆ ಜಯಶ್ರೀ ಗೆಳತಿಯೊಡನೆ ಮಾತನಾಡಿದಳು:

"ರೆಡೀನಾ?......ಶೂ ಹಾಕ್ಕೊಂಡ್ರಾಯ್ತು ನಾನು. ಅಪ್ಪಯ್ಯ ಬಂದ ತಕ್ಷಣ ಹೊರಡ್ತೀನಿ......ರೈಟೋ."

ಕಮಲಮ್ಮನಿಗೆ ಹತ್ತು ಹದಿನೈದು ವರ್ಷಗಳ ಪರಿಚಯದ ಯಂತ್ರ, ಟೆಲಿಫೋನ್. ಹಿಂದೆ ಕುದುರೆಯನ್ನು ನೀರಿಗೆ ಎಳೆವಂತೆ, ಫೋನ್ ಬಳಸುವ ವಿಧಾನವನ್ನು ಶ್ರೀಕಂಠಯ್ಯ ಹೆಂಡತಿಗೆ ಹೇಳಿಕೊಟ್ಟಿದ್ದರು. ಅದು ಆಳು ಕಾಳುಗಳು ಇರದಿದ್ದ ಕಾಲ. ಮುಂದೆ ಮಕ್ಕಳು ಬೆಳೆದು ದೊಡ್ಡವರಾಗಲು, ಸೇವಕರೂ ಬರಲು ಟೆಲಿಫೋನ್ ಕಮಲಮ್ಮನಿಗೆ ದೂರವಾಯಿತು. ಈಗ ಫೋನ್‌ಗಳು ಇಮ್ಮಡಿಸಿದ್ದುವು. ಹೊರಗೊಂದು. ಅಲ್ಲಿಂದ ಅದು ವಿಸ್ತರಿಸಿ ಶ್ರೀಕಂಠಯ್ಯನವರ ಖಾಸಗಿ ಕೊಠಡಿಗೊಂದು. ಮೊದಲು ಫೋನ್ ಟ್ರಿನ್‌ಗುಟ್ಟಿದಾಗಲೆಲ್ಲ ಕಮಲಮ್ಮ ಬೆಚ್ಚಿಬೀಳುತಿದ್ದರು. ವರ್ಷ ವರ್ಷಗಳ ಧ್ವನಿ ಪರಿಚಯದಿಂದ ಆ ಭಯವೀಗ ಕಡಿಮೆಯಾಗಿತ್ತು. [ಅದರ ಸ್ಥಳವನ್ನು ನಾಯಿಯ ಬೌವ್ ಬೌವ್ ಆಕ್ರಮಿಸಿತ್ತು.]

ಮಗಳಾಡಿದ ಮಾತುಗಳನ್ನು ಆಲಿಸಿದ ತಾಯಿ, ನಿಟ್ಟುಸಿರುಬಿಟ್ಟು, ಕೇಳಿದರು:

"ಸಿನಿಮಾಗೆ ಹೋಗ್ತೀಯಾ?"

"ಇಲ್ಲ. ಟೆನ್ನಿಸ್‌ಗೆ."

ಕಮಲಮ್ಮ ತನ್ನಷ್ಟಕ್ಕೆ ತಲೆಯಲ್ಲಾಡಿಸಿ ಒಳಕ್ಕೆ ನಡೆದರು.

ಅದೊಂದು ಕಥೆ. ಟೆನ್ನಿಸ್ ಆಟಕ್ಕಾಗಿ ಬಿಳಿಯ ಫ್ರಾಕ್ ಹೊಲಿಸಿಕೊಳ್ಳುವೆ—ಎಂದಿದ್ದಳು ಜಯಶ್ರೀ. ಕಮಲಮ್ಮನ ಪ್ರತಿಭಟನೆಯ ರೋದನದಿಂದ ಗೃಹಶಾಂತಿ ಕದಡಿತ್ತು. ತಂದೆಯ ಮನಸ್ಸನ್ನು ಒಲಿಸಿಕೊಳ್ಳಬಹುದು ಎಂದು ಮಗಳು ಎಣಿಸಿದ್ದಳು. ಆದರೆ ಯತ್ನದಲ್ಲಿ ಪರಾಜಿತೆಯಾದಳು. ಆಧುನಿಕ ವ್ಯವಹಾರದ ಕುಶಲರಾದರೂ ಇಂತಹ ಕೆಲವೊಂದು ವಿಷಯಗಳಿಗೆ ಸಂಬಂಧಿಸಿ ಶ್ರೀಕಂಠಯ್ಯ ಪ್ರಾಚೀನರಾಗಿದ್ದರು.

"ಇಷ್ಟವಿದ್ದರೆ ಸೀರೆ ಉಟ್ಕೊಂಡು ಆಡು. ಇಲ್ದಿದ್ರೆ ಮನೇಲಿರು,"

—ಎಂದುಬಿಟ್ಟಿದ್ದರು.

ವಿಸ್ತರಣದ ಬಯಲಲ್ಲಿ ಮಗಳು ಮತ್ತು ಗೆಳತಿಯರ ಜತೆ ಆಡುವ ಹುಡುಗರು ಯಾರು ಎಂಬುದನ್ನು ಅವರು ವಿಚಾರಿಸಿಕೊಂಡರು. ಸ್ವಲ್ಪ ಎಚ್ಚರದಿಂದಿರುವುದು ಮೇಲು ಎನಿಸಿತು.

"ಕತ್ತಲಾಗೋದರೊಳಗೆ ಮನೆಗೆ ಕರಕೊಂಡು ಬಾ,"

—ಎಂದು ಡ್ರೈವರ್ ಅಜೀಜ್‌ಗೆ ಆದೇಶವಿತ್ತರು.

"ನಾನು ಪಂಜರದೊಳಗಿನ ಗಿಣಿಯಾದೆ,"

—ಎಂದು ಮುಖಭಂಗ ಹೊಂದಿದ ಜಯಶ್ರೀ ಗೋಳಾಡಿದುದುಂಟು...

ತಾಯಿ ಒಳಹೋದೊಡನೆ, ಕ್ಯಾನ್‌ವಾಸ್ ಶೂ ತೊಟ್ಟು ಟೆನ್ನಿಸ್ ರ್‍ಯಾಕೆಟನ್ನೆತ್ತಿಕೊಳ್ಳಲೆಂದು ಜಯಶ್ರೀ, "ಮಿಲೇ ನಯನ್ ಗಯಾ ಚಯನ್ ಪಿಯಾ ಆನ್ ಮಿಲೋರೇ" ಹಾಡಿನ ಸಾಲನ್ನು ಗುನುಗುತ್ತ ಮಹಡಿಯ ಮೆಟ್ಟಿಲುಗಳನ್ನೇರಿದಳು.

ಸ್ವಲ್ಪ ಹೊತ್ತಿನಲ್ಲೆ ಗೇಟು ಸಪ್ಪಳ ಮಾಡಿತು. ಬ್ಯೂಕ್ ಕಾರು ರಭಸದಿಂದ ಒಳಬಂದು, ದ್ವಾರಮಂಟಪದಲ್ಲಿ ಜರಕ್ಕನೆ ನಿಂತಿತು. ಕಾರು ನಡೆಸುತ್ತಿದ್ದುದು ಡ್ರೈವರ್ ಅಜೀಜನಲ್ಲ, ಸ್ವತಃ ಶ್ರೀಕಂಠಯ್ಯನವರೆಂದು—ಆ ಸದ್ದಿನಿಂದಲೆ ಹೇಳಬಹುದಾಗಿತ್ತು.

ಹಿಂದಿನ ಸೀಟಿನಲ್ಲಿ ಮೈಮುದುಡಿಸಿ ಮುಂದಕ್ಕೆ ಬಾಗಿ ಕುಳಿತಿದ್ದ ಅಜೀಜ್ ಹೊರಕ್ಕೆ ನೆಗೆಯುವುದಕ್ಕೆ ಮೊದಲೇ, ಶ್ರೀಕಂಠಯ್ಯ ಇಳಿದಿದ್ದರು.

"ಕಾರ್ ಶೆಡ್ನಲ್ಲಿ ಬಿಡು!"

—ಎಂದು ಅವರು ಆಜ್ಞಾಪಿಸಿದರು. ಧ್ವನಿ ಕರ್ಕಶವಾಗಿತ್ತು.

ಸೀಸರ್ ಬಗುಳಿರಲಿಲ್ಲ. ಎದ್ದು ನಿಂತು ಬಾಲ ಆಡಿಸಿತು. ಒಡೆಯ ತನ್ನನ್ನು ಮಾತನಾಡಿಸಬಹುದು—ಎಂಬ ನಿರೀಕ್ಷೆ.

ಶ್ರೀಕಂಠಯ್ಯ ಅದರತ್ತ ಕಡೆಗಣ್ಣ ನೋಟವನ್ನೂ ಬೀರಲಿಲ್ಲ.

ನಾಯಿ ಪುನಃ ಮೊದಲಿನಂತೆಯೇ ಮಲಗಿತು.

ಶ್ರೀಕಂಠಯ್ಯನವರ ಪಂಪ್‌ಶೂಗಳು ಎಂದಿಲ್ಲದ ರಭಸದಿಂದ ನೆಲ ತುಳಿದುವು. ಖಾದಿ ರೇಶಿಮೆಯ ಧೋತರ ಜುಬ್ಬಗಳ ಸ್ಥೂಲಕಾಯ ಶ್ರೀಸದನದ ಹಜಾರವನ್ನು ಹೊಕ್ಕಿತು.

ಕೆಂಪೇರಿದ ಮುಖ, ಅದುರುತ್ತಿದ್ದ ಮೀಸೆ. ಜಗ್ಗನೂ ಮಾರಣ್ಣನೂ ಅದನ್ನು ಗಮನಿಸಿದ್ದರು. ಕಾರನ್ನು ಅಜೀಜ್ ಶೆಡ್ಡಿನಲ್ಲಿಟ್ಟೊಡನೆ ಅವರಿಬ್ಬರೂ ಆತನೆಡೆ ನೋಡಿದರು, ಪ್ರಶ್ನಾರ್ಥಕ ನೋಟದೊಡನೆ.

ಆತ ಭುಜ ಕುಪ್ಪಳಿಸಿ ತನಗೆ ತಿಳಿಯದು ಎಂಬಂತೆ ತಲೆಯಲ್ಲಾಡಿಸಿದ.

ಒಳಗೆ ಶ್ರೀಕಂಠಯ್ಯನವರು ತಲೆಯ ಮೇಲಿನ ಟೋಪಿಯನ್ನು ತೆಗೆದು ಸೋಫಾದತ್ತ ಎಸೆದು, ಮುಂದೇನು ಮಾಡಬೇಕೆಂದು ತೋಚದವರಂತೆ ನಡು ಹಜಾರದಲ್ಲಿ ನಿಂತರು.

ಇಣಿಕಿ ನೋಡಿದ ಲಚ್ಚಿ ಸಾಹುಕಾರರ ಮುಖಮುದ್ರೆ ಕಂಡು ಭಯಗೊಂಡು ಒಳಕ್ಕೆ ಓಡಿದಳು, ಅಡುಗೆಯವನಿಗೆ ತಿಳಿಸಲು.

'ಕಾಫಿ ತರಲಾ?' ಎಂದು ಕೇಳುವ ನೆಪಮಾಡಿ ಆತ ಬಾಗಿಲ ವರೆಗೆ ಬಂದ-ಸಾಹುಕಾರರನ್ನು ನೋಡಿದೊಡನೆ ಗಂಟಲೊಣಗಿ ಹಿಮ್ಮೆಟ್ಟಿದ.

ಸಣ್ಣ ಕಾರನ್ನು ಹೊರತರುವಂತೆ ಅಜೀಜನಿಗೆ ಆದೇಶ ನೀಡಲು ಜಯಶ್ರೀ ಟೆನ್ನಿಸ್ ರ್‍ಯಾಕೆಟಿನೊಡನೆ ಮೆಲ್ಲನೆ ಇಳಿಯ ತೊಡಗಿದಳು. ತಂದೆಯ ಭೈರವ ರೂಪ ಕಂಡು ನಡುವೆ ನಿಂತಳು. ಹೆಜ್ಜೆಗಳು ಹಿಮ್ಮುಖವಾದುವು.

"ಏ! ಎಲ್ಲಿದೀಯಾ?"

—ಎಂದು ಶ್ರೀಕಂಠಯ್ಯ ಗುಡುಗಿದರು, ಹೆಂಡತಿಯನ್ನು ಉದ್ದೇಶಿಸಿ.

ಹಜಾರದತ್ತ ಹೊರಟ ಕಮಲಮ್ಮನ ಎದೆ ಡವಡವನೆ ಹೊಡೆದುಕೊಂಡಿತು.

ಸೀಸರ್ ಮತ್ತೊಮ್ಮೆ ಹುಚ್ಚೆದ್ದು ಬಗುಳಿತು. ಅದು ತನ್ನ ಮೂತಿಯ ಮೇಲೆ ವಿರಮಿಸಲೆತ್ನಿಸಿದ ದೊಡ್ಡದೊಂದು ನೊಣವನ್ನು ಹಿಡಿಯಲೆತ್ನಿಸಿತು.

೨

"ಆರಿಸ್ರೋ ! ಆರಿಸ್ರೋ ಲೈಟುಗಳನ್ನ ! ಇದು ಮನೆಯೊ ? ಸಿನಿಮಾ ಥೇಟರೊ ? ಏ ಜಗ್ಗಾ !......"

—ಕೆಳ ಅಂತಸ್ತಿನಲ್ಲಿ ತಮ್ಮ ಕೊಠಡಿಯ ಕಿಟಕಿಯ ಬಳಿ ನಿಂತು ಶ್ರೀಕಂಠಯ್ಯ ನವರು ಕಿರಿಚಾಡಿದರು. ಪದಗಳು ಗುಡುಗುತ್ತ, ಇರುಳಿನ ಸ್ತಬ್ಧತೆಯನ್ನು ಕದಡಿದುವು.

ಜಗ್ಗ ಅಜೀಜನ ಗೋಣಗಾಟಕ್ಕೆ ಕಿವಿಗೊಡುತ್ತ, ಆತ ನೀಡಿದ ನಂಬರ್ ಟೆನ್ ಸಿಗರೇಟನ್ನು ನಿಧಾನವಾಗಿ ಸೇದುತ್ತ, ಕಾರ್ ಶೆಡ್ಡಿನೊಳಗೆ ಕುಳಿತಿದ್ದ.

ಸಾಹುಕಾರರ ಧ್ವನಿ ಕೇಳಿದೊಡನೆ ಅವನು, ಸಿಗರೇಟನ್ನು ಜಾಗರೂಕತೆ ಯಿಂದ ಗೋಡೆಗೆ ಮುಟ್ಟಿಸಿ ಆರಿಸಿ, ಅಂಗಿಯ ಜೇಬಿನೊಳಗಿರಿಸಿ,

"ಇನ್ನೂ ರಾವುಕಾಲ ಮುಗಿದಾಂಗಿಲ್ಲ; ಓಗ್ಬರ್ತೀನಿ,"

—ಎಂದು ನುಡಿದು ಎದ್ದು, ಬಂಗಲೆಯ ಮುಂಭಾಗಕ್ಕೆ ಹೆಜ್ಜೆ ಹಾಕಿದ.

ಶ್ರೀಕಂಠಯ್ಯನವರ ಒಳ ಅಂಗಿ ತೊಟ್ಟ, ಹರವಾದ ಎದೆಯೂ ವಿರಳ ಕೂದಲ ತಲೆಯೂ ಕಿಟಕಿಯಿಂದ ಕಾಣಿಸುತ್ತಿದ್ದುವು. ಅವರನ್ನು ನೋಡಿಯೂ ನೋಡದಂತೆ ಜಗ್ಗ ಮುಂದುವರಿದ.

ಶ್ರೀಕಂಠಯ್ಯ ಗದರಿದರು:

"ಹೇಳಿದ್ದು ಕೇಳಿಸ್ತೇನೋ ಕತ್ತೆ ?"

"ಹೂಂ, ಬುದ್ಧಿ."

"ಆರಿಸೋ ಹೊರಗಿನ ದೀಪಗಳನ್ನ ! ನಿಮ್ಮಪ್ಪ ಕೊಡ್ತಾನೇನೋ ಲೈಟು ಬಿಲ್ಲು ?"

ಪ್ರತಿಯೊಂದು ಪದವೂ ಮಣಭಾರವಾಗಿ ಜಗ್ಗನನ್ನು ಕುಗ್ಗಿಸಿತು. ಆತ ಬಾಗಿ ಬಾಗಿ ನಡೆದು ಬಂಗಲೆಯ ಮಹಾದ್ವಾರವನ್ನು ಹೊಕ್ಕು, ಜಗಲಿಯ ಗೋಡೆ ಗೂಡಿನ ಬಳಿಗೆ ಸಾಗಿ, ಒಂದೊಂದಾಗಿ ಸ್ವಿಚ್ಚುಗಳನ್ನು ಮೇಲಕ್ಕೆ ತಳ್ಳಿದ. ಕ್ರಮ ಕ್ರಮವಾಗಿ ಕಣ್ಣು ಮುಚ್ಚಿಕೊಂಡುವು–ಬೀದಿಬದಿಯ ಗೇಟುಗಳ ಎಡಬಲಗಳ ಲ್ಲಿದ್ದ ಗೋಲದೀಪಗಳು; ಉದ್ಯಾನವನ್ನು ಬೆಳಗುತ್ತಿದ್ದ ನೀಲಿದೀಪ; ದ್ವಾರ ಮಂಟಪದಲ್ಲಿ ಹಾಲು ಚೆಲ್ಲಿದ್ದ ನಿಯೊನ್‌ಲೈಟು; ಬಂಗಲೆಯ ಇಕ್ಕೆಲಗಳ ಎರಡು ದೀಪಗಳು. ಇಷ್ಟು ಮಾಡಿ ಆತ ಹೊರಬಂದ. ಕತ್ತಲೆಯಲ್ಲಿ ಅವನ ಮೈ ಮತ್ತೆ ಎತ್ತರವಾಯಿತು. ಉಸಿರಾಟ ಸರಾಗವಾಯಿತು. ಮೆಲ್ಲಮೆಲ್ಲನೆ ಅಡಿ ಇಟ್ಟು ಹೊರಳಿ, ಸಾಹುಕಾರರು ನಿಂತಿದ್ದ ಕಿಟಿಕಿಯತ್ತ ಕಳ್ಳದೃಷ್ಟಿ ಬೀರಿದ. ಆಕೃತಿ ಅಲ್ಲಿರಲಿಲ್ಲ. ಈಗ ಧೈರ್ಯವಾಗಿ ಶೆಡ್ಡಿನ ಕಡೆಗೆ ಜಗ್ಗ ನಡೆದ.

ಪಿಸುದನಿಯಲ್ಲಿ ಅಜೀಜನನ್ನು ಉದ್ದೇಶಿಸಿ ಅವನೆಂದ:

"ಸೀಜರ್ ಐತೆ ನೋಡು, ಅದರದೇ ಎಷ್ಟೋ ವಾಸಿ. ಲಚ್ಚಿ ಆಗಲೇ– ಅದಕ್ಕೆ ಅನ್ನ ತಂದಾಕಿದ್ಲು–ಆಲನ್ನ."

"ಇನ್ನೂ ಯಾರದೂ ಊಟ ಇಲ್ಲ ಅನ್ನು."

–ಮುಂದೇನು ಮಾಡೋಣವೆಂದು ಯೋಚಿಸುತ್ತ ಅಜೀಜನೆಂದ.

"ಕಾಣ್ಸಾಕಿಲ್ವ, ಎಂಗೆ ಸಾಂತವಾಗೈತೆ ಸ್ಮಸಾನ್ದಂಗೆ!"

ಒಮ್ಮೆಲೆ ಆಳವಾದ ಕರ್ಕಶ ಧ್ವನಿ ಕೇಳಿಸಿತು, ಹಿತ್ತಲಗೋಡೆಯ ಮೇಲಿಂದ. ಅಜೀಜ್ ಬೆಚ್ಚಿಬಿದ್ದ.

ಜಗ್ಗನೆಂದ:

"ಎದರಿದ್ಯೇನೋ? ಅದು ಸಾವುಕಾರ್‍ರ ಬೆಕ್ಕು. ಈಗ ನೋಡು ಮಜಾ."

ಮತ್ತೊಮ್ಮೆ ಠೇಂಕಾರ. ಉತ್ತರವಾಗಿ ಇನ್ನೊಂದು ಧ್ವನಿ. ಧ್ವನಿಗ ಳಲ್ಲಿ ವಾದ ಪ್ರತಿವಾದ.

ಜಗ್ಗನೆಂದ:

"ಡೆಪ್ಟಿ ಕಮಿಶನರ ಮನೆ ಬೆಕ್ಕು. ಇದರ ದುಸ್ಮನ್."

ಪರಸ್ಪರ ಸಮೀಪಿಸಿ, 'ನೀನು' 'ನಿನ್ನಪ್ಪ' 'ನಿನ್ನಜ್ಜ' ಎನ್ನತೊಡಗಿದುವು ಬೆಕ್ಕುಗಳು. ಅವುಗಳ ಕೂಗಾಟ ಕೇಳುತ್ತ ಜಗ್ಗನಿಗೆ ಹೃದಯ ಹಗುರ ವೆನಿಸಿತು.

"ಎರಡೂ ಗಂಡೇ, ಅಲ್ವೇನೊ?" ಎಂದು ಅಜೀಜನೆನ್ನುವುದಕ್ಕೂ ಶ್ರೀಕಂಠಯ್ಯ ಗದರುವುದಕ್ಕೂ ತಾಳಬಿತ್ತು.

"ಓಡಿಸೋ ಆ ಶನಿಗಳನ್ನ !"

ಪುನಃ ಹಚ್ಚೋಣವೆಂದು ಸಿಗರೇಟಿನ ತುಂಡನ್ನು ಹೊರತೆಗೆಯ ತೊಡಗಿದ್ದ ಜಗ್ಗ, ಆ ಮೇಲೆ ಸೇದಿದರಾಯಿತೆಂದು ಅದನ್ನು ಜೇಬಿಗೇ ಇಳಿಬಿಟ್ಟು, ಹಿತ್ತಲ ಗೋಡೆಯತ್ತ ನೋಡಿ,

"ಶೂ ! ಶೂ !"

–ಎಂದ. ಸಣ್ಣದೊಂದು ಕಲ್ಲನ್ನೆತ್ತಿ ಬೀರಿದ.

ಆತ ಶೂ ಎಂದಾಗ ಫಳಫಳನೆ ಮಿನುಗುತ್ತಿದ್ದ ನಾಲ್ಕು ಕಣ್ಣುಗಳು ಅವನ ಕಡೆ ತಿರುಗಿದುವು. ಕಲ್ಲು ಬೀರಿದಾಗ ಎರಡು ಕಣ್ಣುಗಳು ಮಾಯವಾದುವು. 'ಡೆಪ್ಟಿ ಕಮಿಶನರ' ಬೆಕ್ಕು ಗೋಡೆಯಿಂದಾಚೆಗೆ ಕೆಳಕ್ಕೆ ಜಿಗಿದು ಹೊರಟು ಹೋಯಿತು.

"ಶನಿಕಾಟ !"

–ಎಂದು ಗೊಣಗಿದ ಜಗ್ಗ, ಅಜೀಜನ ಬಳಿಸಾರಿ,

"ನಿನ್ನ ಅವಸ್ಥೆ ನೋಡಲಾರೆ,"

–ಎಂದ ನಸುನಗುತ್ತ.

ಅಜೀಜ್ ನಿಟ್ಟುಸಿರುಬಿಟ್ಟ. ಹಿರೋಡೆಯಿಂದ ಬೀಗರು ಬಂದು ಒಂದು ವಾರವಾಗಿತ್ತು. ನಾಳೆ ಅವರು ಹೊರಡುವ ದಿನ. ಅವರಿಗಾಗಿ ಸಣ್ಣಪುಟ್ಟ ಉಡುಗೊರೆಗಳನ್ನೂ ರೈಲುಟಿಕೀಟುಗಳನ್ನೂ ಕೊಳ್ಳಲು, ಅಜೀಜನ ಬಳಿ ಹಣವಿರಲಿಲ್ಲ. ಐವತ್ತು ರೂಪಾಯಿಗಳ ಮುಂಗಡವನ್ನೂ ಒಂದು ದಿನದ ರಜೆಯನ್ನೂ ದಯಪಾಲಿಸಬೇಕೆಂದು ಆತ ಸಾಹುಕಾರರನ್ನು ಬೆಳಗ್ಗೆ ಪ್ರಾರ್ಥಿಸಿದ್ದ.

"ಐವತ್ತು ! ಅಷ್ಟು ಜಾಸ್ತಿ ಖರ್ಚು ಮಾಡ್ಬಾರ್ದು. ಒಂದಿಪ್ಪತ್ತು ಇಪ್ಪತ್ತೈದು ಕೊಡ್ತೀನಿ. ರಜಾ ಮಾತ್ರ ಇಲ್ಲ,"

–ಎಂದಿದ್ದರು ಶ್ರೀಕಂಠಯ್ಯ. ಕಾರಿನ ಡ್ರೈವರನನ್ನು ಸಾಕಷ್ಟು ತೃಪ್ತನಾಗಿಡುವುದು, ಬಹಳ ಕಾಲದಿಂದ ಅವರು ಅನುಸರಿಸುತ್ತ ಬಂದಿದ್ದ ಧೋರಣೆ.

ಅಜೀಜನಿಗಾದರೋ ಬೇಕಿದ್ದುದು ಇಪ್ಪತ್ತೈದೇ ರೂಪಾಯಿ. ಸಾಹುಕಾರರು ನೀಡುವುದು ತಾನು ಕೇಳಿದುದರ ಅರ್ಧದಷ್ಟು ಎಂಬುದನ್ನು ಅನುಭವದಿಂದ ಆತ ಬಲ್ಲ. ರಜೆ ಸಿಗಲಾರದೆಂದಷ್ಟೆ ಸ್ವಲ್ಪ ಬೇಸರವಾಗಿತ್ತು.

ಆದರೆ ಈಗ?

ದೇವರು ಪ್ರಸನ್ನನಾದಾಗ ಲೆಕ್ಕದ ಶಾಂತಮಲ್ಲಪ್ಪ ಇರಲಿಲ್ಲ. ಆ ಪೂಜಾರಿ ಇದ್ದಿದ್ದರೆ ಆಗಲೇ ಹಣ ಸಿಗುತ್ತಿತ್ತು. ಅಜೀಜ್ ಸಾಹುಕಾರರ ಪ್ರೀತಿಪಾತ್ರ ಭಕ್ತ ಎಂಬುದನ್ನು ಶಾಂತಮಲ್ಲಪ್ಪ ತಿಳಿಯದವನಲ್ಲ. ಆತ ಇಲ್ಲದಿದ್ದರೂ ಸ್ವತಃ ಸಾಹುಕಾರರೇ ಸಂಜೆ ಕೊಡಬಹುದು—ಎಂದು ಅಜೀಜ್ ಆಸೆ ಇರಿಸಿದ್ದ.

ಈಗ ಅನಿರೀಕ್ಷಿತವಾಗಿ ಬಿರುಗಾಳಿ ಬೀಸಿತ್ತು.

ಹಣ ಹಾಳಾಯಿತು; ಮನೆಗಾದರೂ ಹೋಗೋಣವೆಂದರೆ ಧಣಿಯ ಸಮ್ಮತಿ ಪಡೆಯುವ ಬಗೆ ಯಾವುದು?

"ಇಂದ್ಗಡೆ ಓಗಿ ನೋಡ್ತೀಯಾ ಜಗ್ಗ? ಅಮ್ಮಾವ್ರಿದ್ರೆ ಅವರ್ನ ಕೇಳಿ—"

"ಉಚ್ಚಾ ನಿನಗೆ? ಸಾವುಕಾರ್ರ ಜತೆ ಮಾತಾಡೋಕೆ ಆಯಮ್ಮಾಗೆ ದಮ್ಮೈತಾ?"

"ಅಡಿಗೆ ಭಟ್ನಿಗಾರ ಯೋಳು. ಧಣಿಗೆ ಊಟನಾರಾ ಆಕ್ಲಿ."

"ಆಗ್ಲಪ್ಪ ನೋಡ್ಕೊಂಡ್ಬರ್ತೀನಿ,"

—ಎಂದ ಜಗ್ಗ. ಬಂಗಲೆಯ ಹಿತ್ತಲ ಬಾಗಿಲ ಕಡೆಗೆ ಅಡಿ ಇರಿಸಿದ.

ಅಲ್ಲಿ ಲಚ್ಚಿ ಇದ್ದಳು.

ಜಗ್ಗ ಅವಳನ್ನು ಕೇಳಿದ:

"ಭಟ್ರೆಲ್ಲಿ?"

ಅವಳೆಂದಳು:

"ಬಡಿಸ್ತಾ ಅವರೆ."

ಧ್ವನಿ ತಗ್ಗಿಸಿ ಜಗ್ಗ ನುಡಿದ:

"ಸಾವುಕಾರ್ರು ಊಟಕ್ಕೆ ಕುಂತವರಾ?"

"ಊಂ."

ಬಾಗಿಲ ಚೌಕಟ್ಟಿಗೆ ಒರಗಿ ನಿಂತಿದ್ದ ಲಚ್ಚಿ ಎಷ್ಟೊಂದು ಲಾವಣ್ಯವತಿಯಾಗಿ ಕಂಡಳು! ಸ್ವಲ್ಪ ಎಳಸು, ಅಷ್ಟೆ.

ಕತ್ತು ಕೊಂಕಿಸಿ ಅವಳು ಕೇಳಿದಳು:

"ಆಪಾಟಿ ಯಾಕ್ನೋಡ್ತೀಯಾ ನನ್ನ? ನಾ ಏನು ದೇವಕ್ಕನಾ?"

ಜಗ್ಗ ಎಚ್ಚರಗೊಂಡ. ಎಲಾ ಹುಡುಗಿ! ನಾನೇನು ನಿನ್ನ ಹೆಂಡತಿಯೆ? —ಎಂದು ಕೇಳಿದಳಲ್ಲ?

"ನೀ ದೇವಕ್ಕ ಯಾಕಾದಿ? ಆ ಭಟ್ನ ಜತೇಲೂ ಇಂಗೇ ಸಲಿಗೆ ಮಾತಾಡು..."

ಲಚ್ಚಿ ರಾಗವೆಳೆದಳು:

"ಓಓಓ......ಭಟ್ಟ ಅಂದ್ರೆ ಅದ್ಯಾಕಿಷ್ಟು ಒಟ್ಟೆ ಉರಿ ನಿಂಗೆ?"

ಒಳಗೆ ಮೌನ. ತಮ್ಮ ಪಿಸುದನಿಗಳ ಸದ್ದಿಗೆ ಜಗ್ಗ ಬೆಚ್ಚಿಬಿದ್ದು, ಮಾತಿನ ಮಲ್ಲಿ ನೀನು—ಎಂದು ಹೇಳಲು ಹೊರಟವನು ನಾಲಿಗೆ ಬಿಗಿಹಿಡಿದು, ನಿಂತಲ್ಲಿಂದ ಹೆಜ್ಜೆ ಹಿಂದಕ್ಕಿರಿಸಿದ...

...ಮಾತಿಲ್ಲದೆ ಸಾಹುಕಾರರ ಊಟ ನಡೆದಿತ್ತು. ಭೋಜನದ ಮೇಜಿನ ಒಂದು ತುದಿಯಲ್ಲಿ ಶ್ರೀಕಂಠಯ್ಯ ಕುಳಿತಿದ್ದರು. ಇನ್ನೊಂದು ತುದಿಯಲ್ಲಿ ಜಯಶ್ರೀ. ಭಟ್ಟ ತಂದು ಬಡಿಸುತ್ತಿದ್ದ. ಇದರ ಉಸ್ತುವಾರಿ ನೋಡುತ್ತ ಬಾಗಿಲ ಬಳಿ ಕಮಲಮ್ಮ ನಿಂತಿದ್ದರು.

ಶ್ರೀಕಂಠಯ್ಯನವರ ಹುಬ್ಬುಗಳಿನ್ನೂ ಗಂಟಿಕ್ಕಿಕೊಂಡೇ ಇದ್ದುವು. ಅವರು ಉಣ್ಣುತಿದ್ದುದು ಮನಸ್ಸಿಲ್ಲದ ಮನಸ್ಸಿನಿಂದ. ಬೇಕುಬೇಡಗಳನ್ನು ಸಂಜ್ಞೆಯಿಂದಷ್ಟೆ ಅವರು ಸೂಚಿಸುತಿದ್ದರು. ಜಯಶ್ರೀಯದು ನಿತ್ಯದ ಗುಬ್ಬಚ್ಚಿ ಊಟ. ತುಟಿಗಳನ್ನು ತೆರೆದು ಸಣ್ಣದೊಂದು ತುತ್ತನ್ನು ಒಳಕ್ಕೆ ತುರುಕುತಿದ್ದಳು. ಬೆರಳುಗಳು ಹೊರಬರುವುದಕ್ಕಿಲ್ಲ, ಬಾಯಿಯ ಬಾಗಿಲು ಭದ್ರವಾಗಿ ಮುಚ್ಚಿಕೊಳ್ಳುತಿತ್ತು. ಸ್ನಾಯುಗಳ ಮಿಸುಕಾಟದಿಂದ ಮುಖದ ಅಂದ ಕೆಡದಂತೆ ದಂತಪಂಕ್ತಿಗಳು ಬಲು ಜಾಗರೂಕತೆಯಿಂದ ಆಹಾರವನ್ನು ಒಳಗಿಂದೊಳಗೇ ಮರ್ದಿಸುತ್ತಿದ್ದುವು. ನಿತ್ಯದ ಊಟಕ್ಕೂ ಇವತ್ತಿನದಕ್ಕೂ ಒಂದೇ ವ್ಯತ್ಯಾಸ: 'ಬೆಳೆಯೋ ಹುಡುಗಿ, ಸರಿಯಾಗಿ ಊಟಮಾಡೇ' ಎಂಬ ಕಮಲಮ್ಮನ ಪಲ್ಲವಿ ಈ ರಾತ್ರೆ ಇರಲಿಲ್ಲ. ಕಮಲಮ್ಮನೂ—ಬಹಳ ಹೊತ್ತು ಅತ್ತು ಅತ್ತು ದಣಿದಿರುವರೆಂಬುದನ್ನು ಅವರ ಕಣ್ಣುಗಳೂ ಕೆನ್ನೆಗಳೂ ಸಾರುತಿದ್ದುವು.

ಬಲು ದೀರ್ಘವೆಂದು ಕಂಡ ಆ ಕೆಲ ನಿಮಿಷಗಳ ಬಳಿಕ ಶ್ರೀಕಂಠಯ್ಯ ಎದ್ದು ಕೈ ತೊಳೆಯಲು ನಡೆದರು. ಗಾಳಿಯಾಡದ ಕೊಠಡಿಯ ಕಿಟಿಕಿಗಳು ತೆರೆದುಕೊಂಡು ತಂಗಾಳಿ ಒಮ್ಮೆಲೇ ಒಳಕ್ಕೆ ಬೀಸಿತೆಂಬಂತೆ, ಜಯಶ್ರೀ ನೀಳವಾಗಿ ಉಸಿರೆಳೆದು ತಾನೂ ಎದ್ದಳು.

ಶ್ರೀಕಂಠಯ್ಯ ಏಳುತ್ತ,

"ನೀನಿನ್ನು ಊಟಮಾಡು,"

—ಎಂದು ಹೆಂಡತಿಗೆ ಹೇಳುವುದು ಪದ್ಧತಿ. ಆದರೆ ಈದಿನ ಆ ಮಾತನ್ನು ಅವರು ಆಡಲಿಲ್ಲ.

ಅವರ ಬದಲು ಜಯಶ್ರೀ ಕೇಳಿದಳು:

"ನೀನು ಊಟ ಮಾಡೋಲ್ವೇನಮ್ಮ ?"

"ಮಾಡ್ತೀನಿ,"

ಎಂದರು ಕಮಲಮ್ಮ, ಪ್ರಯಾಸಪಟ್ಟು ಗಂಟಲಿನಿಂದ ಹೊರಡಿಸಿದ ಧ್ವನಿಯಲ್ಲಿ.

ಶ್ರೀಕಂಠಯ್ಯ ತಮ್ಮ ಕೊಠಡಿಗೆ ಹೋಗಿ ಗೋಲ್ಡ್ ಫ್ಲೇಕ್ ಸಿಗರೇಟುಗಳ ಡಬ್ಬವನ್ನೆತ್ತಿಕೊಂಡು, ಆರಾಮುಕುರ್ಚಿಯಲ್ಲಿ ಕುಳಿತು, ಪಕ್ಕದ ಟೀಪಾಯ್‌ಯ ಮೇಲೆ ಡಬ್ಬವನ್ನಿಟ್ಟು, ಒಂದನ್ನು ಬಾಯಲ್ಲಿರಿಸಿ ಹಚ್ಚಿ, ಹೊಗೆಯುಗುಳುತ್ತ, ಎದುರು ಗೋಡೆಯಲ್ಲಿದ್ದ ಕ್ಯಾಲೆಂಡರುಗಳನ್ನು ದಿಟ್ಟಿಸತೊಡಗಿದರು. ಆರಾಮು ಕುರ್ಚಿ– ಆದರೆ ತಪ್ತಮನಸ್ಸಿಗೆ ಅದೇನು ನೆಮ್ಮದಿ ಕೊಟ್ಟೀತು ? ಈ ಬಗೆಯ ಅನುಭವವೂ ಆಗಬೇಕೆ ಬದುಕಿನಲ್ಲಿ ? ತನ್ನ ಮಗ–ಒಬ್ಬನೇ ಮಗ......

ಜಯಶ್ರೀ ಸೀಸರನ ಬಳಿಗೆ ಹೋಗಿ ಅದರ ಬೆನ್ನ ಮೇಲೆ ಕೈಯಾಡಿಸಿದಳು. ತಂದೆ ರುದ್ರನಾಗುತಿದ್ದುದು ಎಂದಾದರೊಮ್ಮೆ. ಅಂತಹ ವೇಳೆಯಲ್ಲಿ ಪ್ರತಿಯೊಂದೂ ಅಸ್ತವ್ಯಸ್ತವಾಗುತ್ತಿತ್ತು. ಜಯಶ್ರೀಗೆ ಸಂಜೆಯ ಟೆನ್ನಿಸ್ ತಪ್ಪಿತ್ತು. "ಕಾರಿಲ್ವೇನೆ ? ಕಳಿಸ್ಕೊಡ್ಲೇನೇ ?" ಎಂದು ನಳಿನಿ ಫೋನ್ ಮಾಡಿದಾಗ, ತಂದೆಗೆ ಕೇಳಿಸದಂತೆ ಧ್ವನಿ ತಗ್ಗಿಸಿ "ತಲೆನೋವು" ಎನ್ನಬೇಕಾಯಿತು. ಎಂಥ ಅವಮಾನ ! ...ಹೋಗಲಿ ರೇಡಿಯೋ ಸಿಲೋನಿನ ಹಾಡುಗಳನ್ನಾದರೂ ಆಲಿಸುವುದಕ್ಕಾಯಿತೆ ? ಹಜಾರದ ರೇಡಿಯೋ ಹಾಕುವುದಕ್ಕಿಲ್ಲ. ಅದಕ್ಕೇ ಅನ್ನುವುದು ಒಂದು ಟ್ರಾನ್ಸಿಸ್ಟರ್ ಬೇಕು ಅಂತ. ಮೆಲ್ಲಗೆ ತನ್ನ ಕೊಠಡಿಯಲ್ಲಿ ಸಣ್ಣನೆ ಯಾವ ಪ್ರೋಗ್ರಾಮ್ ಬೇಕಾದರೂ ಕೇಳಬಹುದು. ಆದರೆ ಟ್ರಾನ್ಸಿಸ್ಟರ್ ರೇಡಿಯೋ ತಂದುಕೊಡಿ ಅಂತ ಅಪ್ಪಯ್ಯನಿಗೆ ಹೇಳುವವರು ಯಾರು ? ನಳಿನಿಯೇ ಭಾಗ್ಯವಂತೆ. ಆಕೆ ಏನು ಕೇಳಿದರೂ ಸರಿ, "ಇಲ್ಲ" ಎನ್ನುವವರಲ್ಲ ಅವಳ ತಂದೆ. ಸೈಕಾಲಜಿಯಲ್ಲಿ ಹೇಳಿಲ್ಲವೆ ? ಮಗಳು ಅಂಟಿಕೊಳ್ಳುವುದು ತಂದೆಗೆ. ತನ್ನ ವಿಷಯದಲ್ಲಿ ಮಾತ್ರ ಆ ಸಿದ್ಧಾಂತ ಸುಳ್ಳು. ತನ್ನ ಪಾಲಿಗೆ ತಾಯಿಯೂ ಅಷ್ಟೆ, ತಂದೆಯೂ ಅಷ್ಟೆ. ಅಂಟೇ ಇಲ್ಲ ತಮ್ಮ ಮನೆಯಲ್ಲಿ.

ಮಹಡಿ ಮೆಟ್ಟಲುಗಳನ್ನೇರಿ ಕೊಠಡಿ ತಲಪಿದ ಜಯಶ್ರೀ 'ಫೆಮಿನಾ' ಎತ್ತಿಕೊಂಡು ಪಲ್ಲಂಗದ ಮೇಲೆ ಬಿದ್ದಳು. ಚಿತ್ರಗಳು. 'ಹರೆಯದ ಹುಡುಗಿಯರ ಸಮಸ್ಯೆಗಳು'......

ತಾಯಿಯನ್ನು ಕರೆದು ಕರ್ಕಶ ಗಂಟಲಲ್ಲಿ ತಂದೆ ಒದರಾಡಿದಾಗ ಜಯಶ್ರೀ ಮೇಲ್ಗಡೆ ಇದ್ದಳು. ಸಂಭಾಷಣೆ ಸ್ಪಷ್ಟವಾಗಿ ಕೇಳಿಸಿರಲಿಲ್ಲ. 'ಜಯು' 'ಜಯು' ಎಂಬ ಪದಗಳು ಕಿವಿಗೆ ಬಿದ್ದುವು. ವಿಷಯ ತನ್ನ ಅಣ್ಣನನ್ನು ಕುರಿತದ್ದು ಎಂದು ಜಯಶ್ರೀಗೆ ಗ್ರಹಿಕೆಯಾಯಿತು. ತಂದೆ ಆಡಿದ ಒಂದು ಮಾತು ಮಾತ್ರ ಸಾಕಷ್ಟು ಸ್ಪಷ್ಟವಾಗಿ ಕೇಳಿಸಿತು:

"ಇನ್ನು ಮಗಳೂ ಬೀದಿಗಿಳಿದ್ಬಿಟ್ರೆ ಅಲ್ಲಿಗೆ ಉದ್ಧಾರವಾಗುತ್ತೆ."

ತನ್ನ ಬಗೆಗೆ ಆಡಿದ್ದು. ಸ್ವಾರಸ್ಯವಾಗಿತ್ತು! ತುದಿಗಾಲಿನ ಮೇಲೆ ನಡೆಯುತ್ತ ತನ್ನ ಕೊಠಡಿಯ ಬಾಗಿಲ ವರೆಗೂ ಬಂದಳು ಜಯಶ್ರೀ. ಅಮ್ಮನ ಧ್ವನಿಯೊಡೆದು ಆಕೆ ಬಿಕ್ಕಿ ಬಿಕ್ಕಿ ಅಳತೊಡಗಿದ್ದು ಆಗಲೇ.

ನಿಂತಲ್ಲಿಂದ ಜಯಶ್ರೀಗೆ ಕಾಣಿಸಿತ್ತು. ಎರಡೂ ಮುಷ್ಟಿಗಳನ್ನು ಬಿಗಿ ಹಿಡಿದು ಮೇಲಕ್ಕೆತ್ತಿ ಅಲುಗಿಸುತ್ತಿದ್ದರು ಶ್ರೀಕಂಠಯ್ಯ. ಅವರ ಬಾಯಿಯಿಂದ ಮಾತಿನ ಕೆಂಡಗಳು ಹೊರಗೆ ನೆಗೆಯುತ್ತಿದ್ದುವು:

"ಅಳು! ಅಳು! ನಾನು ಸತ್ತೇಂತ ಅಳು! ಸರ್ವನಾಶವಾಯ್ತೂಂತ ಅಳು!

ಎಷ್ಟು ಅಸಹ್ಯವಾಗಿ ಕಂಡಿತು ಆ ದೃಶ್ಯ!

ಈಗ ಡನ್ಲೊಪಿಲ್ಲೊ ಹಾಸಿಗೆಯ ಮೇಲೆ ಮೈಚೆಲ್ಲಿ, ತೆರೆದ 'ಫೆಮಿನಾ' ದಿಂದ ಎದೆ ಮುಚ್ಚಿ, ನೆಟ್ಟ ನೋಟದಿಂದ ನೀಲಿ ಡಿಸ್‌ಟೆಂಪರಿನ ಛಾವಣಿಯನ್ನೆ ನೋಡುತ್ತ ಗತಿಸಿದ ವರ್ಷಗಳನ್ನು ಜಯಶ್ರೀ ಸ್ಮರಿಸಿಕೊಂಡಳು. ಈಚೀಚೆಗೆ ತನಗೆ ಪರಿಚಿತವಾಗಿದ್ದುದು ತಂದೆಯ ಕೂಗಾಟ ಮಾತ್ರ. ತಾಯಿ-ತಂದೆ ಇಬ್ಬರೂ ಸ್ವರವೇರಿಸಿ ಜಗಳಾಡಿ ಎಷ್ಟೋ ವರ್ಷಗಳಾದುವಲ್ಲ? ಹಿಂದೆ-ತನಗೆ ನೆನಪಿದೆ-ತನ್ನ ತಾಯಿಯೂ ಮಾತಿಗೆ ಪ್ರತಿಮಾತು ಜೋಡಿಸುತ್ತಿದ್ದರು. ಸೋತು ಸೋತು, ಕ್ರಮೇಣ ಇದಿರಾಡುವುದನ್ನೇ ಅವರು ಬಿಟ್ಟುಕೊಟ್ಟಿದ್ದರು. ತಂದೆ ಸರ್ವಶಕ್ತನೆಂಬುದನ್ನು ಆ ಸಂಸಾರ ಒಪ್ಪಿಕೊಂಡಿತ್ತು.

ಕೆಳಗೆ ಮಲಗುವ ಕೊಠಡಿಯಲ್ಲಿದ್ದ ತಾಯಿಯ ಮಂಚ ಅದರ ಪಕ್ಕದ ಕೋಣೆಗೆ ಹೋಗಿ ಐದು ವರ್ಷ ಆದುವಲ್ಲವೆ? ವಯಸ್ಸಾದ ಮೇಲೆ ಜತೆಯಾಗಿ ಮಲಗಬೇಕು ಅಂತ ಅನಿಸುವುದಿಲ್ಲವೇನೋ......

ಜತೆಯಾಗಿ ಮಲಗುವುದು. ಜಯಶ್ರೀ ಎದೆಯ ಮೇಲಿನ 'ಫೆಮಿನಾ' ಚಿತ್ರಗಳನ್ನು ತಳ್ಳಿಹಾಕಿ. ಮಗ್ಗುಲು ಹೊರಳಿದಳು......

......ಕಮಲಮ್ಮ ಉಣ್ಣಲು ಕುಳಿತರು. ಆದರೆ ಏನೂ ರುಚಿಸಲಿಲ್ಲ.

ಅವರದು ನೆಲದ ಮೇಲೆ ಕುಳಿತೇ ಊಟ. ಮೇಜಿನ ಮೇಲೆ ತಟ್ಟೆ ಇಟ್ಟರೆ ಉಂಡಂತೆಯೇ ಆಗುತ್ತಿರಲಿಲ್ಲ ಅವರಿಗೆ. ಲಕ್ಷ್ಮಿ ಪ್ರಸನ್ನಳಾದ ಮೊದಲ ವರ್ಷಗಳಲ್ಲಿ ಹೆಂಡತಿಯನ್ನು ಆಧುನಿಕಳನ್ನಾಗಿ ಮಾಡಲು ಶ್ರೀಕಂಠಯ್ಯ ಬಹಳ ಪ್ರಯತ್ನಿಸಿದ್ದರು. ಒಂದು ಸಾರೆ ಕ್ಲಬ್ಬಿಗೂ ಕರೆದೊಯ್ದರು.

"ನೀನು ಹಳ್ಳೀ ಮುಕ್ಕ ! ಥತ್ ! ಅವಮಾನ !"

–ಎಂದರು ಮನೆಗೆ ಮರಳಿದ ಮೇಲೆ.

"ಇನ್ನು ನಿನ್ನನ್ನು ಎಲ್ಲಿಗೂ ಕರಕೊಂಡು ಹೋಗೊಲ್ಲ,"

–ಎಂದು ನಿರ್ಧಾರದ ಧ್ವನಿಯಲ್ಲಿ ಅಂದರು.

ಒಳ್ಳೆದೇ ಆಯಿತು –ಎನಿಸಿತು ಕಮಲಮ್ಮನಿಗೆ. ಹಳ್ಳಿಯಲ್ಲಿ ಹುಟ್ಟಿದ್ದು ಅವರ ತಪ್ಪೆ? ಗೃಹಿಣಿಯಾದ ತಾನು ಮನೆಯಲ್ಲಿರುವುದೇ ಸರಿ –ಎಂದು ತೀರ್ಮಾನಿಸಿದರು.

ಮಕ್ಕಳು ದೊಡ್ಡವರಾದಂತೆ, ಗಂಡು ಹೆಣ್ಣಿನ ಆಟ ಮನೆಯಲ್ಲಿ ಕಡಮೆಯಾಗಿತ್ತು. ಗಂಡ ಹೊರಗೆ ಉಣ್ಣುತ್ತಿರಬೇಕು–ಎಂಬ ಶಂಕೆ ಕಮಲಮ್ಮನನ್ನು ಕಾಡದಿರಲಿಲ್ಲ. ಆದರೆ ಅವರೇನು ಮಾಡುವ ಹಾಗಿತ್ತು? ತನ್ನ ದೈಹಿಕ ಆಕರ್ಷಣೆ ಕೈಹಿಡಿದವನಿಗೆ ಸಾಲದೆ ಹೋದರೆ ಆ ತಪ್ಪು ತನ್ನದೆ?

ಭಟ್ಟ ಈಗ, 'ಸಾರು ತರಲಾ?' 'ಒಂದಿಷ್ಟು ಅನ್ನ ತರಲಾ?' ಎಂದು ಕೇಳತೊಡಗಿದ.

ಕಮಲಮ್ಮ ಮತ್ತೆ ಮತ್ತೆ ಅಂದರು:

"ನನಗೇನೂ ಬೇಡ; ಏನೂ ಬೇಡ."

"ಸಾಹುಕಾರರು ಊಟ ಮಾಡ್ಲಿಲ್ಲ; ಜಯಮ್ಮನೂ ಮಾಡ್ಲಿಲ್ಲ; ನೀವೂ–"

"ನಿನ್ನದಾದ್ಮೇಲೆ ಉಳಿದದ್ದು ಲಚ್ಚಿಗೂ ದೇವಕ್ಕನಿಗೂ ಕೊಟ್ಬಿಡು."

"ಅವರೇನು ಹತ್ತು ಸೇರಕ್ಕಿ ಅನ್ನ ಇದ್ದರೂ ಕತ್ತರಿಸಿಬಿಡ್ತಾರೆ."

"ಕೆಲಸದವರು, ಪಾಪ."

ಕಮಲಮ್ಮ ಎದ್ದು ಕೈತೊಳೆಯಲು ಹೋದಾಗ ಲಚ್ಚಿ ಎಂದಳು:

"ಅಜೀಜ್ ಬಂದವ್ನೆ ಅಮ್ಮಾವ್ರೇ."

"ಸಾಹುಕಾರ್ರು ಕರೆದಿದಾರೊ ಏನೊ,"

–ಎಂದರು ಕಮಲಮ್ಮ.

ಕೈಬಾಯಿ ತೊಳೆದು ಹಿಂದಿನ ಬಾಗಿಲಿನತ್ತ ಅವರು ಬಂದೊಡನೆ, ಅಜೀಜ್ ಕಾಣಿಸಿಕೊಂಡ.

"ಏನು ಡ್ರೈವರ್ ?"

"ನಾನು ಮನೆಗೋಗ್ಲಾ ತಾಯಿ೦?"

"ಅಯ್ಯೋ, ಇನ್ನೂ ಇಲ್ಲೇ ಇದೀಯಾ? ಊಟ ಮಾಡು. ಕೇಳಿ ಹೇಳ್ತೀನಿ."

ಅಜೀಜ್ ಟೋಪಿಯನ್ನು ತಲೆಯ ಮೇಲೆ ಅತ್ತಿತ್ತ ಸರಿಸಿದ.

"ಊಟ ಬ್ಯಾಡಿ ತಾಯಿ೦. ಮನೆಗೆ ಬೀಗರು ಬಂದವ್ರೆ......"

"ಸರಿ. ತಾಳು."

ಮುಂಗಡದ ವಿಷಯವನ್ನೂ ಹೇಳಲು ಅಜೀಜನ ಮನಸ್ಸು ತವಕಿಸಿತು. ಆದರೆ ಮಾತು ಅವನ ಗಂಟಲಲ್ಲೇ ಇಂಗಿಹೋಯಿತು.

ಕಮಲಮ್ಮ ಒಳಹೋದೊಡನೆ ಅಡುಗೆಯವನು ಅಜೀಜನನ್ನು ಪ್ರಶ್ನಿಸಿದ:

"ಏನ್ಸಮಾಚಾರ ಡ್ರೈವರ್ ?"

"ಯಾರಿಗ್ಗೊತ್ತಪ್ಪ ?"

"ಹೇಳಯ್ಯ, ಮಹಾ ರಹಸ್ಯ. ಸಾಹುಕಾರ್ರೂ ಅಮ್ಮಾವ್ರೂ ಮಾತಾಡಿದ್ದು ನನಗೆ ಕೇಳಿಸ್ಲಿಲ್ಲ ಅಂದ್ಕೊಂಡ್ಯಾ ?"

"ನನಗೂ ನೀವೇ ಯೋಳ್ಬುಡಿ."

"ಮಗನಿಗೂ ತಂದೆಗೂ ವೈಮನಸ್ಸು !"

"ಇಷ್ಟೇನಾ ?"

ಭಟ್ಟ ತನಗೆ ತಿಳಿದಿದ್ದ, ತಾನು ಕಲ್ಪಿಸಿಕೊಂಡಿದ್ದ, ವಿವರಗಳನ್ನು ಹೇಳತೊಡಗಿದ......

ಕಮಲಮ್ಮ ಪತಿಯ ಕೋಣೆಯ ಬಾಗಿಲನ್ನುತಲಪಿದರು. ಶ್ರೀಕಂಠಯ್ಯ ಒಂದರ ಅನಂತರ ಒಂದಾಗಿ ಸುಡುತ್ತಿದ್ದ ಸಿಗರೇಟುಗಳ ಹೊಗೆ ವಿದ್ಯುದ್ದೀಪದ ಬೆಳಕಿನಲ್ಲಿ ಲಾಸ್ಯವಾಡುತ್ತಿತ್ತು. ಇದು ಭೋಜನಾನಂತರದ ವಿಶ್ರಾಂತಿಯ ಚಿತ್ರವಲ್ಲ ಎಂಬುದು ಕಮಲಮ್ಮನಿಗೆ ತಿಳಿಯದ್ದಲ್ಲ. ಧೈರ್ಯ ತಂದುಕೊಂಡು ಆಕೆ ಅಂದರು:

"ಡ್ರೈವರ್ ಮನೆಗೆ ಹೋಗ್ಬಹುದಾ?"

ಹೊಗೆಮೋಡವನ್ನು ಭೇದಿಸಿ ಬಂತು ಶ್ರೀಕಂಠಯ್ಯನವರ ಧ್ವನಿ:

"ಹೂಂ."

ಕಮಲಮ್ಮ ಬರತೊಡಗಿದೊಡನೆ ಭಟ್ಟನ ಮಾತು ನಿಂತಿತು.

"ಹೋಗಪ್ಪ,"

—ಎಂದರು ಕಮಲಮ್ಮ, ಅಜೀಜನನ್ನು ಉದ್ದೇಶಿಸಿ.

"ಹೂಂ ತಾಯಿ,"

—ಎಂದವನೇ ಅಜೀಜ್ ಕಾರಿನ ಕೀಲಿಗೊಂಚಲನ್ನು ಕಮಲಮ್ಮನ ಕೈಗಿತ್ತು, ಎದುರು ಗೇಟಿನ ಕಡೆಗೆ ಹೊರಟ. ಸೀಸರ್ ಅವನನ್ನು ಬೀಳ್ಕೊಟ್ಟಿತು.

ಭಟ್ಟನ ಊಟ ಮುಗಿಯುತ್ತ ಬಂದಂತೆ ಲಚ್ಚಿ ದೇವಕ್ಕನನ್ನು ಕರೆದಳು. ಉಳಿದುದನ್ನು ಹಂಚಿಕೊಂಡು ತಮ್ಮ ಮೂಲೆಮನೆಗಳಿಗೆ ಅವರು ನಡೆದರು.

ಹಿತ್ತಿಲ ಕಡೆ ಬಾಗಿಲು ಭದ್ರವಾಗಿದ್ದುದನ್ನು ಕಮಲಮ್ಮ ನೋಡಿಬಂದು, ಭಟ್ಟನಿಗೆ ಮಲಗಲು ಹೇಳಿ, ತಾವು ಮಹಡಿಯ ಮೆಟ್ಟಲು ಹತ್ತಿದರು. ಜಯಶ್ರೀಯ ಕೊಠಡಿಯಲ್ಲಿ ದೀಪ ಉರಿಯುತಿತ್ತು. ಬಾಗಿಲು ತೆರೆದಿತ್ತು. 'ನಿದ್ದೆ ಹೋಗಿದಾಳೆ' ಎಂದುಕೊಳ್ಳುತ್ತ ಕಮಲಮ್ಮ ಒಳಕ್ಕೆ ಕಾಲಿರಿಸಿ, ಮಗಳು ಮಲಗಿದ್ದ ಪಲ್ಲಂಗದ ಹತ್ತಿರಕ್ಕೆ ಬಂದರು. ಅದೇನು ಕನಸು ಕಾಣುತ್ತಿದ್ದಳೊ ಹುಡುಗಿ—ತುಟಿಗಳ ಮೇಲೆ ಮುಗುಳುನಗೆ ಮೂಡಿತ್ತು. ಒಂದು ಕ್ಷಣ ಮಗಳನ್ನೆ ದಿಟ್ಟಿಸಿ ನೋಡಿ ಕಮಲಮ್ಮ ತಲೆಯಲ್ಲಾಡಿಸುತ್ತ ನಿಟ್ಟುಸಿರು ಬಿಟ್ಟರು.

ಹಾಸಿಗೆಯ ಮೇಲೆ ಸರಿದುಬಿದ್ದಿದ್ದ ಪತ್ರಿಕೆಯನ್ನೆತ್ತಿ ಅವರು ಮೇಜಿನ ಮೇಲಿರಿಸಿದರು. ಕಾಲೇಜಿನ ಪಠ್ಯಪುಸ್ತಕಗಳೂ ನೋಟ್‌ಬುಕ್ಕುಗಳೂ ಅಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ಮಗಳ ಕಾಲಬುಡದಲ್ಲಿ ಲಚ್ಚಿ ಓರಣವಾಗಿ ಮಡಚಿ ಇರಿಸಿದ್ದ ರಗ್ಗಿತ್ತು. ಅದನ್ನು ಬಿಡಿಸಿ ಮಗಳ ಭುಜಗಳ ವರೆಗೂ ಹೊದಿಸಿದರು. ಸೊಳ್ಳೆಗಳಿರಲಿಲ್ಲ. ಆದರೂ ರಕ್ತಹೀರಲು ಒಂದಿದ್ದರೂ ಸಾಕು ಎಂದು, ಪರದೆಯನ್ನು ಇಳಿಬಿಟ್ಟರು. ಜಯಶ್ರೀಯ ದೇಹ ತುಸು ಮಿಸುಕಿತು. ಅಷ್ಟೆ. ಎಚ್ಚರವಾಗಲಿಲ್ಲ. ಕಮಲಮ್ಮ ದೀಪ ಆರಿಸಿದರು. ಕೊಠಡಿಯಿಂದ ಹೊರಬಂದು ಬಾಗಿಲೆಳೆದುಕೊಂಡರು.

ಅವರು ಕೆಳಬಂದಾಗ ಇನ್ನೂ ಯಜ್ಞಕುಂಡದಿಂದ ಧೂಮ ಹೊರಡುತ್ತಲಿತ್ತು. ಶ್ರೀಕಂಠಯ್ಯ ಕುಳಿತಲ್ಲಿಂದ ಚಲಿಸದೆ ಸಿಗರೇಟು ಸೇದುವ ಯಂತ್ರವಾಗಿದ್ದರು.

ಗಂಡ ಮಲಗುವ ಕೊಠಡಿಗೆ ಹೋಗಿ ಕಮಲಮ್ಮ ಅವರ ಹಾಸಿಗೆಯನ್ನು ಅಣಿಗೊಳಿಸಿದರು. ಕುಡಿಯುವ ನೀರಿದೆಯೇ ಎಂದು ನೋಡಿದರು. ಅಲ್ಲಿಂದ ಬಂಗಲೆಯ ಹೊರಜಗಲಿಗೆ ಬಂದರು.

ಅಲ್ಲಿ ಜಗ್ಗ ತನ್ನ ಜಮಖಾನ ಕಂಬಳಿಯ ಸುರುಳಿಯ ಮೇಲೆ ಕುಳಿತಿದ್ದ. ಸೀಸರ್ ಆತನೊಡನೆ ಮೌನಸಂಭಾಷಣೆ ನಡೆಸಿತ್ತು. ಕಮಲಮ್ಮನವರನ್ನು ನೋಡಿದೊಡನೆ ಜಗ್ಗ ಎದ್ದು ನಿಂತ. ಸೀಸರ್ ಮುಂಗಾಲುಗಳನ್ನು ಚಾಚಿ ನಮಸ್ಕರಿಸಿತು. ಬಾಲ ಅಲ್ಲಾಡಿಸಿತು. 'ಶೂ ! ಹತ್ತಿರ ಬರ್ಬೇಡ !' ಎಂದು ಕಮಲಮ್ಮ ಹೇಳುತ್ತಿದ್ದಂತೆ, ತನ್ನ ಮೂಲೆಗೆ ಹೋಗಿ, ಮಲಗಿಕೊಂಡು, ಅರಳಿದ ಕಣ್ಣುಗಳಿಂದ ಒಡತಿಯನ್ನು ನೋಡಿತು.

ಕಮಲಮ್ಮ ಸೇವಕನತ್ತ ತಿರುಗಿದರು.

"ಊಟವಾಯ್ತೆ ಜಗ್ಗ ?"

"ಹೂನ್ರವ್ವ."

"ದೇವಕ್ಕ ಮಲಕ್ಕೊಂಡ್ಲಾ ?"

"ಹೂನ್ರವ್ವ."

"ಹಾಗಾದರೆ ಒಳಗಿನ ಕದ ಹಾಕ್ಕೊಳ್ಲಾ ?"

"ಹಾಕ್ಕೊಳ್ರವ್ವಾ......"

"ನೀನು ಹೊರಗಿನ ಬಾಗಿಲು ಮುಚ್ಚಿ ದೀಪ ಆರಿಸ್ಬಿಡು."

"ಆರಿಸ್ತೀನ್ರವ್ವ."

ಕಮಲಮ್ಮ ಹಜಾರದ ಬಾಗಿಲನ್ನು ಮುಚ್ಚಿ, ಅಗಣಿ ತಗಲಿಸಿ, ದೀಪ ಆರಿಸಿ ತಾವು ಮಲಗುವ ಕೋಣೆಗೆ ಹೋದರು.

ಜಗ್ಗ ಹೊರಬಾಗಿಲನ್ನು ಭದ್ರಗೊಳಿಸಿದ. ಛಾವಣಿಯಲ್ಲಿ ಅರ್ಧ ಮರೆಯಾಗಿದ್ದ ವಿದ್ಯುದ್ದೀಪ ಕಣ್ಣು ಮುಚ್ಚಿತು. ಮೆಲ್ಲನೆ ಜಮಖಾನವನ್ನು ನೆಲದ ಮೇಲೆ ಹಾಸಿದ.

ಇದ್ದಕ್ಕಿದ್ದಂತೆ ಅವನಿಗೆ ತನ್ನ ಮೇಲೆ ಸಿಟ್ಟು ಬಂತು. ಹೊಸದಾಗಿ ಮದುವೆ ಮಾಡಿಕೊಂಡವನು ಹೆಂಡತಿಯನ್ನು ಬಿಟ್ಟು ಮಲಗಬೇಕು. ಏನಿದ್ದರೂ ಹತ್ತು

ಘಂಟೆಯೊಳಗೇ ಮುಗಿಸಿ ಬರಬೇಕು. ಅದಾಗದೇ ಇದ್ದ ದಿನ ನಡುರಾತ್ರೆಯಲ್ಲಿ ಸದ್ದಾಗದಂತೆ ಬಾಗಿಲು ತೆರೆದು ಹೋಗಿ ಬರಬೇಕು......

ಸೀಸರ್ ಎದ್ದು ಬಾಲವಾಡಿಸುತ್ತ ಆತನ ಹತ್ತಿರಕ್ಕೆ ಬಂದಿತು. ಜಗ್ಗನ ಮದುವೆಗೆ ಮುನ್ನ ಕೆಲ ತಿಂಗಳು ಅವನ ಕಾಲಬುಡದಲ್ಲಿ ಒಟ್ಟಿಗೆ ಮಲಗಿ ಬೆಳೆದ ಪ್ರಾಣಿ. ಹಳೆಯ ಅಭ್ಯಾಸಬಲದಿಂದ ಪ್ರತಿ ರಾತ್ರೆಯೂ ಆತನ ಹತ್ತಿರ ಬರುತಿತ್ತು.

ನಿತ್ಯದಂತೆ ಇವತ್ತೂ ಜಗ್ಗ ತಗ್ಗಿದ ಧ್ವನಿಯಲ್ಲಿ ಗದರಿದ:

"ಒಡೀತೀನಿ ನೋಡು. ಓಗಿ ಮಲಕೋ."

ಮತ್ತೂ ಕೆಲ ಪದಗಳನ್ನು ಮೌನವಾಗಿ ಆತ ಉಚ್ಚರಿಸಿದ:

"ಮಾಡ್ಕೊಂಡ ಎಣ್ತಿಗಿಂತನೂ ಎಚ್ಚಾಗೋದ್ಯಾ ನೀನು?"

ಸೀಸರ್ ಬಗೆಬಗೆಯ ಧ್ವನಿ ಹೊರಡಿಸಿ, ಪ್ರತಿಭಟನೆ ಸೂಚಿಸಿ, ತನ್ನ ಮೂಲೆಗೆ ಹೋಗಿ, ಗೋಣಿತಟ್ಟುಗಳ ಮೇಲೆ ಮುದುಡಿ ಮಲಗಿಕೊಂಡಿತು.

ಜಗ್ಗನ ಕೈ ಎದೆ ಮುಟ್ಟಿದಾಗ ಸಿಗರೇಟಿನ ತುಂಡಿನ ನೆನಪಾಯಿತು. ಕೈಯಿಂದ ಅದಕ್ಕಾಗಿ ತಡಕಾಡಿದ. ಅದು ಚಪ್ಪಟೆಯಾಗಿ ಮುರಿದು ಹೋಗಿತ್ತು. ದೇವಕ್ಕನ ಮೈಮುರಿಯುವ ಅವಸರದಲ್ಲಿ ಆ ತುಣುಕಿನ ಅವಸಾನವಾಗಿತ್ತು.

"ಥತ್!" ಎಂದು ಸಿಗರೇಟಿನ ಪುಡಿಯನ್ನು ಹೊರಕ್ಕೆ ತೆಗೆದು ಪಕ್ಕಕ್ಕೆ ಚೆಲ್ಲಿದ.

ಸೀಸರ್ ಅದೇನೆಂದು ಮಲಗಿದಲ್ಲಿಂದಲೇ ಮೂಸಿ ನೋಡಿತು......

...ಕಮಲಮ್ಮ ತಮ್ಮ ಕೊಠಡಿಯ ಕತ್ತಲಲ್ಲಿ ಪಲ್ಲಂಗದ ಮೇಲೆ ಬಹಳ ಹೊತ್ತು ಕುಳಿತರು. ಗಂಡ ಏನನ್ನಾದರೂ ಹೇಳಲು ತಮ್ಮನ್ನು ಕರೆಯಬಹುದೆಂಬ ನಿರೀಕ್ಷೆಯಲ್ಲಿ ಹೊತ್ತು ಕಳೆದರು.

ಆದರೆ, ತೆರೆದ ಬಾಗಿಲುಗಳ ಸಂದಿಯಿಂದ ಯಾವ ಸದ್ದೂ ಬರಲಿಲ್ಲ.

ಹಿಂದೆ ಅವರು ವಾಸವಾಗಿದ್ದ ಮನೆಯಲ್ಲಿ ಹಳೆಯ ಮಾದರಿಯ ಗೋಡೆ ಗಡಿಯಾರವೊಂದಿತ್ತು. ಅದರ ಬಡಿತದ ಸಪ್ಪಳ ಮನೆಯ ಮೂಲೆಮೂಲೆಗೂ ಕೇಳಿಸುತ್ತಿತ್ತು. ಕುಳಿತಲ್ಲಿಂದಲೆ ಒಂದು ಎರಡು ಮೂರು ಎಂದು ಎಣಿಸಿ ವೇಳೆ ಎಷ್ಟಾಯಿತೆಂಬುದನ್ನು ಕಮಲಮ್ಮ ತಿಳಿದುಕೊಳ್ಳುತ್ತಿದ್ದರು. ಈ ಬಂಗಲೆಯಲ್ಲಾದರೋ ಅತ್ಯಂತ ನವೀನವಾದ ದುಂಡಗಿನ ಗೋಡೆಗಡಿಯಾರವಿತ್ತು. ನೀರವ ಚಲನೆಯ ಯಂತ್ರ ವಿಸ್ಮಯ. ಎದುರಲ್ಲಿ ನಿಂತು ಕಣ್ಣೆತ್ತಿ ನೋಡದ ಹೊರತು ಎಷ್ಟು ಗಂಟೆ ಎಂಬ ಪ್ರಶ್ನೆಗೆ ಉತ್ತರ ದೊರೆಯುತ್ತಿರಲಿಲ್ಲ.

ಕತ್ತಲೆಯಲ್ಲಿ ಕುಳಿತು ಕಮಲಮ್ಮ ಹೊತ್ತು ಎಷ್ಟಾಯಿತೋ ಎಂದು ಚಿಂತಿಸಿದರು. ಆಕಳಿಕೆ ಬಂತು. ಮಲಗಿಕೊಳ್ಳುವುದು ಮೇಲು ಎಂದು ಹಾಸಿಗೆಯ ಮೇಲೆ ಅಡ್ಡಾದರು. ರೆಪ್ಪೆಗಳು ಭಾರವಾದುವು.

ಅದೆಷ್ಟು ನಿಮಿಷ ಹಾಗೆ ಮಲಗಿದ್ದರೊ–ಗಡಬಡಿಸಿ ಎದ್ದರು. ಗಂಡನ ಧ್ವನಿ ಕೇಳಿಸುತಿತ್ತು. ಯಾರು ಬಂದರು?

......ಯಾರೂ ಇಲ್ಲ; ಫೋನ್ ಮಾಡುತ್ತಿದ್ದರು ಶ್ರೀಕಂಠಯ್ಯ.

ಅವರೆಂದರು:

"ಹ್ಞ–ಹ್ಞ–ಎಕ್ಸ್‌ಪ್ರೆಸ್ ಟೆಲಿಗ್ರಾಮ್. ಇಲ್ಲ, ಅಡ್ರೆಸಿಯ ಫೋನ್ ನಂಬರಿಲ್ಲ, ಫುಲ್ ಅಡ್ರೆಸ್ ಕೊಡ್ತೀನಿ. ಬರಕೊಳ್ಳಿ....... ಜಯರಾಮ್......"

೩

ವಿಕ್ಟೋರಿಯಾ ಟರ್ಮಿನಸ್ ರೈಲು ನಿಲ್ದಾಣವನ್ನು ಜಯರಾಮು ಬಂದು ತಲಪಿದಾಗ ಸಂಜೆ ಐದೂವರೆ ಘಂಟೆಯಾಗಿತ್ತು. ಟ್ಯಾಕ್ಸಿ ವೇಗ ಕಡಮೆ ಮಾಡಿ ನಿಲ್ಲುತ್ತಿದ್ದಂತೆ, ಹೊರಗೆ ತನಗಾಗಿ ಕಾದಿದ್ದ ವಾರ್ಡ್ ಬಾಯ್ ಧಾಕಪ್ಪನನ್ನು ಜಯರಾಮು ನೋಡಿದ.

ಟ್ಯಾಕ್ಸಿಯವನಿಗೆ ಬಾಡಿಗೆ, ಎರಡೂ ಚಿಲ್ಲರೆಯ ಬದಲು ಮೂರು. ಹಮಾಲನಿಗೆ ಸೂಚನೆ, ಟ್ರಂಕನ್ನೂ ಸೂಟ್‌ಕೇಸನ್ನೂ ಹೊತ್ತುಕೊಳ್ಳಲು.

ಜಯರಾಮು ಆ ಕೆಲಸ ಮಾಡುತ್ತಿದ್ದಂತೆ ಧಾಕಪ್ಪ ಮರಾಠಿಯಲ್ಲಿ ವರದಿಯೊಪ್ಪಿಸಿದ:

"ಥರ್ಡ್ ಕ್ಲಾಸ್ ಸ್ಲೀಪಿಂಗ್ ಕ್ಯಾರೇಜ್ನಲ್ಲಿ ಸಿಗಲಿಲ್ಲ. ಸೆಕೆಂಡ್ ಕ್ಲಾಸಿಂದು ಒಂದೇ ಒಂದಿತ್ತು. ಬಹಳ ಕಷ್ಟವಾಯ್ತು. ಅಂತೂ ಸಿಗ್ತು."

ಟಿಕೆಟ್ ಕೊಳ್ಳಲೆಂದು ಜಯರಾಮು ಮಧ್ಯಾಹ್ನವೇ ಕಳುಹಿಕೊಟ್ಟಿದ್ದ ಸೇವಕ ಧಾಕಪ್ಪ– ಆ ಹಗಲು ಬಿಡುವಾಗಿದ್ದ ಕೆ. ಇ. ಎಮ್. ಆಸ್ಪತ್ರೆಯ ನೌಕರ.

ತಪ್ಪುತಪ್ಪು ಮರಾಠಿಯಲ್ಲಿ ಜಯರಾಮು ಅಂದ:

"ಅಂತೂ ಸಿಗ್ತಲ್ಲ ! ನಿನಗೆ ತುಂಬಾ ತೊಂದರೆಯಾಯ್ತು ಧಾಕಪ್ಪ."

ಟಿಕೆಟನ್ನೂ ಚಿಲ್ಲರೆಯನ್ನೂ ಧಾಕಪ್ಪ ಜಯರಾಮುವಿನ ಕೈಗಿತ್ತ. ಹಣವನ್ನೆಣಿಸದೆ, ಅದರಲ್ಲಿದ್ದ ಎರಡು ರೂಪಾಯಿಗಳ ಒಂದು ನೋಟನ್ನೆತ್ತಿ, ಧಾಕಪ್ಪ "ನಕೋ ನಕೋ" ಎನ್ನುತ್ತಿದ್ದಂತೆಯೇ ಆತನ ಜೇಬಿಗೆ ಜಯರಾಮು ತುರುಕಿದ. "ನೀನಿನ್ನು ಹೋಗು," ಎಂದು ಕೈ ಬೀಸಿ, ಜನಸಂದಣಿಯಲ್ಲಿ ಮರೆಯಾಗತೊಡಗಿದ್ದ ಹಮಾಲನ ಬೆನ್ನಟ್ಟಿದ.

ಪುಣೆಗೆ ಹೋಗುವ ರೈಲುಗಾಡಿ ಸಿದ್ಧವಾಗಿ ನಿಂತಿತ್ತು. ಸತ್ತು ಮೈಚಾಚಿದ್ದ ಎರೆಹುಳಕ್ಕೆ ಸಹಸ್ರ ಇರುವೆಗಳು ಮುಕುರುವಂತೆ ಜನ ಆ ಶಕಟಕ್ಕೆ ಅಂಟಿಕೊಂಡಿದ್ದರು. ಗಿಜಿಬಿಜಿ. ಸಾಲಾಗಿ ಹಲವು ಪ್ಲಾಟ್‌ಫಾರ್ಮ್‌ಗಳ ಮೇಲೆ ಬೇರೆ ಬೇರೆ ದಿಕ್ಕುಗಳಿಗೆ ಹೊರಡಲು ಸಿದ್ಧವಾಗಿ ನಿಂತಿದ್ದ ಗಾಡಿಗಳು. ಸೆಕೆಂಡ್ ಕ್ಲಾಸ್ ಡಬ್ಬಿಯ ಕಡೆಗೆ ಹಮಾಲ ಸಾಗಿದ್ದ. ಅವನ ಹಿಂದೆ ಜಯರಾಮು ಓಡಿದ.

ಆ ಡಬ್ಬಿಯಲ್ಲಿ ಒಳಕ್ಕೆ ಕಾಲಿರಿಸುವುದಕ್ಕೂ ಎಡೆ ಇರಲಿಲ್ಲ. ಕಲ್ಯಾಣದ ತನಕ ಪ್ರಯಾಣ ಬೆಳೆಸುವವರು ಹಲವರು ಅಲ್ಲಿದ್ದರು. ಸಾಮಾನನ್ನು ಒಳಸಾಗಿಸುವುದು ಹೇಗೆ?–ಎಂದು ಜಯರಾಮು ಚಿಂತಿಸುತಿದ್ದಂತೆಯೇ, ಜನರ ತಲೆಗಳ ಮೇಲಿಂದ ಅವನ ಸಾಮಾನುಗಳು ಒಳಕ್ಕೆ ತೇಲತೊಡಗಿದ್ದುವು. ಅದು ಹಮಾಲರಿಂದ ಮಾತ್ರ ಸಾಧ್ಯವಿರುವಂತಹ ಯುಕ್ತಿಪ್ರದರ್ಶನ.

ಆ ಸಹಾಯಕ್ಕಾಗಿ ಆತನಿಗೆ ಸಂಭಾವನೆ ಇತ್ತು, ತಾನು ಹೇಗಾದರೂ ಮಾಡಿ ಒಳಕ್ಕೆ ತೂರಿಕೊಂಡರಾಯಿತೆಂದು, ಜಯರಾಮು ಪ್ಲಾಟ್‌ಫಾರ್ಮಿನ ಮೇಲೆಯೇ ನಿಂತ.

"ಹಲೋ ಡಾಕ್ಟರ್. ಯಾರನ್ನಾದರೂ ಕಳಿಸೋಕೆ ಬಂದಿರಾ?"

ಹತ್ತಿರದಿಂದಲೇ ಬಂದ ಧ್ವನಿ ಕೇಳಿ ಜಯರಾಮು ತಿರುಗಿ ನೋಡಿದ.

ನಾಲ್ಕು ಮಾರುಗಳಾಚೆ ಫಸ್ಟ್ ಕ್ಲಾಸ್ ಕಂಪಾರ್ಟ್‌ಮೆಂಟಿನೆದುರು ಜಯರಾಮುವಿನ ಸಹೋದ್ಯೋಗಿ ಡಾಕ್ಟರ್ ಪರೇಖ್ ನಿಂತಿದ್ದ.

ಆತನಂತೆ ಇಂಗ್ಲಿಷಿನಲ್ಲೇ ಪ್ರಶ್ನೆಗೆ ಉತ್ತರವೀಯುತ್ತ ಜಯರಾಮು ಅಂದ:

"ಹಲೋ...ನಾನೇ ಪ್ರಯಾಣಿಕ."

"ಪೂನಾ?"

"ಭಾಗ್ಯನಗರ."

"ಓ ಹುಟ್ಟೂರಿಗೆ!"

"ನೀವು?"

"ಡಾಕ್ಟರ್ ಸುಖ್‌ಠಣ್‌ಕರ್ ಪೂನಾಗೆ ಹೋಗ್ತಿದಾರೆ."

"ಹೌದೆ?"

ಕಂಬಿಗಳ ಹಿಂಬದಿಯಲ್ಲಿ ಸುಂದರ ಮುಖವೊಂದು ಕಾಣಿಸಿಕೊಂಡು, ಜಯರಾಮುವನ್ನು ನೋಡಿ, ಮೌನವಂದನೆಯ ಮುಗುಳುನಗೆ ಬೀರಿತು. ಜಯ

ರಾಮುವೂ ಮದಸ್ಮಿತನಾಗಿ ತಲೆಯನ್ನು ತುಸು ಬಾಗಿಸಿ ಪ್ರತಿವಂದನೆ ಮಾಡಿದ. ನಿಂತಲ್ಲಿಂದ ಚಲಿಸಿ ತುಸು ಆ ಕಡೆಗೆ ಸರಿದ.

ಇಂಪಾದ ಕಂಠ ಉಲಿಯಿತು:

"ಇದೇನು ಡಾಕ್ಟರ್ ರಾಮು, ಹೇಳದೆ ಕೇಳದೆ?"

"ಒಮ್ಮಿಂದೊಮ್ಮೆಗೆ ಹೊರಡ್ತಿದೀನಿ. ಇವತ್ತು ಬೆಳಗ್ಗೆ ಟೆಲಿಗ್ರಾಮ್ ಬಂತು."

ಲಿಪ್‌ಸ್ಟಿಕ್ ಹಚ್ಚಿದ ತುಟಿಗಳು ಚಲಿಸಿದುವು.

"ಏನಾದರೂ ಕೆಟ್ಟ ಸುದ್ದಿ?"

"ಇರಲಾರದು. ತಕ್ಷಣ ಹೊರಡು–ಅಂತ ಎರಡೇ ಪದ."

ಈಗ ಕಣ್ಣುಗಳು ಮಿನುಗಿ ಹುಬ್ಬುಗಳು ಹೆದೆ ಏರಿಸಿದುವು.

"ಆಪತ್ತು ಕಾದಿರೋದು ನಿಮಗೆ ಅನಿಸುತ್ತೆ!"

ಪರೇಖ್ ನಕ್ಕ. ಆಕೆ ನುಡಿದುದರ ಸೂಚ್ಯಾರ್ಥ ಜಯರಾಮುಗೆ ಹೊಳೆಯಲು ಅರ್ಧ ಕ್ಷಣ ಹಿಡಿಯಿತು. ಪರೇಖನನ್ನು ಹಿಂಬಾಲಿಸಿ ಈಗ ಅವನೂ ನಕ್ಕ. ಸುಖ್‌ಠಣ್‌ಕರ್ ಕೊನೆಯದಾಗಿ ನಕ್ಕಳು.

ಗಾಡಿಯ ದೀರ್ಘ ಶಿಳ್ಳು ಕೇಳಿಸಿತು.

"ಒಳಗೆ ಹೋಗಿ."

–ಎಂದ ಪರೇಖ್, ಜಯರಾಮುಗೆ.

ಜಯರಾಮು ಇಬ್ಬರಿಗೂ ಅನ್ವಯಿಸುವಂತೆ ಕೈಬೀಸಿ, ತನ್ನ ಡಬ್ಬಿಯ ಕಡೆಗೆ ನೆಗೆದು, ಹಿಡಿಗಳನ್ನು ಅಮುಕಿ ತೂಗಾಡಿ, ತೆರೆದ ಬಾಗಿಲ ಬಳಿಯ ಪ್ರಯಾಣಿಕರಿಗೆ ಅಂಟಿಕೊಂಡ. ಅವನ ದೃಷ್ಟಿ ಪರೇಖನ ಕಡೆಗೆ ತಿರುಗಿತು. ಚಲಿಸತೊಡಗಿತ್ತು ಗಾಡಿ. ಪರೇಖ ಜಯರಾಮುವನ್ನು ನೋಡುತ್ತಿರಲಿಲ್ಲ. ಆತನ ತುಟಿಗಳು ಸುಖ್‌ಠಣ್‌ಕರ್‌ಗೆ ಗೂಢಾರ್ಥದ ವಿದಾಯ ನುಡಿಯುವುದರಲ್ಲಿ ನಿರತವಾಗಿದ್ದುವು.

ಬಾಗಿಲನ್ನು ಬಿಟ್ಟು ಜಯರಾಮು ತುಸು ಮುಂದೆ ಸರಿದನಾದರೂ, ಕಲ್ಯಾಣದ ತನಕವೂ ಆತ ನಿಂತಿರಬೇಕಾಯಿತು. ಜನರಿಂದ ಆವೃತನಾಗಿದ್ದಾಗಲೂ ಒಂಟಿಯಾಗಿರುವ ಕಲೆ ಎಷ್ಟೊಂದು ಚೆನ್ನಾಗಿ ಸಾಧಿಸಿತ್ತು ಅವನಿಗೆ! ಸುತ್ತಲಿನ ನೂರು ಮಾತುಗಳು ಅವನ ಗಮನ ಸೆಳೆದರೂ ಕಿವಿಯ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿ ಆತ ಅಂತರ್ಮುಖಿಯಾದ........

ಮನುಭಾಯಿ ಪರೇಖ್ ಮತ್ತು ಲೀಲಾ ಸುಖ್‌ಠಣ್‌ಕರ್. ಪರೇಖ್ ಶ್ರೀಮಂತ ಪುತ್ರ. ಕಳೆದ ವರ್ಷ ಎಂ.ಡಿ. ಆಗಿ ಕೆ. ಇ. ಎಂ. ಆಸ್ಪತ್ರೆಯಲ್ಲೇ ಉದ್ಯೋಗ ಹಿಡಿದವನು. ನೂರು ವರ್ಷ ಕುಳಿತು ತಿಂದರೂ ಮುಗಿಯದ ಐಶ್ವರ್ಯವಿತ್ತು ಅವನಿಗೆ. ಸುಖ್‌ಠಣ್‌ಕರ್ ಅದೇ ಆಸ್ಪತ್ರೆಯಲ್ಲಿ ಈಗ ಹೌಸ್ ಸರ್ಜನ್. ಪ್ರತಿ ಪರೀಕ್ಷೆಯಲ್ಲೂ ಒಂದು ಬಾರಿ ಅನುತ್ತೀರ್ಣಳಾಗಿ ಕೊನೆ ಗೊಮ್ಮೆ ಎಂ. ಬಿ., ಬಿ. ಎಸ್. ಎನಿಸಿಕೊಂಡವಳು. ಕೆ. ಇ. ಎಂ. ಆಸ್ಪತ್ರೆಗೆ ಅವಳು ಬರತೊಡಗಿದಂದಿನಿಂದ ಅಲ್ಲಿನ ವೈದ್ಯಕೀಯ ಬಳಗದಲ್ಲಿ ಆಕೆಯ ಪ್ರಸ್ತಾಪ ವಿರದ ದಿನವಿಲ್ಲ. ಬಲ್ಲವರು ಬಲ್ಲರು–ಅವಳು ಲೀಲಾ ಅಲ್ಲ, ಲೈಲಾ. ಅವಳ ಕುಲಗೋತ್ರಗಳನ್ನು ಕುರಿತು ಒಬ್ಬೊಬ್ಬರು ಒಂದೊಂದು ಬಗೆಯಾಗಿ ಆಡಿಕೊಳು ತ್ತಿದ್ದರು. ಹೀಗೆ ಪರಿಹಾಸ್ಯಮಾಡುತ್ತಿದ್ದವರನ್ನು ಉದ್ದೇಶಿಸಿ ಒಬ್ಬ ಒಮ್ಮೆ ಅಂದಿದ್ದ:

"ಈಗ ಹೀಗಂತೀರಿ. ಆಕೆಯ ಕುಡಿಗಣ್ಣ ಸಂಜ್ಞೆಯೊಂದು ಪ್ರಾಪ್ತವಾಗಲಿ; ಇಂದೇ ಸಂಜೆ ವಿಧೇಯರಾಗಿ ಅವಳನ್ನು ಹಿಂಬಾಲಿಸದವರು ನಮ್ಮಲ್ಲಿ ಯಾರಿ ದಾರೆ ಹೇಳಿ?"

ವಿಲಾಸಿಜೀವನಕ್ಕೆ ಹೆಸರಾದ ಪರೇಖ್, ಆ ಪ್ರೇಮದೇವತೆಯ ಆರಾಧಕ ನಾದುದರಲ್ಲಿ ಯಾವ ಆಶ್ಚರ್ಯವೂ ಇರಲಿಲ್ಲ.

ಅವಳದು ಆಧುನಿಕ ಚಿತ್ರಕಾರರೂ ಜಾಹೀರಾತುದಾರರೂ ರೂಪದರ್ಶಿ ಯಾಗಿರಲು ಬಯಸುವಂತಹ ಅಂಗಸೌಷ್ಠವ.

ಜಯರಾಮುವಿನೊಡನೆ ಒಬ್ಬ ಸಹೋದ್ಯೋಗಿ ಅಂದಿದ್ದ:

"ಕಳೆದ ಆರು ವರ್ಷಗಳಿಂದ ಅವಳನ್ನ ನೋಡ್ತಿದೀನಿ. ಸ್ವಲ್ಪವಾದರೂ ಬದಲಾಗಿದ್ದರೆ ನಿಮ್ಮಾಣೆ. ಯಾವ ಮೈಮರೆವಿನ ಘಳಿಗೆಯಲ್ಲಿ ಬ್ರಹ್ಮ ಅವಳನ್ನು ಸೃಷ್ಟಿಮಾಡಿದನೋ. ಅದ್ಭುತ! ಅದ್ಭುತ!"

ಜಯರಾಮು ಕುರುಡನಲ್ಲ. ಸನ್ಯಾಸಿಯಲ್ಲ. ಲಾವಣ್ಯದ ಮೌಲ್ಯ ನಿರ್ಧ ರಿಸುವಷ್ಟು ಸೌಂದರ್ಯಪ್ರಜ್ಞೆ ಅವನಿಗಿತ್ತು. ಆದರೂ–

ಆ ವರ್ಷ ಜಯರಾಮುವಿನ ಜೊತೆಗೇ ಎಂ.ಎಸ್. ಪದವಿಯನ್ನು ಪಡೆದ ಜಾಗಿರದಾರ್ ತನ್ನ ಸಹಪಾಠಿಯನ್ನು ಕಟು ಟೀಕೆಗೆ ಗುರಿಮಾಡುತ್ತ ಒಮ್ಮೆ ಅಂದಿದ್ದ:

"ನೀವು ವಿಚಿತ್ರ ಮನುಷ್ಯ ಡಾ. ರಾಮು. ಹೆಣ್ಣಿನ ಸಂಗ–ಸಖ್ಯಕ್ಕಾಗಿ ಗಂಡಸು ಹಾತೊರೆಯದೇ ಇರುವುದು ತೀರಾ ಅಸ್ವಾಭಾವಿಕ, ಅಸಹಜ. ಹೋಗಲಿ. ಮದುವೆ ಕೂಡಾ ಆಗಬಾರದೂಂತಿದೀರೊ?"

ಅದಕ್ಕೆ ಜಯರಾಮು ಕೊಟ್ಟ ಉತ್ತರ:

"ಅಂಥ ತೀರ್ಮಾನವನ್ನೇನೂ ಮಾಡಿಲ್ಲ."

"ಸದ್ಯಃ! ಊರಲ್ಲಿ ಹುಡುಗಿ ಗೊತ್ತಾಗಿದೆ, ಆಕೆಯ ಬಗ್ಗೆ ಇಷ್ಟೆಲ್ಲ ನಿಷ್ಠೆ, ಅನ್ನಲೆ?"

"ಇಲ್ಲ, ಅಂಥದೇನೂ ಇಲ್ಲ."

"ಸಾಧ್ಯವಿಲ್ಲವಪ್ಪ. ನಿಮ್ಮನ್ನು ಅರ್ಥಮಾಡಿಕೊಳ್ಳೋದು ನನ್ನಿಂದ ಸಾಧ್ಯ ವಿಲ್ಲ."

"ನಿಮಗಾದರೂ ಯಾಕೆ ವ್ಯಥಾ ಶ್ರಮ?"

"ನಿಜ......ನಾನು ಕೈಹಿಡಿದವಳು ಊರಲ್ಲಿದಾಳೆ. ಒಮ್ಮೊಮ್ಮೆ ಇಲ್ಲಿ ಅವಳನ್ನು ಮರೀತೀನಿ. ನಾನು ಪಾಪಿ ಅಂತ ನೀವು ತುಚ್ಛವಾಗಿ ಕಾಣೋದಿಲ್ಲ ತಾನೆ?"

"ಅದು ಪಾಪ ಹೌದೋ ಅಲ್ಲವೋ ಅಂತ ನಿರ್ಧರಿಸೋದಕ್ಕೆ ನಾನು ಯಾರು?"

"ಥ್ಯಾಂಕ್ಸ್. ಅಂದಹಾಗೆ ಮೊನ್ನೆ ಡಾ. ಸುಖ್‌ಠಣ್‌ಕರ್ ನಿಮ್ಮ ವಿಷಯ ವಿಚಾರಿಸ್ತಾ ಇದ್ಲಂತೆ."

"ಅಸ್ವಾಭಾವಿಕ, ಅಸಹಜ–ಅಲ್ಲವಲ್ಲ?"

"ಉಶ್!"

–ಆ ಸಂಭಾಷಣೆಯನ್ನು ಸ್ಮರಿಸಿಕೊಂಡು ಜಯರಾಮುಗೀಗ ನಗು ಬಂತು. ತಾನು ಸದ್ದಿಲ್ಲದೆ ಸಣ್ಣನೆ ನಕ್ಕಾಗ ಆತ ಎಚ್ಚರಗೊಂಡ. ಯಾರಾದರೂ ನೋಡಿ ದರೇನೋ ಎಂದು ಸುತ್ತಲೂ ದಿಟ್ಟಿಸಿದ. ಇಲ್ಲ. ಅಲ್ಲಿದ್ದವರೆಲ್ಲ ತಮ್ಮ ತಮ್ಮ ಮಾತುಕತೆಗಳಲ್ಲಿ ನಿರತರಾಗಿದ್ದರು.

ಯಾವ ಘಳಿಗೆಯಲ್ಲೋ ದೀಪಗಳು ಹತ್ತಿಕೊಂಡಿದ್ದುವು.

......ಮುಂದೆಯೊಮ್ಮೆ ಯಾರೋ ಸುಖ್‌ಠಣ್‌ಕರಳನ್ನು ಜಯರಾಮುಗೆ ಪರಿಚಯಮಾಡಿಕೊಟ್ಟಿದ್ದರು. ತನ್ನ ಬಗೆಗೆ ಆಕೆಗೆ ಹೇಳುತ್ತ ಅವರೆಂದಿದ್ದರು:

"ನಮ್ಮ ಆಸ್ಪತ್ರೇಲಿ ಆನರೆರಿ ಸರ್ಜನ್. ದೇಹ ಕುಯ್ದು ದುಡ್ಡು ಮಾಡ ಬೇಕು ಅನ್ನೋ ಆಸೆಯೇ ಇಲ್ಲ. ಊರಲ್ಲಿ ಇವರದೊಂದು ಬಂಗಾರದ ಗಣಿ ಇದೆ. ಇಲ್ಲಿ ಇವರು ಒ. ಟಿ.ಯಲ್ಲಿ ಅನುರಕ್ತರು."

......ಒಂದು ದಿನ ಸಂಜೆ ಜಯರಾಮು ಆಸ್ಪತ್ರೆಯಿಂದ ಹೊರಬೀಳು ತ್ತಿದ್ದಾಗ ಹಿಂದಿನಿಂದ ಸ್ತ್ರೀಕಂಠ ಕೇಳಿಸಿತು:

"ಡಾಕ್ಟರ್!"

ತನ್ನ ಮುಂದುಗಡೆ ಬೇರೆ ಯಾವ ಡಾಕ್ಟರೂ ಇರಲಿಲ್ಲವೆಂದು ಜಯ ರಾಮು ತಿರುಗಿ ನೋಡಿದ.

ಸುಖ್‌ಠಣ್‌ಕರ್ ಬರುತಿದ್ದಳು.

ಮುಗುಳುನಗೆ ಬೀರಿ ಅವಳೆಂದಳು:

"ಯಾವಾಗ ನೋಡಿದರೂ ಅವಸರವಾಗಿ ಹೋಗ್ತಿರ್ತೀರಾ. The man of destiny."

ಜಯರಾಮು 'ಹಲೋ' ಎಂದು, ನಿಂತು, ಅವಳ ಜತೆ ನಿಧಾನವಾಗಿ ನಡೆಯ ತೊಡಗಿದ.

ಆಕೆ ಕೇಳಿದಳು:

"ಯಾವಾಗ ಪ್ರಯಾಣ?"

"ಎಲ್ಲಿಗೆ?"

"ಯು. ಕೆ. ಗೆ......ಇನ್ನೆಲ್ಲಿಗೆ?"

"ಇಲ್ಲವಲ್ಲ!"

"ಮುಚ್ಚುಮರೆ ಮಾಡ್ತೀರಾ? ನನ್ನನ್ನೂ ಕರಕೊಂಡುಹೋಗಿ ಅಂತ ಕೇಳ್ತೀನಿ ಅಂದ್ಕೊಂಡಿರಾ?"

"ಯಾತರ ಮುಚ್ಚುಮರೆ? ಇಂಗ್ಲೆಂಡಿಗೆ ಯಾಕೆ ಹೋಗ್ಬೇಕು ಹೇಳಿ?"

"ಎಫ್.ಆರ್.ಸಿ.ಎಸ್. ಮಾಡ್ಕೊಳ್ಳೋದಕ್ಕೆ. ಬೇಡವೇನು?"

"ಮೊದಲು ನಾನು ಒಂದಷ್ಟು ಕೆಲಸ ಮಾಡಿ ಅನುಭವ ಪಡೀಬೇಕು."

"ಈಗ ಅನುಭವ ಇಲ್ಲ ಅಂತ್ಲೆ?"

ಜಯರಾಮು ಆಕೆಯ ಮುಖ ನೋಡಿದ. ಆ ಕಣ್ಣುಗಳಲ್ಲಿ ಹೊಳಪಿತ್ತು. ಅವಳು ಆಡಿದ ಮಾತು ದ್ವಂದ್ವಾರ್ಥದ್ದು ಅನಿಸಿತು. ಮರುಕ್ಷಣವೆ, ಛೆ–ಇದು ಅನವಶ್ಯ ಶಂಕೆ, ಎಂದುಕೊಂಡ. ಆಕೆಯ ಪ್ರಶ್ನೆಗೆ ಉತ್ತರವಾಗಿ ಅವನೆಂದ:

"ಸಾಲದು."

"ಹಾಗಾದರೆ ಸರಕಾರೀ ಕೆಲಸದಲ್ಲಿ ನಿಮಗೆ ಆಸಕ್ತಿ ಇಲ್ಲ ಎಂದಾಯ್ತು."

"ಸರಿಯಾಗಿ ಊಹಿಸಿದಿರಿ."

"ನಿಮ್ಮೂರಲ್ಲಿ ಸ್ವಂತದ್ದೇ ಏನಾದರೂ ತೆರೀತೀರೇನೊ?"

"ನಾನಿನ್ನೂ ಆ ವಿಷಯ ಯೋಚಿಸಿಲ್ಲ."

ಜಯರಾಮು ಸ್ಮರಿಸಿದ:

ತನ್ನ ಮಾತಿನ ವೈಖರಿಯಿಂದ ಸುಖ್‌ಠಣ್‌ಕರ್‌ಗೆ ಬೇಸರವಾಗಿರಬೇಕು, ಅವಳು ಮೌನವಾಗಿ ನಾಲ್ಕು ಹೆಜ್ಜೆ ನಡೆದಳು.

ಅಷ್ಟರಲ್ಲೆ ಖಾಲಿ ಟ್ಯಾಕ್ಸಿ ಅತ್ತ ಬಂತು. ಆಕೆ ಸನ್ನೆ ಮಾಡಿ ಅದನ್ನು ತಡೆದಳು.

ಒಂದು ನಿಮಿಷ ಅನುಮಾನಿಸಿ,

"ಬರಲಾ ಡಾಕ್ಟರ್?"

—ಎಂದು ಕೇಳಿ, ಸಮ್ಮತಿಯ ದಾರಿ ನೋಡದೆ, ಟ್ಯಾಕ್ಸಿಯಲ್ಲಿ ಕುಳಿತು, ಕಣ್ಣುಗಳನ್ನು ಕಿರಿದುಗೊಳಿಸಿ ಜಯರಾಮು ಕಡೆ ನೋಡುತ್ತ, ಸುಖ್‌ಠಣ್‌ಕರ್ ಹೊರಟುಹೋದಳು.

ಪರೇಖ್ ಮತ್ತು ಆಕೆ ಜೋಡಿಯಾದುದು ಅನಂತರ.

"ಇದು ಪರೇಖ್‌ಮಾಸ. ಮುಂದಿನದು ಯಾವುದೋ ನೋಡಬೇಕು,"

—ಎಂದನೊಬ್ಬ, ಆ ಇಬ್ಬರ ಬಗೆಗೆ ಪ್ರಸ್ತಾಪಿಸುತ್ತ.

......ತನ್ನ ಯೋಚನೆಯ ಜಾಡನ್ನು ಅಲ್ಲಿಗೆ ಕಡಿದು, ಜಯರಾಮು ತನ್ನನ್ನು ಕೇಳಿಕೊಂಡ: ಈ ಲೈಲಾಳ ಹೊರತು ಬೇರೆ ವಿಷಯವೇ ಇಲ್ಲವೆ ತನ್ನ ಬಳಿ?

ಟೆಲಿಗ್ರಾಮ್ ಬಂತೆಂದು ತಾನು ಊರಿಗೆ ಹೊರಟಿದ್ದೇನೆ. ವಾಸ್ತವವಾಗಿ ಈ ಅವಸರದ ಅಗತ್ಯವಿತ್ತೆ? [The man of destiny.] ಅಥವಾ, ಊರಿಗೆ ತಾನು ಹೊರಡಬೇಕು ಎಂದು ಮನಸ್ಸಿನಲ್ಲಿ ಕಳೆದ ಕೆಲ ದಿನಗಳಿಂದ ಮಾಡಿದ್ದ ವಿಚಾರ ಕೃತಿಗಿಳಿಯಲು, ಈ ತಂತಿ ಕಾರಣವಾಯಿತೆಂದೆ?

ಸದಾಶಿವಯ್ಯನವರು ತನ್ನನ್ನು ಕಂಡು ಮಾತನಾಡಿ ಹೋದಾಗಿನಿಂದಲೂ ಇಂಥದೇ ಕಾರಣಕ್ಕೆ ಎಂದು ಹೇಳಲಾಗದ ಬೇಸರ ತನ್ನನ್ನು ಕವಿಯಿತಲ್ಲ?

ಎಂ.ಎಸ್. ಪದವಿ ದೊರೆತಾಗ, ಒಂದು ಘಟ್ಟ ಇಲ್ಲಿಗಾಯಿತು—ಎನಿಸಿತ್ತು. ಇನ್ನು ನಿರ್ಣಾಯಕ ಹೆಜ್ಜೆಯನ್ನು ತಾನು ಇಡಬೇಕು. ಯಾವ ದಿಕ್ಕಿಗೆ?

ಈ ವರೆಗೆ ಆಡಿದುದೆಲ್ಲ ಮರಳ ಮೇಲಿನ ಆಟ. ಪಾದಗಳು ತೋಯ್ದಿವೆ. ಕಟ್ಟಿದ ಮರಳುಗೂಡುಗಳು ಕರಗಿವೆ. ಬಣ್ಣಬಣ್ಣದ ಕಪ್ಪೆಚಿಪ್ಪುಗಳನ್ನು ಆರಿಸಿದ್ದೂ ಆಗಿದೆ. ತೆರೆಗಳ ಭೋರ್ಗರೆತದಿಂದ ಈಗ ಭಯವೆನಿಸುವುದಿಲ್ಲ. ಬದಲು ಆ ನಿನಾದ, ತನ್ನ ಪಾಲಿಗೆ ಇಂಪಾದ ಸಂಗೀತವಾಗಿದೆ. ಅಗೋ—ತನ್ನ ನಾವೆಯೂ ಬಿಸಿಲ ಸ್ನಾನದಿಂದ ಶುಚಿರ್ಭೂತವಾಗಿ ನಿಂತಿದೆ. ತೆರೆಗಳೆಡೆಗೆ ತಾನದನ್ನು ತಳ್ಳಬೇಕು; ಅದನ್ನೇರಬೇಕು.

ಅಗತ್ಯಬಿದ್ದರೆ ಈಸಬಲ್ಲೆನೆ ತಾನು? ತನ್ನ ಲೈಫ್‌ಬೆಲ್ಟನ್ನು ತಾನೇ ನಿರ್ಮಿಸಿಕೊಳ್ಳಬಲ್ಲೆನೆ? ನಾವೆ ಮಗುಚಿಕೊಂಡರೂ ಹಿಡಿದು ಸರಿಪಡಿಸಿ ಅದನ್ನು ಪುನಃ ಏರಬಲ್ಲೆನೆ?

ಆ ಸಾಮರ್ಥ್ಯ ತನಗಿದೆ ಅನಿಸುತ್ತಿದೆ.

ಸಾಗರದ ಮೇಲೆ ತೇಲತೊಡಗಿ ತಾನು ಹೋಗುವುದೆಲ್ಲಿಗೆ? ಯಾವ ದ್ವೀಪ ತನ್ನ ಗುರಿ? ಯಾವ ದಂಡೆ?

—ಗಾಡಿ ಡಕ್ಕೆಂದಿತು. ಸಾಮಾನುಗಳಿಡುವ ಮೇಲಿನ ಅಟ್ಟಣಿಗೆಯ ಅಂಚಿಗೆ ಜಯರಾಮುವಿನ ಹಣೆ ತಗಲಿತು.

ಆತ ಕಣ್ಣರಳಿಸಿ ನೋಡಿದ. ಕುಳಿತಿದ್ದವರು ಅನೇಕರು ಏಳುತ್ತಿದ್ದರು. ಕಲರವ ತೀವ್ರಗೊಂಡಿತ್ತು.

ಏನಾಯಿತು?

ದಡಕ್‌ದಡಕೆಂದು ಹಳಿಗಳನ್ನು ಬದಲಾಯಿಸುತ್ತಿತ್ತು ರೈಲುಗಾಡಿ. ಅದು ಕಲ್ಯಾಣ ನಿಲ್ದಾಣವನ್ನು ತಲಪಿತ್ತು, ಅಷ್ಟೆ.

ಜಯರಾಮು ನಿಂತಿದ್ದ ಸ್ಥಳದ ಸಮೀಪದಲ್ಲೆ ಕಿಟಕಿಯ ಬಳಿ ಕುಳಿತಿದ್ದವರೊಬ್ಬರು ಎದ್ದರು. ಇಬ್ಬರು ಜಯರಾಮರು ಕುಳಿತುಕೊಳ್ಳಲು ಸಾಲುವಷ್ಟು ಜಾಗ ತೆರವಾಯಿತು. ಜಯರಾಮು ಸರಕ್ಕನೆ ಅತ್ತ ಸರಿದು ಕುಳಿತು, ಒಂದು ಘಂಟೆ ಕಾಲ ನಿಂತು ಬಳಲಿದ್ದ ಕಾಲುಗಳಿಗೆ ತುಸು ವಿಶ್ರಾಂತಿ ನೀಡಿದ.

'ಚಾಯ್ ಗರಂ'. ಗಾಜಿನ ಲೋಟಗಳಲ್ಲಿ, ಇಲ್ಲವೆ ಕಪ್—ಸಾಸರ್—ಕೆಟ್ಲ್‌ಗಳಲ್ಲಿ. ಅವರವರ ಅಂತಸ್ತಿಗೆ ಅನುಗುಣವಾಗಿ ಅಥವಾ ಅನುಕೂಲಕ್ಕೆ ತಕ್ಕಂತೆ. ಆ ಪಾನೀಯದಲ್ಲಿ ಜಯರಾಮುಗೆ ಆಸಕ್ತಿ ಇರಲಿಲ್ಲ.

ಆದರೆ ಸುಖ್‌ಠಣ್‌ಕರ್‌ಗೆ? ಇಳಿದು ಹೋಗಿ ಮಾತನಾಡಿಸಬೇಕೆ ತಾನು? ಹಾಗೆ ಮಾಡುವುದಲ್ಲವೆ ಶಿಷ್ಟಾಚಾರ?

ತಾನು ಇಲ್ಲಿಯೇ ಕುಳಿತೆನೆಂದು, ಆಕೆಯೇ ಇಳಿದು ಇಲ್ಲಿಗೆ ಬಂದರೊ? ಸ್ಥಳವಿದೆ, ಪುಣೆಯ ವರೆಗೂ ನಿಮ್ಮ ಜತೆಗಿರುತ್ತೇನೆ ಎಂದರೊ?

ಜಯರಾಮುಗೆ ನಗುಬಂತು. ಆಕೆ ಹಾಗೆ ಮಾಡುವುದು ಅಸಂಭವ ವೇನೂ ಆಗಿರಲಿಲ್ಲ. ಅದಕ್ಕೆ ಅವಕಾಶ ಕೊಡದಿರುವುದು ಮೇಲು ಎಂದು, ಆತ ಎದ್ದ. ಪ್ಯಾಂಟಿನ ಜೇಬಿನೊಳಗಿಂದ ಕರವಸ್ತ್ರವನ್ನು ಹೊರ ತೆಗೆದು, ಬಿಡಿಸಿ, ತಾನು ಆಕ್ರಮಿಸಿದ್ದ ಸ್ಥಾನದ ಮೇಲೆ ಹಾಸಿ, ತನ್ನ ಯಾಜಮಾನ್ಯವನ್ನು ಜಾಹೀರು ಗೊಳಿಸಿ, ಕೆಳಕ್ಕೆ ಇಳಿದ.

ಸುಖ್‌ಠಣ್‌ಕರ್ ಅದೇ ಆಗ ತನ್ನ ಡಬ್ಬಿಯ ಬಾಗಿಲು ತೆಗೆದು ಎಡಬಲ ಗಳ ಹಿಡಿಗಳ ಮೇಲೆ ಅಂಗೈಗಳನ್ನೂರಿ, ನಿಲ್ದಾಣದ ಮೇಲಿದ್ದ ಜನಜಂಗುಳಿಗೆ ದರ್ಶನವೀಯುತ್ತಿದ್ದಳು. [ವಾಸ್ತವವಾಗಿ, ಜಯರಾಮುವನ್ನು ಅವಳು ಇದಿರು ನೋಡುತ್ತಿದ್ದಳು.]

ಜಯರಾಮು ಬರುತ್ತಿದ್ದುದನ್ನು ಕಂಡೊಡನೆ ಆಕೆ ಕೆಳಗಿಳಿದಳು. ಅವ ಳೆಂದಳು:

"ಕೂತು ಕೂತು ಬೇಜಾರಾಯ್ತು. ಮೊದಲೇ ಗೊತ್ತಿದ್ದರೆ ನಾನು ಸೆಕೆಂಡ್ ಕ್ಲಾಸ್ ಟಿಕೆಟೇ ತಗೊಳ್ತಿದ್ದೆ."

ಜಯರಾಮು ನಸುನಕ್ಕ. ಒಬ್ಬರಿಗೊಬ್ಬರು ಅಂಟಿಕೊಂಡು ನಿಂತಿದ್ದ ಜನರ ನಡುವೆ ತಾನು ಮತ್ತು ಆಕೆ. ಅವನೆಂದ:

"ಹಾಗೇನಾದರೂ ಮಾಡಿದ್ದರೆ ಆ ಮೇಲೆ ವ್ಯಥೆ ಪಡ್ತಿದ್ರಿ....ಇಲ್ಲಿವರೆಗೂ ನಾನು ನಿಂತೇ ಇದ್ದೆ."

"ಹಾದೆ? ನಮ್ಮದು ಜನರಲ್ ಕಂಪಾರ್ಟ್‌ಮೆಂಟ್ ಆಗಿದ್ದಿದ್ದರೆ ನೀವೂ ಬಂದುಬಿಡಬಹುದಾಗಿತ್ತು."

"ದೊಡ್ಡ ವಿಷಯವಲ್ಲ......ಚಹಾ ತಗೋತೀರೇನು?

"ಕ್ಷಮಿಸಿ. ಇಷ್ಟು ಹೊತ್ತಿನಲ್ಲಿ ಇಂಥ ಪಾನೀಯ ನನಗೆ ಸೇರೋದಿಲ್ಲ. ನೀವು ತಗೊಳ್ಳಿ."

"ಬೇಡಿ. ನನಗೆ ಅದರ ಅಗತ್ಯ ಅಷ್ಟಾಗಿ ಇಲ್ಲ."

ಇದ್ದಕ್ಕಿದ್ದಂತೆ ಜಯರಾಮು "ಸಿಗರೇಟ್!" ಎಂದು ಕೂಗಿ ನುಡಿದ. ಮರದ ಟ್ರೇಯನ್ನು ಕಂಕುಳಿಗೆ ತೂಗಹಾಕಿದವನೊಬ್ಬ ಹತ್ತಿರ ಬಂದಿದ್ದ.

ಜಯರಾಮು ಅಂದ:

"ಏಕ್ ಪ್ಯಾಕೆಟ್ ಪ್ಲೇಯರ್ಸ್; ಏಕ್ ಮ್ಯಾಚಿಸ್."

ಅಷ್ಟನ್ನು ಕೇಳುತ್ತಿದ್ದಾಗಲೂ ಜಯರಾಮುವಿನ ತುಟಿಗಳ ಕೊನೆಯಲ್ಲಿ ತುಂಟ ನಗೆಯಿತ್ತು. ಸುಖ್‌ಠಣ್‌ಕರ್ ಬೆರಗಾದವಳಂತೆ ಆತನನ್ನು ದಿಟ್ಟಿಸಿದಳು.

ತನ್ನತ್ತ ಜಯರಾಮು ಮತ್ತೆ ದೃಷ್ಟಿ ಹರಿಸಿದಾಗ ಅವಳೆಂದಳು:

"ಜಗತ್ತಿನ ಏಳನೆಯ ವಿಸ್ಮಯ! ನೀವು ಮತ್ತು ಸಿಗರೇಟು!"

"ಯಾವತ್ತಾದರೊಮ್ಮೆ ನಾನು ಸೇದೋದುಂಟು. ಅದೂ ಇಂಥ ಪ್ರಯಾಣದ ಪ್ರಸಂಗ ಬಂದಾಗ."

"ಏನೇ ಇರಲಿ. ನನಗೆ ಇದೊಂದು ಶಾಕ್. ನನ್ನ ಮನಸ್ನಲ್ಲಿ ನಿಮ್ಮ ಬಗ್ಗೆ ಏನೋ ಚಿತ್ರ ಕಲ್ಪಿಸಿಕೊಂಡಿದ್ದೆ."

"ಭ್ರಮೆ ನಿರಸನವಾಯ್ತು ಅನ್ನಿ."

"ಹಾಗೇಂತ ಹೇಳಲಾರೆ."

"ಸರಿ. ನಿಮ್ಮ ಕಲ್ಪನೆಯ ಚಿತ್ರಕ್ಕೆ ಒಂದಿಷ್ಟು ಬಣ್ಣಕೊಟ್ಟರಾಯ್ತು."

ಸುಖ್‌ಠಣ್‌ಕರ್ ನಕ್ಕಳು. ಆ ನಗೆ ಕಚಗುಳಿ ಇಟ್ಟಂತಾಯಿತು ಜಯರಾಮುಗೆ.

ಆತ ಒಂದು ಸಿಗರೇಟು ಕಚ್ಚಿ, ಕಡ್ಡಿ ಹಚ್ಚಿ, ಹೊಗೆಯನ್ನು ಹೊರಬಿಡುತ್ತ,

"ಅನನುಭವಿ–ಅಲ್ಲವೆ?"

–ಎಂದ.

"ಇಷ್ಟರಿಂದಲೇ ಹ್ಯಾಗೆ ಹೇಳ್ಲಿ?"

ಜಯರಾಮು ಸುಮ್ಮನಾದ. ಈ ಬಗೆಯ ಸಂಭಾಷಣೆ ಅಗತ್ಯವೆ? –ಎಂದು ಅವನ ಮನಸ್ಸು ಕೇಳಿತು.

ಮೌನ ನೆಲೆಸಿದೊಡನೆ ಸುಖ್‌ಠಣ್‌ಕರ್ ಕೇಳಿದಳು:

"ನಿಮ್ಮ ರಾಜ್ಯದ ಯಾರೋ ಮಿನಿಸ್ಟರು ಮೊನ್ನೆ ನಿಮ್ಮನ್ನು ನೋಡೋಕೆ ಬಂದಿದ್ದರಂತೆ."

ಜಯರಾಮು ಅಪ್ರತಿಭನಾದ.

"ಪರವಾಗಿಲ್ಲ. ನೀವು ಏನೋಂತಿದ್ದೆ. ಈ ಡಾಕ್ಟರಿಕೆಗಿತಂಲೂ ಉತ್ತಮವಾದ ಬೇರೇನಾದರೂ ವೃತ್ತಿ ನೀವು ಮಾಡ್ಬೇಕು ಸುಖ್‌ಠಣ್‌ಕರ್."

"ಲೀಲಾ-ಅನ್ನಿ...... ನಿಮ್ಮ ಸ್ನೇಹಿತ ಒಬ್ಬರು ಹೇಳಿದ್ರು."

"ಮಿನಿಸ್ಟರಿಗೆ ನಾನು ಏನು ಹೇಳ್ದೆ ಅನ್ನೋದೂ ನಿಮಗೆ ಗೊತ್ತಾಗಿರಬೇಕಲ್ಲ?"

"ಅಳಿಯನಾಗೋದಿಲ್ಲ-ಅಂದಿರಂತೆ. ಯಾಕೆ, ಹುಡುಗಿ ಒಪ್ಪಿಗೆ ಇಲ್ಲವೆ ನಿಮಗೆ?"

"ಅವಳನ್ನ ನಾನು ನೋಡಿದ್ದರೆ ತಾನೆ?"

"ನೋಡಿದರಾಯ್ತು."

"ಮಂತ್ರಿಮಗಳ ಗಂಡನಾಗೋದು ನನಗಿಷ್ಟವಿಲ್ಲ. ಅಲ್ಲದೆ ಇಷ್ಟು ಬೇಗ ನಾನು ಮದುವೆಯಾಗೋದೂ ಇಲ್ಲ."

"ಆ ಹುಡುಗಿ ನತದೃಷ್ಟೆ,"

-ಎಂದಳು ಸುಖ್‌ಠಣ್‌ಕರ್. ಗಾಳಿ ಬೀಸಿ ಅವಳ ಸೆರಗು ಹಾರಿತು. ಕ್ಷಣ ವಿಲಂಬವಾಗಿ ಅದನ್ನಾಕೆ ಹಿಡಿದು ಸರಿಪಡಿಸಿದಳು, ತುಸು ಬಲವಾಗಿ ಎಳೆದು.

ಮೈ ಬಣ್ಣದ ಕುಪ್ಪಸ. ಮೇಯ್‌ಡನ್ ಬ್ರಾ ತೊಟ್ಟ ಅಂಗಡಿಯೊಳಗಿನ ಪ್ರತಿಮೆ. ನೋಡಿಯೂ ನೋಡದಂತಿದ್ದ, ಜಯರಾಮು. ಸಿಗರೇಟಿನ ಖಾರ ಸೂಕ್ಷ್ಮವಾಗಿ ಅವನ ಅಂಗಾಂಗಗಳನ್ನು ದಹಿಸಿದಂತೆ ಕಂಡಿತು.

ಆಕೆಯೇ ಮಾತು ಮುಂದುವರಿಸಿದಳು:

"ಆದರೂ ನನಗನಿಸುತ್ತೆ, ಭಾಗ್ಯನಗರದ ರೈಲು ನಿಲ್ದಾಣದಲ್ಲಿ ಆ ಹುಡುಗಿ ನಿಮ್ಮನ್ನ ಇದಿರ್ಗೊಂಡು ಹಾರ ಹಾಕ್ತಾಳೆ-ಅಂತ."

"ಸರಿ, ಸರಿ! ಜ್ಯೋತಿಷ್ಯ ಬೇರೆ ಬರುತ್ತೋ ನಿಮಗೆ?"

"ಅಷ್ಟೊಳ್ಳೇ ಸಂಬಂಧ ಬೇಡ ಅನ್ನೋದರ ಅರ್ಥವೇನು?"

"........."

"ನಿಮ್ಮ ತಂದೆಯಂತೂ ಸಿಟ್ಟಾಗ್ತಾರೆ."

"........."

"ಕ್ಷಮಿಸಿ. ನಿಮ್ಮ ವೈಯಕ್ತಿಕ ವಿಷಯದಲ್ಲಿ ನಾನು ಕೈಹಾಕ್ಬಾರ್ದು. ನೀವು ಬಿಮ್ಮನೆ ನಿಂತಿರೋದನ್ನ ನೋಡಿದರೆ ಯಾಕೋ ದಿಗಿಲಾಗುತ್ತದೆ. ದಯವಿಟ್ಟು ಕ್ಷಮಿಸಿ."

ಸಿಗರೇಟು ಅರ್ಧ ಉರಿದಿತ್ತಷ್ಟೆ. ಜಯರಾಮುಗೆ ಅದು ಬೇಡವೆನಿಸಿತು. ಕೆಳಕ್ಕೆಸೆದು, ಬೂಟಿನಿಂದ ಅದನ್ನು ತುಳಿದು, ರೈಲುಗಾಡಿಯ ಬುಡಕ್ಕೆ ತಳ್ಳಿದ.

ಅವನೆಂದ:

"ಚಿಂತಿಲ್ಲ ಡಾಕ್ಟರ್ ಲೀಲಾ. ದಾರಿಯುದ್ದಕ್ಕೂ ಯೋಚಿಸೋದಕ್ಕೆ ವಸ್ತು ಒದಗಿಸಿದಿರಿ."

ಅವಳ ಕೆಳದುಟಿಯ ಬಣ್ಣವನ್ನು ನಾಲಿಗೆ ಹೌದೋ ಅಲ್ಲವೋ ಎನ್ನುವಂತೆ ಮುಟ್ಟಿತು. ಗಾಳಿಗೆ ಮುಂಗುರುಳು ಹಾರಾಡಿತು.

ಜಯರಾಮು ತನ್ನ ಕಂಪಾರ್ಟ್‌ಮೆಂಟಿನ ಕಡೆ ನೋಡಿ,

"ಜನ ನುಗ್ತಿದಾರೆ; ನನ್ನ ಸೀಟಿನ ಗತಿ ಏನಾಯ್ತೋ ವಿಚಾರಿಸ್ಬೇಕು,"

—ಎಂದ.

ಸುಖ್‌ಠಣ್‌ಕರ್ ತನ್ನ ಡಬ್ಬಿಯನ್ನು ಹತ್ತಿದಳು.

"ಲೊಲಿಟಾ ಓದ್ತಾ ಇದೇನೆ. ಇನ್ನು ಸ್ವಲ್ಪ ಉಳಿದಿದೆ. ಪೂನಾ ತಲಪೋದರೊಳಗೆ ಮುಗಿಸ್ಬೇಕು. ನೀವು ಓದಿಲ್ಲ ಅಲ್ವೆ?"

—ಎಂದಳು ಆಕೆ.

"ಲೊಲಿಟಾ? ಇಲ್ಲ."

"ಮಹಾ ಕಾದಂಬರಿ. ಓದ್ತಾ ಇದ್ದರೆ ಉಸಿರುಕಟ್ಟಿಹೋಗುತ್ತೆ."

ಅವಳ ನೀಳ ಉಸಿರಿನೊಂದಿಗೆ ವಕ್ಷಸ್ಥಲ ಏರಿ ಇಳಿಯಿತು.

"ಪೂನಾದಲ್ಲಿ ಸಿಗ್ತೀನಿ,"

—ಎಂದು ನುಡಿದು ಜಯರಾಮು ತನ್ನ ಡಬ್ಬಿಯನ್ನೇರಿದ.

......ಮುಂದಿನ ಮೂರು ಘಂಟೆಗಳ ಪ್ರಯಾಣದಿಂದ ಅವನು ಬೇಸತ್ತು ಹೋದ. ವಿಚಾರಗಳು ಒಂದಕ್ಕೊಂದು ಸಂಬಂಧವಿಲ್ಲದೆ ಒಂದರಿಂದ ಇನ್ನೊಂದಕ್ಕೆ ಕುಪ್ಪಳಿಸುತ್ತ ಸಾಗಿದುವು. ಆ ವರೆಗಿನ ತನ್ನ ಬದುಕಿನ ಶಾಸ್ತ್ರೀಯ ಪರಾಮರ್ಶೆ ನಡಸಲು ಎರಡು ಮೂರು ಸಾರೆ ಜಯರಾಮು ಯತ್ನಿಸಿದ. ಆದರೆ ಆ ಎಳೆ ಪ್ರತಿ ಸಲವೂ ಒಂದೆರಡು ನಿಮಿಷಗಳಲ್ಲಿ ಕಡಿದುಹೋಯಿತು.

ಮೂಲೆಗೊರಗಿ ಎಲ್ಲವನ್ನೂ ಮರೆತು ನಿದ್ದೆ ಹೋಗಲು ಆತ ಯತ್ನಿಸಿದ. ಸ್ವಲ್ಪ ಹೊತ್ತು ತೂಕಡಿಕೆ ಸಾಧ್ಯವಾಯಿತು.

ಯಾವುದೋ ಪುಸ್ತಕ ಓದುತ್ತ ಮಗ್ಗುಲಲ್ಲಿದ್ದವನೊಬ್ಬ, ಅದನ್ನು ಮುಚ್ಚಿ, ತನ್ನ ಕೈಚೀಲದೊಳಗೆ ಭದ್ರವಾಗಿರಿಸಿ, ಆಕಳಿಸಿ, ಮೊದಲ ಬಾರಿ ಕಾಣುವವನಂತೆ ಜಯರಾಮು ಕಡೆ ನೋಡಿ ಮರಾಠಿಯಲ್ಲಿ ಕೇಳಿದ:

"ದೂರ ಹೋಗಬೇಕೇನು?"

"ಹ್ಞ. ಭಾಗ್ಯನಗರಕ್ಕೆ."

"ಪುಣೆಯಲ್ಲಿ ಗಾಡಿ ಬದಲಾಯಿಸ್ಬೇಕು."

"ಹುಂ."

"ರಜಾದ ಮೇಲೆ ಹೋಗ್ತಿದೀರೊ?"

"ಹುಂ."

ಸಂಭಾಷಣೆಯ ತೊಂದರೆ ಬೇಡವೆಂದು ನಿದ್ದೆಹೋದವನಂತೆ ಜಯರಾಮು ನಟಿಸಿದ.

ಹತ್ತಕ್ಕೆ ಹತ್ತು ನಿಮಿಷಗಳಿದ್ದಾಗ ಪೂನಾ ಬಂತು. ಟ್ರಂಕನ್ನೂ ಸೂಟ್ ಕೇಸನ್ನೂ ಹಮಾಲನಿಗೆ ಕೊಟ್ಟು, ಗಾಡಿಯ ಹೆಸರು ಹೇಳಿ, ಮಲಗಲು ಮೇಲ್ಗಡೆ ಸೀಟು ಹಿಡಿಯಬೇಕೆಂದು ಸೂಚಿಸಿ, ಜಯರಾಮು ಸುಖ್‌ಠಣ್‌ಕರರ ಡಬ್ಬಿ ಯತ್ತ ನೋಡಿದ.

ತನ್ನನ್ನು ಇದಿರ್ಗೊಳ್ಳಲು ಬಂದ ಯುವಕನಿಗೆ ಸೂಟ್‌ಕೇಸನ್ನು ದಾಟಿಸಿದ್ದ ಸುಖ್‌ಠಣ್‌ಕರ್, ಜಯರಾಮು ಬಳಿಗೆ ಬಂದು, ಒಂದು ಪುಸ್ತಕವನ್ನು ಮುಂದಕ್ಕೆ ಹಿಡಿದಳು.

"ಲೊಲಿಟಾ. ನನ್ನದಾಯ್ತು. ದಾರಿಯಲ್ಲಿ ನೀವು ಓದುವಿರಂತೆ. ಬಾಯ್–ಬಯ್."

ಪುಸ್ತಕವನ್ನು ಇಸಕೊಂಡು ಜಯರಾಮು ಬಾಯ್-ಬಯ್ ಎನ್ನುತ್ತಿದ್ದಂತೆ ಅವಳು ಜನರ ಗುಂಪಿನಲ್ಲಿ ಮರೆಯಾದಳು.

○ ○ ○ ○

ಒಂದು ಘಂಟೆಯ ಅನಂತರ ಭಾಗ್ಯನಗರದ ಕಡೆಗೆ ರೈಲು ಹೊರಟ ಮೇಲೆ ಮೇಲ್ಗಡೆ ಮೈಚಾಚಿ ದಿಂಬಿಗೊರಗಿ ಜಯರಾಮು, ಸುಖ್‌ಠಣ್‌ಕರ್ ಕೊಟ್ಟಿದ್ದ ಪುಸ್ತಕವನ್ನು ತೆರೆದ. 'ಟು ಎಲ್ ಫ್ರಮ್ ಪಿ' ಎಂದಿದ್ದುದನ್ನು ಗೆರೆ ಎಳೆದು ಹೊಡೆದು, 'ಟು ಜೆಆರ್ ಫ್ರಮ್ ಎಲ್' ಎಂದು ಹೊಸದಾಗಿ ಮೊದಲ ಪುಟ ದಲ್ಲಿ ಬರೆಯಲಾಗಿತ್ತು.

೪

ಒಂದು ಇರುಳು, ಒಂದು ಹಗಲು, ಮತ್ತೊಂದು ಇರುಳು ಕಳೆದ ಮೇಲೆ ಬೆಳಗ್ಗೆ ನಿಶ್ಚಿತ ವೇಳೆಗಿಂತ ಒಂದು ಗಂಟೆ ತಡವಾಗಿ ರೈಲುಗಾಡಿ ಭಾಗ್ಯನಗರದ ನಿಲ್ದಾಣವನ್ನು ತಲುಪಿತು. ಬರುತ್ತೇನೆಂದು ಜಯರಾಮು ತಂತಿಕೊಟ್ಟಿರಲಿಲ್ಲ ವಾದ ಕಾರಣ, ಇದಿರ್ಗೊಳ್ಳಲು ಯಾರಾದರೂ ಸ್ಟೇಶನ್ನಿಗೆ ಬರುವರೆಂದು ಆತ ನಿರೀಕ್ಷಿಸಿರಲಿಲ್ಲ.

"ಭಾಗ್ಯನಗರದ ನಿಲ್ದಾಣದಲ್ಲಿ ಆ ಹುಡುಗಿ ನಿಮ್ಮನ್ನ ಇದಿರ್ಗೊಂಡು ಹಾರ ಹಾಕ್ತಾಳೆ."

—ಹುಚ್ಚು ಹುಡುಗಿ ಲೀಲಾ ಸುಖ್‌ಠಣ್‌ಕರ್......

ಬಾಲ್ಯದಿಂದ ಅದೆಷ್ಟೋ ಬಾರಿ ತಾನು ರೈಲುಗಾಡಿಗಳನ್ನು ಹತ್ತಿ ಇಳಿದ ನಿಲ್ದಾಣ. ಪ್ರತಿಯೊಂದು ನಗರಕ್ಕೂ ತನ್ನದೇ ಆದ ವ್ಯಕ್ತಿತ್ವವಿರಲೇಬೇಕು. ಕಣ್ಣುಮುಚ್ಚಿ ಕರೆತಂದರೂ ಬರಿಯ ವಾಸನೆಯಿಂದಲೇ ಭಾಗ್ಯನಗರವನ್ನು ತಾನು ಗುರುತುಹಿಡಿಯಲಾರೆನೆ?

ಎಲ್ಲರೂ ಅಲ್ಲಿ ಇಳಿಯುವವರೇ. ಆದರೂ ಜಯರಾಮುವೇ ಬಾಗಿಲು ತೆರೆದು ನಿಂತ ಮೊದಲಿಗ.

ಅರೇ–ಜಯಾ ಬಂದಿರುವಳಲ್ಲ!

ಅವಳ ಕಣ್ಣುಗಳು ಮುಂದೆ ದಾಟಿಹೋಗುತ್ತಿದ್ದ ಕಂಪಾರ್ಟ್‌ಮೆಂಟುಗಳಲ್ಲಿ ಅರಸುವ ಕೆಲಸ ನಡಸಿದ್ದುವು. ಜಯರಾಮು ತೋಳಿನ ಬಾವುಟವೆತ್ತಿದ. ಅವನನ್ನು ಗುರುತಿಸಿದ ಜಯಶ್ರೀಯ ಮುಖವರಳಿತು. ಅವಳೂ ಮರುಸಂಜ್ಞೆ ಮಾಡಿದಳು.

ಮತ್ತೂ ನಾಲ್ಕು ಮಾರು ಚಲಿಸಿ ಗಾಡಿ ನಿಂತಿತು. ಜಯಶ್ರೀ ಅಲ್ಲಿಗೆ ನೆಗೆದು ಬಂದಳು. ಜಯರಾಮು ಅವಳ ಜಡೆ ಹಿಡಿದು ಜಗ್ಗಿದ. ತಂಗಿ "ಆಯ್!" ಎಂದಳು.

ಕೂಲಿಯವನಿಗೆ ಜಯರಾಮು ಸಾಮಾನುಗಳನ್ನು ಬೊಟ್ಟುಮಾಡಿ ತೋರಿಸಿದ. ಪರಿಚಯವಾಗಿದ್ದ ಇಬ್ಬರು ಸಹಪ್ರಯಾಣಿಕರನ್ನು ಕೈಕುಲುಕಿ ಬೀಳ್ಕೊಟ್ಟ.

ಅತ್ತಿತ್ತ ಹಾದುಹೋಗುತ್ತಿದ್ದವರ ಗಮನದ ಕೇಂದ್ರವಾಗಿ ನಿಂತ ಜಯಶ್ರೀ ಆ ಕಡೆ ಈ ಕಡೆ ನೋಡುತ್ತ ಯಾರನ್ನೋ ಹುಡುಕುತ್ತಿದ್ದಳು. ಎಡದಿಕ್ಕಿನಿಂದ ಬರುತ್ತಿದ್ದ ಒಬ್ಬರನ್ನು ನೋಡಿ,

"ಸೋತಿರಿ, ಮಾವ !"

–ಎಂದು ಗಟ್ಟಿಯಾಗಿ ಅವಳೆಂದಳು.

ಜಯರಾಮು ತಿರುಗಿ ನೋಡಿದ.

"ಸ್ವಾಗತ, ಡಾಕ್ಟರ್ ಸಾಬ್."

"ಥ್ಯಾಂಕ್ಯೂ ಬ್ಯಾರಿಸ್ಟರ್ ಸಾಬ್. ಹ್ಯಾಪಿ ಟು ಸೀ ಯು. ಇದು ಅಸಾಧಾರಣ ಸ್ವಾಗತವೇ ಸರಿ !"

ಹಸ್ತಾಂದೋಲನ.

"ಸಾಬ್–ಸಾಬ್–"

ಟ್ರಂಕನ್ನು ತಲೆಯ ಮೇಲಕ್ಕೆ ಏರಿಸಿಕೊಳ್ಳಲು ಸಹಾಯ ಯಾಚಿಸುತ್ತಿದ್ದ ಕೂಲಿ. ಜಯರಾಮು ಅವನಿಗೆ ನೆರವಾದ......

ಹೊರಗೆ, ಅಜೀಜ್ ಚಿಕ್ಕ ಯಜಮಾನರಿಗೆ ವಂದಿಸಿದ.

"ಚೆನ್ನಾಗಿದೀಯಾ ?"

"ಇಂಗಿದೀನಿ ಸಾರ್."

ಶ್ರೀಕಂಠಯ್ಯ ಮನೆಯವರ ಉಪಯೋಗಕ್ಕೆಂದು ಹೊಸದಾಗಿ ಕೊಂಡಿದ್ದ ಪೆನ್ನಂಟ್ ಕಾರು. ಟ್ರಂಕನ್ನೂ ಸೂಟ್‌ಕೇಸನ್ನೂ ಅಜೀಜ್ ಪ್ರಯಾಸಪಟ್ಟು ಡಿಕ್ಕಿಯೊಳಗೆ ತುರುಕಿದ. ಅಣ್ಣ ತಂಗಿ ಹಿಂಬದಿಯ ಸೀಟಿನಲ್ಲಿ ಆಗಲೇ ಕುಳಿತಿದ್ದರು. ಬ್ಯಾರಿಸ್ಟರ್ ತ್ಯಾಗರಾಜನ್ ಡ್ರೈವರನ ಮಗ್ಗುಲಲ್ಲಿ ಆಸೀನನಾದ.

ಕಾರು ಹೊರಟಾಗ ಜಯರಾಮು ಅಂದ:

"ಹೋದ ಸಲ ಬಂದಾಗ ಹೇಗಿತ್ತೋ ಈ ಸಲವೂ ಹಾಗೆಯೇ ಕಾಣ್ತಿದೆ. ಕಳೆದ ಒಂದು ವರ್ಷದಲ್ಲಿ ಎಷ್ಟು ಸಾವಿರ ಮೈಲು ಓಡಿದೆಯಪ್ಪ ಅಜೀಜ್ ?"

ಡ್ರೈವರ್ ಉತ್ತರಿಸಿದ:

"ಬಾಳ ಕಮ್ಮಿ ಸಾರ್. ಎಚ್ಚೆಂದರೆ ಮೂರು ಸಾವಿರ ಮೈಲು."

"ಫೂ–ಅಷ್ಟೇನಾ?"

ಜಯಶ್ರೀ ಮಾತು ಕೂಡಿಸಿದಳು:

"ಅಲ್ದೆ ಇನ್ನೇನು? ಇರೋನು ಒಬ್ಬ ಡ್ರೈವರ್. ನನಗೆ ಡ್ರೈವಿಂಗ್ ಬರೋದಿಲ್ವಲ್ಲಾ......ಕಲಿಸಿಕೊಡ್ತೀನಿ ಅಂತ ಮಾವ ಹೇಳ್ತಾನೇ ಇದಾರೆ. ಆದರೆ–"

ತ್ಯಾಗರಾಜನ್ ಅಂದ:

"ಏನು ಆದರೆ–? ನೀನು ಬರಬೇಕೋ ಬೇಡವೋ? ನನ್ನ ಕಾರು ಹಳೇದು, ಕಲಿಯೋಕೆ ಅದೇ ಸರಿ, ಅಂತ ಆವತ್ತೇ ಹೇಳಿಲ್ವೆ? ನಿಮ್ಮ ಅಪ್ಪಯ್ಯ ಏನಂತಾರೋ ಅಂತ ನಿನಗೆ ಭಯ."

"ಚಿಕ್ಕವರ ಪರವಾಗಿ ನೀವು ವಕೀಲಿ ವಹಿಸಿ ಸಮ್ಮತಿ ಕೊಡಿಸಿದರಾಯ್ತು,"

–ಎಂದ ಜಯರಾಮು.

"ಓಹೋ! ಫೀಸ್ ಕೊಟ್ಟರೆ ನಿಮ್ಮ ಕೇಸ್ ಖಂಡಿತ ತಗೋತೀನಿ,"

–ಎಂದು ನಗುತ್ತ ಅಂದ ತ್ಯಾಗರಾಜನ್.

ಲೋಮಾ ಉಪಯೋಗಿಸಿ ಕೆಂಚು ಬಣ್ಣಕ್ಕೆ ತಿರುಗಿದ್ದ ತ್ಯಾಗರಾಜನ ಕ್ರಾಪನ್ನೂ ಬಲಕ್ಕೆ ತಿರುಗಿ ಮಾತನಾಡಿದಾಗಲೆಲ್ಲ ಕಾಣಿಸುತ್ತಿದ್ದ ಆತನ ಇಮ್ಮಡಿ ಗಲ್ಲವನ್ನೂ ಜಯರಾಮು ದಿಟ್ಟಿಸಿದ.

ಮುಖ್ಯ ವಿಷಯವನ್ನು ಜ್ಞಾಪಿಸಿಕೊಂಡವನಂತೆ ಜಯರಾಮು ಅಂದ:

"ಅಲ್ಲಾ–ನಾನೀಗ ನಿಮ್ಮ ಕಕ್ಷಿದಾರನೋ? ಕೈದಿಯೊ? ಈ ಗಾಡೀಲಿ ನಾನು ಬರ್ತೀನಿ ಅಂತ ಯಾರು ಹೇಳಿದರು ನಿಮಗೆ?"

ಬ್ಯಾರಿಸ್ಟರ್‌ಗೆ ಮಾತನಾಡಗೊಡದೆ ಜಯಶ್ರೀ ಅಂದಳು:

"ಮೊನ್ನೆಯೇ ಪ್ಲೇನ್‌ನಲ್ಲಿ ಬರ್ತಿಯೇನೋಂತಿದ್ವಿ. ಬರಲಿಲ್ಲ. ಟ್ರೇನಾದರೆ ಇದೇ ತಾನೆ?"

"ನಾನು ಬರದೇ ಇದ್ದಿದ್ದರೆ?"

"ಓಹೊಹೊ. ಅಪ್ಪಯ್ಯ ಟೆಲಿಗ್ರಾಮ್ ಕೊಟ್ಮೇಲೆ ಬರದೆ ಇನ್ನೇನ್ಮಾಡ್ತಿಯೊ?"

"ಸ್ಟೇಷನ್ನಿಗೆ ಹೋಗಿ ಕರಕೊಂಡ್ಬಾ ಅಂತ ಅಪ್ಪಯ್ಯನೇ ಅಂದರಾ?"

"ಮಗು ಬರಬಹುದು–ಎಂತ ಅಮ್ಮ ರಾಗ ಎಳೆದ್ಲು. ಸ್ಟೇಷನ್ನಿಗೆ ಕಾರು ಕಳ್ಸು–ಅಂದ್ರು ಅಪ್ಪಯ್ಯ. ನಾನು ಹೋಗ್ಲಾ, ಅಮ್ಮ ?–ಅಂತ ಅಪ್ಪಯ್ಯನಿಗೆ ಕೇಳಿಸೋ ಹಾಗೆ ಅಂದೆ. ಹೋಗಿ, ಯಾರು ಬೇಕಾದ್ರೂ ಹೋಗಿ–ಅಂತ ಗುಡು ಗಿದ್ರು. ಇವತ್ತು ಅಜೀಜ್ ನಸುಕ್ನಲ್ಲೆ ಬಂದ. ಇನ್ನೇನು ಹೊರಡ್ಬೇಕು ಅನ್ನು ವಾಗ ಈ ಮಾವನ ಫೋನ್ ಬಂತು–ಗಾಡಿ ಒಂದು ಘಂಟೆ ತಡ. ನನ್ನ ಮನೇ ಮೇಲಿಂದ ಬನ್ನಿ. ಸ್ಟೇಶನ್ನಿಗೆ ನಾನೂ ಬರ್ತೀನಿ–ಅಂತ."

ಜಯರಾಮು ತ್ಯಾಗರಾಜರ ಕಡೆ ತಿರುಗಿದ:

"ಸುಮ್ಮನೆ ತೊಂದರೆ ತಗೊಂಡಿರಿ ಬ್ಯಾರಿಸ್ಟರ್ ಬಾಬು. ಅಥವಾ,...... ಅಪ್ಪಯ್ಯ ನನ್ನ ಭೇಟಿ ಮಾಡೋಕ್ಮುಂಚೆ ನಿಮ್ಮ ಬ್ರೀಫಿಂಗ್ ಏನಾದರೂ ಇದೆಯೊ?"

ಇದೆಲ್ಲ ಡ್ರೈವರ್ ಕೇಳಿಸಿಕೊಳ್ಳುವ ಮಾತಲ್ಲ ಎಂದು ತ್ಯಾಗರಾಜನ್ ಇಂಗ್ಲಿಷ್ ಭಾಷೆಯನ್ನು ಬಳಸಿದ.

"ನೀವು [ನೀನು–you] ಮಗು ಅಲ್ಲವಲ್ಲ. ಸ್ವತಃ ನಿರ್ಧಾರ ಕೈಗೊಳ್ಳೋ ಸಾಮರ್ಥ್ಯ ನಿಮಗಿದೆ."

"ನಮ್ಮ ತಂದೆಯಂತೂ ನಿಮ್ಮನ್ನ ಕೇಳದೆ ಏನೂ ಮಾಡೊಲ್ಲ. ಫ್ಯಾಮಿಲಿ ಡಾಕ್ಟರಿದ್ದ ಹಾಗೆ ಫ್ಯಾಮಿಲಿ ಲಾಯರು."

"ನಮ್ಮದು ನಿಮ್ಮದು ವ್ಯವಹಾರದ ಸಂಬಂಧ ಮಾತ್ರ ಅಂತೀರಾ? ನಾನು ನಂಬೋದಿಲ್ಲ."

–ತಾನು ಆಡಿದ್ದು ಪರಿಹಾಸ್ಯದ ಮಾತು ಎಂಬಂತೆ ತ್ಯಾಗರಾಜನ್ ನಕ್ಕ.

ತಂಗಿಯನ್ನು ಉದ್ದೇಶಿಸಿ ಜಯರಾಮು ಅಂದ:

"ನೀನು ಹೇಳೋದು ಏನೂ ಇಲ್ಲವಾ?"

ಅವಳೆಂದಳು:

"ನನಗೇನು ಗೊತ್ತಾಗುತ್ತೆ ಜಯೂ ಇದೆಲ್ಲ?"

ಮುಂದೆ ನೆಲೆಸಿದ ಮೌನದಲ್ಲಿ ಕೇಳಿಸುತ್ತಲಿದ್ದುದು ಕಾರಿನ ಸುಂಯ್ ಸದ್ದೊಂದೇ. ನಗರದ ಗದ್ದಲದ ರಸ್ತೆಗಳನ್ನು ಅವರು ದಾಟಿದ್ದರು. ವಿಶಾಲ ಬೀದಿಗಳ ಕಡಮೆ ಮನೆಗಳ ವಿಸ್ತರಣಗಳನ್ನು ಒಂದೊಂದಾಗಿ ಕಾರು ಹಿಂದಿಕ್ಕಿತು.

ಜಯರಾಮು ಮಾತ್ರ ಸರಾಗವಾಗಿ ಉಸಿರುಬಿಡಲಾಗದೆ ತುಸು ಕುಗ್ಗಿ ಹಿಂದಿನ ಸೀಟಿಗೊರಗಿ ಕುಳಿತ. ಮುಂಬಯಿಯಲ್ಲಿದ್ದುಕೊಂಡು ಸದಾಶಿವಯ್ಯ ನವರಿಗೆ ದಿಟ್ಟತನದ ಉತ್ತರ ಕೊಡುವುದು ಸುಲಭವೆನಿಸಿತ್ತು. ಆದರೆ, ತಂದೆಯ ಎದುರು ನಿಂತು ಈಗ ಮಾತನಾಡುವ ಪ್ರಮೇಯ? ಅವರ ಕೂಗಾಟಕ್ಕೂ ರೇಗಾ ಟಕ್ಕೂ ಮಣಿಯದೆ ತನ್ನ ನೆಲೆಯಲ್ಲೆ ಭದ್ರವಾಗಿ ನಿಲ್ಲಬಲ್ಲೆನೆ ತಾನು?

ದೂರದಿಂದಲೆ ಹಾರ್ನು. ಕಾರು ಹತ್ತಿರ ಬಂದಾಗ ಗೇಟು ತೆರೆದುಕೊಂ ಡಿತ್ತು. ಜಗ್ಗ ಬಾಗಿ ಸಲಾಂ ಮಾಡಿದ. ಸೀಸರ್ ಬಗಳುತ್ತ ಓಡಿಬಂತು. ದ್ವಾರಮಂಟಪದಲ್ಲಿ ಕಾರು ನಿಂತಾಗ ಜಯಶ್ರೀ ಇಳಿದು, ಅಣ್ಣ ಬಂದುದನ್ನು ಅಮ್ಮನಿಗೆ ತಿಳಿಸಲೆಂದು ಒಳಕ್ಕೆ ಓಡಿದಳು. ತ್ಯಾಗರಾಜನ್ ಇಳಿದು ಎರಡು ಮೆಟ್ಟಲುಗಳನ್ನೇರಿ ಎತ್ತರದಲ್ಲಿ ನಿಂತು, ಉದ್ಯಾನದ ಸುತ್ತಲೂ ದೃಷ್ಟಿ ಹರಿಸಿದ. ಗಿಡಗಳಿಗೆ ನೀರೆರೆಯಲು ಮಾರಣ್ಣನಿಗೆ ಲಚ್ಚಿ ಸಹಾಯಮಾಡುತ್ತಿದ್ದಳು. ಕಾರು ನಿಂತು ಜಯರಾಮು ಇಳಿಯುತ್ತಿದ್ದುದನ್ನು ಗಮನಿಸಿದೊಡನೆ ಲಚ್ಚಿ ಬಿಂದಿಗೆ ಯನ್ನು ಅಲ್ಲೇ ಬಿಟ್ಟು ಹಿಂಬಾಗಿಲಿಗೆ ಓಡಿದಳು. ತ್ಯಾಗರಾಜನ ದೃಷ್ಟಿ ಅವಳ ಅವಯವಗಳ ಚಲನವಲನಗಳನ್ನು ಹಿಂಬಾಲಿಸಿತು.

ಅಜೀಜನೂ ಜಗ್ಗನೂ ಸಾಮಾನುಗಳನ್ನು ಒಳಕ್ಕೆ ಸಾಗಿಸುತ್ತಿದ್ದಂತೆ, ಜಯ ರಾಮು ಜಗಲಿಯನ್ನು ತಲಪಿದ. ತ್ಯಾಗರಾಜನ್ ಅವನ ಹಿಂದೆ ಬಂದು, ಮೆಲ್ಲನೆ ಬೆನ್ನನ್ನು ತಟ್ಟಿದ.

ಏನು?–ಎಂಬ ನೋಟದೊಡನೆ ಜಯರಾಮು ತಿರುಗಿದಾಗ ಪಿಸುದನಿ ಯಲ್ಲಿ ಅವನೆಂದ:

"ಗೆಳೆತನದ ಸಲಹೆ. ರೋಗಿಯ ಜತೆ ನೀವು ನಡಕೊಳ್ಳೋದಿಲ್ಲವೆ, ಹಾಗೆ ನಿಮ್ಮ ತಂದೆಯ ಜತೆ ವರ್ತಿಸಿ."

"ಥ್ಯಾಂಕ್ಸ್."

ಹಜಾರದಲ್ಲಿ ತ್ಯಾಗರಾಜನ್ ಗೋಡೆಗಡಿಯಾರವನ್ನೂ ತನ್ನ ಕೈಗಡಿಯಾರ ವನ್ನೂ ನೋಡಿ, ರೇಡಿಯೋ ಟ್ಯೂನ್‌ಮಾಡತೊಡಗಿದ.

ಸಾಮಾನುಗಳು ಮೇಲಕ್ಕೆ ಹೋಗಿದ್ದುವು, ಜಯರಾಮುವಿನ ಕೊಠಡಿಗೆ. ಅದೂ ಜಯಶ್ರೀಯದೂ ಎದುರುಬದುರು.

ತಾಯಿಗೆ ತಿಳಿಸಿದ ಬಳಿಕ ಅಣ್ಣನನ್ನೆಳೆದುಕೊಂಡು ಮಹಡಿ ಏರಿದ ಜಯಶ್ರೀ, ಆತನ ಕೊಠಡಿಯನ್ನು ತೋರಿಸುತ್ತ ಅಂದಳು:

"ನೋಡು, ಎಷ್ಟು ಸ್ವಚ್ಛವಾಗಿದೆ! ಲಚ್ಚಿಯ ಕೆಲಸ. Home, sweet home ಅನಿಸೊಲ್ವ?"

"ಓಹೋ! Very very sweet home,"

–ಎಂದ ಜಯರಾಮು.

ಅವನ ಮಾತಿನ ಹಿಂದೆ ಅಡಗಿದ್ದ ನೋವನ್ನು ಗುರುತಿಸಲಾಗದೆ ಜಯಶ್ರೀ ಅಂದಳು:

"ಎಲ್ಲಿ ಕೀ ಬಂಚ್? ನಿನ್ನ ಟ್ರಂಕ್ ಸೂಟ್‌ಕೇಸ್ ತೆರೆಯೋಣ."

"ಅವಸರದಲ್ಲಿ ಹೊರಟ್ಬಂದೆ, ಜಯಾ. ಏನೂ ತರ್‍ಲಿಲ್ಲ."

ಜಯಶ್ರೀಯ ಮುಖ ಕಪ್ಪಿಟ್ಟಿತು.

"ಓ–ನಾಚ್ಕೆ ಆಗಲ್ವ ಜಯೂ ಹಾಗೆ ಹೇಳೋಕೆ? ತಾ ಕೀ ಬಂಚ್. ನಾನು ನೋಡಬಾರದ secrets ಏನೂ ಇಲ್ಲ ತಾನೆ?......ಹಂ......ನಿನ್ನ ಟ್ರಾನ್ಸಿಸ್ಟ ರಾದರೂ ತಂದಿದಿಯೋ ಇಲ್ವೊ?"

"ತಂದಿದೀನಿ. ಟ್ರಂಕ್ನಲ್ಲಿದೆ."

"ಸರಿ ಮತ್ತೆ! ನನಗೆ ಅದು ಸಾಕು. ಬೊಂಬಾಯಿಗೆ ನೀನು ವಾಪ್ಸ ಹೋಗುವಾಗ ಕೊಡ್ತೀನಿ."

"ಹೂಂ. ತಗೋ."

ಮೆಲ್ಲನೆ ಮೆಟ್ಟಲುಗಳನ್ನೇರಿ ಬಂದು ಕಮಲಮ್ಮ ಬಾಗಿಲ ಬಳಿ ನಿಂತಿದ್ದರು.

ಬೀಗದ ಕೈಗಳನ್ನು ತಂಗಿಗೆ ಕೊಟ್ಟು ತಿರುಗಿದ ಜಯರಾಮು ತಾಯಿಯನ್ನು ನೋಡಿದ.

ತುಸು ಹತ್ತಿರ ಸರಿದು ಆತ ಕೇಳಿದ:

"ಚೆನ್ನಾಗಿದೀಯಾಮ್ಮ?"

ಉತ್ತರವೀಯದೆ ತಮ್ಮದೇ ಪ್ರಶ್ನೆಯನ್ನು ಕಮಲಮ್ಮ ಕೇಳಿದರು:

"ಬಂದಿಯಾ ಜಯು? ಗಾಡಿ ಲೇಟೇನೊ?"

"ಹೂನಮ್ಮ. ಮಾಮೂಲು ಟೈಮು. ತಡವಾಗದೆ ನಮ್ಮ ರೈಲು ಯಾವತ್ತಾದರೂ ಓಡುತ್ತಾ?"

ಕಮಲಮ್ಮ ಗಟ್ಟಿಯಾಗಿ ನಿಟ್ಟುಸಿರುಬಿಟ್ಟರು.

"ಕೂತ್ಕೋಮ್ಮಾ."

ಮಗನ ಮಂಚದ ಮೇಲೆ ಕಮಲಮ್ಮ ಕುಳಿತು, ತಮ್ಮ ಸೆರಗಿನಿಂದ ಕಣ್ಣುಗಳನ್ನೊತ್ತಿಕೊಂಡರು.

"ಸಿಗ್ತು !"

–ಎಂದು ಜಯಶ್ರೀ ಕುಣಿದಳು.

"ಹ್ಯಾಗೆ ಜಯೂ ಇದನ್ನು ಟ್ಯೂನ್ ಮಾಡೋದು?–ಹಾಂ–ಗೊತ್ತಾಯ್ತು,"

–ಎಂದು ಟ್ರಾನ್ಸಿಸ್ಟರು ಜೀವತಳೆದೊಡನೆ, ರೇಡಿಯೋ ಸಿಲೋನನ್ನು ಹುಡುಕುತ್ತ, ತನ್ನ ಕೊಠಡಿಗೆ ತೇಲಿಹೋದಳು.

"ಜಯಾ ಯಾರ ಮಾತೂ ಕೇಳೊಲ್ಲ ಕಣೋ. ನನಗೆ ಸಾಕಾಗ್ಬಿಟ್ಟಿದೆ. ಯಾವಾಗ್ಲೂ ಹುಚ್ಚುಚ್ಚಾಗಿ ಆಡ್ತಿರ್‍ತಾಳೆ......"

–ಕಮಲಮ್ಮ, ಹೇಳಬಯಸಿದ ಮಾತಿನ ಬದಲು ಬೇರೆಯೇ ನುಡಿಯತೊಡಗಿದರು.

"ಸರಿಹೋಗ್ತಾಳೆ,"

–ಎಂದ ಜಯರಾಮು. ಸಣ್ಣನೆ ನಕ್ಕು,

"ಈ ವರ್ಷ ಪಾಸಾದ್ಮೇಲೆ ಒಳ್ಳೇ ಕಡೆ ವರ ನೋಡಿ ಕಳಿಸ್ಬಿಡೋದು,"

–ಎಂದ.

"ನಿನಗೆ ತಮಾಷೆ. ಅಲ್ಲೋ, ಮಿನಿಷ್ಟ್ರೋ ಅದ್ಯಾರೋ ನಿನ್ನ ಕಂಡಿದ್ರಂತಲ್ಲ–ಅದ್ಯಾಕೋ ಅವರಿಗೆ ಹಾಗೆ ಹೇಳ್ದೆ ?"

"ಅವಸರವೇನಮ್ಮ? ಇದೆಲ್ಲಾ ನಿಧಾನವಾಗಿ ಮಾಡ್ಬೇಕಾದ ಕೆಲಸ. ತಡವಾದರೂ ಸರಿಯೆ. ನಿನಗೋಸ್ಕರ ಒಳ್ಳೇ ಸೊಸೇನ ತರಬೇಕೂಂತ ನನ್ನ ಆಸೆ."

"ಅಯ್ಯೋ, ನನ್ನ ಕಟ್ಕೊಂಡು ಏನ್ಮಾಡ್ತೀಯೊ? ನಿಮ್ಮಂದೆ.........ನಿಮ್ಮಂದೆ......"

ಕಮಲಮ್ಮ ಬಿಕ್ಕಿ ಬಿಕ್ಕಿ ಅಳತೊಡಗಿದರು.

"ಅಮ್ಮ, ಈಗ್ತಾನೇ ಮನೆಗೆ ಬಂದಿದೀನಿ, ಶುರುಮಾಡಿದ್ಯಲ್ಲ ಅಳೋಕೆ? ಅಮ್ಮ, ಎಲ್ಲಿ ಸ್ವಲ್ಪ ಕಣ್ಣೊರಸ್ಕೊಂಡ್ಬಿಡು."

ಕಮಲಮ್ಮ ಮತ್ತೆ ಸೆರಗಿನಿಂದ ಕಣ್ಣುಗಳನ್ನು ಒತ್ತಿಕೊಂಡರು.

ಭಟ್ಟ ಬಾಗಿಲ ಬಳಿ ಕಾಣಿಸಿಕೊಂಡು, ಕೇಳಿದ:

"ಕಾಫಿ ಇಲ್ಲಿಗೇ ತರಲಾ?......ಬ್ಯಾರಿಸ್ಟರ್ ಸಾಹೇಬರು ಕೆಳಗೇ ಇದಾರೆ."

ಜಯರಾಮು ಅಂದ:

"ಅವರು ಹೊರಟುಹೋದ್ರೇನೋಂತಿದ್ದೆ. 'ಸರಿ ಭಟ್ರೆ, ಕೆಳಗೇ ಬರ್‍ತೀವಿ."

ಭಟ್ಟ, ಟ್ರಾನ್ಸಿಸ್ಟರನ್ನು ಮೇಜಿನ ಮೇಲಿರಿಸಿ ಅದರೆದುರು ಕುಳಿತಿದ್ದ ಜಯಶ್ರೀಯ ಕಡೆಗೊಮ್ಮೆ ನೋಡಿ ನಸುನಕ್ಕು ಕೆಳಗಿಳಿದ.

ಕಮಲಮ್ಮ ಕೇಳಿದರು:

"ಚಪ್ಪಲಿ ಹಾಕ್ಕೊಂಡಿದಿಯಲ್ಲೊ? ನಿನ್ನ ಬೂಟು ಎಲ್ಲೊ?"

"ರೈಲ್ನಲ್ಲಿ ಬಿಚ್ಚಿ ಟ್ರಂಕ್ನೊಳಗಿಟ್ಟೆ. ಅಲ್ಲಿ ಚಪ್ಲೀನೇ ಅನುಕೂಲ ನೋಡು."

"ನಿಜ. ಬಟ್ಟೆ ತಗೋ. ಒಗೆಯೋದೆಲ್ಲಾ ರಾಶಿಹಾಕು. ಸ್ನಾನಾನೂ ಮಾಡುವಿಯಂತೆ."

"ಎಲ್ಲಿ ಅಪ್ಪಯ್ಯ? ರೂಮ್ನಲ್ಲಿದಾರಾ?"

—ಎಂದು ಜಯರಾಮು ಕೇಳಿದ, ಬದಲಿ ಉಡುಪನ್ನೂ ಅಂಗವಸ್ತ್ರವನ್ನೂ ಎತ್ತಿಕೊಳ್ಳುತ್ತ.

"ಇರಬೇಕು. ಇನ್ನಿದೆಯಲ್ಲ ಚೀರಾಟ?"

"ನೀನದನ್ನ ಮರೆತ್ಬಿಡಮ್ಮ. ನಾನು ನೋಡ್ಕೋತೀನಿ. ಏಳು."

ಕಮಲಮ್ಮ ಮೆಲ್ಲನೆದ್ದರು.

ಹೊರಡುತ್ತ ಜಯರಾಮು ಜಯಶ್ರೀಯನ್ನು ಕರೆದ:

"ಬಾರೇ. ಕಾಫಿ ಬೇಡ್ವಾ?"

ಟ್ರಾನ್ಸಿಸ್ಟರ್‌ನಲ್ಲಿ ನೆಟ್ಟಿದ್ದ ದೃಷ್ಟಿಯನ್ನು ಕೀಳದೆ ಜಯಶ್ರೀ ಅಂದಳು:

"ನನ್ಗಾಗಿದೆ. ತಿಂಡಿಗೆ ಆಮೇಲ್ಬರ್‍ತೀನಿ."

ಮೊದಲು ಜಯರಾಮು, ಬಳಿಕ ಕಮಲಮ್ಮ, ನಿಧಾನವಾಗಿ ಇಳಿದರು.

ಹಜಾರದಲ್ಲಿ ನ್ಯೂಸ್ ಕೇಳುತ್ತ ಕುಳಿತಿದ್ದ ತ್ಯಾಗರಾಜನನ್ನು ಕುರಿತು ಜಯರಾಮು ಅಂದ:

"ಸಾರಿ ಬ್ಯಾರಿಸ್ಟರ್ ಬಾಬು. ನಿಮ್ಮನ್ನು ಇಲ್ಲೇ ಬಿಟ್ಬಿಟ್ಟು ಹೊರಟ್ಹೋದೆ."

"ಏನೂ ಪರವಾಗಿಲ್ಲ, ಬನ್ನಿ."

ಕಮಲಮ್ಮ ಒಳಹೋದರು, ಕಾಫಿ ಕಳುಹಲು.

ಜಯರಾಮು ಸೋಫಾದ ಮೇಲೆ ಕುಳಿತ. ಒಳಗಿಂದ ಬಾಗಿಲು ಮುಚ್ಚಿದ್ದ ತಂದೆಯ ಕೊಠಡಿಯ ಕಡೆಗೊಮ್ಮೆ ದೃಷ್ಟಿ ಬೀರಿದ.

ತ್ಯಾಗರಾಜನ ಕಿವಿ ರೇಡಿಯೋಗೆ ಅಂಟಿಕೊಂಡಿತ್ತು.

ಜಯರಾಮು ತ್ಯಾಗರಾಜನನ್ನೇ ದಿಟ್ಟಿಸುತ್ತ ವಾರ್ತೆಯನ್ನು ಆಲಿಸಿದ. ಅಲ್ಲಿ ಸ್ವಾರಸ್ಯ ಕಾಣದೆ ಯೋಚನೆ ತ್ಯಾಗರಾಜನತ್ತ ಹೊರಳಿತು.

ಬಹಳ ದಿನಗಳಿಂದ ಅಸ್ಪಷ್ಟವಾಗಿದ್ದ ಒಂದು ಭಾವನೆ ಆ ಕ್ಷಣದಲ್ಲಿ ನಿರ್ದಿಷ್ಟ ರೂಪು ತಳೆಯಿತು, ಜಯರಾಮುವಿನ ಮನಸ್ಸಿನಲ್ಲಿ.

–'ಈ ಮನುಷ್ಯ ಒಳ್ಳೆಯವನಲ್ಲ.'

ಕಾಫಿಯ ಟ್ರೇ ಬಂದು ಒಂದು ನಿಮಿಷವಾಗಿತ್ತು.

ತಾನೊಂದು ಕಪ್ಪನ್ನೆತ್ತಿಕೊಂಡು ಜಯರಾಮು ಅಂದ:

"ತಗೊಳ್ಳಿ. ಆರ್ಹೋಗುತ್ತೆ."

"ಥ್ಯಾಂಕ್ಸ್,"

–ಎಂದು ತ್ಯಾಗರಾಜ, ಟ್ರೇಯಲ್ಲಿ ಉಳಿದಿದ್ದ ಇನ್ನೊಂದು ಕಪ್ಪನ್ನೆತ್ತಿಕೊಂಡು ಪಂದ್ಯಾಟಗಳ ಸುದ್ದಿ ಮುಗಿದೊಡನೆ ಅಂದ:

"ಊಟ ತಿಂಡಿ ಚಪಲ ನನ್ನ ನಾಲಿಗೆಗಾದರೆ ವಾರ್ತೆಕೇಳೋ ಚಪಲ ಕಿವಿಗೆ."

ಅದು ಕೇಳಿಸದವನಂತೆ ಜಯರಾಮು ನುಡಿದ:

"ಬೆಳಗ್ಗೆ ಸಂಜೆ ಬೊಂಬಾಯಿಯ ಚಹಾ ಕುಡೀತಿದ್ದವನಿಗೆ ಇಂಥದೊಂದು ಕಪ್ ಕಾಫಿ ಸಿಕ್ಕರೆ ಇನ್ನೇನೂ ಬೇಕಾಗೊಲ್ಲ."

"ಅಂತೂ ಬೊಂಬಾಯಿ ಬೇಸರವಾಗಿದೆ ಅನ್ನಿ. ಸ್ವಾಭಾವಿಕ, ಸ್ವಾಭಾವಿಕ!"

"ಹಹ್ಹ ! ನೀವು ಸೂಕ್ಷ್ಮಮತಿಗಳು."

['ಈತ ಠಕ್ಕ ಎಂದು ಮನವರಿಕೆಯಾಗಿ ವ್ಯಂಗ್ಯೋಕ್ತಿ ಆರಂಭಿಸಿದೇನೆ.']

"ವೃತ್ತಿ ಗುಣ. ಅಸಾಧಾರಣವಾದ್ದೇನೂ ಅಲ್ಲ,"

–ಎನ್ನುತ್ತ, ಬರಿದಾದ ಕಪ್ಪನ್ನು ತ್ಯಾಗರಾಜ ಕೆಳಗಿರಿಸಿ, ಲಘುಸಂಗೀತ ವನ್ನು ಹೊಮ್ಮಿಸತೊಡಗಿದ್ದ ರೇಡಿಯೋದ ಕಿವಿಹಿಂಡಿ ಅದರ ಬಾಯಿ ಕಟ್ಟಿದ.

ತನ್ನ ಕಪ್ಪನ್ನೂ ಕೆಳಗಿಡುತ್ತ,

"ಹಾಡು ನಿಮಗಿಷ್ಟವಿಲ್ಲ ಅನಿಸುತ್ತೆ,"

–ಎಂದು ಜಯರಾಮು ಹೇಳಿದ.

"ಹಾಗೇನಿಲ್ಲ. ವಾಸ್ತವವಾಗಿ ನಾನು ಇಂಗ್ಲೆಂಡಿನಲ್ಲಿದ್ದಾಗ–"

"–ಹೌದು, ಹೇಳಿ......"

"–ಹಾಡು ಸಂಗೀತ ತುಂಬಾ ಇಷ್ಟಪಡ್ತಿದ್ದೆ. ಆದರೆ ಇಲ್ಲಿಯ ರಾಗಗಳೆಂದರೆ ಯಾಕೋ–"

ಶ್ರೀಕಂಠಯ್ಯನವರ ಕೊಠಡಿಯ ಬಾಗಿಲು ತೆರೆದ ಸದ್ದಿಗೆ ಮಾತು ಅರ್ಧಕ್ಕೆ ನಿಂತಿತು. ಅಡ್ಡಪಂಚೆಯುಟ್ಟು, ಬನೀನು ತೊಟ್ಟ ಸಾಹುಕಾರರು ಪ್ರತ್ಯಕ್ಷರಾದರು. ಜಯರಾಮು ಥಟ್ಟನೆದ್ದು ನಿಂತ; ತ್ಯಾಗರಾಜನೂ ಎದ್ದ.

ಒಳಗಿನ ದಿಕ್ಕಿಗೆ ಮುಂದುವರಿಯತೊಡಗಿದ್ದ ಶ್ರೀಕಂಠಯ್ಯ ನಡುವೆ ನಿಂತು, ತ್ಯಾಗರಾಜನ ಕಡೆ ತಿರುಗಿ ಅಂದರು:

"ನಿಮಗಿವತ್ತು ಕೋರ್ಟ್ ಇದೆಯಲ್ಲ, ರಾಜನ್?"

"ಇದೆ, ಸರ್."

"ಹಾಗಾದರೆ ನೀವಿನ್ನು ಹೋಗಿ."

ಮತ್ತೆ ಹೆಜ್ಜೆ ಎತ್ತಿದವರು ತಡೆದು ಅಂದರು:

"ಅಂದಹಾಗೆ, ನಿನ್ನೆ ಬೀರನಪಾಳ್ಯದ ರೆಡ್ಡಿ ಬಂದಿದ್ದ. ಜಮೀನ್ದಾರ. ಆ ಹಳ್ಳಿಯ ಅರ್ಧಕ್ಕಿಂತಲೂ ಹೆಚ್ಚು ಹೊಲ ಅವನದು. ಮಾರ್ತಾನಂತೆ. ೨೦೦ ಸೈಟುಗಳಾಗಿ ಮಾರ್ಪಡಿಸ್ಬಹುದು...... ಬೀರನಪಾಳ್ಯ ಇಲ್ಲಿಂದ ಎಷ್ಟು ದೂರ ಅಂತ ಗೊತ್ತಿದೆ ತಾನೆ?"

"ನಿರ್ದಿಷ್ಟವಾಗಿ ಹೇಳಲಾರೆ."

"ನಾನು ಹೇಳ್ತೇನೆ. ಹತ್ತೂವರೆ ಮೈಲು. ಇನ್ನು ಹತ್ತು ವರ್ಷಗಳಲ್ಲಿ ಅದು ಭಾಗ್ಯನಗರದ ಇಪ್ಪತ್ತನಾಲ್ಕನೇ ಪೋಸ್ಟಲ್ ಜೋನ್ ಆಗಿರುತ್ತೆ."

"Splendid!"

"ಸಂಜೆ ಬಿಡುವು ಮಾಡ್ಕೊಂಡು ಬನ್ನಿ. ಆ ವಿಷಯ ಸ್ವಲ್ಪ ಚರ್ಚಿಸಬೇಕು."

"ಬರ್ತೀನಿ, ಸರ್."

ಮತ್ತೊಮ್ಮೆ ಮುಂದಕ್ಕೆ ಹೆಜ್ಜೆ ಇಡಲು ಹೊರಟ ಶ್ರೀಕಂಠಯ್ಯ, ಮುಖದ ಮೇಲೆ ಯಾವ ಭಾವನೆಯನ್ನೂ ತೋರ್ಪಡಿಸದೆ ಮಗನ ಕಡೆ ನೋಡಿ,

"ಟ್ರೇನ್ನಲ್ಲಿ ಬಂದಿಯಾ?"

–ಎಂದು ಕೇಳಿದರು.

"ಹ್ಣ"

–ಎಂದು ಹೇಳಲು ಹೊರಟ ಜಯರಾಮು ತನ್ನ ಗಂಟಲು ಒಣಗಿದ್ದನ್ನು ಕಂಡ. ಹ್ಣ ಪ್ರಯಾಸಪಡುತ್ತ ಕ್ಷೀಣವಾಗಿ ಹೊರಬಿತ್ತು.

ಈಗ ಶ್ರೀಕಂಠಯ್ಯ ತಮ್ಮ ಎಡಕ್ಕೆ ಹೊರಳಿದರು. ಬಾಗಿಲಿನಾಚೆಗೆ ಪೆನ್ನೆಂಟ್ ನಿಂತಿತ್ತು. ಅವರು ತುಸು ಮಾತ್ರ ಧ್ವನಿ ಏರಿಸಿ ಕರೆದರು:

"ಅಜೀಜ್!"

"ಹ್ಣ ಸಾಬ್."

"ಬ್ಯಾರಿಸ್ಟರ್ ಸಾಹೇಬರನ್ನ ಅವರ ಮನೆಗೆ ಬಿಟ್ಟುಬಂದು ಕಾರು ಶೆಡ್ನಲ್ಲಿಡು."

ಮತ್ತೊಮ್ಮೆ ಹ್ಣ ಸಾಬ್ ಎನ್ನುವುದು ಸಲಿಗೆಯಾದೀತೇನೋ ಎಂದು, ಮೌನವಾಗಿ ಅಪ್ಪಣೆ ಎನ್ನುವಂತೆ ಅಜೀಜ್ ಗೋಣು ಬಾಗಿಸಿದ.

ಅಷ್ಟು ಹೇಳಿ ಶ್ರೀಕಂಠಯ್ಯ ನೇರವಾಗಿ ಒಳಕ್ಕೆ–ಸ್ನಾನದಮನೆಗೆ–ಹೋದರು.

ಜಯರಾಮುವೂ ತ್ಯಾಗರಾಜನೂ ಪರಸ್ಪರರನ್ನು ನೋಡಿದರು.

ತಗ್ಗಿದ ಸ್ವರದಲ್ಲಿ ತ್ಯಾಗರಾಜನ್ ಅಂದ:

"ನಿಮ್ಮ ಪೇಷಂಟು."

"ಅಜೀಜ್ ಕಾದಿದಾನೆ,"

–ಎಂದ ಜಯರಾಮು.

"Fine. ಆ ಮೇಲೆ ಸಿಗ್ತೀನಿ."

ತ್ಯಾಗರಾಜನ್ ಹೊರಬಿದ್ದೊಡನೆ ಜಯರಾಮು ಕುಳಿತು ರೇಡಿಯೋ ಹಾಕಿದ. ಕೇಳಿಸತೊಡಗಿದುದು ಟಿ. ರುಕ್ಮಿಣಿ ಹಾಡುತ್ತಲಿದ್ದ ಒಂದು ಭಾವಗೀತ. ಶೋಕಪೂರ್ಣವಾಗಿ ಹೃದಯ ಕಲಕುವಂತಿತ್ತು. ಒಳಗಿನ ತುಮುಲ ಭೋರ್ಗರೆಯುವ ವೇಳೆಯಲ್ಲಿ ಈ ಹಾಡೆ? ನಿಲ್ಲಿಸಿಬಿಡಬೇಕು ಇದನ್ನು–ಎನಿಸಿತು ಜಯರಾಮುಗೆ. ಒಂದು ನಿಮಿಷ ಮತ್ತೂ ಆಲಿಸಿದಾಗ ಯಾತನೆಯ ಆ ಧ್ವನಿಯೂ ಹಿತಕರವೆನಿಸಿತು. ತನ್ನ ಪರಿಸ್ಥಿತಿಯ ಅರಿವಾಗಿ ನಗುಬಂತು.

ಲಚ್ಚಿ ಬಂದು ನಿಂತು,

"ಒಗೆಯೋ ಬಟ್ಟೆ ತೆಗೆದಾಕಿದೀರಾ ಸೋಮಿ?"

–ಅಂದಳು.

ಯೋಚನೆಯ ಗುಂಗಿನಲ್ಲಿದ್ದ ಜಯರಾಮುಗೆ ಪ್ರಶ್ನೆ ಕೇಳಿಸದೆ, "ಹ್ಞ ?" ಎಂದ. ಮತ್ತೊಮ್ಮೆ ಅದೇ ಪ್ರಶ್ನೆಯನ್ನು ಲಚ್ಚಿ ಪುನರುಚ್ಚರಿಸಬೇಕಾಯಿತು.

"ಇಲ್ಲವಮ್ಮ. ಸ್ನಾನ ಆದ್ಮೇಲೆ ಆರಿಸಿಕೊಡ್ತೀನಿ,"

–ಎಂದ ಜಯರಾಮು.

ಲಚ್ಚಿ ಮರಳಿಹೋದಳು. ನಿಲಯದ ಪ್ರಸಾರ ಮುಗಿಯಿತೆಂದು ರೇಡಿಯೋ ಗೊರಗೊರ ಎಂದಿತು. ಆ ಸದ್ದಡಗಿಸಿ ಜಯರಾಮು, ಎದುರಿಗಿದ್ದ ದಿನಪತ್ರಿಕೆಯನ್ನು ಎತ್ತಿಕೊಂಡ.

೦ ೦ ೦ ೦

ಹನ್ನೊಂದರ ಸುಮಾರಿಗೆ ಜಯರಾಮುಗೆ ಕರೆಬಂತು.

ಶುಭ್ರ ಖಾದಿಯ ಜುಬ್ಬ ಪಾಯಜಾಮುಗಳನ್ನು ತೊಟ್ಟಿದ್ದ ಜಯರಾಮು ಶ್ವಾಸಕೋಶಗಳ ತುಂಬ ಉಸಿರೆಳೆದುಕೊಂಡು ತಂದೆಯ ಕೊಠಡಿಗೆ ನಡೆದ.

ಹೊರಹೊರಡುವುದಕ್ಕೋಸ್ಕರ ಪೋಷಾಕು ಧರಿಸಿ ಸಿದ್ಧರಾಗಿ ಶ್ರೀಕಂಠಯ್ಯ ತಿರುಗು ಕುರ್ಚಿಯ ಮೇಲೆ ಕುಳಿತಿದ್ದರು. ಅವರ ನಡೆಗೋಲು ಮೇಜಿಗೆ ಒರಗಿಕೊಂಡಿತ್ತು.

"ಕರೆದಿರಂತೆ,"

–ಎಂದ ಜಯರಾಮು.

ಕುರ್ಚಿ ತಿರುಗಿತು. ಆಳವಾದ ಏಕಪ್ರಕಾರವಾದ ಧ್ವನಿಯಲ್ಲಿ ಮಗನನ್ನೆ ನೇರವಾಗಿ ದಿಟ್ಟಿಸಿ, ಶ್ರೀಕಂಠಯ್ಯ ನುಡಿದರು:

"ಕೇಳು. ಸದಾಶಿವಯ್ಯನವರ ಸಂಬಂಧ ನಾನು ಗೊತ್ತುಮಾಡಿರೋದು ನಿನ್ನ ಒಳ್ಳೆಯದಕ್ಕೆ, ನಮ್ಮ ಒಳ್ಳೆಯದಕ್ಕೆ. ಮದುವೆ ಸೆಪ್ಟೆಂಬರ್‌ನಲ್ಲಿ. ಅದು ಮುಗಿಸ್ಕೊಂಡು ನೀವಿಬ್ಬರೂ ಇಂಗ್ಲೆಂಡಿಗೆ ಹೋಗ್ತೀರಿ. ವಾಪಸಾದಾಗ ದೊಡ್ಡ ಹುದ್ದೆ ನಿನಗೋಸ್ಕರ ಕಾದಿರುತ್ತೆ. ನೀನು ಮೂರ್ಖ. ಅದೇನೋ ಅಂದಿಯಂತಲ್ಲ ಬೊಂಬಾಯಿಯಲ್ಲಿ ? ಸದಾಶಿವಯ್ಯನವರ ಕ್ಷಮೆ ಕೇಳಿದರಾಯ್ತು. ದೊಡ್ಡ ಮನಸ್ಸು ಮಾಡಿ ಮರೆತುಬಿಡ್ತಾರೆ. ತಿಳೀತೇನು ?"

ಜಯರಾಮು ಗಂಟಲು ಸರಿಪಡಿಸಿ ಅಂದ:

"ಇಂಥ ಮದುವೆ ನನಗಿಷ್ಟವಿಲ್ಲ, ಅಪ್ಪಯ್ಯ."

“ಗೊತ್ತು ಕಣಯ್ಯ. ಅದಕ್ಕೇ ಹೇಳ್ತಿರೋದು ಇಷ್ಟಪಟ್ಕೊ–ಅಂತ. ಇವತ್ತಿನಿಂದ ಒಂದು ವಾರದ ಅವಧಿ ಕೊಟ್ಟಿದೀನಿ. ಅಷ್ಟರೊಳಗೆ ಬಂದು ಹೇಳು, ಒಪ್ಪಿಗೆ–ಅಂತ. ಹೋಗು.”

ಕುರ್ಚಿ ಮತ್ತೆ ಪೂರ್ವಸ್ಥಿತಿಗೆ ತಿರುಗಿತು.

ಜಯರಾಮು ತುಟಿಬಿಗಿದು, ಪಾದಗಳನ್ನು ಕಿತ್ತು, ಹಜಾರಕ್ಕೆ ಬಂದ; ದಂಡೆಯನ್ನು ಹಿಡಿದು ಒಂದೊಂದಾಗಿ ಮಹಡಿ ಮೆಟ್ಟಲುಗಳನ್ನು ಏರತೊಡಗಿದ

ದೊಡ್ಡ ಕಾರು ದ್ವಾರಮಂಟಪಕ್ಕೆ ಬಂತು.

ಮಹಾದ್ವಾರವನ್ನು ದಾಟುತ್ತ ಶ್ರೀಕಂಠಯ್ಯ ಧ್ವನಿ ಏರಿಸಿ ಅಂದರು:

“ಜಗ್ಗ ! ಆ ಸರಪಣಿ ಎಲ್ಲಿದೇಂತ ಹುಡುಕಿ ತೆಗೆ. ನಾಯಿೊನ ಕಟ್ಹಾಕು.”

೨೧

೫

ಆ ಬೆಳಗ್ಗೆ ಫೋನಿಗೆ ಬಿಡುವಿಲ್ಲ. ಒಂದರ ಮೇಲೊಂದಾಗಿ ಟ್ರಂಕ್‌ಕಾಲ್‌ಗಳು, ಶ್ರೀಸದನದಿಂದ ಹಾಗೂ ಶ್ರೀಸದನಕ್ಕೆ. ಈ ಸಂವಾದಗಳೆಲ್ಲ ಸಾಹುಕಾರ ಶ್ರೀಕಂಠಯ್ಯನವರ ವ್ಯವಹಾರಕ್ಕೆ ಸಂಬಂಧಿಸಿದಂಥವು. ನಾಳೆ ಏನಾಗಬಹುದೆಂಬುದನ್ನು ತಿಳಿಯಬಲ್ಲ ಜಾಣ್ಮೆ, ಕ್ಷಿಪ್ರ ನಿರ್ಧಾರ ಕೈಗೊಳ್ಳುವುದರಲ್ಲಿ ಎದೆಗಾರಿಕೆ, ಆಗೊಮ್ಮೆ ಈಗೊಮ್ಮೆ ನಷ್ಟವಾದರೂ ಗಮನಿಸದೆ ಮುಂದಿನ ಲಾಭಕ್ಕೆ ನೇರವಾಗಿ ಗುರಿ ಇಡುವ ಕೌಶಲ–ಇಂಥ ಗುಣಗಳು ಅಭ್ಯುದಯದ ಸೋಪಾನಗಳ ಮೇಲಿಂದ ಶ್ರೀಕಂಠಯ್ಯನವರನ್ನು ಸುಲಭವಾಗಿ ಒಯ್ದಿದ್ದುವು.

ಅಂತಹ ಗದ್ದಲದ ವೇಳೆಯಲ್ಲಿ ಒಬ್ಬ ಮನುಷ್ಯ ಸಾಹುಕಾರರ ಭೇಟಿಗೆ ಬಂದ. ಯುವಕ. ಇವನನ್ನು ಎಲ್ಲೊ ನೋಡಿದೀನಲ್ಲಾ–ಎನಿಸಿತು ಅಜೀಜನಿಗೆ. ಮೂಡಿದ ಸಂದೇಹ ಅವನನ್ನು ವಿವಂಚನೆಗೆ ಗುರಿಮಾಡಿತು.

ಅಜೀಜ್ ಆತನ ಬಳಿ ಸಾರಿದ. ಅವನು ತನ್ನ ಜಾತಿಬಾಂಧವನಲ್ಲವೆಂಬುದು ಸ್ಪಷ್ಟವಾಗಿತ್ತು.

ಕೇಳಿದ ಒಂದೆರಡು ಪ್ರಶ್ನೆಗಳಿಗೆ ದೊರೆತ ಉತ್ತರ ಅಜೀಜನನ್ನು ವಿಸ್ಮಯಕ್ಕೆ ಗುರಿಮಾಡಿತು. ಅವನ ಮೈ ಉರಿಯಿತು. ಎಲಾ! ಸದ್ದಿಲ್ಲದೆ ಕತ್ತು ಕುಯ್ಯೋಕೆ ನೋಡ್ತಿದಾನಲ್ಲಾ ಈ ಸಾಹುಕಾರ! ಇವನಿಗೆ ಬುದ್ಧಿ ಕಲಿಸದೆ ಬಿಟ್ಟೇನಾ?–ಎಂದು ಮನಸ್ಸು ಗುಡುಗುಡಿಸಿತು. ಎರಡೂ ಕಾರುಗಳ ಗೇರ್ ಬಾಕ್ಸುಗಳನ್ನೂ ಕೆಡಿಸಿ ಇಡಬೇಕು, ಪೆಟ್ರೋಲ್ ಟ್ಯಾಂಕುಗಳಿಗೆ ಮಣ್ಣು ಸುರಿಯಬೇಕು......

ಅಂದು ಸಂಬಳದ ದಿನ. ಮಾರಣ್ಣ, ಜಗ್ಗ, ಅಜೀಜ್ ಮೂವರೂ ಶಾಂತಮಲ್ಲಪ್ಪನಿಂದ ಎಷ್ಟು ಹೊತ್ತಿಗೆ ಕರೆ ಬರುವುದೋ ಎಂದು ಕಾದಿದ್ದರು.

ಅಜೀಜ್ ಕೇಳಿದ:

"ಮುಂಚೆ ಎಲ್ಲಿ ಕೆಲಸ ಮಾಡ್ತಿದ್ದೆ?"

"ಮಿನಿಷ್ಟ್ರ ಉಚ್ಚಪ್ಪನವರಲ್ಲಿ. ಈ ಸಲ ಅವರು ವಜಾ ಆಗ್ಬಿಟ್ರು".

"ವಜಾ ಆಗ್ಬಿಟ್ರಾ? ಅವರ್ನ ತೆಗೆದಾಕಿದ್ರಾ? ಈಗ ಕಾರಿಲ್ವಾ?"

"ಇಲ್ಲ".

–ಸಂಬಳದ ದಿನವೇ ಈತ ಬಂದಿದ್ದಾನೆ.

['ಅಜೀಜ್, ಕೀ ಬಂಚ್ ಇವನಿಗೆ ಕೊಡು!' 'ಥುತ್!']

ಶಾಂತಮಲ್ಲಪ್ಪನ ಧ್ವನಿ ಕೇಳಿಸಿತು:

"ಚಿಕ್ಕಣ್ಣ ಅಂದರೆ ನೀನೇ ಏನಪ್ಪಾ?"

ಭೇಟಿಗೆ ಬಂದವನು ಅಂದ:

"ಹೌದು ಸೋಮಿ".

"ಸಾಹುಕಾರ್ರು ಕರೀತಾರೆ, ಬಾ."

ಅಜೀಜ್ ಅಂದುಕೊಂಡ: ತನ್ನ ಕಡೆ ನೋಡಿ ನಕ್ಕು ಮಾಯವಾದನಲ್ಲ ಶಾಂತಮಲ್ಲಪ್ಪ? ಈ ಹೊಲಸು ಸ್ಥಳದಿಂದ ಹೊರಡೋದಕ್ಕೆ ಮುಂಚೆ ಅವನ ಎರಡು ಹಲ್ಲು ಮುರಿದು ಕೈಗೆ ಕೊಡಬೇಕು......

ಹತ್ತೇ ನಿಮಿಷಗಳಲ್ಲಿ ಚಿಕ್ಕಣ್ಣ ಹೊರಬಂದ.

ಶಾಂತಮಲ್ಲಪ್ಪ ಕರೆದ:

"ಅಜೀಜ್, ನೀನು ಬಾ."

ನನ್ನ ಬುದ್ಧಿ ನನ್ನ ಹಿಡಿತದಲ್ಲಿಲ್ಲ; ಸಾಹುಕಾರನ ಮುಖಕ್ಕೆ ಉಗುಳಿದರೂ ಉಗುಳಿದೆನೇ–ಎಂದುಕೊಳ್ಳುತ್ತ ಅಜೀಜ್ ಒಳಕ್ಕೆ ನಡೆದ. ಶ್ರೀಕಂಠಯ್ಯನವರ ಎದುರು ನಿಂತಾಗ ಮಾತ್ರ ಅಭ್ಯಾಸಬಲದಿಂದ ತಲೆಯ ಮೇಲಿನ ಟೋಪಿ ತೆಗೆದ.

ಶ್ರೀಕಂಠಯ್ಯ ಅಂದರು:

"ನಿನಗೆ ಸಂಬಳ ಐದು ರೂಪಾಯಿ ಜಾಸ್ತಿ ಮಾಡಿದೇನೆ ಅಜೀಜ್."

ಅಳುವಂತಾಯಿತು ಅಜೀಜನಿಗೆ. ಕಳೆದ ಒಂದೆರಡು ಘಳಿಗೆಗಳಲ್ಲಿ ಎಂಥ ಕೆಟ್ಟ ಯೋಚನೆ ಮಾಡಿದ್ದ ತಾನು!

ಸಾಹುಕಾರರು ಮತ್ತೂ ಹೇಳಿದರು:

"ಮನೇಲಿ ಮದುವೆಗಿದುವೆ ಶುಭಕಾರ್ಯ ಇರ್ತದೆ. ಬರಹೋಗುವವರು ಜಾಸ್ತಿ. ಸಣ್ಣ ಕಾರು ಓಡಿಸೋಕೆ ಇನ್ನೂ ಒಬ್ಬ ಡ್ರೈವರನ್ನ ನೇಮಿಸ್ಕೊಂಡಿ

ದೀನಿ. ಎಪ್ಪತ್ತೈದೇ ರೂಪಾಯಿ ಸಂಬಳ. ಈ ನೇಮಕ ತತ್ಕಾಲಕ್ಕೆ ಅನ್ನೋದನ್ನ ಅವನಿಗೆ ಹೇಳ್ಬೇಡ. ಆತ ಇನ್ನೂ ಹುಡುಗು. ಅವನ ಮೇಲೆ ನಿಗಾ ಮಡಗು."

ಅಜೀಜನ ಕಣ್ಣುಗಳು ಹನಿಗೂಡಿದುವು. ಭಾವೋದ್ವೇಗದಿಂದ ಮಾತ ನಾಡಲಾಗದೆ, ಆಗಲಿ ಎಂದು ಸೂಚಿಸುವಂತೆ ತಲೆ ಆಡಿಸಿದ.

"ಅವನು ಡ್ರೈವ್ ಮಾಡೋದು ನೋಡಿದೀನಿ. ಅವನ ಲೈಸೆನ್ಸೆಲ್ಲಾ ಸರಿಯಾಗಿದೆ. ಹೋಗು, ಕಾರು ತೋರ್‍ಸು."

ಅಜೀಜ್ ತಲೆಬಾಗಿ ನಮಿಸಿ ಹೊರಕ್ಕೆ ಓಡಿದ.

ಸಾಹುಕಾರರ ಅಪ್ಪಣೆ ಪಡೆದುಬಂದು ಶಾಂತಮಲ್ಲಪ್ಪ, ಸಂಬಳದ ಬಟ ವಾಡೆಗಾಗಿ ಹಜಾರದ ಬಲಬದಿಯಲ್ಲಿನ ತನ್ನ ಕೊಠಡಿ ಸೇರಿದ. ಹಿಂದಿನ ಕಾಲ ದಲ್ಲಿ ಮೆತ್ತೆಯ ಮೇಲೆ ಕುಳಿತು ಮಸಿಕುಡಿಕೆಯಲ್ಲಿ ಲೇಖನಿ ಅದ್ದಿ ಬರೆಯುತ್ತಿದ್ದ ವನು. ಈಗ ಮೇಜು ಕುರ್ಚಿ. ತನ್ನ ಬಲಕ್ಕೆ ಮೂಲೆಯಲ್ಲಿ ತಿಜೋರಿ. ಈ ನಾಲ್ಕು ಗೋಡೆಗಳ ನಡುವೆ ಅವನೇ ದೊರೆ.

ಕಿಟಕಿಯ ಹೊರಗೆ ಮಾರಣ್ಣ ನಿಂತಿದ್ದ. ಅತ್ಯಂತ ಹಳೆಯ ನೌಕರ. ಶಾಂತ ಮಲ್ಲಪ್ಪ ಸನ್ನೆಮಾಡಿದೊಡನೆ ಆತ ಒಳನಡೆದ:

ಒಂದೊಂದು ರೂಪಾಯಿಯ ಹತ್ತು ನೋಟುಗಳು.

"ಮಾಲಿ—ಮಾರಣ್ಣ. ಇಲ್ಲಿ ಒತ್ತು ಹೆಬ್ಬೆಟ್ನ."

ಶಾಂತಮಲ್ಲಪ್ಪ ಬೊಟ್ಟುಮಾಡಿದ ಕಡೆ ಹೆಬ್ಬೆರಳನ್ನು ಒತ್ತಿ, ತನ್ನ ಮಾಸಲು ಚಡ್ಡಿಗೆ ಬೆರಳನ್ನೊರಸಿ, ಮಾರಣ್ಣ ಯಾಚಿಸಿದ:

"ಲಚ್ಚಿಗಿಷ್ಟು ಸಂಬಳ ಗೊತ್ಮಾಡಿಸ್ಕೊಡಿ, ಮಲ್ಲಪ್ಪಣ್ಣ."

"ನಾಚಿಕೆ ಆಗೊಲ್ವೆನೊ? ಮಗಳು ಬೇರೆ ಸಂಪಾದಿಸಿ ಕೊಡ್ಬೇಕಾ ನಿಂಗೆ? ಕೂಳು ಬಿಟ್ಟಿ ಬತ್ತೈತೆ. ಅಟ್ಟಿಗೆ ಬಾಡ್ಗೆ ಇಲ್ಲ. ಯಾಕೊ ನಿನ್ಗೆ ದುಡ್ಡು? ರೇಸಿಗೆ ಒಗ್ತೀಯೇನೊ? ಕುಡಿಯೋದು ಶುರುಮಾಡಿದೀಯೇನೊ?"

"ಸಾಹುಕಾರ್‍ರಿಗಿಷ್ಟು ಯೋಳಿ ಮಾಡಿಸ್ಕೊಡಿ ಮಲ್ಲಪ್ಪಣ್ಣ."

"ಅಮ್ಮಾವ್ರಿಗೆ ಹೇಳಿದ್ಯೇನೊ?"

"ಹೂಂ."

"ನನ್ಕೈಲಾಗೋ ಕೆಲಸ ಅಲ್ಲ, ಅಂದ್ರೋ ಇಲ್ವೊ?"

"ಹ್ಞ."

"ಈ ಮನೇಲಿ ಅಮ್ಮಾವ್ರು ಮಾತು ನಡಿಯೋದಿಲ್ಲಾಂತ ನೀನೂ ತಿಳ್ಕಂಬಿಟ್ಟೆ ಅನ್ನು. ಲೋ! ಸುಮ್ನೆ ಹೋಗು. ಪೆಟ್ಗೆಯಂತಾ ಬಂಗ್ಲೇಲಿ ನಿನ್ನ ಒಡವೇನ ಮಡಕ್ಕೊಂಡವರೆ. ಜೋಪಾನವಾಗಿ ಇಟ್ಟಿರೋದಕ್ಕೆ ದುಡ್ಡು ಬೇರೆ ಕೇಳಿದ್ಯೋ, ಸಾಹುಕಾರ್ರು ಕಳಿಸ್ಬಿಡ್ತಾರೆ ಇಲ್ಲಿಂದ್ನಿನ್ನ......"

ಮಾರಣ್ಣ ಕತ್ತಿನ ಹಿಂಬದಿ ತುರಿಸಿಕೊಳ್ಳುತ್ತ ಹೊರಹೋದ.

ಶಾಂತಮಲ್ಲಪ್ಪ ಅಂದ:

"ಜಗ್ಗ ವಾಚ್‌ಮನ್. ಹದಿನೈದು ರೂಪಾಯಿ. ತಗೋ ಪೆನ್ನು. ನಿಬ್ಬು ಮುರಿದ್ಹಾಕೀಯಾ."

ಜಗ್ಗ, ನಿಧಾನವಾಗಿ ವಕ್ರಾಕ್ಷರಗಳಲ್ಲಿ **ಜಗ** ಎಂದು ಸಹಿ ಹಾಕಿದ.

ಶಾಂತಮಲ್ಲಪ್ಪನೆಂದ:

"ಪರವಾಗಿಲ್ಲ ಅಂತೂ ವಿದ್ಯಾವಂತನಾಗ್ಬಿಟ್ಟೆ."

"ನಿಮ್ಮ ಇದ್ಯೆ ನನಗೆ ಬರಾಕಿಲ್ಲ, ಮಲ್ಲಪ್ಪಣ್ಣ,"

—ಎಂದ ಜಗ್ಗ.

"ನಿನ್ನ ಹೆಂಡ್ತಿಗೂ ಸಂಬಳ ಬೇಕೊ?"

"ಕೊಡ್ತಾರಲ್ಲ ಅನ್ನ, ಸಾರು, ಹಳೇ ಸೀರೆ......"

"ಸಾಹುಕಾರ್ರ ಬಂಗ್ಲೆಗೆ ವಾಚ್‌ಮನ್ ಆಗಿ ಬಂದು ಕುದುರ್ಕೊಂಡೆ ಕಣಯ್ಯ ನೀನು. ಹುಂ. ಹೆಂಡ್ತಿ ಬಸುರಿಗಿಸುರಿ ಆದ್ರೆ ಬಂದು ಹೇಳು. ಬೇಕಿದ್ರೆ ಅಡ್ವಾನ್ಸ್ ಕೊಡಿಸ್ತೀನಿ."

ಕಂಡೂ ಕಾಣಿಸದಂತೆ ವ್ಯಂಗ್ಯಬೆರೆಸಿ ಜಗ್ಗನೆಂದ:

"ನಿಮ್ಮದು ದೊಡ್ಮನ್ಸು ಮಲ್ಲಪ್ಪಣ್ಣ. ನಿಮ್ಮಂಥಾವರ ಕಿರ್ಪೆ ಇದ್ದರಲ್ಲವಾ ನಮ್ಮಂಥಾವರು ಬದುಕೋದು?"

ಶಾಂತಮಲ್ಲಪ್ಪ ನುಡಿದ:

"ಇಂಥ ಮುಖಸ್ತುತಿ ನನಗೆ ಹಿಡಿಸಾಕಿಲ್ಲ. ಹೋಗು. ಅಜೀಜನ್ನ ಕಳಿಸು."

ಅಜೀಜ್ ಬಂದು ನಿಂತಾಗ ಶಾಂತಮಲ್ಲಪ್ಪ ರಾಗವೆಳೆದ:

"ಏನು ಸಾಹೇಬರೇ ಪಗಾರಕ್ಕೆ ಬಂದಿರೋ?"

"ತಮಾಷಿ ಮಾಡ್ಬೇಡಿ. ಕೊಡಿ, ಮಲ್ಲಪ್ಪಣ್ಣ."

"ಹುಂ. ಅಜೀಜ್–ಡ್ರೈವರ್. ನೂರು ರೂಪಾಯಿ. ಏಕ್ ಸೌ–"

"ಧಣೇರು ಯೋಳಿದಾರೆ, ಮಲ್ಲಪ್ಪಣ್ಣ : ಐದು ರೂಪಾಯಿ ಜಾಸ್ತಿ ಮಾಡಿ ದೀನಿ ಅಂತ."

"ಗೊತ್ತು ಕಣೋ. ಭಡ್ತಿ ಕೊಡೀಂತ ನಾನೇ ಸೂಚಿಸ್ದೋನು. ಮುಂದಿನ ತಿಂಗಳಿಂದ. ಹಾಕು ಗುದ್ದಲಿ ಗುರುತು, ರಶೀತಿ ಸ್ಟಾಂಪಿನ ಮೇಲೆ. ಗುದ್ದಲಿ ಗುರುತು ಅಂದ್ರೇನು ಹೇಳು ?"

ಕಷ್ಟಪಟ್ಟು ಸಹಿಹಾಕಿ ಅಜೀಜ್ ಅಂದ:

"ಒಂದ್ಸಾರ್ತಿ ಅದೇನೋ ಯೋಳಿದ್ರಿ. ನೆಪ್ಪಿಲ್ಲ."

"ನಿಮ್ಮ ಹೈದರ್ ಇದ್ದ ನೋಡು, ಟೀಪೂ ತಂದೆ? ಅವನಿಗೆ ಬರೆಯೋಕೆ ಬರ್‍ತಿರ್‍ಲಿಲ್ಲ. ಕಷ್ಟಪಟ್ಟು ಮುಸಲ್ಮಾನಿಯಲ್ಲಿ ಹೈ ಅಂತ ಗೀಚ್ತಿದ್ದ. ಅದು ಉಲ್ಟಾ ಆಗಿ ಗುದ್ದಲಿ ತರಾ ಕಾಣ್ತಿತ್ತು. ಅದ್ಕೇ ಅನ್ನೋದು ಗುದ್ದಲಿ ಗುರುತೂಂತ. ಅ ಆ ಇ ಈ ತಿಳೀದೇನೇ ರಾಜ್ಯ ಕಟ್ಟಿದ್ನಲ್ಲಾ–ಗಂಡಸು ಕಣಯ್ಯ ಅವನು, ನಿಜವಾದ ಗಂಡಸು !"

ಐದು ರೂಪಾಯಿಯ ಕೆಲ ನೋಟುಗಳನ್ನು ತಿಜೋರಿಯಿಂದ ತೆಗೆದು ಶಾಂತಮಲ್ಲಪ್ಪ ಎಣಿಸಿ ಕೊಟ್ಟ. ಅಜೀಜನಿಗೆ ಸಂಶಯ ಬಂತು. ತಾನೊಮ್ಮೆ ಎಣಿಸಿದ. ತಪ್ಪಿತೇನೋ ಎಂದು ಟೋಪಿ ತಿರುಗಿಸಿಟ್ಟು, ಪ್ರತಿ ನೋಟಿಗೂ ಎಂಜಲು ಮುಟ್ಟಿಸಿ ಮುಟ್ಟಿಸಿ ಮತ್ತೆ ಎಣಿಸಿದ.

"ಇದೇನು ಮಲ್ಲಪ್ಪಣ್ಣ ? ಎಪ್ಪತ್ತೈದೇ ಐತೆ !"

"ವ್ಹಾರೆ ಬಹದ್ದುರ ! ಕಾಲಂಶ ರಾಜ್ಯ ಮೊನ್ನೆನೇ ಗೆದೀಲಿಲ್ವೇನೊ ?"

"ಅಂಗಂದ್ರೇನಣ್ಣ ?"

"ಬೀಗರ ಉಪಚಾರಕ್ಕೇಂತ ಇಪ್ಪತ್ತೈದು ರೂಪಾಯಿ ಇಸಕೊಂಡದ್ದು ?"

"ಬ್ಯಾಡಿ ಮಲ್ಲಪ್ಪಣ್ಣ. ಒಂದೇ ಸಲ ಅಷ್ಟು ಮುರಕೋಬ್ಯಾಡಿ."

"ನಾನೇನಪ್ಪ ಮಾಡ್ಲಿ ? ಮೇಲಿನ ಆರ್ಡರ್. ನನ್ನ ಮಾತು ಕೇಳ್ತೀಯಾ–ಹಾಗಾದರೆ ಇಷ್ಟನ್ನ ಸುಮ್ಮನೆ ತಕೋ. ತಿಂಗಳ ಕೊನೇಲಿ ಬೇಕಾದರೆ ನನ್ನ ಕೇಳು."

ಅಜೀಜ್ ಅಸಹಾಯನಾಗಿ ಮಾತಿಲ್ಲದೆ ನಿಂತ.

"ನೇರ ಸಾಹುಕಾರ್‍ರ ಹತ್ತಿರ ಹೋಗ್ಬೇಡ. ಮೊದಲು ನನ್ನ ಕೇಳು,"

–ಎಂದು ಶಾಂತಮಲ್ಲಪ್ಪ ಒತ್ತಿ ನುಡಿದ.

"ಹೂಂ."

"ಕೊಡು ಹತ್ತು ಪೈಸೇ. ಮರೆತ್ಬಿಟ್ಟೆ ಅಂದ್ಕೊಂಡ್ಯಾ? ರಶೀತಿ ಸ್ಟ್ಯಾಂಪಿಂದು ನಾನು ಕೈಯಿಂದ ಕೊಡ್ಲಾ?"

ಜೇಬುಗಳಲ್ಲಿ ಹುಡುಕಿ ಹತ್ತು ಪೈಸೆಗಳ ಒಂದು ನಾಣ್ಯವನ್ನು ಅಜೀಜ್ ಹೊರತೆಗೆದು ಮೇಜಿನ ಮೇಲಿರಿಸಿದ.

"ಇನ್ನು ಮಹಾರಾಯನ ಹಾಗೆ ಶೆಡ್ಡಿಗೆ ಹೋಗು. ಆ ಹೊಸಬ ಇದಾನೆ ನೋಡು–ಅವನೂ ನೀನೂ ಸಿಗರೇಟು ಸೇದ್ಕೊಂಡು ಹರಟೆ ಹೊಡೀತಾ ಇರಿ."

ಜಗ್ಗ ಹೊರಟಬಳಿಕ ಶಾಂತಮಲ್ಲಪ್ಪ ಲೆಕ್ಕದ ಪುಸ್ತಕವನ್ನು ಮುಚ್ಚಿ, ತಿಜೋರಿಯನ್ನು ಭದ್ರಗೊಳಿಸಿ, ಕೀಲಿಕೈಗಳ ಗೊಂಚಲನ್ನು ತನ್ನ ಕೋಟಿನ ಒಳ ಜೇಬಿಗೆ ತುರುಕಿದ. ಎಡಗಡೆಯ ಕಪಾಟದಿಂದ ಬೇರೆ ಪುಸ್ತಕಗಳನ್ನು ತೆಗೆದು, ತನ್ನೆದುರು ಹರವಿಕೊಂಡು, ಅಂಕೆಸಂಖ್ಯೆಗಳ ಲೋಕದಲ್ಲಿ ಲೀನನಾದ.

......ಮೇಲಣ ಅಂತಸ್ತಿನ ತನ್ನ ಕೊಠಡಿಯಲ್ಲಿ ಕುಳಿತಿದ್ದ ಜಯರಾಮುಗೆ, ಇದೇನು ಇಷ್ಟೊಂದು ಶಾಂತವಾಗಿದೆಯಲ್ಲ ಮನೆ–ಎಂದು ಆಶ್ಚರ್ಯವಾಯಿತು. ಆತ ಎದ್ದು ಮಹಡಿಯ ಹಿಂಭಾಗದ ಬಿಸಿಲು ಮಾಳಿಗೆಗೆ ಹೋದ. ಅಲ್ಲಿ ಎಲ್ಲಿ ನಿಂತರೂ ವಿಶಾಲವಾಗಿ ಹರಡಿಕೊಂಡಿದ್ದ ಆ ವಿಸ್ತರಣ ಕಾಣಿಸುತಿತ್ತು. ಅದು–ಅದಲ್ಲವೆ ನಳಿನಿಯ ಮನೆ? ಜಯಶ್ರೀ ತೋರಿಸಿದ್ದಳಲ್ಲ? ನಳಿನಿ–ಆಕರ್ಷಣೀಯ ವ್ಯಕ್ತಿತ್ವದ ಹುಡುಗಿ. ಯಾಕೋ ಕೆಲವರನ್ನು ಕಂಡರೆ ಮೊದಲ ನೋಟಕ್ಕೇ ತನಗೆ ಇಷ್ಟವಾಗ್ತದೆ. ಕೆಲವರನ್ನು ಕಂಡರೆ ಏನು ಮಾಡಿದರೂ ಒಳ್ಳೆಯ ಅಭಿಪ್ರಾಯ ತನ್ನಲ್ಲಿ ಮೂಡುವುದಿಲ್ಲ. ಆ ತ್ಯಾಗರಾಜನ್......ಭಾಗ್ಯನಗರಕ್ಕೆ ತಾನು ಬಂದ ಮೇಲೆ ಎರಡು ಮೂರು ಸಾರೆ ತನ್ನೊಡನೆ ಸುದೀರ್ಘ ಮಾತುಕತೆಗೆ ಯತ್ನಿಸಿದನಲ್ಲ? ತಾನು ಉತ್ತೇಜನವೀಯಲಿಲ್ಲ ಅವನಿಗೆ. ಜಯಶ್ರೀ ಬರೇ ಚೆಲ್ಲು. ಮಾವ ಮಾವ ಎಂದು ಮೈಮೇಲೆ ಬೀಳುತ್ತಾರೆಯೆ? ಅವನೋ, ಜಯಳ ಸಾಮೀಪ್ಯವನ್ನೇ ಸದಾ ಬಯಸುವಂತಿದಾನೆ. ಇದೊಳ್ಳೆಯ ತಮಾಷೆ......

ಜಯರಾಮು ಮಹಡಿಯ ಅಂಚಿಗೆ ಹೋಗಿ ನಿಂತಾಗ ಒಬ್ಬಳು ತಮ್ಮ ನಿವಾಸದ ಹಿಂಬದಿಯಲ್ಲಿ ಬಟ್ಟೆಯೊಗೆಯುತ್ತಿದ್ದುದು ಕಂಡಿತು. ಸ್ಫುರದ್ರೂಪಿಯಲ್ಲದ ಕರಿ ಹೆಂಗಸು. ಆದರೆ ಯುವತಿ. ಯಾರೀಕೆ? ಆ–ಜಗ್ಗನ ಹೆಂಡತಿ.

ಆತ ಮದುವೆಯಾಗಿ ಕರೆತಂದ ಹಳ್ಳಿಯ ಹೆಣ್ಣು. ನಗರದಲ್ಲೇ ಹುಟ್ಟಿ ಬೆಳೆದ ಲಚ್ಚಿಗೆ ಇವಳು ಸಾಟಿಯಲ್ಲ. ಮಾಲಿ ಮಾರಣ್ಣ ಹೂಗಿಡಗಳ ಆರೈಕೆಮಾಡಿ ಮಾಡಿ ಪುಷ್ಪರಾಶಿಯ ಸೌಂದರ್ಯವನ್ನೆಲ್ಲ ಲಚ್ಚಿಯ ರೂಪದಲ್ಲಿ ಭಟ್ಟಿ ಇಳಿಸಿ ಕೊಂಡನೇನೊ.

ಲಚ್ಚಿ ಮತ್ತು ಲೀಲಾ. ಯಾರು ಹೆಚ್ಚು ಮೋಹಕ ನೋಟಕ್ಕೆ? ಇದೇನು ಲೀಲಳ ನೆನಪು ಆಗಾಗ್ಗೆ ಆಗುತ್ತಿದೆಯಲ್ಲ ತನಗೆ?

ಬೆಳಗ್ಗೆ ಲಚ್ಚಿ ಕಸ ಗುಡಿಸಲು ಬಂದಾಗ ತಾನು ಹೊರಹೋಗದೆ ಕುಳಿತಲ್ಲೇ ಇದ್ದೆನಲ್ಲ? 'ಇಲ್ಲಿಗ್ಬಾ ಜಯೂ. ಲಚ್ಚಿ ಕಸ ಗುಡಿಸ್ಲಿ' ಎಂದಳಲ್ಲ ಜಯಶ್ರೀ? ಓದುತ್ತಲಿದ್ದೆ ಎಂಬ ನೆಪ.

ಓದುವುದು ಏನನ್ನು? ತಂಗಿಯ ಪಠ್ಯ ಉಪಪಠ್ಯಗಳನ್ನೆಲ್ಲ ತಿರುವಿ ಹಾಕಿದೆನಲ್ಲ? ಮನುಷ್ಯ ಕಲೆ ಸಾಹಿತ್ಯಗಳ ಬಗೆಗೆ ತೋರುವ ಆಸಕ್ತಿಯಿಂದ ಅವನ ಸಂಸ್ಕಾರದ ಆಳ ತಿಳಿಯುತ್ತದಂತೆ. ಶ್ರೀಸದನದ ನಿವಾಸಿಗಳು ತೋರುತ್ತಿರುವ ಆಸಕ್ತಿ ಎಂಥದು? ಕೆಳಗಿನ ಹಜಾರದಲ್ಲಿರುವ ಕಲಾಕೃತಿಗಳು ಮೂರು. ನಡುವಿನದು, ಮಧ್ಯವಯಸ್ಸಿನ ಖಾದಿಧಾರಿ ಶ್ರೀಕಂಠಯ್ಯನವರ ತೈಲಚಿತ್ರ. ಅದರ ಈಚೆಗೆ ಆಚೆಗೆ ರಾಷ್ಟ್ರದ ಪ್ರಧಾನಿ ಹಾಗೂ ರಾಷ್ಟ್ರದ ಅಧ್ಯಕ್ಷರು. ಮೇಲಿನ ಅಂತಸ್ತಿನಲ್ಲಿ ಎರಡು ದೊಡ್ಡ ಚಿತ್ರಗಳು: ವೈಸ್‌ರಾಯ್ ಲಾರ್ಡ್ ಲಿನ್‌ಲಿಥ್‌ಗೋನದೊಂದು, ಭಾವಚಿತ್ರ. ಅದರ ಮಗ್ಗುಲಲ್ಲಿ ರಾವ್ ಸಾಹೇಬ್ ಶ್ರೀಕಂಠಯ್ಯನವರ ವರ್ಣಚಿತ್ರ. ಅಲ್ಲಲ್ಲಿ ಒಂದೊಂದು ಕ್ಯಾಲೆಂಡರು......ಪುಸ್ತಕಗಳು? ಶ್ರೀಕಂಠಯ್ಯನವರ ವ್ಯವಹಾರಕ್ಕೆ ಸಂಬಂಧಿಸಿದ್ದು ಕೆಲವು. 'ಆಕ್ಟು'ಗಳು, ಸರಕಾರೀ ಪ್ರಕಟಣೆಗಳು......

ಯೋಚಿಸಿದಷ್ಟೂ ಜಯರಾಮುಗೆ ತನ್ನ ತಂದೆಯ ವ್ಯಕ್ತಿತ್ವದ ವಿಶ್ಲೇಷಣೆ ಕಷ್ಟವೆನಿಸುತಿತ್ತು. ಕಳೆದ ಮಹಾಯುದ್ಧ ಮುಗಿಯುವುದರೊಳಗೆ ಅವರು ಭಾಗ್ಯನಗರದ ಪ್ರತಿಷ್ಠಿತ ವ್ಯಕ್ತಿಗಳ ಸಾಲಿಗೆ ಸೇರಿದ್ದರು. ಯುದ್ಧನಿಧಿ ಸಂಗ್ರಹದ ಸಮಿತಿಗೆ ಅಧ್ಯಕ್ಷರೂ ಆಗಿದ್ದರು. ಅದಕ್ಕೆ ತುಸು ಮುನ್ನ ನಾಲ್ವತ್ತೆರಡರ ಚಳುವಳಿಯ ವೇಳೆಗೆ, ಹತ್ತು ವರ್ಷಗಳ ಹುಡುಗನಾದ ತಾನು ಇತರರಂತೆ ಶಾಲೆಬಿಟ್ಟು 'ಜಯ್ !' 'ಮಾಡು ಇಲ್ಲವೆ ಮಡಿ !' ಎನ್ನುತ್ತ ಬೀದಿಗಳಲ್ಲಿ ಓಡಾಡಿದ್ದೆ. ಆಗ ತಂದೆ ಗದರಿದ್ದರು: "ಮುಠ್ಠಾಳ! ಹೊಸ್ತಿಲು ದಾಟಿದೆ ಅಂದರೆ ಕಾಲು ಮುರಿದ್ಹಾಕ್ತೀನಿ!"

ಅಂತಹ ಧೋರಣೆಗಾಗಿಯೇ ಅಲ್ಲವೆ ಅವರಿಗೆ ರಾವ್ ಸಾಹೇಬ್ ಬಿರುದು ದೊರೆತುದು?

ತಂದೆ ಈ ಇಪ್ಪತ್ತು ವರ್ಷಗಳಲ್ಲಿ ಬದಲಾಗಿರುವರೇನು? ಆಗಲೂ ಅವರು ಸರಕಾರದ ಭಕ್ತ; ಈಗಲೂ ಸರಕಾರದ ಭಕ್ತ. ಸರಕಾರವೇ ಬದಲಾದರೆ ಅದಕ್ಕೆ ಅವರು ಹೊಣೆಯೆ? ಆಡುವ ಭಾಷೆ ಮಾತ್ರ ಅದೇ, ಅಂದಿನದೇ: "ಮುಠ್ಠಾಳ! ನಾನು ಗೊತ್ತುಮಾಡಿದ ಹುಡುಗಿಯನ್ನ ಮದುವೆ ಮಾಡ್ಕೊಳ್ಳದೇ ಇದ್ದರೆ..."

ಏನು? ಮನೆಯಿಂದ ಹೊರಕ್ಕೆ ದಬ್ಬುವರೊ?

......ಬಿಸಿಲು ಚುರುಕು ಮುಟ್ಟಿಸಿತು.

ಬೊಂಬಾಯಿಯಲ್ಲಿ ಈಗ ಧೋ ಧೋ ಎಂದು ಮಳೆ ಸುರಿಯುತ್ತಿರಬೇಕು. ಇಲ್ಲಿನ ಮಳೆ ಸೌಮ್ಯ. ಮಧ್ಯಾಹ್ನ ಬಿಸಿಲು. ಸಂಜೆ ತುಸು ಮೋಡ, ಮಳೆ.

ಜಯರಾಮು ತನ್ನ ಕೊಠಡಿಗೆ ಮರಳಿದ.

ಕಾರು ಹೊರಟ ಸದ್ದಾಯಿತು.

ತಮ್ಮ ಆಫೀಸಿಗೋ ಸಚಿವಾಲಯಕ್ಕೋ ಸವಾರಿ ಹೋಗುತ್ತಿರಬೇಕು.

......ಜಯರಾಮು ಆಕಳಿಸಿ ಮೈಮುರಿದ.

ಮಲಗಿದರೆ ಒಂದು ಕ್ಷಣದಲ್ಲಿ ನಿದ್ದೆಹತ್ತಬಹುದು ತನಗೆ. ಅಲ್ಲ–ಬೊಂಬಾಯಿಯಿಂದ ಮರಳಿದ ಮೇಲೆ ತಾನು ಮಾಡಿದ ನಿದ್ದೆಗೆ ಒಂದು ಲೆಕ್ಕವಾದರೂ ಇದೆಯೆ ಅಂತ? ನಿದ್ರಿಸಿ ಮೈಮರೆತರೆ ತನ್ನನ್ನು ಕಾಡುವ ಸಮಸ್ಯೆಗಳೇನು ಮರೆಯಾಗುತ್ತವೆಯೆ?

......ಕೆಳಗಡೆ ಹೋಗಿಬರೋಣವೆಂದು, ಜಯರಾಮು ಇಳಿದ.

ಸಾಹುಕಾರರನ್ನು ಕಳುಹಿಸಿಬಂದ ಶಾಂತಮಲ್ಲಪ್ಪ, ಚಿಕ್ಕ ಧಣಿಯರನ್ನು ನೋಡಿ ಹಲ್ಲುಕಿಸಿದ.

ಜಯರಾಮು ನಸುನಕ್ಕು,

"ಯಾವುದು ಶಾಂತಮಲ್ಲಪ್ಪನವರ ಆಫೀಸುರೂಮು?"

–ಎಂದು ಕೇಳಿದ.

"ಬನ್ನಿ, ಈ ಕಡೆ ಬನ್ನಿ."

ಕಳೆದ ಇಪ್ಪತ್ತು ವರ್ಷಗಳಿಂದ ಜಯರಾಮುವನ್ನು ಶಾಂತಮಲ್ಲಪ್ಪ ಬಲ್ಲವನಾದರೂ ಹತ್ತರ ಹುಡುಗ ಮೂವತ್ತರ ಯುವಕನಾದುದನ್ನು ಕಣ್ಣಾರೆ ಕಂಡವ

ನಾದರೂ ಏಕವಚನದಿಂದ ಎಂದೂ ಆತ ಸಾಹುಕಾರರ ಮಗನನ್ನು ಸಂಬೋಧಿಸಿದವನಲ್ಲ.

"ಕೂತ್ಕೊಳ್ಳಿ,"

—ಎಂದ ಶಾಂತಮಲ್ಲಪ್ಪ, ತನ್ನ ಕುರ್ಚಿಯನ್ನು ತೋರಿಸಿ.

ಜಯರಾಮು ನಿಂತೇ ಮಾತು ಮುಂದುವರಿಸಿದ:

"ಈಗ ಕೆಲಸ ಜಾಸ್ತೀನೊ ಕಮ್ಮೀನೊ ?"

"ಕಮ್ಮಿಯಾಗೋದೂಂತ್ಲು ಉಂಟೆ ಜಯಣ್ಣ? ನೀವು ಲೈನೇ ಬೇರೆ ಮಾಡ್ಬಿಟ್ರಿ. ಇಲ್ಲದೇ ಹೋಗಿದ್ರೆ ಸಾಹುಕಾರ್ರ ಜವಾಬ್ದಾರೀನೆಲ್ಲ ಇಷ್ಟೊತ್ತಿಗೆ ನೀವು ವಹಿಸ್ಕೊಬಹುದಾಗಿತ್ತು."

"ಹಾಗಾದರೆ ನಿಮಗೆ ಕೆಲಸ ಹೆಚ್ಚು ಅನ್ನಿ."

"ಕತ್ತೆಗೆ ಗೊತ್ತಾಗುತ್ಯೆ ಅದೆಲ್ಲ ? ಅಗಸ ಎಷ್ಟು ಭಾರ ಹೇರಿದರೂ ಒಂದೇನೆ ! ಇನ್ನು ಹೆದರಿಕೆ ಇಲ್ಲ."

"ಏನದು ?"

"ದುಡಿದು ದುಡಿದು ಕಾಯಿಲೆ ಬಿದ್ರೆ ನೀವಿದ್ದೀರಿ !"

"ಅಪ್ಪಯ್ಯ ನಿತ್ಯ ಆಫೀಸಿಗೆ ಹೋಗಿ ಬರ್‍ತಾರೆ, ಅಲ್ವೆ ?"

"ಒಂದು ಘಂಟೆ ಹೊತ್ತು ಅಲ್ಲಿರ್‍ತಾರೆ. ಪತ್ರವ್ಯವಹಾರವೆಲ್ಲ ಆ ಆಫೀಸಿನಿಂದ್ಲೇ. ಒಬ್ಬ ಸ್ಟೆನೋ-ಟೈಪಿಸ್ಟ್ ಇದಾನೆ. ರಿಸೆಪ್ಷನಿಸ್ಟ್ ಒಬ್ಳು, ಕ್ಲಾರ್ಕೊಬ್ಬ, ಮ್ಯಾನೇಜರೊಬ್ಬ. ನನ್ನದೆಲ್ಲಾ ಏನಿದ್ರೂ ಮನೆವಾರ್ತೆಗೇ ಸಂಬಂಧಿಸಿದ್ದು ಅನ್ನಿ. ಅಲ್ಲಿನ ಸಂಸಾರವೇ ದೊಡ್ಡದು."

"ತ್ಯಾಗರಾಜರಿರೋದರಿಂದ ಕಾನೂನಿನ ತೊಂದರೆ ಏನೂ ಬರೋದೇ ಇಲ್ಲ."

ಶಾಂತಮಲ್ಲಪ್ಪ ಕ್ಷಣ ಸುಮ್ಮನಿದ್ದು, ಅಂದ:

"ಅವರು ಮಹಾ ಬುದ್ಧಿವಂತ ಜಯಣ್ಣ."

ಅಷ್ಟರಲ್ಲಿ ಹೊರಗೆ "ಸಾರ್" ಎಂದುದು ಕೇಳಿಸಿತು.

ಶಾಂತಮಲ್ಲಪ್ಪ ಕಿಟಿಕಿಯ ಎಡೆಯಿಂದಲೇ,

"ಯಾರದು ?"

—ಎಂದು ಪ್ರಶ್ನಿಸಿದ.

"ನಾನು ಚಿಕ್ಕಣ್ಣ. ಅಮ್ಮಾವ್ರು ಈಗ ಎಲ್ಲಾದ್ರು ಓಗ್ತಾರಾ?"

"ಯಾಕೊ? ಕಾರು ಬಿಡೋಕೆ ಆಶೆಯಾಗ್ತಿದೆಯೇನೊ?"

"ಅಂಗಲ್ಲ. ಓಗೋದಿಲ್ಲಾಂತಾದ್ರೆ ನಾನು ಒಸಿ ಊಟಮಾಡಿ ಬರ್ತೀನಿ."

"ಕೆಲಸ ಸಿಗ್ತೂಂತ ಗೆಣೇರಿಗೆ ಹೇಳಿ ಬರ್ಬೇಕೇನೊ? ಹೋಗು. ಅರ್ಧ ಘಂಟೆಯೊಳಗೆ ಬಂದ್ಬಿಡು. ಸಾಹುಕಾರ್ರು ಬರೋ ಹೊತ್ಗೆ ಇಲ್ಲಿ ಹಾಜರಿರ್ಬೇಕು. ನಾಳೆಯಿಂದ ಬುತ್ತಿ ಕಟ್ಕೊಂಡು ಬಾ. ಹೆಂಡ್ತಿ ಮಕ್ಕಳಿದಾರೇನೊ?"

"ಇಲ್ಲ."

"ಪುಣ್ಯವಂತ."

"ಊಟ ಇಲ್ಲೇ......"

"ನಾನು ಹೇಳಿದಷ್ಟು ಮಾಡು. ನಾಲ್ಕು ದಿವಸ ಬುತ್ತಿ ಕಟ್ಕೊಂಡ್ಬಾ. ಒಂದಿಷ್ಟು ಸಾರು ಕೊಡೀಂತ ಹಿತ್ತಿಲಬಾಗಿಲಲ್ಲಿ ಕೇಳ್ತಿರು. ಆ ಮೇಲೆ ಇಲ್ಲೇ ಊಟಕ್ಕಿಡ್ತಾರೆ. ಹೋಗು."

ಚಿಕ್ಕಣ್ಣ ಸಂತುಷ್ಟನಾಗಿ ಅಲ್ಲಿಂದ ಕಂಬಿಕಿತ್ತ.

ಶಾಂತಮಲ್ಲಪ್ಪನ ಮಾತು ಕೇಳಿ ಅಪ್ರತಿಭನಾದ ಜಯರಾಮು ಅಂದ:

"ಹೊಸ ಆಳೂಂತ ಕಾಣುತ್ತೆ. ಊಟ ಇಲ್ಲೇ ಹಾಕ್ಬಹುದಿತ್ತಲ್ಲ."

"ಮೊದಲ್ನೇ ದಿವಸವೇ ಸತ್ಕಾರ ಮಾಡಿದ್ರೆ ತಲೆ ಮೇಲೆ ಕುಂತ್ಕೊಂಡ್ಬಿಡ್ತಾರೆ, ಜಯಣ್ಣ. ಈತ ಡ್ರೈವರ್. ಚಿಕ್ಕ ಕಾರು ಓಡ್ಸೋಕೆ......"

ತೇಲುವ ಕಣ್ಣಾಲಿಗಳಿಂದ ಜಯರಾಮುವನ್ನು ನೋಡಿ ಶಾಂತಮಲ್ಲಪ್ಪ ಮತ್ತೂ ಒಂದು ಮಾತು ಸೇರಿಸಿದ:

"ಸದ್ಯದಲ್ಲೇ ಶುಭಕಾರ್ಯ ಇರುತ್ತೇಂತ ಸಾಹುಕಾರ್ರು ಅಂದ್ರು......"

ಜಯರಾಮು ಗಾಂಭೀರ್ಯ ತಳೆದು,

"ಹಾಗೇನು?"

—ಎಂದ.

ಕ್ಷಣ ತಡೆದು,

"ನಿಮಗೆಷ್ಟು ಮಕ್ಳು?"

—ಎಂದು ಕೇಳಿದ.

"ನಾಲ್ಕು ಹೆಣ್ಣು, ಒಂದು ಗಂಡು. ಕಡೇದು ಅಂತ ಕಾಣುತ್ತೆ. ಪರಮಾತ್ಮನ ಲೀಲೆ. ಮೊದಲ್ನೇಯವಳಿಗೆ ವರ ನೋಡಿದೀನಿ. ಉಳಿದ ಮೂವರೂ

ಸ್ವಲ್ಪ ದೊಡ್ಡವರಾಗ್ಲಿ, ಒಟ್ಗೇ ಮಾಡ್ಬಿಡೋಣ–ಅಂದ್ರು ಸಾಹುಕಾರ್ರು; ಎಲ್ಲ ಭಾರ ಅವರ ಮೇಲೆ ಹಾಕಿದೀನಿ. ನನ್ನದೇನಿದೆ?"

"ಅಂತು ಜೀವನದಲ್ಲಿ ಸಂತೃಪ್ತಿ ಕಂಡಿದೀರಿ, ಅಲ್ವೆ?"

"ಸಾಹುಕಾರ್ರು ಇಪ್ಪತ್ತು ರೂಪಾಯಿಂದ ಶುರುಮಾಡಿದ್ರು. ಈಗ ಇನ್ನೂರು ಕೊಡ್ತಿದಾರೆ. ಮನೆಗೆ ಹೋಗಿ ಬರೋದಕ್ಕೆ ಹಳೇ ಸೈಕಲು ಕೊಡಿಸಿದಾರೆ. 'ನಿನ್ನ ಸಹಾಯಕ್ಕೆ ಒಬ್ಬಿಬ್ರನ್ನ ನೇಮಿಸಬಹುದಾಗಿತ್ತು. ಆದರೆ ಎಂಥವರು ಸಿಗ್ತಾರೋ ಯಾರಿಗೆ ಗೊತ್ತು? ನಿನ್ನೊಬ್ಬನ ಬಿಟ್ಟು ಯಾರನ್ನೂ ಒಳಗೆ ಸೇರ್ಸೋಕೆ ನನಗೆ ಮನಸ್ಸಿಲ್ಲ' ಅಂದ್ರು ಸಾಹುಕಾರ್ರು, ಮೊನ್ನೆ. ಅವರ ವಿಶ್ವಾಸ ದೊಡ್ಡದು. ಯಾರೂ ಬೇಡಿ–ಅಂದ್ಬಿಟ್ಟೆ."

ಅಷ್ಟರಲ್ಲಿ ಫೋನ್ ಕರೆಯಿತು. ಶಾಂತಮಲ್ಲಪ್ಪ ಅದರ ಬಳಿಗೆ ಧಾವಿಸಿದ. ಜಯರಾಮು ಒಳಗಡೆಗೆ ನಡೆದ.

ಭಟ್ಟ ಪೂಜೆ ಮುಗಿಸಿ ಅಡುಗೆಮನೆಯಲ್ಲಿ ನಿತ್ಯಕರ್ಮಗಳಲ್ಲಿ ನಿರತನಾಗಿದ್ದ. ಪೂಜೆಯಾದ ಮೇಲೆ ಕಮಲಮ್ಮ ಒಬ್ಬರೇ ದೇವರ ಮುಂದೆ ಕುಳಿತಿರುವುದು ಪದ್ಧತಿ. ಒಮ್ಮೊಮ್ಮೆ ಭಗವಂತನ ಧ್ಯಾನ. ಒಮ್ಮೊಮ್ಮೆ ಅಂತರ್ಮುಖಿಯಾಗಿ ತನ್ನ ಇರುವಿಕೆಯನ್ನು ಕುರಿತು ಚಿಂತಿಸುತ್ತ ಕುಳಿತಿರುವುದು. ಅಂತೂ ಅಲ್ಲಿಂದ ಏಳುವುದರೊಳಗಾಗಿ ಅವರ ಕಣ್ಣುಗಳು ತೋಯ್ದು ಬಿಡುತ್ತಿದ್ದುವು. ಮನಸ್ಸಿಗೆ ಒಂದಿಷ್ಟು ಶಾಂತಿ ದೊರೆಯುತ್ತಿತ್ತು.

ಜಯರಾಮು ಒಳಗೆ ಬಂದಾಗ ದೇವರಮನೆಯಿಂದ ಕಮಲಮ್ಮ ಅದೇ ಆಗ ಹೊರಬೀಳುತ್ತಿದ್ದರು. ಪ್ರಶಾಂತವಾಗಿದ್ದ ಅವರ ದುಂಡಗಿನ ಮುಖದಲ್ಲಿ ಅಪೂರ್ವ ಸೊಬಗಿತ್ತು. ನರೆಗೂದಲೂ ಒಂದು ತೆರನಾದ ಶೋಭೆ ನೀಡಿತ್ತು. ಯೌವನದಲ್ಲಿ ತನ್ನ ತಾಯಿ ಎಷ್ಟೊಂದು ಲಾವಣ್ಯವತಿಯಾಗಿದ್ದಿರಬೇಡ!–ಎಂದುಕೊಂಡ ಜಯರಾಮು.

"ಜಯಾಗೆ ಊಟ ಹೋಯ್ತೋ ಇಲ್ಲವೋ" ಎಂದು ಗೊಣಗುತ್ತ, ಒಳದಿಕ್ಕಿಗೆ ತಿರುಗಿ, ಭಟ್ಟನನ್ನು ಉದ್ದೇಶಿಸಿ,

"ಡಬ್ಬದವನು ಬಂದ್ನೆ?"

–ಎಂದು ಗಟ್ಟಿಯಾಗಿ ಕಮಲಮ್ಮ ಕೇಳಿದರು.

"ಬರೋ ಹೊತ್ತು. ತುಂಬಿಸಿ ಇಟ್ಟಿದೀನಿ,"

–ಎಂದ ಭಟ್ಟ.

"ನನ್ನ ಮನೆಗೆ ಬರ್ತೀಯೇನೊ?"

–ಎಂದರು ಕಮಲಮ್ಮ, ಮಗನನ್ನು ಕುರಿತು.

ಇಂಥ ಹಾಸ್ಯೋಕ್ತಿಯನ್ನಾಡಲು ತಾಯಿ ಸಮರ್ಥಳಿರುವಳಲ್ಲಾ ಎಂದು ಜಯರಾಮುಗೆ ಸಂತೋಷವಾಯಿತು.

"ನಡಿಯಮ್ಮಾ,"

–ಎಂದ ಆತ.

ಕಮಲಮ್ಮನ ಮಂಚವಿದ್ದ ಕೊಠಡಿಯೇ ಆ ಮನೆಯೊಳಗಿನ ಮನೆ.

ಹಾಸಿಗೆಯನ್ನು ಅವರು ಸುರುಳಿಸುತ್ತಿ ಇಟ್ಟಿದ್ದರು. ಮಂಚದ ಹಲಗೆಗಳ ಮೇಲೆ ಗುರುತಿನ ಅಂಕೆಗಳಿದ್ದುವು; ಒಂದು, ಎರಡು, ಮೂರು......

"ಕೂತ್ಕೊ."

ಜಯರಾಮು ಮಂಚದ ಒಂದು ಮೂಲೆಯಲ್ಲಿ ಕುಳಿತ. ಹಾಸಿಗೆಯ ಸುರುಳಿಗೆ ಕಮಲಮ್ಮ ಒರಗಿಕೊಂಡರು.

ಮಗನೊಡನೆ ಬಹಳ ಮಾತನಾಡಬೇಕು–ಎನಿಸಿತು ಕಮಲಮ್ಮನಿಗೆ.

ಅವರು ಕೇಳಿದರು:

"ಬೊಂಬಾಯಿ ಸಮಾಚಾರ ಹೇಳು ಮಗು. ಅದೇನು ಡಿಗ್ರಿ ನೀನು ಸಂಪಾದ್ಸಿರೋದು? ಎಮ್ಮೆಸ್ ಅಂತ್ಲೆ? ಏನು ಹಾಗಂದ್ರೆ? ಯಾವ ಯಾವ ಕಾಯಿಲೇನ ನಿನ್ಕೈಲಿ ಗುಣಪಡಿಸೋಕಾಗುತ್ತೆ?"

ಮಾತಿನ ಸರಪಳಿ ನೆಯ್ದು ಅದರ ಮೇಲಿಂದ ಬೊಂಬಾಯಿಯ ಮಾಯಾ ಬಜಾರಿಗೂ ಅಲ್ಲಿನ ಕೆ. ಇ. ಎಂ. ಆಸ್ಪತ್ರೆಗೂ ತನ್ನ ತಾಯಿಯನ್ನು ಜಯರಾಮು ಒಯ್ದ.

ಆ ಕಥೆ ಮುಗಿಯುವುದರೊಳಗೆ ಕಮಲಮ್ಮ ಮತ್ತೆ ಭಾಗ್ಯನಗರವನ್ನು ತಲಪಿದ್ದರು; ಶ್ರೀಸದನದೊಳಗಿನ ತಮ್ಮ ಮನೆಯಲ್ಲಿದ್ದರು.

ಮಗನನ್ನು ಅವರು ಕೇಳಿದರು:

"ನಾಳೆಗೆ ನೀನು ಬಂದು ಒಂದು ವಾರವಾಗುತ್ತೆ, ಅಲ್ವಾ?"

ಒಂದು ವಾರ! ಆ ನಾಳೆಯ ನೆನಪಾಗಿ ಕ್ಷಣ ಕಾಲ ಜಯರಾಮು ಹೆಪ್ಪಾದ.

ಆತನೆಂದ:

"ಹೌದಮ್ಮ."

೬

ಜಯರಾಮು ಕೈಗಡಿಯಾರ ನೋಡಿದ. ಹನ್ನೊಂದು. ಕುಳಿತಿದ್ದವ ನೆದ್ದು ಕೆಳಕ್ಕಿಳಿದ. ತಂದೆಯ ಕೋಣೆಯ ಬಾಗಿಲು ಮುಚ್ಚಿತ್ತು. ಅದರೆದುರು ನಿಂತು, ಮೆಲ್ಲನೆ ತಟ್ಟಿ,

"ಅಪ್ಪಯ್ಯ"

–ಎಂದ.

ಒಳಗಿನಿಂದ ಕೇಳಿಸಿತು:

"ಬಾಗಿಲು ತಳ್ಳು."

ಅಗಣಿ ಹಾಕಿರಲಿಲ್ಲ. ಜಯರಾಮು ಮುಟ್ಟಿದೊಡನೆ ಕದ ತೆರೆದು ಕೊಂಡಿತು. ಶಾಂತಮಲ್ಲಪ್ಪನನ್ನು ಕಾರ್ಯನಿಮಿತ್ತ ಹೊರಕಳುಹಿದ್ದ ಶ್ರೀಕಂ ಠಯ್ಯ–ಮೇಜಿನೆದುರು ಕುಳಿತು ಏನನ್ನೋ ಬರೆಯುತಿದ್ದರು. ಜಯರಾಮು ಮೌನವಾಗಿ ನಿಂತ.

ಕೊನೆಯ ವಾಕ್ಯವನ್ನು ಬರೆದು ಮುಗಿಸಿ, ಪೆನ್‌ಮುಚ್ಚಿ, ಹಾಳೆಯ ಮೇಲೆ ಒಂದು ಪೇಪರ್‌ವೇಯ್ಟ್ ಇರಿಸಿ, ಶ್ರೀಕಂಠಯ್ಯ ತಿರುಗು ಕುರ್ಚಿಯಿಂದ ಅರ್ಧ ವೃತ್ತ ರಚಿಸಿದರು.

ಮಗನ ಮುಖವನ್ನು ನೇರವಾಗಿ ನೋಡಿ,

"ಒಪ್ಪಿಗೆ ತಾನೆ?"

–ಎಂದರು.

ಜಯರಾಮು ಶಾಂತವಾಗಿ,

"ಇಲ್ಲ,"

–ಎಂದು ಉತ್ತರವಿತ್ತ.

"ಬಾಗಿಲು ಮುಚ್ಚು,"

–ಎಂದು ನುಡಿದು ಶ್ರೀಕಂಠಯ್ಯ, ತಮ್ಮ ಎದುರಲ್ಲಿದ್ದ ಸ್ಟೂಲಿನ ಕಡೆ ಬೊಟ್ಟುಮಾಡಿ,

"ಕೂತ್ಕೊ,"

–ಎಂದರು.

ತಮ್ಮ ಆಜ್ಞೆಗಳನ್ನು ಮಗ ಪಾಲಿಸಿದೊಡನೆ,

"ಯಾಕಿಲ್ಲ ?"

–ಎಂದು ಕೇಳಿದರು.

ತನ್ನ ದೀರ್ಘ ವಿವರಣೆಯ ವಾಕ್ಯಗಳನ್ನು ಮನಸ್ಸಿನಲ್ಲಿ ಅದೆಷ್ಟು ಸಾರೆ ರಚಿಸಿರಲಿಲ್ಲ ಜಯರಾಮು ! ಈಗ ಮಾತ್ರ ಒಂದು ಮಾತೂ ಅವನ ನೆನಪಿಗೆ ಬರಲಿಲ್ಲ.

ಪ್ರಶ್ನೆಗೆ ತಾವೇ ಉತ್ತರವನ್ನು ನೀಡಿದರು ಶ್ರೀಕಂಠಯ್ಯ.

"ಈಗ ಮದುವೆಯಾಗೋದು ನಿನಗಿಷ್ಟವಿಲ್ಲ–ಅಷ್ಟೇನೊ ? ಅಥವಾ ಬೇರೆ ನಾದರೂ ಕಾರಣವಿದೆಯೊ ?"

ಗಂಟಲಿನ ನಲ್ಲಿ ಗೊರ ಗೊರ ಶಬ್ದ ಮಾಡಿತು. ಪದಗಳು ಬಳಕ್‌ಬಳಕ್ಕೆಂದು ಧುಮ್ಮಿಕ್ಕಿದುವು:

"ಮೊದಲು ನನ್ನ ಕಾಲ ಮೇಲೆ ನಾನು ನಿಲ್ಬೇಕು."

ಶ್ರೀಕಂಠಯ್ಯ ಮಗನ ಬಿಳಿಯ ಪಾಯಜಾಮವನ್ನು ದಿಟ್ಟಿಸಿದರು.

"ಈ ಕಾಲುಗಳು ಬಾಡಿಗೇದೂಂತ ನನಗೆ ಗೊತ್ತಿರ್ಲಿಲ್ಲ."

ನಲ್ಲಿಯಲ್ಲಿ ನೀರು ಸರಾಗವಾಗಿ ಹರಿಯತೊಡಗಿತು:

"ಜನ್ಮಕೊಟ್ಟು, ಇಷ್ಟು ದೊಡ್ಡವನಾಗಿ ಮಾಡಿದಿರಿ, ಅಪ್ಪಯ್ಯ. ಇನ್ನು ನಾನು ನಿಮಗೆ ಹೊರೆಯಾಗಬಾರ್ದು. ಬದುಕಿನಲ್ಲಿ ನನ್ನ ದಾರಿ ನಾನು ಕಂಡುಕೋಬೇಡವಾ ?"

"ದಾರಿ ! ಜಯೂ ! ಎಲ್ಲಿ ಕಲಿತೆಯೊ ಈ ವೇದಾಂತ? ಶ್ರೀಕಂಠಯ್ಯನ ಮನೆತನದ ದಾರಿ ಒಂದೇ. ಅದು ಸಾಗೋದು ಮೇಲ್ಗಡೆಗೆ...ಇರಲಿ...ಕೇಳಿ ತಿಳ್ಕೊಳ್ಳೋಣ. ಏನು ಸಾಧಿಸ್ಬೇಕೂಂತಿದೀಯಾ ನೀನು ?"

"ಏನಾದರೂ ಸಾಧಿಸ್ತೇನೋ ಇಲ್ಲವೋ ನನಗೆ ತಿಳಿಯದು ಅಪ್ಪಯ್ಯ. ಒಂದು ಮಾತ್ರ ಸ್ಪಷ್ಟವಾಗಿದೆ: ಭೂಮಿಗೆ ಭಾರವಾಗದ ಹಾಗೆ ನಾನು ನಡಕೋಬೇಕು."

"ಅದಕ್ಕೇನು? ರೆಕ್ಕೆ ಕಟ್ಟಿಕೊ. ಹುಂ! ಅಂತೂ ಪುಕ್ಕ ಬಲಿತಿದೇಂತಾಯ್ತು. ......ನಿನ್ನನ್ನ ಈ ಸ್ಥಿತಿಗೆ ತಂದವನಿಗೆ ನಿನ್ನ ಭವಿಷ್ಯದ ವಿಷಯದಲ್ಲಿ ಒಂದು ಮಾತು ಹೇಳುವ ಹಕ್ಕಿಲ್ಲ ಅಂತೀಯಲ್ಲ!"

"ಹಾಗಂದೆನೆ ಅಪ್ಪಯ್ಯ? ಅಗತ್ಯವಾಗಿ ಹೇಳಿ. ಕೊನೆಯ ತೀರ್ಮಾನ ಮಾತ್ರ ನನಗೆ ಸಂಬಂಧಿಸಿ ಇನ್ನು ನಾನೇ ಮಾಡ್ಬೇಕು."

ಶ್ರೀಕಂಠಯ್ಯನವರ ದೃಷ್ಟಿಯನ್ನು ಮೋಡ ಕವಿಯಿತು. ಧ್ವನಿ ಬಿರುಕು ಬಿಟ್ಟಿತು.

"ಈ ವರೆಗೆ ನಾನು ಜೀವ ತೇಯದೇ ಇದ್ದಿದ್ರೆ ನಿನ್ನ ಬಿ.ಎಸ್‌ಸಿ, ಎಂ.ಬಿ., ಬಿ.ಎಸ್ಸು, ಎಂ.ಎಸ್ಸು—ಎಲ್ಲಾ ಆಗ್ತಿತ್ತು ಅಂದ್ಕೊಂಡೆಯೇನೊ? ಲಕ್ಷಾಂತರ ಜನರ ಹಾಗೆ ನೀನೂ ಎಲ್ಲಿಯೋ ಜವಾನನೋ ಗುಮಾಸ್ತೆಯೋ ಆಗ್ತಿದ್ದೆ; ಅಥವಾ ಭಿಕಾರಿಯಾಗಿ ಬೀದಿ ಅಲೀತಿದ್ದೆ."

"............"

ಮಗನ ಮೌನವನ್ನು ತನ್ನ ಗೆಲುವೆಂದು ಅಪಾರ್ಥಮಾಡಿಕೊಂಡರು ಶ್ರೀಕಂಠಯ್ಯ.

"ಇಲ್ಲಿ ಕೇಳು. ಬೇಕಿದ್ದರೆ ನಾನು ಮಿನಿಸ್ಟರಾಗಬಹುದಿತ್ತು. ಆ ಸುಖ ಅವರಿಗೇ ಇರಲಿ ಅಂತ ಅದರ ತಂಟೆಗೆ ಹೋಗಿಲ್ಲ. ಆದರೆ ಅವರ ಕೂಡೆ ನಮ್ಮ ಸಂಬಂಧ ಅಗತ್ಯ. ಮಂತ್ರಿಮಂಡಲ ಎಷ್ಟೇ ಸಲ ಬದಲಾದರೂ ಸದಾಶಿವಯ್ಯ ಸ್ಥಿರವಾಗಿ ಸಚಿವಸ್ಥಾನದಲ್ಲೇ ಇರುವಂಥ ಕುಳ. ಅವನಿಂದ ನಮಗಾಗುವ ಪ್ರಯೋಜನ ಅಷ್ಟಿಷ್ಟಲ್ಲ."

"ನಿಮಗೆ ಲಾಭವಾಗುತ್ತೇಂತ ನಾನು ಮದುವೆಗೆ ಒಪ್ಪಲೆ?"

"ನನಗೆ ಲಾಭ? ನನ್ನ ಲಾಭ ಬೇರೆ ನಿನ್ನದು ಬೇರೆಯೇನೊ?"

"ಅಂಥ ಸಂಬಂಧದಿಂದ ದೊಡ್ಡವನಾಗೋದು ನನಗೆ ಬೇಕಿಲ್ಲ."

"**ನನಗೆ** ಬೇಕು, ಮೂರ್ಖ!"

ಶ್ರೀಕಂಠಯ್ಯನವರ ಸಹನೆ, ಹೊರೆ ಅತಿಯಾಯಿತೆಂದು ತುಯ್ದಾಡಿತು.

ಜಯರಾಮು ಉಗುಳು ನುಂಗಿದ. ಈ ಸಂವಾದದ ಮುಕ್ತಾಯ ಎಂದಿಗೆ? —ಎಂದು ಅವನ ಮನಸ್ಸು ಗೋಳಾಡಿತು.

ಒಂದು ಕ್ಷಣ ಅಂಗೈಯಿಂದ ಮುಖ ಮುಚ್ಚಿ, ಹುಬ್ಬುಗಳನ್ನು ಬೆರಳುಗಳಿಂದ ತೀಡಿ, ಧ್ವನಿ ಬದಲಿಸಿ ಶ್ರೀಕಂಠಯ್ಯ ಅಂದರು:

"ನನಗೆ ವಯಸ್ಸಾಗುತ್ತ ಬಂತು. ಯಾರು ಶಾಶ್ವತ ಈ ಭೂಮಿಯ ಮೇಲೆ? ನಿನ್ನ ಅಮ್ಮನೂ ಮೊದಲಿನ ಹಾಗಿಲ್ಲ. ನಿನಗೂ ಜಯಾಗೂ ಮದುವೆಯಾಯ್ತು ಅಂದರೆ ನಮಗೆಷ್ಟೋ ಸಮಾಧಾನ."

ಯಾವುದೋ ಗವಾಕ್ಷಿ ತೆರೆದಂತಾಗಿ ಗಾಳಿಗೋಸುಗ ಚಡಪಡಿಸುತ್ತ ಜಯರಾಮು ನುಡಿದ:

"ಜಯಾದು ಮೊದಲಾಗಲಿ. ಒಂದೆರಡು ವರ್ಷ ಬಿಟ್ಕೊಂಡು–"

"ಹುಚ್ಚ! ಸರಿಯಾದ ಸಂಬಂಧ ಕುದುರಿದ ಮೇಲೆ ತಾನೆ ಮದುವೆ?"

ಸರಿಯಾದ ಸಂಬಂಧ ಅಂದರೆ, ಯಾವನಾದರೂ ಲಕ್ಷಾಧೀಶನ ಏಕಮಾತ್ರ ಪುತ್ರ. ಜಯರಾಮು ತಿಳಿಯನೆ?

"ಅದು ನಿಮ್ಮಿಷ್ಟ, ಅಪ್ಪಯ್ಯ. ನನ್ನ ಮಟ್ಟಿಗೆ ಒತ್ತಾಯಿಸ್ಬೇಡಿ."

"ಮೇಲಕ್ಕೆ ಬರಬೇಕು ಅನ್ನೋ ಮಹತ್ವಾಕಾಂಕ್ಷೆಯೂ ಇಲ್ವಲ್ಲೋ ನಿನಗೆ? ನನ್ನ ಹೊಟ್ಟೇಲಿ ನೀನು ಹ್ಯಾಗೆ ಹುಟ್ಟಿದೆ ಅಂತೀನಿ. ಫಾರೀನ್‌ಗೆ ಹೋಗಬೇಕು ಅಂತಲೂ ಅನಿಸೊಲ್ವೆ?"

"ಅದು ಬಹಳ ಮುಖ್ಯ ಅಂತ ನನಗೆ ತೋರೋದಿಲ್ಲ. ನಾನು ದುಡಿದು ಸಂಪಾದಿಸಿ ಒಂದಿಷ್ಟು ಉಳಿಸಿದ ಮೇಲೆ ಹೋಗಿಬರ್ತಿನಿ."

"ನಿನ್ನ ತಲೆ! ಈಗಿಂದೀಗ ಒಂದಲ್ಲ ಹತ್ತು ಸ್ಕಾಲರ್‌ಷಿಪ್ ಕೊಡಿಸೋ ಅಧಿಕಾರ ಸದಾಶಿವಯ್ಯನಿಗಿದೆ. ಕೈಯಿಂದ ಬಿಡಿ ಕಾಸೂ ಖರ್ಚುಮಾಡದೆ ಫಾರೀನ್ ಡಿಗ್ರಿಗಳನ್ನ ನೀನು ತಗೊಂಡು ಬರಬಹುದು. ಕಿಷ್ಕಿಂಧೆಯಲ್ಲಿ ಮಾತ್ರವಲ್ಲ ಇಡೀ ಹಿಂದೂದೇಶದಲ್ಲೇ ನೀನು ಅಪ್ರತಿಮನಾಗಬಹುದು. ಕೇಳಿಸ್ತೇನು?"

"ಕ್ಷಿಪ್ರ ದಾರಿ ನನಗೆ ಬೇಡ, ಅಪ್ಪಯ್ಯ. ನೇರ ದಾರೀಲಿ ನಾನು ನಡೀಬೇಕು."

"ಬೂಟಾಟಿಕೆ ಮಾತು. ನಾನೇನು ಅಡ್ಡ ದಾರೀಲಿ ನಿಂತು ತಲೆಹೊಡೆದು ಸಂಪಾದಿಸಿದೆನೆ ಈ ಆಸ್ತೀನ?"

"ನಿಮ್ಮ ವಿಷಯ ಬೇರೆ, ಅಪ್ಪಯ್ಯ. ನಾನು ಡಾಕ್ಟರು."

"ಡಾಕ್ಟರಂತೆ! ಅಂದರೇನು ಎರಡು ಕೋಡಿರುತ್ತೋ? ಡಾಕ್ಟರಿಕೆಯ ಮುಂಡಮೋಚ್ತು. ಎಂ.ಬಿ.,ಬಿ.ಎಸ್ಸಿಗೆ ನಿನಗೆ ಸೀಟು ಕೊಡಿಸಿದ್ದು ನನ್ನ ತಪ್ಪು. ಎಂ.ಎಸ್‌.ಗೆ ಕಳಿಸಿದ್ದಂತೂ ಇನ್ನೂ ದೊಡ್ಡ ತಪ್ಪು. ಈಗ ನೀನು ಭಾರೀ ಡಾಕ್ಟ್ರು ಅಲ್ವೆ?–ಸರ್ಜನು!"

ಜಯರಾಮು ಕ್ಷಣಕಾಲ ತಲೆತಗ್ಗಿಸಿ ನೆಲ ನೋಡಿದ. ಬಳಿಕ ಉಸಿರೆಳೆದು ತಂದೆಯನ್ನು ದಿಟ್ಟಿಸಿ ಅಂದ:

"ಅಪ್ಪಯ್ಯ, ನೀವು ಬೇಕಿದ್ದರೆ ನನಗೆ ಎರಡೇಟು ಹೊಡೀರಿ. ಇಷ್ಟು ವರ್ಷ ಅನ್ನ ವಿದ್ಯೆ ಕೊಟ್ಟ ನಿಮಗೆ ಆ ಹಕ್ಕಿದೆ. ಆದರೆ ಈ ಮದುವೆಯ ವಿಷಯದಲ್ಲಿ ಮಾತ್ರ ನನ್ನನ್ನ ಒತ್ತಾಯಿಸ್ಬೇಡಿ."

"ಹುಡುಗೀನ ನೋಡಿದಿಯೇನೊ?"

"ಇಲ್ಲ."

"ನಾನು ನೋಡಿದೀನಿ. ಬಣ್ಣ ಬಿಳುಪಲ್ಲ. ರೂಪದಲ್ಲಿ ಅಪ್ಸರೆಯಲ್ಲ. ಹೇಳಿಕೊಳ್ಳುವಂಥ ವಿದ್ಯಾವಂತೆಯಲ್ಲ. ಆದರೆ ಏನಾಯ್ತು? ಅವಳು ಸದ್ಗುಣಿ ಕಣೋ. ತಾನು ಹೊಕ್ಕ ಮನೇನ ಬೆಳಗ್ತಾಳೆ. ಅದನ್ನ ಲಕ್ಷ್ಮಿಯ ಆವಾಸ ಸ್ಥಾನವಾಗಿ ಮಾಡ್ತಾಳೆ. ಜಾತಕಗಳನ್ನ ನೋಡಿ ಜೋಯಿಸರು ಏನಂದರು ಗೊತ್ತೆ?—ಇದು ಅಪೂರ್ವ ಜೋಡಿ, ಅಂತ."

"ನನ್ನ ಜಾತಕ ಆ ರೀತಿ ತೋರಿಸಬೇಕಾದ ಅಗತ್ಯವಿತ್ತೆ ಅಪ್ಪಯ್ಯ?"

"ಯಾಕೆ? ಹುಟ್ತಾ ನೀನೇ ತಗೊಂಡ್ಬಂದ್ಯೋ ಆ ಜಾತಕನ? ನಾನು ಬರೆ ಸಿದ್ದು ಕಣೋ ಅದನ್ನ."

"ಇರಬಹುದು. ಜಾತಕ ನೀವೇ ಇಟ್ಕೊಳ್ಳಿ."

"ಒಟ್ನಲ್ಲಿ, ಒಂದೊಂದೇ ಇಟ್ಟಿಗೆ ಹೊತ್ತು ತಂದು ನಾನು ಕಟ್ಟಿದ ಮನೇನ ಒಂದೇ ನಿಮಿಷದಲ್ಲಿ ಕೆಡವಬೇಕೂಂತ ಮಾಡಿದೀ, ಅಲ್ವೇನೊ?"

"ಅಂಥ ಯಾವ ದುರಾಗ್ರಹವೂ ನನಗಿಲ್ಲ."

"ಮುಂದೆ ನೀನು ಹೀಗಾಗ್ತೀ ಅಂತ ನನಗೆ ಗೊತ್ತಿದ್ದಿದ್ದರೆ ಇಷ್ಟೊಂದು ಸಹಸ್ರ ರೂಪಾಯಿ ವ್ಯರ್ಥ ಖರ್ಚು ಮಾಡ್ತಿರ್‍ಲಿಲ್ಲ."

ಮಾತನಾಡುತ್ತಿದ್ದ ಶ್ರೀಕಂಠಯ್ಯ ಒಮ್ಮೆಲೆ ಅಧೀರರಾದರು. ತಮ್ಮೊಳಗೇನೋ ಕುಸಿದು ಬಿದ್ದಂತೆ ಅವರಿಗೆ ಅನಿಸಿತು. ಕೊನೆಗೂ ಸೋಲಾಗಿಯೇ ಹೋಯಿತೆ ತಮಗೆ ಎಂದು ಅವರು ವ್ಯಥಿತರಾದರು. ಭಾವೋದ್ವೇಗದಿಂದ ಅವರ ಮೂಗು ಕುಣಿಯಿತು. ಮೀಸೆ ಅಲುಗಿತು.

ಅವರ ಕುರ್ಚಿ ಸರ್ರೆಂದು ಮೇಜಿನತ್ತ ತಿರುಗಿತು. ಎಡ ಮುಷ್ಟಿಯಿಂದ ಅವರು ಮೇಜನ್ನು ಬಲವಾಗಿ ಗುದ್ದಿ ಕೂಗಾಡಿದರು:

"ಜಗ್ಗಾ !"

ಜಗಲಿಯ ಮರೆಯಲ್ಲಿ ಜಗ್ಗ ನಿಂತಿದ್ದ, ಒಳಗಿನಿಂದ ಬರುತ್ತಿದ್ದ ಮಾತುಕತೆಗೆ ಕಿವಿಗೊಡುತ್ತ. ತಕ್ಷಣವೇ 'ಓ' ಎಂದು ಅಲ್ಲೇ ಇದ್ದೆ ಅಂತ ತೋರಿಸಿಕೊಳ್ಳುವುದೆ?

ಕರೆ ಮತ್ತೆ ಬಂತು:

"ಏ ಜಗ್ಗಾ!"

ಈಗ ಆತ ಒಳಕ್ಕೆ ಕಾಲಿರಿಸಿ ಶ್ರೀಕಂಠಯ್ಯನವರ ಕೊಠಡಿಯ ಬಾಗಿಲಿನೆದುರು ನಿಂತು ಮೆಲ್ಲನೆ ಕೆಮ್ಮಿದ.

ಜಯರಾಮು ಕುಳಿತಲ್ಲಿಂದ ಎದ್ದು ಬಾಗಿಲು ತೆರೆದ, ತಾನಿನ್ನು ಹೋದರೂ ಹೋಗಬಹುದು ಎಂದು ಯೋಚಿಸುತ್ತ.

ಅದನ್ನು ಗಮನಿಸಿದ ಶ್ರೀಕಂಠಯ್ಯ ಅಂದರು:

"ಇಲ್ಲೇ ಇರು."

ಜಗ್ಗನತ್ತ ದೃಷ್ಟಿ ಹಾಯಿಸಿ ಅವರು ನುಡಿದರು:

"ನಾನು ಕರೆದೆ ಅಂತ ಒಳಗೆ ಹೇಳು."

ಈ ಕರೆ ಕಮಲಮ್ಮನಿಗೆ ಅನಿರೀಕ್ಷಿತವಾಗಿರಲಿಲ್ಲ. ಹೊರಗಿನ ಕೊಠಡಿಯಿಂದ ಕೇಳಿ ಬರುತಿದ್ದ ಮಾತುಗಳನ್ನು ಏಕಾಗ್ರತೆಯಿಂದ ಆಲಿಸುತ್ತಿದ್ದ ಅವರು, ತಮ್ಮ ಪತಿ "ಜಗ್ಗಾ !" ಎಂದೊಡನೆಯೇ ಎದ್ದು ನಿಂತಿದ್ದರು.

ಈಗ ತಾವೇ ಜಗ್ಗನಿಗಿದಿರಾಗಿ, ಪತಿಯ ಕೊಠಡಿಯತ್ತ ಬಂದು ಒಳಗೆ ಕಾಲಿರಿಸಿದರು. ಅವರ ಎದೆಗುಂಡಿಗೆ ಡವಡವನೆ ಹೊಡೆದುಕೊಂಡಿತು. ಕಂಕುಳಡಿಗಳು ಬೆವರತೊಡಗಿದುವು. ಕಾಲುಗಳು ಕಂಪಿಸಿದುವು. ಅವರು, ತೆರೆದ ಬಾಗಿಲ ಹಲಿಗೆಗೆ ಒರಗಿ ನಿಂತರು.

ಜಗ್ಗ ಹೊರಗಿದ್ದುದನ್ನು ಕಂಡ ಶ್ರೀಕಂಠಯ್ಯ,

"ಹೋಗಾಚೆ!"

—ಎಂದರು.

ಪತ್ನಿಯ ಕಡೆ ನೋಡಿ ಗಾಯಗೊಂಡ ಹುಲಿಯಂತೆ ಅವರು ಗರ್ಜಿಸಲಾರಂಭಿಸಿದರು:

"ಕಿವಿಕೊಟ್ಟು ಕೇಳು. ನಿನ್ನ ಮುದ್ದುಮಗ, ಸದಾಶಿವಯ್ಯನವರ ಮಗಳು ಬೇಡ ಅಂತಿದಾನೆ. ಅವರಿಗೆ ಕೊಟ್ಟಿದ್ದ ಮಾತನ್ನ ಈ ಮುಠ್ಠಾಳನಿಗೋಸ್ಕರ

ನಾನು ಮುರೀಬೇಕು. ನನ್ನ ಮಾನವನ್ನ ಮೂರು ಪೈಸೆ ಬೆಲೆಗೆ ಮಾರ್‍ತಿದಾನಲ್ಲ ಈತ! ಸಮಾಜದಲ್ಲಿ ಇನ್ನು ಹ್ಯಾಗೆ ನಾನು ತಲೆ ಎತ್ತಿ ನಡೀಲಿ? ನನ್ನ ಹೊಟ್ಟೆ ಉರಿಸೋ ಇವನು ನನ್ನ ಮಗನೆ? ನನಗೆ ಹುಟ್ಟಿದವನೆ? ಇಂಥವನು ಇದ್ದರೇನು? ಸತ್ತರೇನು?"

ಕೊನೆಯ ಪದಗಳ ಸ್ಫೋಟದ ಸದ್ದಡಗುವುದಕ್ಕೆ ಮೊದಲೇ ಕಮಲಮ್ಮ ಚೀರಿದರು:

"ಅಯ್ಯೋ!"

ಚೀರುತ್ತ ಅವರು ಕೆಳಕ್ಕೆ ಉರುಳಿಬಿದ್ದರು.

ಹೆಂಡತಿಯ ತಲೆ ತನ್ನ ಪಾದಕ್ಕೆ ತಗಲಿದೊಡನೆ ಶ್ರೀಕಂಠಯ್ಯ ಹೌಹಾರಿ ಎದ್ದು ಕಣ್ಣರಳಿಸಿ ನೆಲನೋಡಿದರು.

"ಅಮ್ಮಾ!"

—ಎನ್ನುತ್ತ ಜಯರಾಮು, ತಾಯಿ ಬೀಳುತ್ತಲೇ ಆಕೆಯ ಬಳಿ ಮಂಡಿಯೂರಿದ.

ಶ್ರೀಕಂಠಯ್ಯ ಬುಸುಗುಟ್ಟುತ್ತ ಕೂಗಾಡಿದರು:

"ಏನಾಯ್ತು? ಏನಾಯ್ತು—ಅಂದೆ!"

"ಜಗ್ಗಾ!"

—ಎಂದು ಕರೆದ ಜಯರಾಮು.

ಶ್ರೀಕಂಠಯ್ಯ ಕೆರಳಿ ಅಂದರು:

"ಏನೋ ಅದು? ಏನಾಯ್ತೊ?"

"ಅಮ್ಮನಿಗೆ ಪ್ರಜ್ಞೆ ತಪ್ಪಿದೆ. ಕಾಣಿಸೋದಿಲ್ವೆ?"

ಕಮಲಮ್ಮ 'ಅಯ್ಯೋ!' ಎಂದಾಗ, 'ಸಾಹುಕಾರರು ಅವರಿಗೆ ಹೊಡೆದಿರಬಹುದು'—ಎಂದುಕೊಂಡಿದ್ದ ಜಗ್ಗ. ಜಯರಾಮು ತನ್ನ ಹೆಸರು ಹಿಡಿದು ಕರೆದಾಗ ಸಾಹುಕಾರರ ಭಯದಿಂದ ಹೋಗಲೋ ಬೇಡವೋ ಎಂದು ಅನುಮಾನಿಸಿದರೂ, ಕುತೂಹಲ ತಡೆಯಲಾಗದೆ ಒಳಕ್ಕೆ ನೆಗೆದ. ದೃಶ್ಯ ಕಂಡಾಗ, 'ಗ್ಯಾನ ತಪ್ಪಿಬಿದ್ದವ್ರೆ' ಎಂದು ಅರ್ಥಮಾಡಿಕೊಂಡ; ಗಾಬರಿಪಟ್ಟ.

ಜಯರಾಮು ಅಂದ:

"ಹಿಡಿ, ಜಗ್ಗ."

ಸಾಹುಕಾರರೆಡೆ ನೋಡದೆಯೆ ಜಗ್ಗ, ಕಮಲಮ್ಮನ ಕಾಲುಗಳ ಕೆಳಗೆ ತನ್ನ ತೋಳುಗಳನ್ನಿರಿಸಿದ. ಜಯರಾಮುವೂ ಜಗ್ಗನೂ ಕಮಲಮ್ಮನನ್ನು ಹಿಡಿದೆತ್ತಿದರು. ಜಯರಾಮು ಮುಂದಾದ. ಸರಸರನೆ ತಾಯಿಯ ಕೊಠಡಿಯನ್ನು ಹೊಕ್ಕು ಪಲ್ಲಂಗದ ಮೇಲೆ ಆಕೆಯನ್ನು ಮಲಗಿಸಿದ.

"ಓಡು, ನೀರು ತಗೊಂಡ್ಬಾ."

ಜಗ್ಗ ನೀರು ತರಲು ಧಾವಿಸಿದೊಡನೆಯೇ ಸುದ್ದಿ ಬಂಗಲೆಯ ಮುಂಭಾಗಕ್ಕೂ ಹಿಂಭಾಗಕ್ಕೂ ಹಬ್ಬಿತು. ಮಾರಣ್ಣ, ಅಜೀಜ್, ಚಿಕ್ಕಣ್ಣ ಜಗಲಿಯಲ್ಲೂ ಲಚ್ಚಿ, ಭಟ್ಟ ಹಜಾರದಲ್ಲೂ ನೆರೆದರು. ಹಿತ್ತಲ ಬಾಗಿಲಿಂದ ದೇವಕ್ಕನೂ ಓಡಿ ಬಂದಳು.

ಪಾದಗಳು ನೆಲದೊಳಕ್ಕೆ ಬೇರುಬಿಟ್ಟಿದ್ದುವೆಂಬಂತೆ ಮಿಸುಕದೆ ನಿಂತ ಶ್ರೀಕಂಠಯ್ಯ ಇದೇನಾಗಿಹೋಯಿತು ಎಂದು ಯೋಚಿಸಲೆತ್ನಿಸಿದರು. ಹಣೆ ನೆರಿಗೆ ಕಟ್ಟಿ, ಹಲವು ಸಮಾನಾಂತರ ರೇಖೆಗಳನ್ನು ರಚಿಸಿತು.

ಪತ್ನಿಯನ್ನು ಆಕೆಯ ಕೊಠಡಿಗೆ ಒಯ್ದುಮೇಲೆ ಅವರ ಕಾಲುಗಳು ಕದಲಿದುವು. ತಾವೂ ಅತ್ತ ನಡೆದರು. ಬಾಗಿಲು ತಲಪಿದೊಡನೆ, ಆಳವಾದ ಗವಿಯಿಂದ ಹೊರಟಂತೆ ಕೇಳಿಬಂದ ಧ್ವನಿಯಲ್ಲಿ ಅವರೆಂದರು:

"ಡಾಕ್ಟರನ್ನ ಕರಿಸ್ಬೇಕಾ ?"

ತನ್ನ ಮಗ ಡಾಕ್ಟರೆಂಬುದು ಅವರಿಗೆ ನೆನಪಿದ್ದಂತೆ ತೋರಲಿಲ್ಲ. ಇದ್ದರೂ ಆತನ ವೈದ್ಯಕೀಯ ಸಾಮರ್ಥ್ಯದಲ್ಲಿ ಅವರಿಗೆ ವಿಶ್ವಾಸವಿರುವುದು ಶಕ್ಯವಿರಲಿಲ್ಲ.

"ಬೇಡ,"

–ಎಂದ ಜಯರಾಮು, ತಾಯಿಯ ಕಣ್ಣುಗಳನ್ನು ಬಿಡಿಸಿ ಪರೀಕ್ಷಿಸುತ್ತ. ನಾಡಿ ಬಡಿತವನ್ನೂ ಆತ ನೋಡಿದ. ಜಗ್ಗ ತಂದ ತಣ್ಣೀರನ್ನು ಮುಖಕ್ಕೆರಚಿದ.

ಕಮಲಮ್ಮ ಕಣ್ಣು ತೆರೆದರು. ಅವರ ವಕ್ಷಸ್ಥಳ ಏರಿಳಿಯಿತು. ಮಗನ ಮುಖವನ್ನು ಅವರು ಕಂಡರು. ಅದು ಮಾರ್ದವತೆ ತುಂಬಿದ ನೋಟ. ಅಲ್ಲಿಂದ ದೃಷ್ಟಿ ಶ್ರೀಕಂಠಯ್ಯನವರ ಮೇಲೆ ತಂಗಿತು. ಅವರ ಗುರುತು ಹತ್ತಿದೊಡನೆ ದೃಷ್ಟಿ ಬಿರುಸಾಯಿತು. ಹುಬ್ಬುಗಳು ಗಂಟಿಕ್ಕಿದುವು.

ಜನ್ಮಜನ್ಮಾಂತರಗಳ ವೈರಿಯನ್ನು ಕಂಡಂತೆ ತಮ್ಮ ಪತಿಯನ್ನು ಕಮಲಮ್ಮ ದಿಟ್ಟಿಸಿದರು.

ನಾಲಿಗೆಯಿಂದ ತುಟಿಗಳನ್ನು ಸವರಿ ಕಮಲಮ್ಮ ಏಳಲೆತ್ನಿಸಿದರು.

ಜಯರಾಮು ಅಂದ:

"ಮಲಕೋ ಅಮ್ಮ. ಇನ್ನೂ ಸ್ವಲ್ಪ ಹೊತ್ತು ಮಲಕೊಂಡಿರು."

"ನನಗೆ ಏನೂ ಆಗಿಲ್ಲ. ಏನೂ ಆಗಿಲ್ಲ ಜಯೂ."

ಕಮಲಮ್ಮ, ಮಗನ ಕೈ ಬೆನ್ನಿಗೆ ಆಸರೆಯಾಗಿರಲು, ಮೆಲ್ಲನೆ ಎದ್ದು ಕುಳಿತರು.

ಶ್ರೀಕಂಠಯ್ಯನ ಒಸಡುಗಳ ಸ್ಪಂದನದಿಂದ ಅವರ ಕೆನ್ನೆಯ ಸ್ನಾಯುಗಳು ಮಿಸುಕಿದುವು. ಮುಖದ ಮೇಲಿನ ಕಲಕು ಭಾವಗಳು ಕಾಠಿನ್ಯದ ಛಾಯೆಗೆ ಎಡೆಮಾಡಿಕೊಟ್ಟುವು. ಏನೂ ಆಗಿಲ್ಲ ಎನ್ನುತ್ತ ಹೆಂಡತಿ ಏಳುತ್ತಲಿದ್ದುದನ್ನು ಕಂಡೊಡನೆ ಅವರು ರಭಸದಿಂದ ತಮ್ಮ ಕೊಠಡಿಯತ್ತ ಸಾಗಿದರು. ಹೆಬ್ಬಾಗಿ ಲಲ್ಲಿದ್ದ ಚಾಕರರು ಧಣಿಯನ್ನು ನೋಡುತ್ತಲೇ ಗೋಡೆಗಳ ಮರೆಯಲ್ಲಿ ಅವಿತು ಕೊಳ್ಳಲೆತ್ನಿಸಿದರು.

"ಇಲ್ಲೇನು ಮಾಡ್ತಿದೀರೋ? ನಡೀರಿ ಹೊರಗೆ!"

—ಈ ಗದರಿಕೆಯ ಬೆನ್ನಲ್ಲಿ ಬೇರೆಯೂ ಒಂದು ಆಜ್ಞೆ ಬಂತು:

"ಅಜೀಜ್! ಕಾರು ತಗೊಂಡ್ಬಾ!"

ಜಯರಾಮು, ಈಗ ಹೆಚ್ಚು ಸಮೀಪಕ್ಕೆ ಬಂದಿದ್ದ ಭಟ್ಟನತ್ತ ನೋಡಿ,

"ಒಂದು ಲೋಟ ಬಿಸಿ ಕಾಫಿ ಮಾಡಿ ತನ್ನಿ,"

—ಎಂದ.

ಕಮಲಮ್ಮನೆಂದರು:

"ನನಗೇನೂ ಬೇಡ, ಜಯೂ."

ಮತ್ತೂ ನಿಂತಿದ್ದ ಭಟ್ಟನನ್ನು ಕುರಿತು,

"ಮಾಡಿ ತನ್ನಿ,"

—ಎಂದು ಧ್ವನಿ ಏರಿಸಿ ಜಯರಾಮು ಆದೇಶವಿತ್ತ.

ಮುಂದೆ ಕೆಲವೇ ನಿಮಿಷಗಳಲ್ಲಿ ಶ್ರೀಕಂಠಯ್ಯ ತಮ್ಮ ನಿವಾಸದಿಂದ ಹೊರ ಬಿದ್ದರು. ಕವಲುದಾರಿ ಹತ್ತಿರಕ್ಕೆ ಬಂದಂತೆ, 'ಎಲ್ಲಿಗೆ ಬುದ್ಧಿ?' ಎಂದು ಅಜೀಜ್ ಕೇಳಿದ. ಉತ್ತರ ಬರಲಿಲ್ಲ. ಮತ್ತೂ ಎರಡು ಬಾರಿ ಅದೇ ರೀತಿ ಪ್ರಶ್ನಿಸಿದ. ಆಗಲೂ ಸಾಹುಕಾರರು ಮೌನವಾಗಿದ್ದುದನ್ನು ಕಂಡು, ಕವಲು ದಾರಿ ಹತ್ತಿರವಾದಂತೆ ಕಾರಿನ ವೇಗವನ್ನು ಕಡಮೆಗೊಳಿಸಿದ.

ಗೇರ್ ಬದಲಾದೊಡನೆ ಧ್ಯಾನಸಮಾಧಿಯಿಂದ ಶ್ರೀಕಂಠಯ್ಯ ಎಚ್ಚತ್ತರು. ಅಸ್ಪಷ್ಟವಾಗಿ ಕೇಳಿಸಿದ್ದ ಪ್ರಶ್ನೆ ಕಿವಿಯ ಬಳಿ ಈಗ ಫೋನಿನ ಕರೆಗಂಟೆಯಂತೆ ಮೊರೆಯಿತು.

"ಕೋದಂಡಪುರಕ್ಕೆ."

ಸಾಹುಕಾರರ ಧ್ವನಿ ಕೇಳಿದೊಡನೆ ಅಜೀಜನ ತುಟಿಗಳ ಮೇಲೆ ಮುಗುಳು ನಗೆಯೊಂದು ಮೂಡಿ ಮಾಯವಾಯಿತು. ಸರಿಯಾದ ದಿಕ್ಕಿನಲ್ಲಿ ಕಾರನ್ನು ಓಡಿಸುತ್ತ, ಸಾಹುಕಾರರ ಮುಂದಿನ ಕೆಲ ಘಂಟೆಗಳ ಚಟುವಟಿಕೆಯನ್ನು ಅಪೂರ್ವ ತೃಪ್ತಿಯಿಂದ ಆತ ಕಲ್ಪಿಸಿಕೊಂಡ.

ಶ್ರೀಕಂಠಯ್ಯನವರ ತಪ್ತ ಮನಸ್ಸು ಲವಲೇಶವೂ ತಣಿದಿರಲಿಲ್ಲ. ಮಗನನ್ನು ದಾರಿಗೆ ತರಬೇಕೆಂದು ಆದಿನ ತಾವು ನಡಸಿದ ಯತ್ನ ನೀರ ಮೇಲಣ ಹೋಮವಾಯಿತಲ್ಲ? ಪ್ರಜ್ಞೆ ಮರಳಿದೊಡನೆ ಹೆಂಡತಿ ತಮ್ಮೆಡೆಗೆ ಬೀರಿದ ನೋಟ ಕಂಡು ಅವರು ಕ್ರುದ್ಧರಾಗಿದ್ದರು, ವಿಸ್ಮಿತರೂ ಆಗಿದ್ದರು. ಸುಮಾರು ನಾಲ್ಕು ದಶಕಗಳಿಂದ ಆ ಜೀವದೊಡನೆ ತಮ್ಮನ್ನು ಬಿಗಿದಿದ್ದ ತಂತಿಯೊಂದು ಸವೆದು ಸವೆದು ಆ ನಿಮಿಷದಲ್ಲಿ ಕೊನೆಯುಸಿರುಬಿಟ್ಟಂತೆ ಅವರಿಗೆ ಅನಿಸಿತು. ತಾವು ಅಷ್ಟೊಂದು ಸಂಪಾದಿಸಿಯೂ ಏನು ಪ್ರಯೋಜನ? ಇಷ್ಟು ವರ್ಷ ಜತೆಯಾಗಿ ಬಾಳುವೆ ಮಾಡಿದ ಮೇಲೂ ಹೆಂಡತಿ ತಮ್ಮನ್ನು ತಿಳಿದುಕೊಳ್ಳಲಾರದೇ ಹೋದಳಲ್ಲ? ಇದ್ದೊಬ್ಬನೇ ಮಗ ತಮಗೆ ಹಿತವನಾಗಲಿಲ್ಲವಲ್ಲ? ತಮ್ಮದೂ ಒಂದು ಬದುಕೆ?

ಅವಾಚ್ಯ ಪದವೊಂದು ಶ್ರೀಕಂಠಯ್ಯನವರ ನಾಲಿಗೆಯ ತುದಿಗೆ ಬಂದಿತು. ಅದನ್ನು ಮೌನವಾಗಿ ನುಡಿದು, ಗಟ್ಟಿಯಾಗಿ ಅವರು 'ಥುತ್!' ಎಂದರು.

ಭಾಗ್ಯನಗರದ ಜನದಟ್ಟಣೆಯ ಒಂದು ಭಾಗ ಕೋದಂಡಪುರ. ಅಲ್ಲಿಯ ನಾಮಮಾತ್ರ ಉದ್ಯಾನದ ತಿರುವಿನಲ್ಲಿ ಕಾರುಗಳು ತಂಗುವ ಕಡೆ ಅಜೀಜ್ ವಾಹನವನ್ನು ನಿಲ್ಲಿಸಿದ. ಶ್ರೀಕಂಠಯ್ಯ ವಾಕಿಂಗ್‌ಸ್ಟಿಕ್ಕನ್ನು ಕಾರಿನೊಳಗೇ ಬಿಟ್ಟು ಇಳಿದರು. ಪಾಕೀಟಿನಿಂದ ಒಂದು ರೂಪಾಯಿ ತೆಗೆದು ಅಜೀಜನ ಕೈಯಲ್ಲಿಟ್ಟು ಅವರೆಂದರು:

"ಹೋಟೆಲಲ್ಲಿ ಊಟಮಾಡಿ ಬಂದು ಇಲ್ಲೇ ಕಾದಿರು."

ಮೂರು ಮಾರುಗಳಾಚೆ ಅಂಗಡಿಬೀದಿ. ಅದನ್ನು ಶ್ರೀಕಂಠಯ್ಯ ದಾಟಿ, ಅತ್ತಿತ್ತ ನೋಡದೆ, ನೇರವಾಗಿ ಒಂದು ಸಂದಿಯನ್ನು ಹೊಕ್ಕರು.

ಸಾಹುಕಾರರು ಕಣ್ಮರೆಯಾಗುವವರೆಗೂ ಅಜೀಜನ ದೃಷ್ಟಿ ಅವರನ್ನು ಹಿಂಬಾಲಿಸಿತು.

ಸಂದಿಯಲ್ಲಿ ತುಸು ದೂರ ನಡೆದ ಬಳಿಕ ಒಂದು ಮನೆಯ ಕದ ತಟ್ಟಿ,

"ಬಾಗಿಲೂ......"

—ಎಂದು ಶ್ರೀಕಂಠಯ್ಯ ನುಡಿದರು.

ಬಿಸಿಲ ಬೇಗೆ ತಾಳಲಾಗದೆ ಬಟ್ಟೆಕಳಚಿ, ತಣುಪು ನೀರಿನ ಕೊಳಕ್ಕೆ ಧುಮುಕಲು ಅವರು ಸಿದ್ಧರಾಗಿದ್ದರು.

ಅಜೀಜ್ ಸ್ವಲ್ಪ ಹೊತ್ತು ಕಾರಿನಲ್ಲೇ ಕುಳಿತ. ಶ್ರೀಸದನದಲ್ಲಿ ಆತ ಸಾಕ್ಷಿಯಾಗಿದ್ದಂತಹ ಘಟನೆ ಹಿಂದೆಂದೂ ಅಲ್ಲಿ ನಡೆದಿರಲಿಲ್ಲ. ಮನುಷ್ಯನಲ್ಲಿ ಎಷ್ಟು ಹಣವಿದ್ದರೇನು ಸುಖವಿಲ್ಲದ ಮೇಲೆ?—ಎಂದು ಅಜೀಜ್ ವಿಚಾರಕ್ಕೀಡಾದ. ಸಾಹುಕಾರರು, ಕಮಲಮ್ಮ, ಅವರ ಮಗ—ಎಲ್ಲರ ಬಗೆಗೂ ಅವನಿಗೆ ಕನಿಕರವೆನಿಸಿತು.

ಸಾಹುಕಾರರು ಶ್ರೀಮಂತರು. ಒಂದು ಕೋಟಿ ರೂಪಾಯಿ ಇದ್ದೀತೆ, ಅವರಲ್ಲಿ? 'ಕರೋಡ್' ಅಂದರೆ ಎಷ್ಟು? ಲಕ್ಷಗಳಂತೂ ಹಲವಿರಬಹುದು. ಹತ್ತರ ನೋಟು ನೂರಿದ್ದರೆ ಒಂದು ಸಾವಿರ. ಅಂಥ ನೂರು ಕಟ್ಟುಗಳಿದ್ದರೆ ಒಂದು ಲಕ್ಷ. ಇಂಥದು ಏನಿಲ್ಲವೆಂದರೂ ಹತ್ತಾರಾದರೂ ಇರಬಹುದು. ಅಷ್ಟೇನಾ? ಇಲ್ಲ; ಜಾಸ್ತಿ ಇದ್ದೀತು. ಶಾಂತಮಲ್ಲಪ್ಪನಿಗೂ ಗೊತ್ತಿರುತ್ತದೋ ಇಲ್ಲವೊ. ಬಂಗಲೆಯಲ್ಲಿ ಮಾತ್ರ ಹಣವಿಟ್ಟಿರಲಾರರು. ಶಾಂತಮಲ್ಲಪ್ಪನ ತಿಜೋರಿಯಲ್ಲಂತೂ ಬಂಗಲೆಯ ತಿಂಗಳ ಖರ್ಚಿಗೆ ಸಾಕಾಗುವಷ್ಟೇ ಹಣವಿದ್ದೀತು. ಆ ಖರ್ಚೂ ಕಡಮೆಯೇನಲ್ಲ...

ಸುರಿಯಲು ಹಣವಿರುವುದರಿಂದಲೇ ಅಲ್ಲವೆ ಸಾಹುಕಾರರೀಗ ಆ ಸಂದಿಯೊಳಗೆ ಹೋದುದು? ಒಂದೆರಡು ಸಲ ತಾವು ಬರುವುದನ್ನು ಮುಂಚಿತವಾಗಿ ತಿಳಿಸಲು ಅವರು ತನ್ನನ್ನು ಕಳುಹಿಕೊಟ್ಟಿದ್ದರು. ತಾನು ಕಂಡವರಲ್ಲಿ ಆ ಚಿಕ್ಕ ವಯಸ್ಸಿನವಳೇ ಇರಬೇಕು ಸಾಹುಕಾರರ ಪ್ರೇಯಸಿ. ಹೆಚ್ಚೆಂದರೆ ಅವರ ಮಗಳ ಪ್ರಾಯವಿದ್ದೀತು. ಈ ಮುದುಕನಿಂದ ಆಕೆಗೆ ಏನು ಸುಖವೊ? ಆ ವೃತ್ತಿಯಲ್ಲಿ ಹಣಕ್ಕೆ ಪ್ರಾಧಾನ್ಯ, ಸುಖಕ್ಕಲ್ಲ. ಎಂಥ ತಮಾಷೆ......

—ಯೋಚಿಸುತ್ತಿದ್ದ ಅಜೀಜ್ ತನ್ನೆದುರಿನ ಕನ್ನಡಿಯಲ್ಲಿ ಸ್ವಲ್ಪ ಸ್ವಲ್ಪವಾಗಿ ಮುಖದ ಬೇರೆ ಬೇರೆ ಭಾಗಗಳನ್ನು ನೋಡಿಕೊಂಡ. ದೂರದಲ್ಲಿ ಹಿಂಬದಿ

ಯಿಂದ ಕಾರೊಂದು ಬರುತಿತ್ತು. ಅಂಬಾಸ್ಸಡರ್. ತನ್ನ ಕಾರಿನ ಹಿಂದೆ ಅದು ನಿಂತಿತು. ಚಾಲಕ, ಭಾಷಾ. ತನ್ನ ಪರಿಚಿತ. ಒಂದು ಸಂಸಾರ ಆ ಕಾರಿನಿಂದಿಳಿದು ಅಂಗಡಿ ಬೀದಿಗೆ ಹೋಯಿತು.

ಅಜೀಜ್ ಕೆಳಕ್ಕಿಳಿದು ತನ್ನ ಗೆಳೆಯನೊಡನೆ ಹರಟೆಗೆ ನಡೆದ. ಅಂತಹ ಹರಟೆಯಲ್ಲಿ ಸಾಹುಕಾರರ ಬಗೆಗೆ ಒಂದು ಮಾತನ್ನೂ ಆಡುವವನಲ್ಲ ಆತ......

......ಮನೆಯಲ್ಲಿ ಪ್ರಜ್ಞೆಮರಳಿ ಬಹಳ ಹೊತ್ತಾದ ಬಳಿಕ ಕಮಲಮ್ಮ ಅಂದರು:

"ನನ್ನ ಸಂಸಾರದ ಗತಿ ಹೀಗಾಯ್ತಲ್ಲೋ ಜಯೂ......"

ರಮಿಸುವ ಧ್ವನಿಯಲ್ಲಿ ಜಯರಾಮುವೆಂದ:

"ನಿನ್ನದಲ್ಲವಮ್ಮ, ಇದು ಸಾಹುಕಾರ ಶ್ರೀಕಂಠಯ್ಯನವರ ಸಂಸಾರ."

ಸ್ವಲ್ಪ ತಡೆದು ಕಮಲಮ್ಮ ಕೇಳಿದರು:

"ನೀನು ಮದುವೆ ಆಗೋದೇ ಇಲ್ವೇನೊ?"

"ಆಗ್ತೀನಮ್ಮ ಆದರೆ ಮಂತ್ರಿಕುಮಾರಿಯನ್ನಲ್ಲ. ನನಗೆ ಒಪ್ಪಿಗೆಯಾದ ಯಾವುದಾದರೂ ಹುಡುಗಿಯನ್ನ ಮಾಡ್ಕೋತೀನಿ."

"ನನ್ನ ಒಂದು ಮಾತು ನಡೆಸ್ಕೊಡು, ಜಯೂ. ಎಲ್ಲಾದರೂ ಒಳ್ಳೇ ಕಡೆ ಬಡವರ ಮನೆ ಹುಡುಗೀನ ನೋಡಿ ಮದುವೆಯಾಗಪ್ಪ."

"ಆಗಲಮ್ಮ."

ಕಮಲಮ್ಮನ ಕಣ್ಣುಗಳು ಅಶ್ರುಭರಿತವಾದುವು. ಸೆರಗಿನಿಂದ ಕಣ್ಣುಗಳನ್ನು ಒತ್ತಿಕೊಂಡು ಅವರೆಂದರು:

"ಇಲ್ಲ. ನಾನು ಅಳೋದಿಲ್ಲ."

ಭಟ್ಟ ಬಂದು ನುಡಿದ:

"ಅಡುಗೆಯಾಗಿದೆ. ಸಾಹುಕಾರ್ರು ಹಾಗೇ ಹೊರಟ್ಹೋದ್ರು. ನೀವು—"

"ಸ್ವಲ್ಪ ತಡೀರಿ. ಆ ಮೇಲೆ ಊಟಮಾಡ್ತೀವಿ,"

—ಎಂದ ಜಯರಾಮು.

ಭಟ್ಟ ಹೋದಬಳಿಕ ಕಮಲಮ್ಮ ಅಂದರು:

"ಇನ್ನೂ ಏನೇನಾಗುತ್ತೊ ಈ ಮನೇಲಿ......"

"ಆಗೋದೇನು? ನನ್ನನ್ನ ಮನೆಯಿಂದ ಹೊರಹಾಕ್ತಾರೆ."

"ಆಗ ಏನ್ಮಾಡ್ತೀಯಾ?"

"ನನ್ನ ಕಾಲಮೇಲೆ ನಾನು ನಿಂತ್ಕೋತೀನಿ."

ನಿಟ್ಟುಸಿರುಬಿಟ್ಟು, ಅಂಗಲಾಚುವ ನೋಟದಿಂದ ಮಗನನ್ನು ದಿಟ್ಟಿಸುತ್ತ ಕಮಲಮ್ಮ ನುಡಿದರು:

"ಇನ್ನು ನಾನು ಇವರ ಜತೆ ಏಗಲಾರೆ, ಜಯೂ. ನೀನು ಈ ಊರಲ್ಲೇ ಇರು, ಅಥವಾ ಬೇರೆ ಊರಿಗೇ ಹೋಗು; ಮನೆಮಾಡಿದಾಗ ನನ್ನನ್ನೂ ಕರ ಕೊಂಡು ಹೋಗಪ್ಪ."

ಜಯರಾಮು ಉತ್ತರಿಸಿದ:

"ಹೂನಮ್ಮ."

೭

ಜಯಶ್ರೀಯ ಬಾಲ್‌ಪೆನ್‌ನಲ್ಲಿ ಮಸಿ ಮುಗಿದಿತ್ತು. ಹೊಸ ಕಡ್ಡಿ ಹಾಕಿಸ ಬೇಕು; ಅಥವಾ, ಹೊಸ ಪೆನ್ ಕೊಳ್ಳಬೇಕು. ಅಣ್ಣನ ಬಳಿ ಎರಡು ಪೆನ್‌ಗಳಿದ್ದು ದನ್ನು ಜಯಶ್ರೀ ಕಂಡಿದ್ದಳು. ಆಕೆಗೆ ಅನಿಸಿತು: ಸದ್ಯಕ್ಕೆ ಅಣ್ಣನದೊಂದು ಪೆನ್ನನ್ನು ಕಾಲೇಜಿಗೆ ಒಯ್ಯಬಹುದಲ್ಲ ತಾನು? ಇದೇನು ಈ ದಿನ ಜಯಣ್ಣ ಬೆಳಗ್ಗೆಯೇ ಹೊರಹೋದ? 'ಎಲ್ಲಿಗೆ?' ಎಂದು ಕೇಳಿದ್ದಕ್ಕೆ 'ಸಾಯಂಕಾಲ ಹೇಳ್ತೀನಿ' ಎಂದು ಉತ್ತರವಿತ್ತ. ಕೈಯಲ್ಲಿ ಒಂದೆರಡು ನೀಳ ಲಕೋಟೆಗಳಿದ್ದುವು. ತನಗೆ ತಿಳಿಯದಹಾಗೆ ಈ ಮನೆಯಲ್ಲಿ ಅನೇಕ ಸಂಗತಿಗಳು ಈಚೆಗೆ ಸ್ವಲ್ಪ ಸಮಯ ದಿಂದ ನಡೆಯುತ್ತಿವೆ. ಒಂದು ವಾರವಾಯ್ತೇನೊ, ಅಮ್ಮ ಪ್ರಜ್ಞೆತಪ್ಪಿ ಬಿದ್ದು ದನ್ನು ಲಚ್ಚಿ ಭೀಕರವಾಗಿ ಬಣ್ಣಿಸಿ. ಆ ಬಣ್ಣನೆಯನ್ನು ಸ್ಮರಿಸಿಕೊಂಡರೆ ಮೈ ಈಗಲೂ ಜುಮ್ಮೆನ್ನುತ್ತದಲ್ಲ! ಅಬ್ಬ! ಅಂತೂ ಜಯಣ್ಣ ಈ ಸಾರೆ ಬೊಂಬಾ ಯಿಯಿಂದ ಬಂದ ಮೇಲೆ ಮನೆಯ ವಾತಾವರಣವೇ ಬದಲಾಗಿದೆ. ತನ್ನೊ ಡನೆ ಬಾಯಿಬಿಟ್ಟು ಈತ ಮಾತನಾಡುವುದಿಲ್ಲ ಯಾಕೆ? ತಾನು ಚಿಕ್ಕ ಹುಡುಗಿ ಎಂದು ತಾತ್ಸಾರ ಇವನಿಗೆ. ತನಗಿಂತ ಈತ ಎಂಟು ವರ್ಷ ದೊಡ್ಡವ ನಿಜ. ಅಂದಮಾತ್ರಕ್ಕೆ ತಾನೇನು ಹುಸುಗೂಸಾದೆನೆ? ಏನಾದರೊಂದು ಮಾಡಿ ತಾನು ಪ್ರಬುದ್ಧೆ ಎಂಬುದನ್ನು ಒಮ್ಮೆ ಜಯಣ್ಣನಿಗೆ ತೋರಿಸಿ ಕೊಡಬೇಕು........ ಎಲ್ಲಿಟ್ಟಿರುವನೊ ಪೆನ್ನು? ಅವನ ಮೇಜಿನ ಮೇಲೆ ಇದ್ದೀತು......

ಜಯಶ್ರೀ ಅಣ್ಣನ ಕೊಠಡಿಗೆ ಹೋದಳು. ಮೇಜು ಬರಿದಾಗಿ ಸ್ವಚ್ಛ ವಾಗಿತ್ತು. ಸ್ಟ್ಯಾಂಡಿನ ಮೇಲೆ ಎರಡು ಮೂರು ಬಟ್ಟೆಬರೆಗಳಷ್ಟೇ ಇದ್ದುವು. ಟ್ರಂಕ್ ಮತ್ತು ಸೂಟ್‌ಕೇಸು ಮಂಚದ ಕೆಳಗಿಂದ ಹೊರಬಂದು, ಗೋಡೆಯ ಬದಿಯಲ್ಲಿ ಅಚ್ಚುಕಟ್ಟಾಗಿ ಒಂದರಮೇಲೊಂದು ವಿರಮಿಸುತ್ತಿದ್ದುವು.

'ಪ್ರಯಾಣಕ್ಕೆ ಸಿದ್ಧತೆಮಾಡಿಕೊಂಡಹಾಗಿದೆಯಲ್ಲಾ......'

ಜಯಶ್ರೀ ಸೂಟ್‌ಕೇಸನ್ನು ತೆರೆದಳು. ಅದರಲ್ಲಿ ಒಂದೆರಡು ಉಡುಪುಗಳೂ ಸಣ್ಣದೊಂದು ಫೈಲೂ ಇದ್ದಿತು. ಮುಚ್ಚಿ ಎತ್ತಿ ಕೆಳಗಿರಿಸಿ [ಸದ್ಯಃ ಭಾರವಿಲ್ಲ !], ಟ್ರಂಕನ್ನು ತೆರೆದಳು. ಒಂದು ಬದಿಯಲ್ಲಿ ಸ್ಟೆತಸ್ಕೋಪು ಕಾಣಿಸಿತು. ಎದ್ದು ನಿಂತು ಸ್ಟೆತಸ್ಕೋಪನ್ನು ಕೊರಳಲ್ಲಿ ಧರಿಸಿ ಮೇಜಿಗೆ ಜೋಡಿಸಿದ್ದ ನಿಲುವುಗನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿದಳು. ಎಂಟು ವರ್ಷಗಳಿಗೆ ಹಿಂದೆ ಜಯರಾಮು ವೈದ್ಯಕೀಯ ಅಧ್ಯಯನ ಆರಂಭಿಸಿದಾಗ, ಆತ ರಜದ ಮೇಲೆ ಮನೆಗೆ ಬಂದಾಗಲೆಲ್ಲ, ತಾನು ಸ್ಟೆತಸ್ಕೋಪನ್ನಿಟ್ಟುಕೊಂಡು ಡಾಕ್ಟರಾಟವಾಡುತ್ತಿದ್ದಳು, ಜಯಶ್ರೀ. ಆಗ ಭಾಗ್ಯನಗರದಲ್ಲಿ ಮೆಡಿಕಲ್ ಕಾಲೇಜಿರಲಿಲ್ಲ. ಈಗಲಾದರೋ ತಾನು ಇಷ್ಟಪಟ್ಟಿದ್ದರೆ ಇಲ್ಲೇ ವೈದ್ಯಕೀಯ ವಿದ್ಯಾರ್ಥಿನಿಯಾಗಬಹುದಿತ್ತು. ತಂದೆ ಒಪ್ಪುತ್ತಿದ್ದರೋ ಇಲ್ಲವೋ. ತನಗೇ ಇಷ್ಟವಿರಲಿಲ್ಲವಾದುದರಿಂದ ತಂದೆಯ ಸಮ್ಮತಿ ಕೇಳುವ ಪ್ರಮೇಯ ಒದಗಿರಲಿಲ್ಲ......

ಜಯಶ್ರೀ ಮತ್ತೆ ಟ್ರಂಕಿನ ಬಳಿಸಾರಿ, ಸ್ಟೆತಸ್ಕೋಪನ್ನು ಒಳಗಿರಿಸಿದಳು. ಉಡುಪುಗಳ ಎರಡು ಸಾಲುಗಳ ಮಧ್ಯೆ ಷೀಫರ್ ಪೆನ್ ಕಾಣಿಸಿತು. ಅದರ ಮಗ್ಗುಲಲ್ಲೊಂದು ಬಾಲ್ ಪೆನ್ ಇತ್ತು. ಅದನ್ನೆತ್ತಿಕೊಳ್ಳುತ್ತಿದ್ದಂತೆ ಉಡುಪುಗಳ ಸಾಲು ಕೈಗೆ ತಗಲಿ, ತಳದಲ್ಲಿ ಬಣ್ಣದ ಪುಸ್ತಕವೊಂದು ಇದ್ದುದು ಕಾಣಿಸಿತು. ['ಜಯಣ್ಣ ಇಷ್ಟು ಭದ್ರವಾಗಿ ಇಟ್ಟುಕೊಂಡಿರೋ ಕಥೆ ಪುಸ್ತಕ ಯಾವುದೋ ತೀನಿ......'] ಅದನ್ನು ಹೊರತೆಗೆದಳು.

LOLITA......

ಯಾವುದಿದು? ಎಲ್ಲಿ ಓದಿದೇನೆ ಇದರ ಬಗ್ಗೆ? ಈ ಹೆಸರಿನದೊಂದು ಫಿಲ್ಮ್ ಬರುತ್ತೆ ಅಂತ ನಳಿನಿ ಹೇಳಿದ್ದಳು, ಅಲ್ಲವೆ? ಅವಳು ನೋಡಿಲ್ಲ ಈ ಕಾದಂಬರಿಯನ್ನು. ರಾಧಿಕಾ ಹತ್ತಿರ ಇದ್ದದ್ದು, ಒಬ್ಬಿಬ್ಬರು ಗೆಳತಿಯರಿಗಷ್ಟೇ ಆಕೆ ಓದಲು ಕೊಟ್ಟದ್ದು, ಇದೇ ಪುಸ್ತಕ. ಅಲ್ಲ, ಜಯಣ್ಣ ತನಗಿದನ್ನು ಕೊಡಲೇ ಇಲ್ಲವಲ್ಲ! ವಿಚಿತ್ರ! ಫಿಲ್ಮ್ ಮಾಡಿದಾರೆ ಅಂದಮೇಲೆ ಪುಸ್ತಕದಲ್ಲಿ ಸ್ವಾರಸ್ಯ ವಿರಲೇಬೇಕು. ಇದನ್ನು ಈಗಲೇ ಓದಿದರೆ ಪಿಕ್ಚರ್ ಬಂದಾಗ ಚೆನ್ನಾಗಿ ಅರ್ಥವಾಗುತ್ತೆ. ಜಯಣ್ಣ ಈ ಪುಸ್ತಕ ತಂದಿರುವುದೆಲ್ಲಿಂದ?

ಟು ಜೆ–ಆರ್, ಫ್ರುಮ್ ಎಲ್... ಜೆ–ಆರ್ ಅಂದರೆ ಜಯರಾಮು. ಹಾಗಾದರೆ ಪುಸ್ತಕ ಅಣ್ಣನದೇ. ಹೊಡೆದುಹಾಕಿರುವ ಹೆಸರು: ಟು ಎಲ್,... ಫ್ರುಮ್ ಎಂ., ಬರೆದಿದ್ದನ್ನು ಹೊಡೆದು ಮತ್ತೊಮ್ಮೆ ಯಾಕೆ ಬರೆದರೊ?

–ಆ ಪುಸ್ತಕವನ್ನು ಕಾಲೇಜಿಗೆ ಒಯ್ಯಲು ನಿರ್ಧರಿಸಿ ಜಯಶ್ರೀ ಟ್ರಂಕನ್ನು ಮುಚ್ಚಿದಳು. ಮೊದಲಿದ್ದಂತೆ ಸೂಟ್‌ಕೇಸನ್ನು ಅದರ ಮೇಲಿರಿಸಿದಳು.

ಅಷ್ಟರಲ್ಲಿ, ಲಚ್ಚಿ ತನ್ನ ಕೊಠಡಿಯ ಕಡೆಗೆ ಹೋಗುತಿದ್ದುದು ಜಯಶ್ರೀಗೆ ಕಂಡಿತು.

ಪುಸ್ತಕವನ್ನೂ ಪೆನ್ನನ್ನೂ ಎದೆಗೆ ಅವಚಿಕೊಂಡು ಹೊರಬರುತ್ತಾ ಆಕೆ ಕೇಳಿದಳು:

"ಏನೇ?"

"ಚಿಕ್ಕರಾಯರ ರೂಮ್ನೊಗದೀರಾ?"

–ಎಂದು ಲಚ್ಚಿ ಕತ್ತು ಕೊಂಕಿಸಿ,

"ಫರಾಳ ರೆಡಿಯಾಗ್ಯೆತಂತೆ,"

–ಎಂದಳು.

"ನಡಿ ಬರ್‍ತೀನಿ."

ಲಚ್ಚಿ ಒಳಗಿಣಕಿ ಕೇಳಿದಳು:

"ಚಿಕ್ಕರಾಯರ ಟರಂಕು ಒರಕ್ಕೆ ಮಡಗವ್ರೆ. ಒಂಟೋಗ್ತಾರಾ ಅಮ್ಮಣ್ಣಿ

ಜಯಶ್ರೀಗೆ ರೇಗಿತು:

"ನಿನಗ್ಯಾತಕ್ಕೆ ಅಧಿಕಪ್ರಸಂಗ? ಹೋಗಿ ಚಿಕ್ಕಣ್ಣಿಗೆ ಹೇಳು, ಕಾರು ತಂದು ನಿಲ್ಸೂಂತ. ಅವನ ಜತೆ ಲಲ್ಲೆಹೊಡೀತಾ ನಿಂತಿರ್ಬೇಡ."

"ನಾ ಯಾಕ್ಹೊಡೀಲಿ ಲಲ್ಲೆ? ಅವನೇನು ನನ್ನ ಮಾಡ್ಕೊಂಡವನಾ?"

"ಥೂ. ನಾಚ್ಕೇನೂ ಇಲ್ವಲ್ಲೇ ನಿಂಗೆ?"

"ಇನ್ನೇನ್ರಮ್ಮಣ್ಣಿ?"

"ನಡಿ–ನಡಿ......"

ಲಚ್ಚಿ ನಕ್ಕಳು.

"ನೀವು ಬೋ ಜಲ್ದಿ ಕೋಪಿಸ್ಕೊಂತೀರಾ. ಚಿಕ್ಕರಾಯರಿಗೆ ಲಗ್ನ ಗೊತ್ತಾಗ್ಯೆತಂತೆ, ಔದ್ರಾ ಅಮ್ಮಣ್ಣಿ?"

ಜಯಶ್ರೀ ಪುಸ್ತಕವನ್ನೂ ಪೆನ್ನನ್ನೂ ತನ್ನ ಮೇಜಿನ ಮೇಲಿರಿಸಿ ಗಡರಿ ನುಡಿದಳು:

"ಲಚ್ಚಿ ! ಇಂಥ ವಿಷಯ ನೀನು ಮಾತಾಡ್ಬಾರ್ದು. ಹೇಳ್ಲಾ ಅಮ್ಮನಿಗೆ?"

"ನಿಮ್ಮ ದಮ್ಮಯ್ಯ. ಬ್ಯಾಡಿ. ಜಗ್ಗ ಯೋಳ್ದ–ಆದಿಕ್ಕೆ......"

"ಏನು ಹೇಳ್ದ ಜಗ್ಗ?"

"ಚಿಕ್ಕರಾಯರಿಗೆ ಉಡುಗಿ ಪಸಂದಾಗ್ನಿಲ್ವಂತೆ......"

"ಆಗ್ಲಿಲ್ಲ! ನಿನ್ನ ಮಾಡ್ಕೋಬೇಕೂಂತಿದಾನೆ ಜಯಣ್ಣ. ಅಬ್ಬ!"

ಲಚ್ಚಿ ಪಿಸಿಪಿಸಿ ನಗುತ್ತ ಜಯಶ್ರೀಯನ್ನು ಹಿಂಬಾಲಿಸಿ ಕೆಳಕ್ಕಿಳಿದಳು......

......ಶ್ರೀಸದನದಿಂದ ಕಾರು ಹೊರಟೊಡನೆಯೆ ಜಯಶ್ರೀ 'ಲೊಲಿಟಾ' ತೆರೆದಳು. ದಾರಿಯುದ್ದಕ್ಕೂ ಡ್ರೈವರ್ ಚಿಕ್ಕಣ್ಣ, ಕಾರಿನ ಕನ್ನಡಿಯಲ್ಲಿ ಕಾಣಿಸುತಿದ್ದ ಜಯಶ್ರೀಯ ಪ್ರತಿಬಿಂಬದೆಡೆಗೆ ಆಗಾಗ್ಗೆ ಕಳ್ಳನೋಟ ಬೀರಿದ.

ಕಾಲೇಜು ಸಮೀಪಿಸಿದಂತೆ ಜಯಶ್ರೀ ಯೋಚಿಸಿದಳು: ತರಗತಿಗಳಿಗೆ 'ಚಕ್ಕರ್' ಹಾಕಿ, ಗ್ರಂಥಭಂಡಾರವನ್ನು ಹೊಕ್ಕು ಅವಿತು ಕುಳಿತು 'ಲೊಲಿಟಾ' ಓದಿದರೆ ಹೇಗೆ? ಆದರೆ ವಿರಾಮದ ವೇಳೆಗೆ ತನ್ನ ರಹಸ್ಯ ಬಯಲಾಗುವ ...ಸವ. ಊಟದ ಕ್ಯಾರಿಯರ್ ಕಂಡಾಗ ನಳಿನಿಗೆ ಆಶ್ಚರ್ಯವಾಗದಿದ್ದೀತೆ? ...ೂ ತಿಳಿಯದಂತೆ ಆಹಾರ ಸ್ವೀಕರಿಸುವುದು ಎಂತು? ಇತರ ಎಷ್ಟೋ ...ಯರಂತೆ ಮೊಸರವಲಕ್ಕಿಯನ್ನೋ ಮೊಸರನ್ನವನ್ನೋ ಪುಟ್ಟ ಕರಂಡಕದಲ್ಲಿ ತಾನೂ ತರುತ್ತಿದ್ದರೆ ಎಷ್ಟು ಚೆನ್ನು. ಆ ಬದಲಾವಣೆಗಾಗಿ ತಾನು ಮಾಡಿದ ಯತ್ನ ವಿಫಲವಾಗಿತ್ತು. ಮನೆಯಲ್ಲೂ ಸ್ವಾತಂತ್ರ್ಯವಿಲ್ಲ ತನಗೆ, ಕಾಲೇಜಿನಲ್ಲೂ ಇಲ್ಲ...... ಸರಿ. ವಿರಾಮದ ತನಕ ತರಗತಿಯಲ್ಲಿದ್ದು ಆ ಮೇಲೆ 'ತಲೆನೋವು' ಎಂದು ತಪ್ಪಿಸಿಕೊಂಡರಾಯಿತು. ನಳಿನಿಯ ಕೈಗೆ ಮಾತ್ರ ಈ ಪುಸ್ತಕ ಈಗ ಬೀಳಬಾರದು. ಅವಳು ಕಸಿದುಕೊಂಡಳೆಂದರೆ ತನ್ನಲ್ಲಿಗೆ ಅದು ಮರಳಿ ಬರುವುದು ಯಾವತ್ತೊ?

ಒಂದು ನೋಟ್ಸ್‌ಬುಕ್ಕಿನೊಳಗೆ 'ಲೊಲಿಟಾ'ವನ್ನು ಬಚ್ಚಿಟ್ಟು, ಇತರ ಪುಸ್ತಕಗಳ ಮಧ್ಯೆ ಆ ಬುಕ್ಕನ್ನಿಟ್ಟು, ಜಯಶ್ರೀ ಕಾರಿನಿಂದಿಳಿದಳು.

ಹುಡುಗಿಯರ ಕಾಲೇಜು. ಜತೆಜತೆಯಾಗಿ ಅಲೆಯುತ್ತಿದ್ದ ವಿದ್ಯಾರ್ಥಿನಿಯರೆಲ್ಲ ಒಬ್ಬರನ್ನೊಬ್ಬರು ಮೀರಿಸುವ ರೂಪಸಿಯರಾಗಿ ಚಿಕ್ಕಣ್ಣನಿಗೆ ಕಂಡರು. ಅವರನ್ನು ಆತ ಕಣ್ಣುತುಂಬ ನೋಡುತ್ತ ಬಂದ ದಾರಿಯಲ್ಲಿ ಮರಳಿದ.

......ಬಹ್ವಂಶ ಹುಡುಗಿಯರಿಗೆ ಉಪನ್ಯಾಸಗಳಿಗಿಂತಲೂ ಉಪನ್ಯಾಸಕರಲ್ಲಿ ಆಸಕ್ತಿ ಹೆಚ್ಚು. ಜಯಶ್ರೀ ಮೆಚ್ಚಿಕೊಂಡಿದ್ದುದು ರಮಾಮಣಿಯನ್ನು, ಆದಿರಾಜನನ್ನು. ಅವರಿಬ್ಬರ ಉಪನ್ಯಾಸಗಳೂ ಆ ಬೆಳಗ್ಗೆ ಇರಲಿಲ್ಲ. ನೋಟ್ಸ್ ಪುಸ್ತಕಗಳಲ್ಲಿ ಇಷ್ಟಬಂದುದನ್ನು ಗೀಚುತ್ತ, ಮುಂದಿನ ಸಾಲುಗಳ ಹುಡುಗಿಯರ ಹೆರಳುಗಳನ್ನು ಅಭ್ಯಸಿಸುತ್ತ, ಜಯಶ್ರೀ ಹೊತ್ತು ಕಳೆದಳು.

ವಿರಾಮದ ವೇಳೆಯಲ್ಲಿ ನಳಿನಿ ಕೇಳಿದಳು:

"ಯಾಕೋ ಒಂಥರಾ ಇದೀಯಲ್ಲೇ......"

ಜಯಶ್ರೀ ಅಂದಳು:

"ತಲೆನೋವು ಕಣೇ."

ಇಬ್ಬರೂ ಜತೆಯಲ್ಲೇ ತುತ್ತು ಊಟಗಳನ್ನು ಮುಗಿಸಿದರು. ತಾನೊಂದು ಅಪೂರ್ವ ಪುಸ್ತಕವನ್ನು ತಂದುದರ ಬಗೆಗೆ ಗೆಳತಿಗೆ ಹೇಳಬೇಕೆಂಬ ತವಕ ಜಯಶ್ರೀಗೆ. ಆದರೆ, ತನ್ನ ಅಪರಾಹ್ನದ ಕಾರ್ಯಕ್ರಮಕ್ಕೆ ಆಕೆ ಅಡ್ಡಿಯಾಗುವಳೆಂಬ ಭಯ.

"ಮನೆಗೆ ಹೋಗ್ತೀಯೇನು?"

"ಹೋಗೋದು ಮೇಲು ಅನಿಸುತ್ತೆ."

"ಫೋನ್‌ಮಾಡಿ ಕಾರು ತರಿಸ್ತೀಯಾ?"

"ಇನ್ನೂ ಒಂದೈದು ನಿಮಿಷ ನೋಡ್ತೀನಿ."

ಮತ್ತೆ ಆರಂಭವಾಗಲಿದ್ದ ಉಪನ್ಯಾಸಕ್ಕೆಂದು ನಳಿನಿ ಹೋದಳು. ಪುಸ್ತಕಗಳನ್ನೆತ್ತಿಕೊಂಡು ಜಯಶ್ರೀ ಹೊರನಡೆದಳು.

ಇಬ್ಬರು ಮೂವರ ಹೊರತಾಗಿ ಗ್ರಂಥಭಂಡಾರ ಬರಿದಾಗಿತ್ತು. ಬಾಗಿಲ ಬಳಿಯ ಕಟಕಟೆಯ ಮೇಲೆ ತನ್ನ ಪುಸ್ತಕಗಳನ್ನಿರಿಸಿ, 'ಲೊಲಿಟಾ'ವನ್ನು ಮರೆ ಮಾಡಿದ್ದ ಟಿಪ್ಪಣಿಪುಸ್ತಕವನ್ನಷ್ಟೇ ಎತ್ತಿಕೊಂಡು, ಕಿಟಿಕಿಯಿಂದ ಬೆಳಕು ತೂರಿ ಬರುತ್ತಿದ್ದ ಒಂದೆಡೆಗೆ ಜಯಶ್ರೀ ಸಾಗಿದಳು.

ಬೆಳಗ್ಗೆ ಕಿವಿ ಮಡಚಿ ಇರಿಸಿದ್ದ ಹತ್ತನೆಯ ಪುಟದಿಂದ ಅವಳ ಓದು ಮುಂದುವರಿಯಿತು.

ಒಂದು ಕ್ಷಣವೂ ನೀರಸವೆನಿಸದ ಪುಸ್ತಕ. ಕಥೆಯುನ್ನರಸುತ್ತ ಪುಟಗಳನ್ನು ಎಗರಿಸಲು ಅವಕಾಶವಿರಲಿಲ್ಲ. ಮಧ್ಯವಯಸ್ಸಿನ ಹಂಬರ್ಟ್ ಮತ್ತು ಬಾಲಿಕೆ

ಲೊ. ಕೆಲವೆಡೆ ಜಯಶ್ರೀಯ ಮುಖ ಕೆಂಪೇರಿತು. ಹೀಗೂ ಆಗುವುದುಂಟೆ ಬದುಕಿನಲ್ಲಿ? ಕಾದಂಬರಿಕಾರ ಚಿತ್ರಿಸಿರುವನೆಂದಮೇಲೆ ಹಾಗಿರಲೇ ಬೇಕು. ಪಾಶ್ಚಾತ್ಯ ಸಮಾಜದಲ್ಲಿ ಇದು ಸಾಮಾನ್ಯ ವಿಷಯವಿದ್ದೀತು. ಆದರೆ ಸಮಾಜ ಶಾಸ್ತ್ರದ ಪ್ರಾಧ್ಯಾಪಕರು ಹೇಳಿಲ್ಲವೆ?–'ಮೂಲತಃ ಮನುಷ್ಯಪ್ರಾಣಿಗಳಲ್ಲಿ ಭೇಧವಿಲ್ಲ......'

ಮುಂದೆ ಕೆಲವೇ ನಿಮಿಷಗಳಲ್ಲಿ ಕಥೆ, ಜಯಶ್ರೀಯ ಜೀವನಕ್ಕಿಂತ ಭಿನ್ನ ವಾದ ಮಾಯಾಲೋಕಕ್ಕೆ ಕಣ್ಣುಕಟ್ಟಿ ಅವಳನ್ನೊಯ್ದಿತು. ಅವಳೀಗ ಚಿಕ್ಕವ ಳಾದಳು. ಲೊ. ಆ ಪಾತ್ರದೊಡನೆ ತಾದಾತ್ಮ್ಯ ಹೊಂದಿ ಮೆಲ್ಲನೆ ಬೆಳೆ ದಳು. ಅವಳ ಮೈ ಬೆವತಿತು. ನೂರು ಕಣ್ಣುಗಳು ತನ್ನನ್ನು ನೋಡುತ್ತಿ ದ್ದಂತೆ ಅವಳಿಗೆ ಭಾಸವಾಯಿತು.

ಮೊದಲ ಭಾಗ ಮುಗಿದಾಗ ಐದು ಹೊಡೆದಿತ್ತು. ಹೊರಗೆ ಕಲರವ. ಗ್ರಂಥಭಂಡಾರದಲ್ಲೂ ಈಗ ಹತ್ತಾರು ಜನ ಇದ್ದರು. ತನ್ನ ಸಹಪಾಠಿಗಳು ಬರದಿದ್ದರೆ ಸಾಕು ಎಂದುಕೊಂಡು ಜಯಶ್ರೀ ಮುಂದಕ್ಕೆ ಓದಿದಳು.

ಮತ್ತೂ ಸ್ವಲ್ಪ ಹೊತ್ತಿನ ಬಳಿಕ, ಕಾರು ಬಂದಿದೆಯೇನೊ–ಎಂದು ಕಿಟಿಕಿ ಯಿಂದ ಹೊರನೋಡಿದಳು. ನಳಿನಿಯದು ನಿಂತಿತ್ತು. ಬೇರೆಯೂ ಒಂದೆರ ಡಿದ್ದುವು. ಚಿಕ್ಕಣ್ಣ ತಡಮಾಡಿದನಲ್ಲ–ಎನಿಸಿತು. ಇಲ್ಲೇ ಓದುತ್ತ ಕಾದು ಕುಳಿತರಾಯಿತು ಎಂದುಕೊಂಡಳು.

ಮುಂದಿನ ಎರಡು ಅಧ್ಯಾಯಗಳನ್ನೋದಿದ ಮೇಲೆ ಮತ್ತೊಮ್ಮೆ ಜಯಶ್ರೀ ಹೊರನೋಡಿದಳು. ಕಾರುಗಳಿರಲಿಲ್ಲ. ಹುಡುಗಿಯರ ಸಂಖ್ಯೆ ಕಳೆಗಿತ್ತು. ಚಿಕ್ಕಣ್ಣ ಬಂದು ತನ್ನನ್ನು ಕಾಣದೆ ಹೊರಟೇಹೋದರೊ? ಜಯಶ್ರೀ ಎದ್ದಳು. ಅಟ್ಟಣಿಗೆಯಿಂದ ತನ್ನ ಪುಸ್ತಕಗಳನ್ನೆತ್ತಿಕೊಂಡು ಹೊರಬಿದ್ದು ಕಾಲೇ ಜಿನ ಮಹಾದ್ವಾರದತ್ತ ನಡೆದಳು. ಮ್ಯಾಟಿನಿ ನೋಡಿ ಎದ್ದು ಬಂದವಳಂತೆ, ಟೆನ್ನಿಸ್ ಆಡಿ ಬಳಲಿದವಳಂತೆ, ಆಗಿತ್ತು ಆಕೆಯ ಮನಃಸ್ಥಿತಿ. ಹೀಗೆ ಮಾಡ ಬಾರದಿತ್ತು, ತಲೆನೋವಿನ ನಾಟಕವಾಡಬಾರದಿತ್ತು–ಎನಿಸಿತು.

ಹತ್ತು ನಿಮಿಷ ಅತ್ತ ಇತ್ತ ಜಯಶ್ರೀ ನಡೆದಳು. ಕಾರಿನ ಸುಳಿವಿಲ್ಲ.

ಫೋನ್‌ಮಾಡೋಣವೆಂದು ಕಾಲೇಜಿನ ಆಫೀಸಿಗೆ ಬಂದಳು. ಒಬ್ಬಿಬ್ಬರು ಗುಮಾಸ್ತೆಯರು ಅಲ್ಲಿದ್ದರು. ತಾನು ಸರಿಯಾಗಿ ಸೀರೆಯುಟ್ಟುಕೊಂಡಿಲ್ಲ, ಆ

ಇಬ್ಬರೂ ತನ್ನನ್ನೇ ನೋಡುತ್ತಿದ್ದಾರೆ–ಎಂದು ಆಕೆಗೆ ತೋರಿತು.

"ಮನೆಗೆ ಸ್ವಲ್ಪ ಫೋನ್ ಮಾಡ್ಬೇಕಿತ್ತು."

"ಮಾಡಿ."

ತನಗೆ ನೆನಪಿರುವ ನಂಬರ್.

"ಹಲೋ......ಯಾರು ಲಚ್ಚೀನಾ? ನಾನು ಜಯಶ್ರೀ......ಕಾರು ಕಳಿಸಿಲ್ವಾ?......ಆಗಲೇ ಹೊರಟ್ತೆ? ಒಂದು ಘಂಟೆಯಾಯ್ತೆ?......ಇಲ್ಲಿಗೆ ಬಂದು ತಲಪ್ಲೇ ಇಲ್ಲ......ಅಪ್ಪಯ್ಯ ಬಂದರಾ...? ಸರಿ......ಇನ್ನೂ ಸ್ವಲ್ಪ ಹೊತ್ತು ನೋಡ್ತೀನಿ......ಕಾರು ಬರದೇ ಇದ್ದರೆ ಬಸ್ನಲ್ಲಿ ಬರ್ತೀನಿ......ಅಮ್ಮನಿಗೆ ಹೇಳು......"

ರಿಸೀವರ್ ಕೆಳಗಿರಿಸಿದಾಗ ಜಯಶ್ರೀಗೆ ಥಟ್ಟನೆ ಹೊಳೆಯಿತು: ಯಾತಕ್ಕೆ ಬಸ್ಸು? ತ್ಯಾಗರಾಜನ್‌ಗೆ ಯಾಕೆ ಫೋನ್‌ಮಾಡಬಾರದು? ಕೋರ್ಟಿನಿಂದ ಮನೆಗೆ ಬಂದಿರಬಹುದು. ಕ್ಲಬ್ಬಿಗೆ ಹೊರಟಿಲ್ಲವಾದರೆ ಸಿಕ್ಕಿಯೇ ಸಿಗುತ್ತಾರೆ...

"ಸ್ವಲ್ಪ ಡಿರೆಕ್ಟರಿ ಕೊಡ್ತೀರಾ?"

"ಅಲ್ಲೇ ಇದೆ ನೋಡಿ......"

ನಂಬರ್ ಹುಡುಕುವುದು ಬೇಸರದ ಕೆಲಸ. ಆ ಇಬ್ಬರು ಕಬಳಿಸುವವರಂತೆ ತನ್ನನ್ನೇ ನೋಡುತ್ತಿದ್ದಾರೆ.

ಟಿ – ಟಿ ಎಚ್ – ಟಿ ಯು – ಟಿ ವೈ ಎ......

ತ್ಯಾಗರಾಜನ್– ಸಿರಿಲ್, ಸಿರಿಲ್,.........

"...ನಾನು, ಜಯಶ್ರೀ...ಜಯಶ್ರೀ, ಮಾವಯ್ಯ...ಕಾಲೇಜ್ನಿಂದ ಮಾತಾಡ್ತಿದೀನಿ...ಯಾಕೊ ಕಾರು ಬಂದಿಲ್ಲ...ಬರ್ತೀರಾ? ಓ ಥ್ಯಾಂಕ್ಸ್! ಮುಂದುಗಡೇನೆ ಕಾದಿರ್ತೀನಿ......"

ಸಂತೃಪ್ತಿಯ ಮುಗುಳುನಗೆಯೊಡನೆ ಅವಳ ಮುಖ ಬೆಳಗಿತು. ಗುಮಾಸ್ತೆಯರಿಗೆ ಥ್ಯಾಂಕ್ಸ್ ನುಡಿದು, ಪುಸ್ತಕಗಳೊಡನೆ ಜಯಶ್ರೀ ಹೊರಕ್ಕಿಳಿದಳು.

ಹೊರಗೆ ದೂರದಲ್ಲಿ ರಸ್ತೆಯ ಇಕ್ಕೆಲಗಳ ಬಸ್‌ಸ್ಟಾಪುಗಳಲ್ಲಿ ಹುಡುಗಿಯರ ಕ್ಯೂಗಳಿದ್ದುವು. ತ್ಯಾಗರಾಜರಿಗೆ ಫೋನ್‌ಮಾಡಿದುದೇ ಒಳಿತಾಯಿತು. ಈ ಕ್ಯೂಗಳಲ್ಲಿ ನಿಂತು ಈದಿನ ತಾನು ಮನೆಸೇರುವುದಾದರೂ ಉಂಟೆ?–ಎಂದುಕೊಂಡಳು ಜಯಶ್ರೀ. ತರಗತಿಯ ಪುಸ್ತಕಗಳನ್ನು –ಅವುಗಳ ಒಳಗೆ ಅಡಗಿದ್ದ 'ಲೊಲಿಟಾ'ಳನ್ನು–ಎದೆಗವಚಿ, ಆಕೆ ಶತಪಥ ತುಳಿದಳು.

ಮನೆಯ ದಾರಿಹಿಡಿದಿದ್ದ ಮನಶ್ಶಾಸ್ತ್ರದ ಪ್ರಾಧ್ಯಾಪಿಕೆ ಶಾರದಮ್ಮ, ಜಯಶ್ರೀಯನ್ನು ಕುರಿತು,

"ಕಾರಿಗೋಸ್ಕರ ಕಾಯ್ತಿದೀಯೇನಮ್ಮ?"

–ಎಂದು ಕೇಳಿದರು, ಮುಗುಳುನಗೆಯೊಡನೆ. ಆ ಹುಡುಗಿ ಸಾಹುಕಾರ ಶ್ರೀಕಂಠಯ್ಯನವರ ಮಗಳು ಎಂದು ಬಲ್ಲವರು ಅವರು.

ಜಯಶ್ರೀ ವಿನಯ ನಟಿಸುತ್ತ ಅಂದಳು:

"ಹೂಂ."

ಮುಂದೆ ಹತ್ತು ನಿಮಿಷಗಳು ಕಳೆದುವು. ಚಿಕ್ಕಣ್ಣ ಮೊದಲು ಬಂದರೊ? ಆತ ಬರದಿದ್ದರೇ ಚೆನ್ನು. ತ್ಯಾಗರಾಜರನ್ನು ಕರೆಸಿ ಅವರ ಜೊತೆ ತಾನು ಹೋಗದೆ ಇದ್ದರೆ ಶಿಷ್ಟಾಚಾರವೆ?

–ಹೀಗೆ ಯೋಚಿಸುತ್ತಿದ್ದಂತೆ ತ್ಯಾಗರಾಜನ ಕಾರು ಸದ್ದಿಲ್ಲದೆ ಕಾಲೇಜಿನ ಆವರಣವನ್ನು ಹೊಕ್ಕಿತು. ಆ ಪ್ರದೇಶದ ಪ್ರಭಾವವಿರಬೇಕು, ಹೊಚ್ಚ ಹೊಸ ವಾಹನದಂತೆ ಆ ಕಾರು ವರ್ತಿಸಿ, ವರ್ತುಲಾಕಾರವನ್ನು ರಚಿಸಿ, ಜಯಶ್ರೀಯ ಮಗ್ಗುಲಲ್ಲಿ ನಿಂತಿತು.

ತ್ಯಾಗರಾಜನ್ ತನ್ನ ಎಡ ಮಗ್ಗುಲಿನ ಬಾಗಿಲನ್ನು ತೆರೆದ. ಪುಸ್ತಕಗಳನ್ನು ಇಸಕೊಂಡು ಡ್ಯಾಶ್‌ಬೋರ್ಡಿನಲ್ಲಿ ಇರಿಸಿ, ಜಯಶ್ರೀ ಮಗ್ಗುಲಲ್ಲಿ ಆಸೀನಳಾದೊಡನೆ, ಕಾರನ್ನು ಬೀದಿಗಿಳಿಸಿದ.

ಕಾರಿನೊಳಗಡೆ ಸುವಾಸನೆ ರಾಜ್ಯಭಾರ ನಡೆಸಿತ್ತು. ತ್ಯಾಗರಾಜನ್ ಕ್ರಾಪಿಗೆ ಲೇಪಿಸಿದ್ದ ಬ್ರಿಲ್‌ಕ್ರೀಮ್, ಮುಖಕ್ಕೆ ನವುರಾಗಿ ಬಳೆದಿದ್ದ ಪೌಡರ್, ಟೆರಿಲಿನ್ ಬುಶ್‌ಶರ್ಟಿನ ಜೇಬಿನೊಳಗಿನ ಕರವಸ್ತ್ರಕ್ಕೆ ಅಂಟಿಕೊಂಡಿದ್ದ ಸುಗಂಧ ದ್ರವ್ಯ–ಇವೆಲ್ಲ ಒಂದೊಂದಾಗಿ ಜಯಶ್ರೀಯ ಉಸಿರುಕಟ್ಟಿಸಿದುವು.

ಲೊಲಿಟಾಳ ನೆನಪಾಗಿ ಜಯಶ್ರೀ ಮನಸ್ಸಿನಲ್ಲೆ ತನ್ನನ್ನು ಪ್ರಶ್ನಿಸಿಕೊಂಡಳು,

'ಹಂಬರ್ಟ್‌ನಂತಿಲ್ಲವೆ ಈತ? ಹಂಬರ್ಟ್‌ನ ಹಾಗಿಲ್ಲವೆ ಈ ಮಾವಯ್ಯ?'

ಧ್ವನಿಯಲ್ಲಿ ಮಾಧುರ್ಯ ತುಂಬಿ ತ್ಯಾಗರಾಜನ್ ಕೇಳಿದ:

"ಸಂಜೆ ಕಾಫಿ ಕುಡಿದಿಯಾ ಜಯಾ?"

"ಇಲ್ಲ, ಮಾವಯ್ಯ."

–ಎಂದಳು ಜಯಶ್ರೀ, ತ್ಯಾಗರಾಜನ್ ಕೇಳುವ ಮುಂದಿನ ಪ್ರಶ್ನೆಯನ್ನು ಮೊದಲೇ ಊಹಿಸಿ,

"ಪ್ಯಾರಡೈಸಿಗೆ ಹೋಗೋಣವಾ?"

"ಹೊತ್ತಾಗೊಲ್ವೆ?"

"ನಾನಿಲ್ವೆ ಜತೇಲಿ?"

ಪಕ್ಕದಲ್ಲಿ ಹುಡುಗಿ ಕುಳಿತಿದ್ದುದರ ಪ್ರಭಾವ–ಕಾರಿನ ವೇಗ ಹೆಚ್ಚಿತ್ತು.

ಜಯಶ್ರೀ ಬೇಡವೆನ್ನಲಿಲ್ಲ. 'ಹೋಗೋಣ' ಎಂದೂ ಹೇಳಲಿಲ್ಲ. ಎದೆಯೊಳಗೇನೋ ಕುಪ್ಪಳಿಸಿದಂತಾಯಿತು ಅವಳಿಗೆ.

......ಪ್ಯಾರಡೈಸಿನಲ್ಲಿ ಮಹಡಿಯ ಫ್ಯಾಮಿಲಿ ರೂಮಿನಲ್ಲಿ ತ್ಯಾಗರಾಜನ ಜತೆ ಕುಳಿತಾಗ, ತಾನಿನ್ನು 'ಹುಡುಗಿ'ಯಲ್ಲ ಎಂಬ ಅಪೂರ್ವ ಅನುಭವ ಜಯಶ್ರೀಗಾಯಿತು.

"ಹಸಿವಾಗಿದೆಯಾ ಜಯಾ?"

"ಏನು ಕೊಡಿಸ್ತೀರಾ?"

"ನೀನು ಕೇಳಿದ್ದೆಲ್ಲ. ನೋಡು ಮೆನ್ಯು ಕಾರ್ಡ್."

ಅದನ್ನೋದಿ ಜಯಶ್ರೀ ಅಂದಳು:

"ರವೆದೋಸೆ."

ಬೇರರ್‌ಗೆ ದೋಸೆ ತರ ಹೇಳಿದ ತ್ಯಾಗರಾಜನ್. ಒಂದು.

"ಯಾಕೆ ನಿಮಗೆ ಬೇಡವೆ?"

"ಇಷ್ಟು ಹೊತ್ತಿನಲ್ಲಿ ನಾನೇನೂ ತಗೊಳೋದಿಲ್ಲ ಜಯಾ. ಅಲ್ದೆ ದೇವರು ತಿಂದರೆ ಭಕ್ತನ ಹೊಟ್ಟೆ ತುಂಬಿದಹಾಗೆ."

"ಓ!"

ಜಯಶ್ರೀಯ ಮುಖದಲ್ಲಿ ಮಂದಹಾಸಮೂಡಿತು. ಬಳಲಿರುವ ತಾನು ವಿಕಾರವಾಗಿ ಕಾಣಿಸುತ್ತಿರಬೇಕು–ಎಂದು ಆಕೆ ಭಾವಿಸಿದ್ದಳು. ಆದರೆ ಗೋಡೆಯ ನಿಲುವುಗನ್ನಡಿ ಹೊಸ ಜಯಶ್ರೀಯ ಪರಿಚಯವನ್ನು ಆಕೆಗೆ ಮಾಡಿಕೊಟ್ಟಿತು. ಮುಖ ರಕ್ತರಂಜಿತವಾಗಿತ್ತು. ಕಣ್ಣುಗಳಲ್ಲಿ ವಿಶೇಷ ಹೊಳಪಿತ್ತು. ಹಣೆಯ ಮೇಲೆ ಲಾಸ್ಯವಾಡುತ್ತಿದ್ದ ಮುಂಗುರುಳು ಆಕೆಯ ರೂಪಿಗೆ ವಿಶಿಷ್ಟ ಶೋಭೆಯನ್ನು ಒದಗಿಸಿತ್ತು.

ತ್ಯಾಗರಾಜನ್ ಕೇಳಿದ:

"ಯಾಕೆ, ನಗು?"

ತುಂಟನೋಟವನ್ನು ಅವನ ಮೇಲೆಯೇ ಕೇಂದ್ರೀಕರಿಸಿ ಜಯಶ್ರೀಅಂದಳು:

"ನೀವಿವತ್ತು ಯುವಕರ ಹಾಗೆ ಕಾಣ್ತೆದೀರಿ ಮಾವಯ್ಯ."

ಕುಟುಕು ನೋವನ್ನು ನುಂಗಿ, ಕಣ್ಣುಗಳ ಕೆಳಗೆನ ಕಪ್ಪನ್ನು ಕೃತ್ರಿಮ ನಗೆಯಿಂದ ಮರೆಮಾಡುತ್ತ, ತ್ಯಾಗರಾಜನ್ ಅಂದ:

"ಯುವಕರು ಯುವಕರ ಹಾಗೆಯೇ ಕಾಣಿಸ್ತಾರೆ."

"ನಮ್ಮ ಅಪ್ಪಯ್ಯನ ಸ್ನೇಹಿತರು; ನಿಮಗೆ ಮಧ್ಯವಯಸ್ಸು ದಾಟಿರಬಹುದು–ಅಂದ್ಕೊಂಡಿದ್ದೆ."

"ಛೆ! ಛೆ! ಇದೇ ಮೂವತ್ತು ದಾಟಿದೆ ನನಗೆ."

"ನಮ್ಮ ಜಯಣ್ಣನ ವಯಸ್ಸು. ಇಷ್ಟೇನಾ?"

"ಇನ್ನೇನು?"

"ಯುದ್ಧಕಾಲದಲ್ಲಿ ಇಂಗ್ಲೆಂಡ್ನಲ್ಲಿದ್ದಿರೀಂತ ಅಮ್ಮ ಒಮ್ಮೆ ಅಂದಿದ್ಲು."

"ಹಳೇ ಮಾತು. ಲಂಡನಿನಲ್ಲಿ ಬಾಂಬಿನ ಮಳೇಲಿ ತೊಯ್ದು ಪುನರ್ಜನ್ಮ ಪಡೆದುಬಂದೆ."

ಸಾವನ್ನು ಅಣಕಿಸಿ ಸೋಲದೆ ಮರಳಿದವನನ್ನು ಜಯಶ್ರೀ ಅರಳುಕಣ್ಣುಗಳಿಂದ ದಿಟ್ಟಿಸಿದಳು.

ತ್ಯಾಗರಾಜನ್ ಕ್ಷಣಕಾಲ ಮೌನವಾಗಿದ್ದು ಯೋಚಿಸಿದ. ಸರಿಯಾದ ಹೆಜ್ಜೆಗಳನ್ನಿಟ್ಟೆನೆ ಈ ವರೆಗೆ? ಎಲ್ಲಿಯೂ ತಪ್ಪಲಿಲ್ಲವಷ್ಟೆ? ರೂಢಮೂಲ ಭ್ರಮೆಗಳನ್ನು ಮೊದಲು ಪುಡಿಗೂಡಿಸಬೇಕು. ಆ ವಿನಾಶಕಾರ್ಯದ ಜತೆಯಲ್ಲೇ ಹೊಸ ಭ್ರಮೆಗಳ ಬಲೆಯನ್ನು ಹೆಣೆಯಬೇಕು......

ಜಯಶ್ರೀ ಅಂದಳು:

"ನಾನು ಈಗೊಂದು ಕಾದಂಬರಿ ಓದ್ತಾ ಇದೀನಿ, ಲೊಲಿಟಾ ಅಂತ. ಎಷ್ಟು ರಮ್ಯವಾಗಿದೆ ಅಂತೀರಿ! ನೀವು ಕಾದಂಬರಿಗಳನ್ನು ಓದೊಲ್ಲ, ಅಲ್ವೆ?"

"ಹೆಚ್ಚಾಗಿ ಓದೊಲ್ಲ. ಆದರೆ ಈ ಹೆಸರು–ಲೊಲಿಟಾ–ಪರಿಚಿತವಾಗಿದೆ. ಕ್ಲಬ್ಬಿನ ಹರಟೇಲಿ ಯಾರೋ ಇದರ ಪ್ರಸ್ತಾಪಮಾಡಿದ ಹಾಗೆ ನೆನಪು. ಕಥೆ ಏನು?"

ಮುಖವನ್ನು ಆವರಿಸತೊಡಗಿದ ಲಜ್ಜೆಯನ್ನು ಜಯಶ್ರೀ ಪ್ರತಿಭಟಿಸಿದಳು.

"ಇನ್ನೂ ಅರ್ಧದಷ್ಟು ನಾನು ಓದಬೇಕು. ನನ್ನ ಇಂಗ್ಲೀಷ್ ಜ್ಞಾನ ನಿಮಗೆ ಗೊತ್ತಲ್ಲ? ವೇಗ ಸಾಲದು. ನೀವಾದರೆ ಒಂದೇ ರಾತ್ರೇಲಿ ಓದಿ ಮುಗಿಸ್ತೀರಾ."

"ನಿನ್ನದಾದ್ಮೇಲೆ ಕೊಡು."

"ಕೊಡ್ತೀನಿ. ಈ ಪುಸ್ತಕ ಯಾರದು ಗೊತ್ತೇ? ಜಯಣ್ಣಂದು."

"I see"

"ಟ್ರಂಕ್ನಲ್ಲಿ ಕೆಳಗಡೆ ಬಚ್ಚಿಟ್ಟಿದ್ದ."

"ಓ!"

ರವೆದೋಸೆ ಬಂತು. ಜಯಶ್ರೀ "ಬೇಡ"ವೆಂದರೂ, ಐಸ್‌ಕ್ರೀಮ್. ಅವಳೊಬ್ಬಳಿಗೇ. ಆ ಬಳಿಕ ಕಾಫಿ. ತ್ಯಾಗರಾಜನ್ ಕುಡಿದುದು ಅರ್ಧ ಕಪ್ ಮಾತ್ರ.

......ಅವರಿಬ್ಬರು ಕಾರಲ್ಲಿ ಕುಳಿತಾಗ ಕತ್ತಲು ಕವಿದಿತ್ತು.

ದಾರಿಯಲ್ಲಿ ತ್ಯಾಗರಾಜನೆಂದ:

"ನನ್ನನ್ನು ಎಲ್ರೂ ಕೇಳೋ ಒಂದು ಪ್ರಶ್ನೇನ ನೀನು ಕೇಳಿಲ್ಲ."

"ಯಾವುದು ಮಾವಯ್ಯ?"

"ನೀವು ಒಬ್ಬರೇ ಯಾಕಿದೀರಿ?–ಅಂತ."

ಜಯಶ್ರೀಗೆ ವಿಸ್ಮಯವೆನಿಸಿತು. ಪ್ಯಾರಡೈಸಿನಿಂದ ಕೆಳಕ್ಕಿಳಿಯುತಿದ್ದಂತೆ ಆ ಪ್ರಶ್ನೆ ಅವಳಲ್ಲೂ ರೂಪುಗೊಂಡಿತ್ತು.

"ನಂಬ್ತೀರೋ ಇಲ್ಲವೋ. ಹಾಗೆ ಕೇಳಬೇಕೂಂತ ಇದೇ ಈಗ ಯೋಚಿಸಿದ್ದೆ."

"Fine. ನೀನು ತಾರುಣ್ಯಕ್ಕೆ ಕಾಲಿಟ್ಟೆ ಅಂತ ಅದರ ಅರ್ಥ."

"ಪ್ರಶ್ನೆಗೆ ಉತ್ತರ?"

"ನನ್ನ ಕನಸಿನ ರಾಣಿ ಪ್ರತ್ಯಕ್ಷಳಾಗೋ ವರೆಗೂ ಮದುವೆಯಾಗಬಾರದೂಂತ ಶಪಥ ತೊಟ್ಟಿದೀನಿ."

"ಆ ದಿನ ಯಾವತ್ತು ಬರುತ್ತೊ?"

"ಇನ್ನು ಬಹಳ ತಡವಾಗಲಾರದು ಅಂದ್ಕೊಂಡಿದೀನಿ."

ಮಾತಿನ ಮರ್ಮವನ್ನು ಗ್ರಹಿಸಲಾರದೆ ಜಯಶ್ರೀ ಅಂದಳು:

"Wonderful ! ಮುಂದಿನ ಬೇಸಿಗೇಲಿ ಮಾಡ್ಕೊಳ್ಳಿ ಮಾವಯ್ಯ. ನನ್ನ ಫೈನಲ್ ಮುಗಿದಿರುತ್ತೆ. ಓಡಾಡೋಕೆ ಬೇಕಾದಷ್ಟು ಬಿಡುವಿರುತ್ತೆ."

"ನಾನೂ ಹಾಗೇಂತಲೇ ಲೆಕ್ಕಹಾಕ್ಕೊಂಡಿದೀನಿ."

"ಯಾರು ಮಾವಯ್ಯ ಆ ಹುಡುಗಿ?"

"ಕ್ರಮೇಣ ನಿನಗೆ ಗೊತ್ತಾಗುತ್ತೆ......"

"ನೀವು ಹೇಳ್ತಿರೋದೆಲ್ಲಾ ಸುಳ್ಳು......ನಾನು ಹೇಳಲಾ? ನೀವು ಮದುವೆಯಾಗೋದೇ ಇಲ್ಲ. ಚಿಕ್ಕವರಿದ್ದಾಗ ನಿಮ್ಮ ಜೀವನದಲ್ಲಿ ಏನೋ ಕಹಿ ಪ್ರಕರಣ ನಡೆದಿದೆ. ಅದಕ್ಕೋಸ್ಕರ ನೀವು ಕಡೇವರೆಗೂ ಒಂಟಿಯಾಗಿಯೇ ಇರ್ತೀರಾ......"

ಎದುರಿನಿಂದ ನಡುರಸ್ತೆಯಲ್ಲೇ ಬರುತ್ತಿದ್ದ ಆಟೋರಿಕ್ಷಾಗೋಸ್ಕರ ದಾರಿ ಮಾಡಿಕೊಡುವ ಪ್ರಯತ್ನದಲ್ಲಿ ತ್ಯಾಗರಾಜನ ಕಾರು ರಸ್ತೆಯಂಚಿನ ದಿಣ್ಣೆಯನ್ನು ಹತ್ತಿ ಇಳಿಯಿತು. ಗೇರ್ ಬದಲಾಯಿಸುತ್ತ ತ್ಯಾಗರಾಜನ್ ಕ್ರುದ್ಧನಾಗಿ ಏನನ್ನೋ ಗೊಣಗಿದ.

ಶ್ರೀಸದನ ಹತ್ತಿರಬಂದಾಗ ತ್ಯಾಗರಾಜನ್ ಯಾಚಕನಾದ.

"ನನ್ನದೊಂದು ಮಾತು ನಡೆಸಿಕೊಡ್ತೀಯಾ?"

"ಏನು?"

"ಇನ್ನುಮುಂದೆ ಮಾವಯ್ಯ ಅಂತ ನನ್ನ ಕರೀಬಾರದು. ನೀನೀಗ ಚಿಕ್ಕ ಹುಡುಗಿಯಲ್ಲ."

ಈ ಮನುಷ್ಯ ಪ್ರಬುದ್ಧೆಯಾಗಿ **ತನ್ನನ್ನು** ಪರಿಗಣಿಸುತ್ತಾನೆ–ಎಂದು ಜಯಶ್ರೀಗೆ ಸಮಾಧಾನ. ನಗುತ್ತ ಅವಳೆಂದಳು:

"ರಾಜನ್ ಅಂತ ಕರೀಲೆ?"

"ನಿನ್ನಿಷ್ಟ"

–ಎಂದ ತ್ಯಾಗರಾಜನ್, ಹಾರ್ನ್ ಸದ್ದು ಮಾಡುತ್ತ.

ಜಗ್ಗ ಗೇಟುತೆರೆದ.

ಚಿಕ್ಕಣ್ಣ ಮುಖ ಜೋಲುಹಾಕಿ ಅಲ್ಲಿದ್ದ. ನಡು ದಾರಿಯಲ್ಲಿ ಪೆಟ್ರೋಲ್ ಮುಗಿದು ನಿಂತುಹೋಗಿತ್ತು ಕಾರು. ರಸ್ತೆಯ ಬದಿಗೆ ಅದನ್ನು ತಳ್ಳಿ, ಬಂಗ

ಲೆಗೆ ಮರಳಿ, ಟ್ಯಾಂಕಿನ ಕೀಲಿಕೈ ಪಡೆದು, ಸಾಹುಕಾರರ ಲೆಕ್ಕವಿದ್ದ ಪೆಟ್ರೋಲ್ ಬಂಕಿಗೆ ಹೋಗಿ, ಅಲ್ಲಿಂದ ಕಾರನ್ನು ತ[illegible] ಚಿಕ್ಕಣ್ಣ ಕಾಲೇಜಿಗೆ ಧಾವಿಸಿದ್ದ. ಕತ್ತಲಾಗಿತ್ತು. ಸಾಹುಕಾರರ ಮಗಳನ್ನು ಕಾಣದೆ, ಹಿಂತಿರುಗಿದ್ದ. ಇದು ಘೋರ ಅಪರಾಧ, ತನ್ನ ಕೆಲಸವೇ ಹೋಗಬಹುದು—ಎಂದು ಅವನು ಅಧೀರನಾಗಿದ್ದ.

ಆಗ ತಾನೇ ಮನೆಗೆ ಬಂದ ಜಯರಾಮು ವಿಷಯ ತಿಳಿದು, ಏನನ್ನೂ ಹೇಳಲಿಲ್ಲ.

ತ್ಯಾಗರಾಜನ್ ಮಾತ್ರ ನಡೆದುದನ್ನು ತಿಳಿದಾಗ ಅಂದ:

"ಶುದ್ಧಾಂಗ ನಿಷ್ಪ್ರಯೋಜಕ."

[ವಾಸ್ತವವಾಗಿ ಚಿಕ್ಕಣ್ಣನ ದಡ್ಡತನ ತನಗೆ ಎಷ್ಟೊಂದು ಪ್ರಯೋಜನಕಾರಿಯಾಗಿತ್ತು!]

ಜಯರಾಮು ಹೊರಬಂದು, ಬಂದವರನ್ನು ಉದ್ದೇಶಿಸಿ ನುಡಿದ:

"ಅದನ್ನು ಮರೆತುಬಿಡಿ. ನಾನು ನಿಮಗೊಂದು ಒಳ್ಳೇ ಸುದ್ದಿ ಹೇಳಬೇಕು."

ತ್ಯಾಗರಾಜನ್ ಆತನೆಡೆಗೆ ನೋಡಿದ. ಜಯಶ್ರೀ ಉತ್ಸುಕಳಾಗಿ ಅಂದಳು:

"ಹೇಳಣ್ಣ."

"ನಾನು ಕೆಲಸಕ್ಕೆ ಸೇರಿಕೊಂಡಿದೀನಿ."

ಜಯಶ್ರೀ ಸಂತುಷ್ಟಳಾಗಿ ಕುಣಿಯುತ್ತ ಒಳಹೋದಳು.

ಜಯರಾಮುವಿನೊಡನೆ ತ್ಯಾಗರಾಜನ್ ಅಂದ:

"ನಿಮ್ಮ ಹತ್ತಿರ ನಾನು ಸ್ವಲ್ಪ ಮಾತಾಡ್ಬೇಕು. ನನ್ನ ಜತೆ ಬರ್ತೀರಾ ಜಯಣ್ಣ?"

ಹರ್ಷಚಿತ್ತನಾಗಿದ್ದ ಜಯರಾಮು ಉತ್ತರಿಸಿದ:

"ನಡೀರಿ ಬ್ಯಾರಿಸ್ಟರ್‌ಬಾಬು."

೮

ಎದುರಿನಿಂದ ವಾಹನ ಬಂದಾಗಲೆಲ್ಲ ತ್ಯಾಗರಾಜನ ಕಾರಿನ ದೀಪಗಳು ಮಸಕುಗೊಳ್ಳುತ್ತಿದ್ದುವು, ಬಳಿಕ ಶುಭ್ರವಾಗುತ್ತಿದ್ದುವು. ದಾರಿಯುದ್ದಕ್ಕೆ ಆತನ ಯೋಚನೆಗಳೂ ಕತ್ತಲು ಬೆಳಕಿನ ಚೆಲ್ಲಾಟ ನಡೆಸಿದ್ದುವು:

ಕೆಲ ನಿಮಿಷಗಳ ಹಿಂದೆ ತನ್ನ ಮಗ್ಗುಲಲ್ಲಿ ಜಯಶ್ರೀ ಕುಳಿತಿದ್ದಳು. ಈಗ ಆ ಸ್ಥಾನದಲ್ಲಿ ಆಕೆಯ ಅಣ್ಣ. ಆಗ ಕಾರು ಚಲಿಸುತ್ತಿದ್ದ ದಿಕ್ಕು ಒಂದಾದರೆ ಈಗಿನದು ತದ್ವಿರುದ್ಧ. ಈ ಇಬ್ಬರು ವಾರಸುದಾರರಾಗಿರುವ ಸಂಪತ್ತಿನ ಮೊತ್ತ ಒಂದು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು. ಈ ಕಾರು ಈಗ ಹೋಗುತ್ತಿರುವಂತೆಯೇ ಯಾವುದಕ್ಕಾದರೂ ಬಡಿಯಿತೆಂದರೆ ಜಯರಾಮು ಹತನಾಗುವನು. ಆಗ ಜಯಶ್ರೀಯೊಬ್ಬಳೇ ಶ್ರೀಸದನದ ಐಶ್ವರ್ಯಕ್ಕೆಲ್ಲ ಉತ್ತರಾಧಿಕಾರಿಯಾಗುವಳು. ಆ ಸಂಪತ್ತು ಅವಳ ಕೈಹಿಡಿದವನ ವಶವಾಗುವುದು. ತಾನು ನಡೆಸುತ್ತಿರುವ ವಾಹನ ಅಪಘಾತಕ್ಕೀಡಾಗಿ ಜಯರಾಮು ನಿಧನಹೊಂದುವುದರ ಬದಲು, ಆತನೇ ನಡೆಸುವ ಒಂದು ಕಾರು—

"ಏನು ಜಯಣ್ಣ, ನಿಮಗೂ ಜಯಾಗೂ ಡ್ರೈವಿಂಗ್ ಕಲಿಸಿಕೊಡ್ತೀನಿ ಅಂತ ಆವತ್ತು ಹೇಳ್ದೆ. ಅಷ್ಟಕ್ಕೇ ನಿಂತುಹೋಯ್ತು."

"ಕಾರು ಇದ್ದರೆ ತಾನೆ ಡ್ರೈವಿಂಗಿನ ಪ್ರಶ್ನೆ? ಆ ವಿಷಯ ನಾನು ಇನ್ನು ಯೋಚಿಸಬೇಕಾದ್ದಿಲ್ಲ. ಜಯಾಗೆ ಪಾಪ ಹೇಳ್ಕೊಡಿ."

"ಏನು ಹಾಗಂದರೆ?"

"ನಾಳೆ ನಾನು ಹಾಸ್ಟೆಲಿಗೆ ಹೊರಟ್ಹೋಗ್ತೀನಿ. ಇನ್ನು ಅಲ್ಲಿಯೇ ವಾಸ."

--ಇದೇನು ಹೇಳುತ್ತಿದ್ದಾನೆ ಈತ?

"ನಿಮ್ಮ ತಂದೆ ಒಪ್ಪುತ್ತಾರೆಯೆ ಇದಕ್ಕೆ?"

"ವಿಷಯ ನಿಮಗೆ ಗೊತ್ತಿದೆಯಲ್ಲ? ಮದುವೆಗೆ ಸಂಬಧಿಸಿ ಅವರಿಗೆ ನಾನು ಅವಿಧೇಯನಾಗಿದೇನೆ. ಇನ್ನು ಏನಿದ್ದರೂ ನನಗೆ ನಾನೇ ಹೊಣೆಗಾರ."

"ಆರ್ಥಿಕವಾಗಿಯೂ?"

"ಹ್ನು. ಅಂದಮೇಲೆ ನಾನು ಮನೆಯಲ್ಲಿರೋದು ಸರಿಯಲ್ಲ."

"ಆದರೆ, ಅದು ನಿಮ್ಮ ಮನೆ ಜಯಣ್ಣ."

"ನಮ್ಮ ತಂದೆಯ ಮನೆ. ಕಾನೂನು ಪಂಡಿತರಾದ ನಿಮಗೆ ತಿಳಿಯದೆ? ತಾತನಿಂದ ಅಪ್ಪಯ್ಯ ಪಡೆದಿರುವುದು ಏನೂ ಇಲ್ಲ."

ಸೇತುವೆಯ ಮೇಲಿಂದ ರೈಲುಗಾಡಿ ಹೋಗುತಿತ್ತು. ಆ ಸಪ್ಪಳ ಅಡಗುವ ವರೆಗೆ ಸುಮ್ಮನಿದ್ದು ತ್ಯಾಗರಾಜನೆಂದ:

"ನಿಮಗೆ ದೊಡ್ಡಪ್ಪ ಚಿಕ್ಕಪ್ಪ ಇರಬೇಕು, ಅಲ್ವೆ?"

"ನನ್ನನ್ನು ಕೇಳ್ತಿದೀರಲ್ಲ! ನಿಮಗೆ ತಿಳೀದು ಅಂತಲೆ?"

"ಅವರ ಸುದ್ದಿ ಶ್ರೀಕಂಠಯ್ಯನವರು ಯಾವತ್ತೂ ಎತ್ತಿಲ್ಲ."

"ಇದಾರೆ. ಮೂವರು. ಎಲ್ಲೆಲ್ಲಿಯೋ ಹೊಟ್ಟೆಪಾಡಿಗೆ ಏನೇನೋ ಮಾಡಿಕೊಂಡಿದಾರೆ. ಅವರ ಮಕ್ಕಳಲ್ಲಿ ನನ್ನ ಓರಗೆಯವರೂ ಇರಬೇಕು. ನಾನು ಕಂಡಿಲ್ಲ. ಅವರು ಯಾರನ್ನೂ ಅಪ್ಪಯ್ಯ ಹತ್ತಿರ ಸೇರಿಸೋದಿಲ್ಲ. ಒಬ್ಬ ಚಿಕ್ಕಪ್ಪ ನಾವು ಹಿಂದೆ ಇದ್ದ ಮನೆಗೆ ಒಮ್ಮೆ ಬಂದಿದ್ದ. ಅಪ್ಪಯ್ಯ ಕತ್ತುಹಿಡಿದು ಅವನನ್ನು ಹೊರಕ್ಕೆ ದಬ್ಬಿದ್ರು."

"ಇಂಥ ವರ್ತನೆಗೆ ಪ್ರಬಲ ಕಾರಣವಿರಬೇಕು."

"ಬಾಲ್ಯದಲ್ಲಿ ಅವರೆಲ್ಲ ಅಪ್ಪಯ್ಯನನ್ನು ಕೆಟ್ಟ ರೀತೀಲಿ ನಡೆಸಿಕೊಂಡಿದ್ರಂತೆ. ಆದರೆ, ಸಂಬಂಧಿಕರ ವಿಷಯದಲ್ಲಿ ತಿರಸ್ಕಾರ ಅಪ್ಪಯ್ಯನಿಗೀಗ ರಕ್ತಗತವಾಗಿದೆ. ನಮ್ಮ ಅಮ್ಮನ ಕಡೆಯವರು ಬಂದರೂ ಅವರು ಸಹಿಸೋದಿಲ್ಲ."

"ಏನೇ ಅನ್ನಿ, ಜಯಣ್ಣ. ಶ್ರೀಕಂಠಯ್ಯನವರು ಅದ್ಭುತ ಇಚ್ಛಾಶಕ್ತಿಯ ಮನುಷ್ಯ."

"ನೀವು ಯುವಕರಾಗಿದ್ದಾಗ ಯೂರೋಪಿನಲ್ಲಿ ಅದ್ಭುತ ಇಚ್ಛಾಶಕ್ತಿಯ ಇನ್ನೊಬ್ಬ ಮನುಷ್ಯನನ್ನ ಕಂಡಿದ್ದಿರಿ, ಅಲ್ಲವೆ?"

"ಹಿಟ್ಲರ್?"

"ಹ್ನ."

"ಹೆ-ಹ್ಞೆ ! ಎಂಥ ಹೋಲಿಕೆ ! ಹೆತ್ತವರ ವಿಷಯದಲ್ಲಿ ನೀವು ಬಹಳ ಕಹಿಯಾಗಿದೀರಿ."

"ತಪ್ಪು, ಅಲ್ಲವೆ?"

"ಹಾಗನ್ನಲಿಲ್ಲ. ನಿಜಸ್ಥಿತೀನ ಹೇಳ್ದೆ."

ಮತ್ತೆ ಕೆಲ ನಿಮಿಷ ಕಾರಿನ ಯಂತ್ರದ ಏಕಪ್ರಕಾರದ ಸದ್ದೊಂದೇ ಕೇಳಿಸಿತು. ತ್ಯಾಗರಾಜನ ಯೋಚನೆ ತನ್ನ ಹಳೆಯ ಜಾಡನ್ನು ಹಿಡಿದು ಮುಂದುವರಿಯಿತು.

—ಪರಿಸ್ಥಿತಿ ರೂಪುಗೊಳ್ಳುತ್ತಿರುವ ಬಗೆ ವಿಸ್ಮಯಕಾರಿ. ಅಪಘಾತವಿಲ್ಲದೆಯೇ ಸಮಸ್ಯೆ ಪರಿಹಾರವಾಗಬಹುದು. ಜಯರಾಮು ಇನ್ನು ಬದುಕಿ ಉಳಿದರೂ ಸಾಹುಕಾರರ ಪಾಲಿಗೆ ಸತ್ತಹಾಗೆ. ತನ್ನ ದಾರಿಯ ಒಂದು ಕಂಟಕ ತಾನಾಗಿಯೇ ನಿವಾರಣೆಹೊಂದಿದಂತಾಯಿತು......

ಕೆಲ ಆಂಗ್ಲರೂ ಆಂಗ್ಲೋ-ಇಂಡಿಯನ್ನರೂ ವಾಸಿಸುವ ಪ್ರದೇಶದಲ್ಲಿ ಗಿಡಮರಗಳಿಂದ ಆವೃತವಾಗಿದ್ದ ಸಣ್ಣದೊಂದು ಮನೆಯ ಮುಂದೆ ಕಾರು ನಿಂತಿತು.

"ಬನ್ನಿ ಜಯರಾಮು. ಒಂಟಿ ಮನುಷ್ಯನ ಮನೆ ನೀವು ನೋಡಿಲ್ಲ."

"ಅಪ್ಪಯ್ಯ ಇಲ್ಲಿಗೆ ಆಗಾಗ್ಗೆ ಬರ್ತಿರಬೇಕು, ಅಲ್ವೆ?"

"ವರ್ಷಕ್ಕೊಂದು ಸಲ ಬಂದರೆ ಬಂದ್ರು, ಅಷ್ಟೆ."

ಕೌಮಾರ್ಯದಲ್ಲೆ ಯೌವನಾವಸ್ಥೆಯನ್ನು ಅನುಭವಿಸುತ್ತಿದ್ದ ಒಬ್ಬ ಹುಡುಗ ವರದಿಯೊಪ್ಪಿಸಿದ:

"ಇಬ್ಬರು ಫೋನ್ ಮಾಡಿದ್ರು, ಸರ್."

ವಿಲಾಯಿತಿಯ ಹಳ್ಳಿಗಾಡಿನ ವಸತಿ ಇದ್ದಂತಿತ್ತು ಆ ಮನೆಯ ಹೊರಮೈ ಹಾಗೂ ಒಳ ಮೈ.

ಡ್ರಾಯಿಂಗ್ ರೂಮಿನಲ್ಲಿ ಮೆತ್ತೆಗಳನ್ನಿರಿಸಿದ್ದ ಒರಗುಪೀಠಗಳನ್ನು ತೋರಿಸುತ್ತ ತ್ಯಾಗರಾಜನ್ ಅಂದ:

"ಕೂತ್ಕೊಳ್ಳಿ ಜಯಣ್ಣ. ಬಂದ್ಬಿಟ್ಟೆ. ಒಂದ್ನಿಮಿಷ."

ತ್ಯಾಗರಾಜನ್ ಫೋನಿನ ಬಳಿ ಸಾರಿ, ಹುಡುಗ ಬರೆದಿಟ್ಟಿದ್ದ ಹೆಸರು-ನಂಬರುಗಳನ್ನು ನೋಡಿದ. ರಿಸೀವರನ್ನು ಕೈಗೆತ್ತಿಕೊಂಡು ಒಂದು ನಂಬರನ್ನು ಬಳಸಿದ.

"ಗುಡ್ ಈವ್ನಿಂಗ್......ಆಗ ತಾನೆ ಹೊರಗೆ ಹೋಗಿದ್ದೆ......ಪಾರ್ಟಿ ಇವತ್ತು ಬೇಡಿ. ನಾಳೆ–ಸರಿ, ಆಗಲಿ...ಇಟ್ಸ್ ಆಲ್ ರೈಟ್...ಗುಡ್ ನೈಟ್."

ಜಯರಾಮು ಕುಳಿತಿದ್ದ. ಆತನ ಎದುರು ಬದಿಯಲ್ಲಿ ತಾನೂ ಒಂದು ಪೀಠಕ್ಕೊರಗಿ ತ್ಯಾಗರಾಜನ್ ಕುಳಿತ. ದುಂಡು ಪೀಠದ ಮೇಲೆ ಸಿಗಾರಿನ ಪೆಟ್ಟಿಗೆ ಇತ್ತು. ಸಿಗರೇಟುಗಳ ಡಬ್ಬವಿತ್ತು.

"Have a smoke......"

ತನ್ನನ್ನು ಅದುಮತೊಡಗಿದ್ದ ಅಗೋಚರ ಶಕ್ತಿಗಳೊಡನೆ ಕಾದಾಡಲು ಆಯುಧವೆಂದು ಜಯರಾಮು ಒಂದು ಸಿಗರೇಟು ಹಚ್ಚಿದ. ತ್ಯಾಗರಾಜನ್ ಸಿಗಾರನ್ನೆತ್ತಿಕೊಂಡ.

"ಇವತ್ತು ನಾನೊಂದು ದೊಡ್ಡ ಕೇಸ್ ಗೆದ್ದೆ, ಜಯಣ್ಣ."

"ಹೌದೆ?"

"ರಾಮಕುಮಾರ್ ವಾರಸುತನದ ಮೊಕದ್ದಮೆ. ಪತ್ರಿಕೆಗಳಲ್ಲಿ ಬರ್‍ತಾ ಇತ್ತು. ಇವತ್ತು ತೀರ್ಪುಕೊಟ್ಟರು. ಇವನು ಅದೃಷ್ಟವಂತ. ಇಪ್ಪತ್ತು ಲಕ್ಷ ರೂಪಾಯಿಯೂ ಮೂರು ಮನೆಗಳೂ ಸಿಕ್ಕುವು."

"ಆಹಾ?"

"ಪಾರ್ಟಿ ಇಟ್ಕೋತೀನಿ ಅಂತ ಫೋನ್‌ನಲ್ಲಿ ಹೇಳಿದ. ನಾಳೆಗೆ–ಅಂದೆ. ನಿಮಗೆ ಕೆಲಸ ಸಿಕ್ಕಿರೋ ದಿನ. ನನ್ನ ಅತಿಥಿಯಾಗಿ ಬಂದಿದೀರಿ. ನಿಮ್ಮನ್ನ ಬಿಟ್ಟು ಹೊರಹೋಗಲೆ? ಪೀಟರ್, ಡ್ರಿಂಕ್ಸ್."

"ಯೆಸ್ ಸರ್,"

–ಎಂದ ಹುಡುಗ.

ಜಯರಾಮು ನುಡಿದ:

"ಕ್ಷಮಿಸಿ, ಬ್ಯಾರಿಸ್ಟರ್‌ಬಾಬು. ನನಗೆ ಬೇಡಿ."

"ನಾನ್‌ಸೆನ್ಸ್. ಸರ್ಜನ್‌ಸಾಹೇಬರು ಈವರೆಗೂ ಡ್ರಿಂಕ್ಸ್ ಮುಟ್ಟೇ ಇಲ್ಲ ಅಂತಲೆ?"

"ಮುಟ್ಟಿಲ್ಲ ಅನ್ನಲಾರೆ. ಆದರೆ ಬೊಂಬಾಯಿ ಭಾಗ್ಯನಗರವಲ್ಲ. ಅಭ್ಯಾಸವಾಗೋದಕ್ಕೆ ಅನುಕೂಲ ಕಡಿಮೆ."

"ಪೀಟರ್, ಒಂದೊಂದು ಕಪ್ ವೈನ್ ಮೊದಲು ತಗೊಂಡ್ಬಾ...ವೈನ್

ನಲ್ಲಿ ಮಾದಕ ಪದಾರ್ಥವಿಲ್ಲ, ಡಾಕ್ಟ್ರೆ. ಪಚನಕ್ಕೆ ಒಳ್ಳೇದು. ಪೀಟರ್ ಅಡುಗೆ ಚೆನ್ನಾಗಿ ಮಾಡ್ತಾನೆ. ಇಲ್ಲೇ ಉಣ್ಣುವಿರಂತೆ."

"ನಾಳೆಯಿಂದ ಹೇಗೂ ಹೊಸ ಜೀವನ ಶುರುಮಾಡ್ತೀನಲ್ಲ–ಊಟಕ್ಕೆ ಇನ್ನೊಂದು ದಿವಸ ಬರ್ತೀನಿ."

"ನಿಮಗೆ ಯಾವಾಗಲೂ ಸ್ವಾಗತವಿರುತ್ತೆ. ಮಗನನ್ನ ಕೆಡಿಸಿದ ಅಂತ ಶ್ರೀಕಂಠಯ್ಯನವರು ಜರೆದರೂ ಪರವಾಗಿಲ್ಲ. ಬರಬೇಕು ಅನಿಸಿದಾಗಲೆಲ್ಲ ಇಲ್ಲಿಗೆ ಬನ್ನಿ."

ಸಿಗರೇಟಿನ ಹೊಗೆಯನ್ನು ಛಾವಣಿಯತ್ತ ಕಳುಹಿಸಿ ಜಯರಾಮು ಅಂದ:

"ಏನೋ ಮಾತನಾಡೋದಿದೆ ಅಂದಿರಿ......"

ತ್ಯಾಗರಾಜನ್ ನಕ್ಕ.

"ನೆಪ. ನಿಮ್ಮ ಸಂತೋಷದಲ್ಲಿ ಭಾಗಿಯಾಗ್ಬೇಕು ಅನ್ನೋ ಸ್ವಾರ್ಥ. ಮನೆಬಿಡುವ ನಿಮ್ಮ ನಿರ್ಧಾರ ಕೇಳಿದಮೇಲಂತೂ ನಿಮ್ಮ ವಿಷಯಕ್ಕೆ ನನ್ನ ಗೌರವ ಇಮ್ಮಡಿಯಾಗಿದೆ."

ವೈನ್‌ತುಂಬಿದ ಕಪ್ಪುಗಳನ್ನು ತಂದಿರಿಸಿದ ಪೀಟರ್‌ಗೆ,

"ವ್ಹಿಸ್ಕಿ ತಾ,"

–ಎಂದ, ತ್ಯಾಗರಾಜನ್.

"ಬ್ಯಾರಿಸ್ಟರ್‌ಸಾಹೇಬರಿಗೆ ಮಾತ್ರ,"

–ಎಂದು ಜಯರಾಮು ಸ್ಪಷ್ಟಪಡಿಸಿದ.

"ನನ್ನ ಒತ್ತಾಯವಿಲ್ಲ !"

ಈ ವೈನನ್ನಾದರೂ ಯಾಕೆ ತಾನು ಸ್ವೀಕರಿಸುತ್ತಿದ್ದೇನೆ?–ಎಂದು ಜಯರಾಮುಗೆ ಆಶ್ಚರ್ಯವಾಯಿತು. ಈ ಮೂಲಕ ಸ್ವಾತಂತ್ರ್ಯವನ್ನು ಸಾರುತ್ತಿರುವೆನೆ?–ಎಂದು ತನ್ನನ್ನು ಆತ ಪ್ರಶ್ನಿಸಿಕೊಂಡ.

ಕಪ್ಪುಗಳು ಔಪಚಾರಿಕವಾಗಿ ಒಂದನ್ನೊಂದು ಮುಟ್ಟಿದುವು.

ವೈನ್ ರುಚಿಯಾಗಿತ್ತು. ಸೇವಿಸುತ್ತಿದ್ದ ಜಯರಾಮುಗೆ ಹರ್ಷವೆನಿಸಿತು. ತುಸು ಕುಡಿದು ಆತ ಇನ್ನೊಂದು ಸಿಗರೇಟು ಹಚ್ಚಿದ.

ರೋಗಿಯನ್ನು ಪರೀಕ್ಷಿಸಹೊರಟ ವೈದ್ಯನಾಗಿದ್ದ ತ್ಯಾಗರಾಜನ್.

"ಶಿವರಾಮ್ ಮೆಡಿಕಲ್ ಕಾಲೇಜಿನಲ್ಲಿ ತಾನೆ ಉದ್ಯೋಗ?"

"ಹ್ಞ. ಟೆಂಪರರಿ. ಒಂದು ಸ್ಥಳ ಖಾಲಿ ಇದೆ. ತಗೊಂಡಿದಾರೆ."

"ಸರ್ಜರಿ ಜನರಲ್ ಆಸ್ಪತ್ರೇಲಿ ಮಾಡ್ತೀರಾ?"

"ಹೌದು."

"ಸರ್ಜನರ ಗ್ರೇಡು ಸಾವಿರದ ಇನ್ನೂರರ ತನಕ, ಅಲ್ವೆ?"

"ಹ್ಞ. ಆದರೆ ನನ್ನದು ಸ್ವಯಂಸೇವಕನ ಪಾತ್ರ. ಖರ್ಚಿಗೆ ಅಂತ ಇನ್ನೂರಐವತ್ತು ತಗೋತೀನಿ."

"ಈ ಕಿವಿಗಳನ್ನ ನಂಬಲೆ? ಏನಿದು?"

"ಸ್ವಂತದ್ದು ಏನಾದರೂ ಮಾಡಬೇಕು ಅನ್ನೋದೇ ನನ್ನ ದೀರ್ಘಾವಧಿ ಯೋಜನೆ."

"ಒಳ್ಳೇದೇ. ಈಗ ನಾನಿಲ್ವೆ? ಯಾರ ಹಂಗೂ ಇಲ್ಲ. ಪ್ರಪಂಚದಲ್ಲಿ ಉದಾತ್ತವಾದ ಕಸಬುಗಳು ಎರಡೇ: ಒಂದು ವಕೀಲಿ, ಇನ್ನೊಂದು ವೈದ್ಯಕೀಯ."

ಜಯರಾಮು ಮುಗುಳು ನಕ್ಕ. ತ್ಯಾಗರಾಜನ ಮಟ್ಟಕ್ಕಿಂತ ತನ್ನದು ಮೇಲಲ್ಲ ಎಂಬ ಅಭಿಪ್ರಾಯ ಕೇಳಿದಾಗ ಅವನಿಗೆ ಕಚಗುಳಿ ಇಟ್ಟಂತಾಯಿತು.

"ಒಂದು ರೀತಿಯಲ್ಲಿ ನ್ಯಾಯದಾನ ಮತ್ತು ಜೀವದಾನ ಎರಡೂ ಒಂದೇ."

"ಆದರೆ ನಿಮಗೆ ಪ್ರತಿಫಲಾಪೇಕ್ಷೆ ಇಲ್ಲ. ವಕೀಲಿ ಆರಂಭಿಸಿದಾಗ ನಾನೂ ನಿಮ್ಮ ಹಾಗೇ ಇದ್ದೆ ಅನಿಸುತ್ತೆ. ಇಂಗ್ಲೆಂಡಿನಲ್ಲಿ ಮಾರ್ಕ್ಸ್‌ವಾದಿಗಳ ಸಹವಾಸ ಬೇರೆ ನನಗೆ ದೊರೆತಿತ್ತು....ಅಂದಹಾಗೆ ನಿಮ್ಮ ವಿದ್ಯಾರ್ಥಿಜೀವನದಲ್ಲಿ ಕಮ್ಯೂನಿಸ್ಟರ ಸಂಪರ್ಕ ಇತ್ತೆ ನಿಮಗೆ?"

"ಇತ್ತು, ಸ್ವಲ್ಪಮಟ್ಟಿಗೆ. ಯಾಕೆ?"

"ಆಸ್ತಿಪಾಸ್ತಿಗಳ ವಿಷಯದಲ್ಲಿ ನಿಮಗಿರೋ ತಾತ್ಸಾರಕ್ಕೆ ಆ ಸಂಪರ್ಕವೇ ಕಾರಣ ಅಂತೀನಿ."

ತ್ಯಾಗರಾಜನ ಕಪ್ ಬರಿದಾಗಿತ್ತು. ಪೀಟರ್ ಸಿದ್ಧಗೊಳಿಸಿಕೊಟ್ಟ ವ್ಹಿಸ್ಕಿಯ ಮಗ್ ಅವನ ಕೈಯಲ್ಲಿತ್ತು.

ಜಯರಾಮು ತನ್ನ ಕಪ್ಪನ್ನು ಬರಿದುಗೊಳಿಸಿ, ಕೆಳಗಿರಿಸಿ, ಅಂದ:

"ಇದು ವಕೀಲರ ಪಾಟೀ ಸವಾಲು ಅಲ್ವೆ?"

"ಅಲ್ಲವಪ್ಪ, ಅಲ್ಲ. ಪ್ರತಿಯೊಬ್ಬರ ನಡವಳಿಕೆಗೂ ಒಂದು ಪ್ರೇರಣೆ ಇರುತ್ತಲ್ಲ. ಅದಕ್ಕಂದೆ."

"ಇಲ್ಲಿ ಕೇಳಿ ಬ್ಯಾರಿಸ್ಟರ್ ಬಾಬು. ಯಾವ ಇಸಮಿನ ಗಾಳಿಯೂ ನನಗೆ ಸೋಂಕಿಲ್ಲ. ನನ್ನ ಆರೋಗ್ಯ ಚೆನ್ನಾಗಿದೆ. ರೋಗಾಣುಗಳ ಪ್ರವೇಶಕ್ಕೆ ಆಸ್ಪದ ವಿಲ್ಲ."

ತ್ಯಾಗರಾಜನ್ ಮಗ್ಗನ್ನು ಕೆಳಗಿರಿಸಿ, ಆರಿಹೋಗಿದ್ದ ಸಿಗಾರನ್ನು ಮತ್ತೆ ಹಚ್ಚಿ, ಅಂದ:

"ನೀವು ತಪ್ಪು ತಿಳಕೊಂಡಿರಿ. ಬಾಲ್ಯದಲ್ಲಿ ನೀವು ರಾಷ್ಟ್ರೀಯ ಚಳುವಳಿಯಲ್ಲಿ ಇದ್ದವರು. ನಿಮ್ಮ ತಂದೆಯೂ ಈಗ ರಾಷ್ಟ್ರೀಯವಾದಿಗಳು. ನಿಮ್ಮಿಬ್ಬರಿಗೂ ಏಕಾಭಿಪ್ರಾಯವಿರಬೇಕಾದ್ದು ತರ್ಕಬದ್ಧ."

"ಇಲ್ಲಿ ಕೇಳಿ. ಅಪ್ಪಯ್ಯನನ್ನ ರೋಗಿಯ ಹಾಗೆ ನೋಡ್ಕೋಬೇಕು ಅಂತ ನೀವೊಮ್ಮೆ ಅನ್ಲಿಲ್ವೆ? ಅವರ ರೋಗವೇನೂಂತ ನಾನು ಪರೀಕ್ಷಿಸಿ ನೋಡಿದೇನೆ. ಅವರಿಗೆ ಅಂಟಿರುವುದು ಒಂದು ಸಾಮಾಜಿಕ ವ್ರಣ. ಅದಕ್ಕೆ ಔಷಧಿ ಇಲ್ಲ."

"ಶಸ್ತ್ರಚಿಕಿತ್ಸೆ?"

"ಅಗತ್ಯವಾದೀತು. ಆದರೂ ರೋಗಿ ಬದುಕ್ತಾನೇಂತ ಭರವಸೆ ಕೊಡೋ ಹಾಗಿಲ್ಲ."

"ಪಾಳ್ಯದ ರೆಡ್ಡಿಯ ಆಸ್ತೀನ ಕೊಳ್ಳೋದು ಏನಾಯ್ತು ಗೊತ್ತೆ?"

"ಇಲ್ಲ."

"ಹಳ್ಳಿಗಳನ್ನ ಸೈಟುಗಳಾಗಿ ಮಾರ್ಪಡಿಸುವುದು ಅಕ್ರಮವಾಗುತ್ತೆ–ಅಂತ ಸರಕಾರ ಆಜ್ಞೆ ಹೊರಡಿಸೋ ಹಾಗೆ ಮಾಡಿದ್ರು ಶ್ರೀಕಂಠಯ್ಯ. ರೆಡ್ಡಿ ಕಂಗಾಲಾದ. ಕೆಲವೇ ಸಾವಿರ ರೂಪಾಯಿಗಳಿಗೆ, ಇದ್ದ ನೆಲವನ್ನೆಲ್ಲ ಮಾರಿದ. ಇನ್ನು ಸರಕಾರೀ ತಳಹದಿಯ ಮೇಲೆ ಗ್ರಾಂಮಾಂತರ ವಸತಿ ನಿರ್ಮಾಣ ಯೋಜನೆಯನ್ನು ಶ್ರೀಕಂಠಯ್ಯ ತಯಾರಿಸ್ತಾರೆ. ಹಳೆಯ ಆಜ್ಞೆಯನ್ನು ತೆಗೆದುಹಾಕಿ, ಯೋಜನೆಗೆ ಸರಕಾರ ಬೆಂಬಲ ನೀಡುತ್ತೆ. ಆಗ, ಕಟ್ಟಡಗಳ ನಿರ್ಮಾಣಕ್ಕಾಗಿ ಸರಕಾರದಿಂದ ಕೊಡಿಸುವ ಸಾಲದಲ್ಲಿ ಒಂದು ಭಾಗ ಶ್ರೀಕಂಠಯ್ಯನವರಿಗೆ, ಸೈಟುಗಳ ಮಾರಾಟದಿಂದ ಬರುವ ಹಣವೂ ಅವರಿಗೆ!"

"ಇದೀಗ ಅಪ್ಪಯ್ಯನ ರಾಷ್ಟ್ರೀಯತೆ! ಹೊಲಸು! ನೆನೆಸಿಕೊಂಡರೆ ವಾಂತಿ ಬರುತ್ತೆ!"

"ಪ್ರಾಮಾಣಿಕ ವ್ಯಕ್ತಿಗಳಿಗೆ ಹೀಗೆ ಅನಿಸೋದು ಸ್ವಾಭಾವಿಕ. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಇಲ್ಲದ ಆಸೆ ಕಟ್ಕೊಂಡು ಇಂಗ್ಲೆಂಡಿನಿಂದ ನಾನು ವಾಪಸಾದೆ. ಆದರೆ ಈಗ ಅನಿಸುತ್ತೆ, ಬರಬಾರದಾಗಿತ್ತೂಂತ. ಇಲ್ಲಿ ದುಡ್ಡಿದ್ದವನು ದೊಡ್ಡಪ್ಪ, ಜೈಲಿಗೆ ಹೋದವನು ಚಿಕ್ಕಪ್ಪ—ಹಹ್ಹ!"

ಜಯರಾಮುಗೆ ತನ್ನ ತಲೆಯನ್ನು ಮೆಲ್ಲನೆ ಯಾರೋ ತಟ್ಟಿದಂತೆ ಭಾಸವಾಯಿತು. ತ್ಯಾಗರಾಜನ ಬಾಯಿಂದ ಇಂಥ ಮಾತುಗಳು? ಯಾವುದೋ ಸುಳಿಯಲ್ಲಿ ತನ್ನನ್ನು ಕೆಡವಲು ಈತ ಕಪಟ ನಾಟಕ ಆಡುತ್ತಿಲ್ಲವಷ್ಟೆ? ಆದರೆ ತಾನೇಕೆ ಹೆದರಬೇಕು? ಯಾರಿಗೆ ಹೆದರಬೇಕು ತಾನು?

ತ್ಯಾಗರಾಜನ್ ಕೇಳಿದ:

"ಯಾಕೆ ಸುಮ್ಮನಾದಿರಿ?"

"ಯೋಚಿಸ್ತಿದೇನೆ. ಅನ್ನಬಟ್ಟೆಗಳ ಕೊರತೆಯ ಜತೆಗೆ ಇನ್ನೊಂದು ನಮ್ಮ ದೇಶದಲ್ಲಿ ತಾಂಡವವಾಡ್ತಿದೆ—ವಿಚಾರ ದಾರಿದ್ರ್ಯ."

"ಸರಿಯಾಗಿ ಹೇಳಿದಿರಿ."

"ಜನಜೀವನದ ಓರೆಕೋರೆಗಳನ್ನ ಸರಿಪಡಿಸೋದಕ್ಕೆ ಬೃಹತ್‌ಪ್ರಮಾಣದ ಯೋಜನೆಗಳು ಇಲ್ಲಿ ಆಗ್ತಿರೋದೇನೋ ನಿಜ. ಆದರೆ ಅಪ್ಪಯ್ಯನಂಥ ಪ್ರತಿಷ್ಠಿತರು ಪ್ರತಿಯೊಂದು ಯತ್ನವನ್ನೂ ಮಣ್ಣುಪಾಲು ಮಾಡ್ತಿದಾರೆ."

ಮಗ್ಗನ್ನೆತ್ತಿ ಮತ್ತೊಂದು ಗುಟುಕು ಕುಡಿದು, ಸಣ್ಣನೆ ನಕ್ಕು, ತ್ಯಾಗರಾಜನೆಂದ:

"ಚಾಕು ಹಿಡಿದು ರೋಗಗ್ರಸ್ತ ಮನುಷ್ಯನ ಹೊಟ್ಟೆ ಸೀಳ್ತೀರಿ. ನಾಲಿಗೆಯ ತೀಕ್ಷ್ಣತೆಯಿಂದ ಸಮಾಜ ಪುರುಷನ ಹೃದಯ ಕತ್ತರಿಸ್ತೀರಿ. ಭೇಷ್!"

ಇದು ಕಪಟಸ್ತುತಿಯೆಂಬ ಅರಿವು ಜಯರಾಮುಗಿದ್ದರೂ ಆ ಮಾತುಗಳು ಕಿವಿಗೆ ಇಂಪಾಗಿ ತೋರಿದುವು. ಯಾವಾಗಲೂ ಮಿತಭಾಷಿಯಾದ ತಾನು ಹೀಗೆ ನಿರರ್ಗಳವಾಗಿ ಮಾತನಾಡುತ್ತಿರುವೆನಲ್ಲ—ಎಂದು ಅವನಿಗೆ ಆಶ್ಚರ್ಯವಾಯಿತು. ಇದು ದ್ರಾಕ್ಷಾರಸದ ಪ್ರಭಾವವೆ?—ಎಂಬ ಶಂಕೆ ಮೂಡಿತು. ಛೆ! ಛೆ!—ಎಂದುಕೊಂಡ ತನ್ನೊಳಗೇ.

ಆತನೆಂದ:

"ಡಾಕ್ಟರಾದರೇನಾಯಿತು? ನಾನು ಈ ರಾಷ್ಟ್ರದೊಬ್ಬ ಪ್ರಜೆ; ಸಮಾಜ

ದೊಂದು ಘಟಕ. ಜವಾಬ್ದಾರನಾದ ಮನುಷ್ಯ. ಸ್ವಂತದ ಅಭಿಪ್ರಾಯಗಳು ನನಗಿರಬಹುದಲ್ಲ?"

"ಓಹೋ. ಅದಕ್ಕೆ ಯಾರ ಅಡ್ಡಿ?"

ಆಡಿದ ಮಾತುಗಳ ಫಲವಾಗಿ ಹೃದಯ ತುಸು ಹಗುರವಾದಂತೆ ಜಯರಾಮುಗೆ ಅನಿಸಿತು. ಆತ ಕೈಗಡಿಯಾರದತ್ತ ನೋಡಿದ. ಒಂಭತ್ತು ದಾಟಿತ್ತು.

ತ್ಯಾಗರಾಜನ್ ಕೇಳಿದ:

"ತಡವಾಯ್ತೆ ಜಯಣ್ಣ?"

"ಇನ್ನು ಹೊರಡ್ತೀನಿ. ಮನೆಯಲ್ಲಿ ನನ್ನ ಜನ್ಮದಾತನ ಕೂಡೆ ಮಾತಾಡೋದಿದೆಯಲ್ಲ?"

"ಸರಿ. ಬನ್ನಿ. ಬಿಟ್ಟುಬರ್ತೀನಿ,"

—ಎಂದ ತ್ಯಾಗರಾಜನ್ ಏಳುತ್ತ.

ಜಯರಾಮು ಎದ್ದು ನುಡಿದ:

"ಬೇಡಿ. ಬರುತ್ತ ನೋಡಿದೆನಲ್ಲ? ಆ ಸರ್ಕಲಿನಾಚೆಗಿದೆ ಬಸ್ ಸ್ಟ್ಯಾಂಡ್. ಅಲ್ಲಿ ಆಟೋ ರಿಕ್ಷಾ ಸಿಗೋದಿಲ್ವೇ?"

"ಸಿಗುತ್ತೆ. ಆದರೆ ಕರಕೊಂಡು ಬಂದಿರೋ ನನ್ನ ಜವಾಬ್ದಾರಿ ಅಲ್ವೆ ಮನೆಗೆ ಮುಟ್ಟಿಸೋದು?"

—ಎಂದ ತ್ಯಾಗರಾಜನ್, ಮತ್ತೆ ಹೊರಹೋಗುವ ತೊಂದರೆ ತಪ್ಪಲಿ ಎಂದು ಆಶಿಸುತ್ತ.

"ನನ್ನ ತಂಗಿಯಾದರೆ ಆ ಕೆಲಸ ನೀವು ಮಾಡಬೇಕು! ನನ್ನ ಮಟ್ಟಿಗೆ ಬೇಡಿ. ಗುಡ್ ನೈಟ್."

ಜಯಶ್ರೀಯ ಪ್ರಸ್ತಾಪ ತ್ಯಾಗರಾಜನ ಕಿವಿಗೆ ಹಿತವಾಗಿತ್ತು. ಆತ ಹೆಹ್ಹೆ ಎಂದು ನಕ್ಕ.

"ನೆನಪಿಡುವಂಥ ಸಂಜೆ. ಮತ್ತೊಮ್ಮೆ ಕೂಡೋಣವಂತೆ. ನೋಡಿ, ಈ ರಸ್ತೇಲೆ ನೇರವಾಗಿ ಹೋಗಿ. ಸರ್ಕಲ್ ಸಿಗುತ್ತೆ. ಗುಡ್ ನೈಟ್."

ಜಯರಾಮು ಬೀದಿಗಿಳಿದು ಕತ್ತಲಲ್ಲಿ ಮರೆಯಾದ. ಅವನಿಗಿದಿರಾಗಿ ಬೀಸುತ್ತಿದ್ದ ತಂಗಾಳಿ ಆಪ್ಯಾಯಮಾನವಾಗಿತ್ತು.

ಡ್ರಾಯಿಂಗ್ ರೂಮಿಗೆ ತ್ಯಾಗರಾಜನ್ ಮರಳಿದಾಗ ಪೀಟರ್ ಮತ್ತೆ ಮಗ್ ತುಂಬಿಸುತಿದ್ದ.

"ಊಟಕ್ಕೆ ರೆಡಿಮಾಡು. ಇಬ್ಬರಿಗೆ,"

—ಎಂದು ನಿರ್ದೇಶವಿತ್ತು, ತ್ಯಾಗರಾಜನ್ ಫೋನಿನ ಬಳಿ ಸಾರಿ ಹತ್ತಿರವಿದ್ದ ಪೀಠದ ಮೇಲೆ ಕುಳಿತು, ಫೋನಿನ ಪಕ್ಕದಲ್ಲಿದ್ದ ಪುಟ್ಟ ಡೈರಿಯನ್ನು ತೆರೆದು ನೋಡಿ ಒಂದೊಂದಾಗಿ ಡಯಲಿನ ಅಂಕೆಗಳನ್ನು ಮುಟ್ಟಿದ.

ಇಂಗ್ಲಿಷಿನಲ್ಲಿ ಆತನೆಂದ:

"ರಾಜನ್ ಮಾತಾಡ್ತಿರೋದು. ಡಾಲಿ ಇದಾಳಾ?...ಸ್ವಲ್ಪ ಕರೀರಿ... ಹ್ಲಾ...[ನಿಮಿಷ ತಡೆದು] ಡಾಲಿ ಡಾರ್ಲಿಂಗ್, ಬರ್‍ತೀಯಾ?...ಈಗಲೇ...... ಹಾರ್‍ಕೊಂಡು ಬಾ. ಹತ್ತು ನಿಮಿಷ ಕೊಡ್ತೀನಿ...ರೈಟೋ."

ಬಳಿಕ ಫೋನಿನ ಗುಂಡಿಗಳನ್ನೊತ್ತಿ, ನೆನಪಿನ ಪುಸ್ತಕದಿಂದ ಸುಲಭವಾಗಿ ಇನ್ನೊಂದು ನಂಬರನ್ನು ತ್ಯಾಗರಾಜನ್ ಎತ್ತಿಕೊಂಡ.

"ನಮಸ್ಕಾರ ಸರ್. ತ್ಯಾಗರಾಜ......ಥ್ಯಾಂಕ್ ಯು ಸರ್. ನಾನೇ ತಿಳಿಸೋಣಾಂತಿದ್ದೆ. ನಿಮಗೆ ಮೊದಲೇ ಗೊತ್ತಾಗ್ಬಿಟ್ಟಿದೆ! ...... ಜಸ್ಟಿಸ್ ......ರಘುನಾಥಯ್ಯ ಹೇಳಿದ್ರೆ?......ಕ್ಲಬ್ಬಿನಲ್ಲಿ ಸಿಕ್ಕಿದ್ರೇನೋ ?...ಅರ್ಜೆಂಟಾಗಿ ನಿಮಗೆ ತಿಳಿಸಬೇಕಾದ ಒಂದು ಸಂಗತಿ ಇದೆ......ಜಯರಾಮು ಸಂಜೆ ಸಿಕ್ಕಿದ್ದ......ಕೆಲಸದ ವಿಷಯ ಗೊತ್ತಾಯ್ತೆ ಸರ್?......ಯಾರಾದರೂ ಹೇಳಿರ್‍ತಾರೆ ಅಂದ್ಕೊಂಡಿದ್ದೆ......ಶಿವರಾಮ್ ಮೆಡಿಕಲ್ ಕಾಲೇಜ್ನಲ್ಲಿ ...... Niggardly pay ...... It is disgraceful ...... ಮನೆಬಿಟ್ಟು ಹೋಗ್ತಾನಂತೆ ......ಹಾಸ್ಟೆಲಿಗೆ......ಮಗನ ವಿಷಯ ತಂದೆಯ ಹತ್ತಿರ ಹೀಗೆ ಹೇಳೋದು ಚೆನ್ನಾಗಿರೊಲ್ಲ......ಆದರೂ......ಆತನ ಜತೆ ಬಹಳ ಹೊತ್ತು ಮಾತನಾಡಿದೆ ......ತನ್ನ ಅಪ್ಪಯ್ಯನ ಬಗ್ಗೆ ಬಹಳ ಕಹಿಯಾಗಿ ಏನೇನೋ ಅಂದ......ನಿಮ್ಮ ದಾರಿ ಬೇರೆ, ಅವನ ದಾರಿ ಬೇರೆಯಂತೆ......ಸ್ವಲ್ಪ ಹುಷಾರಾಗಿ—firm ಆಗಿ—handle ಮಾಡ್ಬೇಕಾಗುತ್ತೆ......ಹ್ಲಾ......ನಾಳೆನೆ? ಬಿಡುವಾಗಿರ್‍ತೀನಿ...... ಬರ್‍ತೀನಿ— Yes ಸರ್ ...... ಥ್ಯಾಂಕ್ ಯು......ಗುಡ್ ನೈಟ್......"

ತ್ಯಾಗರಾಜನ್ ಸಂತೃಪ್ತಿಯ ನಿಟ್ಟುಸಿರುಬಿಟ್ಟು ಪೀಠ ಬದಲಾಯಿಸಿ, ಮಗ್ಗನ್ನು ತುಟಿಗಳಿಗೆ ಮುಟ್ಟಿಸಿದ.

ಕೆಲ ನಿಮಿಷಗಳ ಬಳಿಕ ಒಂದು ಟ್ಯಾಕ್ಸಿ [ಬೇಬಿ] ಆ ಮನೆಯ ಮುಂದೆ ಬಂದು ನಿಂತಿತು. ಅಂಗಳದ ದೀಪವನ್ನು ಪೀಟರ್ ಆರಿಸಿದ

......ಆಟೋ ರಿಕ್ಷಾದಲ್ಲಿ ಕುಳಿತು ಮನೆಯ ಕಡೆಗೆ ಧಾವಿಸುತ್ತಿದ್ದ ಜಯರಾಮುಗೆ, ಆ ದಿನದ ಘಟನೆಗಳು ಹಂತ ಹಂತವಾಗಿ ಪುನಃ ನೆನಪಿಗೆ ಬಂದುವು.

ಆ ಹೊಸ ಕಾಲೇಜಿನ ಡೀನ್, ಹಿಂದೆ ಜಯರಾಮುವಿನ ಪ್ರೊಫೆಸರಾಗಿದ್ದವರು. ತನ್ನ ಮೆಚ್ಚುಗೆಯ ಹಳೆಯ ವಿದ್ಯಾರ್ಥಿ ಈಗ ಸಹಾಯಕನಾಗಿ ಬಂದುದನ್ನು ಕಂಡು ಅವರಿಗೆ ಸಂತೋಷವಾಗಿತ್ತು.

ಅವರೆಂದಿದ್ದರು:

"ಸದ್ಯಕ್ಕೆ ಟೆಂಪರರಿ. ನೀವು ಇಷ್ಟಪಟ್ಟರೆ ಮುಂದೆ ಇಲ್ಲೇ ಇರಬಹುದು, ಜಯರಾಮು."

ಅವನೆಂದಿದ್ದ:

"ಮುಂದಿನ ಯೋಚನೆ ನಾನು ಮಾಡಿಲ್ಲ, ಸರ್. ನನ್ನ ಮನಸ್ಸಿಗೆ ನೆಮ್ಮದಿ ಇಲ್ಲ. ಸದ್ಯಃ ಇಲ್ಲಿ ದುಡೀತೇನೆ. ಸಂಬಳ ಮುಖ್ಯವಲ್ಲ."

"I know, I know......ನಿಮ್ಮ ತಂದೆಗೆ ಈ ವಿಷಯ ಗೊತ್ತೆ?"

"ಇಲ್ಲ. ಅವರಿಗೂ ನಾನು ಉದ್ಯೋಗ ಹಿಡಿಯೋದಕ್ಕೂ ಸಂಬಂಧವಿಲ್ಲ."

ಒಗಟನ್ನು ಬಿಡಿಸಲೆತ್ನಿಸುವವರ ಹಾಗೆ ಮಾರ್ಪಟ್ಟಿತ್ತು ಡೀನರ ಮುಖಭಾವ. ಏನು ಅರ್ಥಮಾಡಿಕೊಂಡರೊ? ಮೆಲ್ಲನೆ ತಲೆ ಆಡಿಸಿದರೇ ಹೊರತು ತುಟಿ ಎರಡುಮಾಡಲಿಲ್ಲ.

ಜಯರಾಮುವೇ ಕೇಳಿದ್ದ:

"ಹಾಸ್ಟೆಲ್ನಲ್ಲಿ ನಾನಿರಬಹುದೆ ಸರ್?"

"ಸ್ಟಾಫಿನವರು ಇರಬಾರದೂಂತ ನಿಯಮವಿದೆ. ಆದರೂ ಪರವಾಗಿಲ್ಲ. ಸದ್ಯಕ್ಕೆ ಇರಿ."

ಯಾಕೆ ಮನೆ ಬಿಟ್ಟು ಬರುತ್ತೀಯಾ?–ಎಂದು ಕೇಳಿರಲಿಲ್ಲ ಅವರು.

"ಯಾವತ್ತಿನಿಂದ ಬರಲಿ?"

"ನೇಮಕ ಪತ್ರ ಇವತ್ತೇ ಕೊಡ್ತೀನಿ. ಹಾಸ್ಟೆಲ್‌ವಾರ್ಡನಿಗೆ ಒಂದು ಚೀಟೀನೂ ತಗೊಳ್ಳಿ. ಇವತ್ತು ಇಪ್ಪತ್ತೆಂಟು. ಫಸ್ಟ್‌ನಿಂದ ಡ್ಯೂಟಿಗೆ ಬರುವಿರಂತೆ."

ಭೇಟಿ ಅಲ್ಲಿಗೆ ಮುಗಿದಿತ್ತು. ಆದರೆ ಡೀನ್ ತನ್ನ ಜತೆ ಹೊರಬಂದು, ಕಣ್ಣಿಗೆ ಬಿದ್ದ ಇಬ್ಬರು ಮೂವರು ಅಧ್ಯಾಪಕರಿಗೆ ತನ್ನ ಪರಿಚಯಮಾಡಿಕೊಟ್ಟಿದ್ದರು.

...ಹೊಸ ತಿಂಗಳ ಮೊದಲ ತಾರೀಕಿನಿಂದ ತಾನು ಬೇರೆಯೇ ಮನುಷ್ಯ. ಹಾಸ್ಟೆಲಿಗಂತೂ ನಾಳೆಯೇ ಹೊರಟುಬಿಡಬೇಕು.

ಅಲ್ಲ, ಎಂಥ ವ್ಯಕ್ತಿ ಈ ತ್ಯಾಗರಾಜನ್? ಜಯಶ್ರೀ ಇವನ ಜೊತೆ ಸಲಿಗೆಯಿಂದ ಇದ್ದಾಳಲ್ಲ? ಮಾತಿನಲ್ಲಿ ಚತುರ...ಉಪಾಯವಾಗಿ ವಾದ ಆರಂಭಿಸಿ ನನ್ನ ನಾಲಿಗೆ ಸಡಿಲಿಸಿದ. ಊಹೂಂ–ವೈನ್ ಸೇವಿಸಿದ್ದರಿಂದ ಹಾಗಾಗಲಿಲ್ಲ...ಬಾಯಿಯಿಂದ ದುರ್ಗಂಧ ಹೊರಡುತ್ತಿಲ್ಲ. [ಬಾಯಿ ತೆರೆದು ಉಸಿರು ಬಿಟ್ಟು ಅಂಗೈಯಿಂದ ಅದನ್ನು ತಡೆದು ಮೂಸಿ ನೋಡಿದ ಜಯರಾಮು.] ಊ ಹೂಂ.

ಬೆಲ್. ಗಟ್ಟಿಯಾಗಿ:

"ಬಲಕ್ಕಪ್ಪ, ಬಲಕ್ಕೆ."

ಮೂರಂಗುಲ ಸಂದಿಯಲ್ಲೂ ನುಸುಳಿಹೋಗುವ ಈ ವಾಹನ, ಯಂತ್ರ ಬ್ರಹ್ಮನ ಒಂದು ಅದ್ಭುತ ಸೃಷ್ಟಿ.

ಅಂತೂ ವಿಸ್ತರಣ ಬಂತು. ಒಂಭತ್ತೂ ಮೂವತ್ತು. ತಂದೆಯ ಊಟವಾಗಿರಬಹುದು.

ಬೆಲ್. ಎರಡು ಸಾರೆ.

"ನಿಲ್ಸು. ಅದೇ ಗೇಟು."

ಆಟೋ ರಿಕ್ಷಾದವನು, ತನ್ನ ಪ್ರಯಾಣಿಕ ಕೈಗಿತ್ತ ಎರಡು ರೂಪಾಯಿಗಳ ನೋಟನ್ನು ನೋಡಿದ. ಈತ ಒಂದು ರೂಪಾಯಿ ಕೊಡಬಹುದು, ಜಗಳಾಡಬೇಕು–ಎಂದು ಪದಗಳನ್ನು ಮಸೆಯುತ್ತಿದ್ದ ವಾಹನದ ಚಾಲಕ, ನೋಟನ್ನು ಹಿಡಿದುಕೊಂಡು ದೇಶಾವರಿ ನಗೆ ಬೀರುತ್ತ, 'ಚಿಲ್ಲರೆ ಎಷ್ಟು ಕೊಡೋಣ?' ಎಂದು ಯೋಚಿಸಿದ. ಆದರೆ ಪ್ರಯಾಣಿಕ ಚಿಲ್ಲರೆಯ ದಾರಿ ನೋಡದೆ ಗೇಟು ತೆರೆದು ಒಳಹೋದುದನ್ನು ಕಂಡು, 'ಇಂಥವರೂ ಇರುತ್ತಾರೆ' ಎಂದುಕೊಂಡು, ಚಾಲಕ ವಾಹನವನ್ನು ಬಂದ ದಿಕ್ಕಿಗೆ ಹೊರಳಿಸಿದ.

ಸೀಸರ್ ಬಗುಳಿತು. ಚಿಕ್ಕ ಧಣಿಯರೆಂದು ತಿಳಿದು ಬಾಲ ಅಲ್ಲಾಡಿಸಿತು.

ಶ್ರೀಕಂಠಯ್ಯನವರ ಕೊಠಡಿಯೊಳಗಿನ ಶುಭ್ರ ಬೆಳಕು ಕಿಟಿಕಿಗಳಿಂದ ಹೊರ ಬಿದ್ದು ಉದ್ಯಾನದ ಕೆಲ ಗಿಡಗಳನ್ನು ಬೆಳಗುತಿತ್ತು.

ಕಮಲಮ್ಮ ಕೇಳಿದರು:

"ತಡವಾಯ್ತಲ್ಲೋ ಜಯು......ಎಲ್ಲೋಗಿದ್ದೆ?"

"ತ್ಯಾಗರಾಜರ ಜತೆ ಹೋದೆನಮ್ಮ....ಬಂದ್ಬಿಟ್ಟೆ. ಬಟ್ಟೆ ಬದಲಾಯಿಸ್ಬಿಡ್ತೀನಿ,"

—ಎಂದು ನುಡಿದು ಜಯರಾಮು ಲಗುಬಗೆಯಿಂದ ಮಹಡಿ ಮೆಟ್ಟಲು ಗಳನ್ನೇರಿದ.

ಜಯಶ್ರೀಯ ಕೊಠಡಿಯಲ್ಲೂ ಬೆಳಕಿತ್ತು. ಮೇಜಿನ ಮೇಲೆ ಮೊಣ ಗಂಟುಗಳನ್ನೂರಿ ಆಕೆ ಓದುತ್ತಲಿದ್ದುದು ಜಯರಾಮುಗೆ ಕಾಣಿಸಿತು.

ತನ್ನ ಕೋಣೆಯ ಬಾಗಿಲನ್ನು ಆತ ಮುಂದಕ್ಕೆ ತಳ್ಳಿದ. ದೀಪ ಹಾಕಿದ. ಕೋಟು ಬಿಚ್ಚಿ ಹ್ಯಾಂಗರಿಗೆ ಸಿಲುಕಿಸುತ್ತಿದ್ದಂತೆ ಮೇಜಿನ ಮೇಲೊಂದು ಕವರ್ ಕಂಡಿತು. ಅಂಚೆಯ ಚೀಟಿ, ಮುದ್ರೆಗಳಿದ್ದುದು. ಸಂಜೆ ಇರಲಿಲ್ಲ, ಈಗೆಲ್ಲಿಂದ ಬಂತು?—ಎನ್ನುತ್ತ ಜಯರಾಮು ಅದರ ಬಳಿ ಹೋದ. **ಕವರನ್ನು ಒಡೆದಿತ್ತು.** ಮೇಲೆ ಇಂಗ್ಲಿಷಿನಲ್ಲಿ ವಿಳಾಸವಿತ್ತು. ಡಾ. ಜೆ. ರಾಮು, ಎಂ.ಎಸ್., ಕೇರಾಫ್ ಶ್ರೀ ಶ್ರೀಕಂಠಯ್ಯ, ಭಾಗ್ಯನಗರ. ಅಪೂರ್ಣ ವಿಳಾಸವೆಂದು ಅಂಚೆಯವರು ಅಲೆದುದಕ್ಕೆ ಕೆಂಪುಗುರುತುಗಳಿದ್ದು, ಕವರಿನ ಮೇಲೆ.

ತನಗೆ ಬಂದ ಕಾಗದ. ಒಡೆದಿದ್ದರು. ತಂದೆ!

ಎಲ್ಲಿಂದ ಬಂತು? ಯಾರ ಕಾಗದ?

ಮಡಚಿದ್ದ ನೀಲಿ ಕಾಗದವನ್ನು ಲಕೋಟೆಯೊಳಗಿಂದ ಜಯರಾಮು ಹೊರ ಕ್ಕೆಳೆದ. ಅಪರಿಚಿತವೆನಿಸಿದ ಹಸ್ತಾಕ್ಷರ. ಸಹಿಯನ್ನೋದಿದ. ಕಣ್ಣುಗಳು ಅರಳಿದುವು.

೬

"ನನ್ನ ಪ್ರೀತಿಯ ಡಾ. ರಾಮು,......"

ಸಹಿಯನ್ನು ಮೊದಲೇ ಓದಿದ್ದ ಜಯರಾಮುವಿನ ಎದೆಗುಂಡಿಗೆ ತನ್ನ ಬಡಿತವನ್ನು ತೀವ್ರಗೊಳಿಸಿತು. ಇದೇನು ಕನಸೆ?–ಎಂದುಕೊಳ್ಳುತ್ತ, ನಾಲ್ಕು ಪುಟಗಳ ದೀರ್ಘ ಪತ್ರದ ಕೊನೆಯನ್ನು ಆತ ಮತ್ತೊಮ್ಮೆ ಓದಿದ:

"ಒಲವಿನೊಂದಿಗೆ
ನಿನ್ನ
ಲೀಲಾ"

ಇಂಗ್ಲಿಷಿನ ಒಕ್ಕಣೆ. Yours. "ನಿನ್ನ" ಆಗಬಹುದು. "ನಿಮ್ಮ" ಆಗಬಹುದು.

ಇದು ತನಗೆ ಬಂದಿರುವ ಕಾಗದ ಹೌದೆ, ಅಲ್ಲವೆ? ತಾನಿದನ್ನು ಓದಬೇಕೆ, ಬೇಡವೆ?

ಹಾಳೆಗಳನ್ನು ಎಡಗೈಯಲ್ಲಿ ಹಿಡಿದು, ಕುರ್ಚಿಯ ಮೇಲೆ ಕುಳಿತು, ಬಲ ಅಂಗೈಯಿಂದ ಜಯರಾಮು ಮೇಜನ್ನು ತಟ್ಟಿದ.

ಲೀಲಾ ಸುಖ್‌ತಣ್‌ಕರ್ ಅದೇನೇ ಬರೆದಿರಲಿ, ಕವರನ್ನು ಒಡೆಯಬೇಕಾಗಿತ್ತೆ ಇವರು? ಯಾರ ಕೆಲಸ ಇದು? ಯಾರದು?

"ಜಯಾ!"

ಧ್ವನಿ ಕರ್ಕಶವಾಗಿತ್ತು.

ಜಯಶ್ರೀ ಕುಳಿತಲ್ಲಿಂದಲೇ ಕೇಳಿದಳು:

"ಏನಣ್ಣ?"

"ಬಾ ಇಲ್ಲಿ!"

ಓದುತ್ತಿದ್ದ ಹಾಳೆಗಳ ನಡುವೆ ಕೈಗೆ ಸಿಕ್ಕಿದೊಂದು ಪುಸ್ತಕವನ್ನು ಇರಿಸಿ, ಮನಸ್ಸಿಲ್ಲದ ಮನಸ್ಸಿನಿಂದ ಎದ್ದು, ಜಯಶ್ರೀ ಅಣ್ಣನ ಕೋಣೆಗೆ ಬಂದಳು.

ಕೆಂಪಡರಿದ ಮುಖದ ಬಿರುನೋಟದ ಜಯರಾಮು, ವಿಚಿತ್ರವಾಗಿ ಆಕೆಗೆ ಕಂಡ.

"ಏನು ?"

"ನೀನು ಒಡೆದೆಯಾ ಈ ಕವರನ್ನ ?"

ಮೇಜಿನ ಮೇಲಿತ್ತು ಕತ್ತುಕುಯ್ಯಿಸಿಕೊಂಡಿದ್ದ ಲಕೋಟೆ.

"ಇಲ್ಲವಲ್ಲ !"

"ನಿಜವಾಗಿಯೂ ?"

"ಏನಣ್ಣ ಹಾಗೆ ಕೇಳ್ತೀಯಾ ?"

–ಅವಮಾನಿತಳ ಪ್ರಶ್ನೆ.

"ಈ ಕಾಗದ ಎಲ್ಲಿಂದ್ಬಂತು ? ಯಾರಿಟ್ಟರು ಇಲ್ಲಿ ಇದನ್ನ ?"

"ನನಗೇನು ಗೊತ್ತು ?"

ಒಸರಿ ಬಂದ ಕಂಬನಿಯನ್ನು ಹತ್ತಿಕ್ಕುತ್ತ, ಸೆಟೆದು ನಿಂತು, ಹೊರಡಲು ಅಣಿಯಾದಳು ಜಯಶ್ರೀ.

ನೋವು ತುಂಬಿದ ಬಿರುಕು ಧ್ವನಿಯಲ್ಲಿ ಜಯರಾಮು ಅಂದ:

"ಅನಾಗರಿಕರು ! ಅಶಿಕ್ಷಿತರು ! ಎಂಥ ಕಾಡು ಜನ !"

ತಂಗಿ ಅಳುಮೋರೆಮಾಡಿ ಅಂದಳು:

"ಯಾಕಣ್ಣ ಹಾಗೆ ಕೂಗಾಡ್ತೀಯಾ ? ಅಪ್ಪಯ್ಯ ಕೇಳಿಸಿಕೊಂಡರೆ ಏನು ಗತಿ ?"

"ಏನು ಗತಿ ? ಈ ಮಹಡಿ ಕುಸಿದುಬಿದ್ದರೆ ಏನು ಗತಿ ? ಭೂಕಂಪವಾಗಿ ಈ ಬಂಗಲೆ ನೆಲಸಮವಾದರೆ ಏನು ಗತಿ ?"

ಜಯಶ್ರೀ ಗಾಬರಿಯಾದಳು. ಚೀರಬೇಕೆನಿಸಿತು. ತೆರೆದ ಬಾಯಿಗೆ ಕೈಯನ್ನು ಅಡ್ಡ ಹಿಡಿದಳು.

ಸಂವಾದದ ಸದ್ದು ಅಸ್ಪಷ್ಟವಾಗಿ ಕಮಲಮ್ಮನಿಗೆ ಕೇಳಿಸಿತ್ತು. ಕೆಳಗೆ ಬಂದು ನಿಂತು,

"ಜಯೂ, ಊಟಕ್ಬಾ,"

—ಎಂದು ಮೆಲುದನಿಯಲ್ಲಿ ಅವರು ಕರೆದರು.

ಉತ್ತರ ಬರಲಿಲ್ಲವೆಂದು ತಾವೇ ಮೆಟ್ಟಿಲುಗಳನ್ನು ಏರಿ ಬಂದರು.

ಕಂಡ ನೋಟದಿಂದ ಅವರ ಎದೆ ಝಲ್ಲೆಂದಿತು.

"ಏನಾಯ್ತೊ ಜಯೂ? ಏನಾಯ್ತೆ ಜಯಾ?"

ಈಗ ಜಯಶ್ರೀ ಅತ್ತಳು.

"ನೋಡಮ್ಮ......ಇವನಿಗೆ ಬಂದ ಕಾಗದ ಯಾರೋ ಒಡೆದರಂತೆ. ಅದಕ್ಕೆ—ಹಿ—ಹಿ—ನನ್ನ ಬಯ್ತಾನೆ."

ಚಿಕ್ಕವಳಿದ್ದಾಗ 'ಅಣ್ಣ ಜಡೆ ಹಿಡಿದು ಎಳೆದ' ಎಂದು ತಾನೊಮ್ಮೆ ದೂರು ಕೊಟ್ಟಿದ್ದ ಹಾಗೆ.

ಕಮಲಮ್ಮನೆಂದರು:

"ಇಷ್ಟೇನೆ? ಬಡಿಸಿದ್ದು ತಣ್ಣಗಾಗ್ಹೋಯ್ತು, ಬಾರೋ ಜಯೂ."

ಜಯರಾಮು ತನ್ನ ಕ್ರೋಧ ಪ್ರದರ್ಶನವನ್ನು ಮುಕ್ತಾಯಗೊಳಿಸಲು ಅಣಿಮಾಡಿ,

"ಇರಮ್ಮ, ಬರ್ತೀನಿ. ಈ ಕಾಗದನ ಒಡೆದೋರು ಯಾರು ಅನ್ನೋದಿಷ್ಟು ಗೊತ್ತಾಗಲಿ,"

—ಎಂದ.

ಏನನ್ನೊ ನೆನಪಿಗೆ ತಂದುಕೊಳ್ಳುತ್ತ ಕಮಲಮ್ಮ ಅಂದರು:

"ನಿನ್ನ ತಂದೆ ತಂದರು ಕಣೋ ಅಣ್ಣ. ಲಚ್ಚಿ ಕೈಲಿ ಕೊಟ್ಟು, ಚಿಕ್ಕೋನಿಮಿಯೋರ ಮೇಜಿನ ಮೇಲಿಟ್ಟು ಬಾ—ಅಂತ ಅವಳಿಗೆ ಅವರು ಹೇಳಿದ್ರು."

"ಯಾವಾಗಲಮ್ಮ?"

—ಎಂದು ಕೇಳಿದಳು ಜಯಶ್ರೀ.

"ನೀನು ಊಟಕ್ಕೆ ಕೂತಿದ್ದೆ ಕಣೇ."

ತಾಯಿ ಆಡಿದುದು ನಿಜವೆಂಬುದು ಸ್ಪಷ್ಟವಾಗಿತ್ತು. ತಂದೆಯು ಮೇಲು ವಿಳಾಸಕ್ಕೆ ಬಂದ ಕಾಗದ. ತನ್ನ ತಂದೆಯು ಹೆಸರನ್ನು ಕೇಳಿ ಅರಿತಿದ್ದಳು ಲೀಲಾ. ಪತ್ತೆ ಗೊತ್ತಿರಲಿಲ್ಲ. ಆದರೂ, ಪ್ರಖ್ಯಾತರೆಂದಮೇಲೆ ತಲಪದಿರುತ್ತದೆಯೆ? ಲೀಲಾ ಕಳುಹಿದ್ದಳು. ಅದು ತಂದೆಯು ಕೈಸೇರಿತ್ತು.

ಅವರು ಅದನ್ನು ಒಡೆದು ನೋಡಿದ್ದರು.

ಕಚೇರಿಯಲ್ಲಿ ಯಾರಾದರೂ ಒಡೆದರೆ? ಸಂಭವನೀಯವಲ್ಲ. ವಿಳಾಸ ವನ್ನು ಸರಿಯಾಗಿ ಓದದೆ, ಅದು ತಮ್ಮದೆಂದೇ ಭಾವಿಸಿ, ಸ್ವತಃ ಶ್ರೀಕಂಠಯ್ಯ ನವರೇ......

ಒಡೆದರೇನಾಯಿತು? ಓದದೇ ಇರಬಹುದು......

ಆದರ ಬದಲು, ತಿಳಿದು ತಿಳಿದೂ ಒಡೆದು ಓದಿದ್ದರೆ? ತಂದೆಯ ಸಂಸ್ಕಾರ ವನ್ನು ಪರಿಗಣಿಸಿದರೆ ಇದು ದುಸ್ಸಾಧ್ಯವಲ್ಲ......

ತನ್ನನ್ನೇ ನೋಡುತ್ತ ನಿಂತಿದ್ದ ತಾಯಿಯನ್ನು ಜಯರಾಮು ಕೇಳಿದ:

"ನಿನ್ನ ಊಟ ಆಗಿಲ್ವ?"

"ಇಲ್ಲ."

"ಹೋಗು, ಬರ್ತೀನಿ."

ಜಯರಾಮು ಎದ್ದು ಉಡುಪು ಒದಲಾಯಿಸಿದ. ಜಯಶ್ರೀಯ ಸಿಟ್ಟು ಇಳಿದಿರಲಿಲ್ಲ. ಅವಳು ತನ್ನ ಕೊಠಡಿಗೆ ಹೋಗಿ ಬಲವಾಗಿ ಬಾಗಿಲು ಮುಚ್ಚಿ ದಳು. ಕಮಲಮ್ಮ ಕೆಳಕ್ಕಿಳಿದರು. ಮಗ ಅವರನ್ನು ಹಿಂಬಾಲಿಸಿದ.

ಜಯರಾಮು ಮಾಡಬೇಕಾಗಿದ್ದ ಎರಡು ಕೆಲಸಗಳಿದ್ದುವು. ಒಂದು, ಉದ್ಯೋಗ ದೊರೆತ ವಿಷಯವನ್ನು ತಂದೆಗೆ ತಿಳಿಸುವುದು; ಇನ್ನೊಂದು, ಮಾರ ನೆಯ ದಿನ ತಾನು ಹಾಸ್ಟೆಲಿಗೆ ಹೊರಟುಹೋಗುವುದನ್ನು ಮನೆಯಲ್ಲಿ ಜಾಹೀರು ಮಾಡುವುದು.

ಹಜಾರದಲ್ಲಿ ಒಂದು ಕ್ಷಣ ನಿಂತು ಜಯರಾಮು ತಂದೆಯ ಕೊಠಡಿಯ ಕಡೆಗೆ ನೋಡಿದ. ಬಾಗಿಲು ಭದ್ರವಾಗಿ ಮುಚ್ಚಿಕೊಂಡಿತ್ತು. ಜಗಲಿಯಲ್ಲಿ ಜಗ್ಗ, ನಿದ್ದೆಹೋಗಲು ಅಣಿಯಾಗಿ ಕುಳಿತಿದ್ದ. ಗೋಡೆಗಡಿಯಾರದ ಮುಳ್ಳು ಗಳು ಹತ್ತಾಯಿತು, ಹೊತ್ತಾಯಿತು, ಎಂದು ಸೂಚಿಸುತ್ತಿದ್ದುವು.

ತಂದೆಯೊಡನೆ ತನ್ನ ಭೇಟಿ ಸರಳವಾಗಿ ನಡೆಯುತ್ತದೆನ್ನುವ ನಂಬಿಕೆ ಜಯ ರಾಮುಗೆ ಇರಲಿಲ್ಲ. ಸಾಲದುದಕ್ಕೆ, ತಂದೆ ಒಡೆದು ಓದಿರಬಹುದಾದ ಕಾಗದದ ದೆಸೆಯಿಂದ ಪರಿಸ್ಥಿತಿ ಮತ್ತಷ್ಟು ಜಟಿಲಗೊಂಡಿರುವುದು ಸಾಧ್ಯವಿತ್ತು.

"ಸರಿ. ಹೋಗಲಿ. ನಾಳೆ ಮಾತನಾಡಿದರಾಯ್ತು."

—ಎಂದುಕೊಂಡ ಜಯರಾಮು.

ಆತ ತಾಯಿಯೊಡನೆ ಅಡ್ಡ ಪಂಜ್ತಿಯಲ್ಲಿ ನೆಲದ ಮೇಲೆಯೇ ಊಟಕ್ಕೆ ಕುಳಿತ.

ಹಸಿವಾಗಿತ್ತು. ಆದರೆ ತಪ್ತಗೊಂಡಿದ್ದ ಮೆದುಳು ನಾಲಿಗೆಯ ರುಚಿಯನ್ನು ಕೆಡಿಸಿತು.

"ಹೊರಗಡೆ ತಿಂಡಿ ತಿಂದಿಯಾ?"

–ತಾಯಿ ಕೇಳಿದರು.

"ಹುಂ."

–ಸುಳ್ಳು. ಹೆತ್ತವಳನ್ನು ಸಮಾಧಾನಪಡಿಸುವುದಕ್ಕೋಸ್ಕರ.

"ಯಾವತ್ನಿಂದ ಸೇರ್ಕೊಂತೀಯಾ?"

"ಒಂದನೇ ತಾರೀಕಿನಿಂದ."

"ಬೆಳಿಗ್ಗೆ ಬೇಗನೆ ಹೋಗ್ಬೇಕೇನೊ?"

"ಹ್ಞ. ಎಂಟು ಗಂಟೆಗೆಲ್ಲಾ ಆಸ್ಪತ್ರೇಲಿರಬೇಕು."

"ಆಸ್ಪತ್ರೆ ಕಾಲೇಜು ಎರಡು ಕಡೇನೂ ಕೆಲಸವಿರುತ್ತಾ?"

"ಹ್ಞ."

ಹಿಂದಿನ ವರ್ಷ ಕಮಲಮ್ಮನ ಆರೋಗ್ಯ ಕೆಟ್ಟಿದ್ದಾಗ, ಶ್ರೀಕಂಠಯ್ಯ ದೊಡ್ಡಾಸ್ಪತ್ರೆಯಲ್ಲಿ ಯಾರಿಗೋ ಫೋನ್‌ಮಾಡಿ, ಪತ್ನಿಯನ್ನು ಕಳುಹಿಸಿಕೊಟ್ಟಿದ್ದರು. ಆ ಜನಜಾತ್ರೆಯಲ್ಲಿ ಬಿಳಿಯ ಕೋಟು ತೊಟ್ಟ ತಮ್ಮ ಮಗನನ್ನು ಕಮಲಮ್ಮ ಕಲ್ಪಿಸಿಕೊಂಡರು.

ಅಭಿಮಾನ ಹುಟ್ಟಿಸುವ ಆ ಸುಂದರ ಚಿತ್ರ ಕಣ್ಣಮುಂದಿದ್ದಾಗಲೂ ಮಗನ ಊಟೋಪಚಾರಗಳ ಪ್ರಶ್ನೆಯನ್ನು ಅವರು ಮರೆಯಲಿಲ್ಲ.

"ಊಟಕ್ಕೆ ಬರೋಕಾಗುತ್ತೊ? ಕಳಿಸಿಕೊಡ್ಬೇಕೊ?"

ಬಾಯಲ್ಲಿದ್ದ ತುತ್ತನ್ನು ಒತ್ತಾಯಪೂರ್ವಕವಾಗಿ ಗಂಟಲಿನೊಳಕ್ಕೆ ಜಯರಾಮು ತಳ್ಳಿದ. ಹಾಸ್ಟೆಲಿಗೆ ಹೋಗುವ ತನ್ನ ನಿರ್ಧಾರವನ್ನು ಬೆಳಗ್ಗೆ ಪ್ರಕಟಿಸಿದರಾಯಿತು ಎಂದಿದ್ದವನು, ಈಗ ಹೇಳುವುದೇ ಮೇಲಲ್ಲವೆ?–ಎಂದು ಯೋಚಿಸಿದ.

"ಊಟ ಹಾಸ್ಟೆಲ್ನಲ್ಲಿ ಮಾಡ್ತೀನಮ್ಮ."

"ಹೋಟೆಲಿನಲ್ಲೆ? ಯಾಕೆ, ಜಯೂ?"

"ಹಾಸ್ಟೆಲ್ನಲ್ಲಿ. ಕಾಲೇಜಿನ ಹುಡುಗರೂ ಅಧ್ಯಾಪಕರೂ ಅಲ್ಲೇ ಇರ್ತಾರೆ. ನಾನೂ–"

ಮುಂದೆ ಹೇಳುವ ಅಗತ್ಯವಿರಲಿಲ್ಲ. ಕಮಲಮ್ಮನಿಗೆ ಅರ್ಥವಾಗಿತ್ತು.

ಬಡಿಸಲು ಬಂದ ಭಟ್ಟನಿಗೆ 'ಬೇಡ'ವೆಂದು ಕೈ ಅಲ್ಲಾಡಿಸುತ್ತ ಅವರೆಂದರು:

"ಹೋಗಲೇಬೇಕೇನೊ ?"

"ಹೂನಮ್ಮ."

"ಇಲ್ಲಿರೋದಕ್ಕೆ ನಿನಗೆ ಮನಸಿಲ್ಲ, ಅನ್ನು."

"ನಿನ್ನನ್ನು ಬಿಟ್ಟು ಹೋಗೋಕೆ ಮನಸ್ಸಿಲ್ಲವಮ್ಮ. ಆದರೆ ಸದ್ಯದ ಪರಿಸ್ಥಿತೀಲಿ ನಾನೊಬ್ಬನೇ ಹೊರಗಿರೋದು ವಾಸಿ."

ಕಮಲಮ್ಮನ ಕಣ್ಣುಗಳು ಹನಿಗೂಡಿದುವು.

"ಮಜ್ಜಿಗೆಗೆ ಅನ್ನ ಹಾಕಿಸ್ಕೊ,"

—ಎಂದು ನುಡಿದು ಅವರೆದ್ದರು.

ಜಯರಾಮು 'ಅನ್ನ ಬೇಡ' ಎಂದು ಭಟ್ಟನಿಗೆ ಹೇಳಿ, ಮಜ್ಜಿಗೆ ಇಸಕೊಂಡು ಕುಡಿದ.

ತಾಯಿ-ಮಗನ ಸಂಭಾಷಣೆಯಿಂದ ಸ್ವಾರಸ್ಯದ ಸಂಗತಿಗಳನ್ನು ತಿಳಿದ ಭಟ್ಟ, ಯಾವ ಭಾವನೆಯನ್ನೂ ತೋರ್ಪಡಿಸದೆ, ಯಾಂತ್ರಿಕವಾಗಿ ತನ್ನ ಕೆಲಸದಲ್ಲಿ ಮಗ್ನನಾದ.

ಆ ಬಳಿಕ ಕಮಲಮ್ಮ ಏನನ್ನೂ ಹೇಳಲಿಲ್ಲ. ತಾನು ಉಂಡುದನ್ನೂ ಕೇಳಿದುದನ್ನೂ ಜೀರ್ಣಿಸಿಕೊಳ್ಳಲು ಅವರಿಗೆ ಏಕಾಂತ ಬೇಕಾಗಿತ್ತು. ಪತಿಯು ಮಲಗುವ ಕೊಠಡಿಯಲ್ಲಿ ಕುಡಿಯಲು ನೀರಿದೆಯೇ ಎಂದಷ್ಟು ನೋಡಿ, ತಮ್ಮ ಕೋಣೆಗೆ ಅವರು ಹೋದರು.

ಮರಳುತ್ತ ಜಯರಾಮು ಹಜಾರದಲ್ಲಿ ಮತ್ತೊಮ್ಮೆ ತಂದೆಯ ಕೊಠಡಿಗೆ ದೃಷ್ಟಿ ಹರಿಸಿದ. ಮೊದಲು ಇದ್ದಂತೆಯೇ ಇತ್ತು ಬಾಗಿಲು.

'ಇವತ್ತಿಗಿಷ್ಟು ಸಾಕು. ಏನಿದ್ದರೂ ಇನ್ನು ನಾಳೆ,'

—ಎಂದು ಜಯರಾಮು ತನ್ನ ಕೊಠಡಿಗೆ ತೆರಳಿದ.

ಅಪೂರ್ಣವಾಗಿದ್ದ ಬೇರೊಂದು ಕೆಲಸವನ್ನು ಪೂರ್ತಿಗೊಳಿಸಲು ಅವನ ಮನಸ್ಸು ತವಕಿಸುತಿತ್ತು. ಅದು, ಸುಖ್‌ಠಣ್‌ಕರ್ ಬರೆದಿದ್ದ ಪತ್ರದ ವಾಚನ.

ಬಾಗಿಲು ಮುಚ್ಚಿ ,ಅಗಣಿ ತಗಲಿಸಿ, ಪಾಯಜಾಮದ ಜೇಬಿನೊಳಕ್ಕೆ ತಾನು ತುರುಕಿದ್ದ ನೀಲಿ ಕಾಗದವನ್ನು ಜಯರಾಮು ಹೊರತೆಗೆದು, ಮಡಚಿ ಹೋಗಿದ್ದ

ಮೂಲೆಯನ್ನು ಕೈಯಿಂದ ಸವರಿ, ಒರಗುಕುರ್ಚಿಯನ್ನು ಮೇಜಿನ ಮಗ್ಗುಲಿಗೆ ಎಳೆದು ಕುಳಿತು, ಓದತೊಡಗಿದ:

ಬೊಂಬಾಯಿ
೨೨ ಸೆಪ್ಟೆಂಬರ್, ೧೯೬೨

ನನ್ನ ಪ್ರೀತಿಯ ಡಾ. ರಾಮು,

ಈ ಕಾಗದ ನೋಡಿ ಪ್ರಾಯಶಃ ನಿಮಗೆ ಆಶ್ಚರ್ಯವಾದೀತು. ನನ್ನ ಕೈ ನೀವು ಕಂಡಿದ್ದೀರಿ; ಆದರೆ ಕೈಬರಹವನ್ನಲ್ಲ! ಸಂಬೋಧನೆಯಂತೂ ಬಹಳ ಆತ್ಮೀಯವಾಯಿತಲ್ಲವೆ? "ನನ್ನ ಪ್ರೀತಿಯ" ಎಂದು ಬರೆದುದಕ್ಕೆ ಕ್ಷಮೆ ಕೇಳಲೆ? ಇದಕ್ಕಿಂತಲೂ ಹೆಚ್ಚು ಸಲಿಗೆಯಿಂದ ಮನಸಿನಲ್ಲೇ ಅದೆಷ್ಟು ಸಾರೆ ನಿಮ್ಮನ್ನು ಸಂಬೋಧಿಸಿರುವೆನೊ? ಗಾಬರಿಯಾಯಿತೆ? 'ಹುಚ್ಚಿ' ಎನ್ನುವಿರಾ ನನ್ನನ್ನು? ಅನ್ನಿ, ಧಾರಾಳವಾಗಿ ಅನ್ನಿ.

ಭಾಗ್ಯನಗರದ ನಿಲ್ದಾಣದಲ್ಲಿ ನಿಮ್ಮ ಕೊರಳಿಗೆ ಹಾರ ಬಿದ್ದಿತೋ, ಇಲ್ಲವೋ! ಲಗ್ನಪತ್ರಿಕೆ ಬರಬಹುದು ಎಂದು ಇಷ್ಟು ದಿನ ಕಾದೆ. ವಿಳಾಸಗಳ ಪಟ್ಟಿ ಮಾಡುವಾಗ ನನ್ನ ನೆನಪಾದರೂ ನಿಮಗೆ ಯಾಕಿದ್ದೀತು?–ಅಂತ, ಇಲ್ಲಿನ ನಿಮ್ಮ ಒಬ್ಬಿಬ್ಬರು ಗೆಳೆಯರನ್ನು ಕೇಳಿ ನೋಡಿದೆ. ಭಾಗ್ಯನಗರ ತಲಪಿದ ಮೇಲೆ ನಿಮ್ಮ ಸುದ್ದಿಯೇ ಇಲ್ಲವೆಂದು ತಿಳಿಯಿತು. ಕಸಿವಿಸಿಯಾಯಿತು. ನಿಮಗೆ ಬರೆಯೋಣವೆನ್ನಿಸಿತು. ಹೇಗೂ, ಲಜ್ಜಾವತಿ ಎಂಬ ಹೆಸರು ನನಗಿಲ್ಲವಲ್ಲ!

ಪ್ರಿಯ ಸರ್ಜನ್, ಆರೋಗ್ಯವೆ? ಯಾಕೆ ನೀವು ಭಾಗ್ಯನಗರದಲ್ಲೇ ಉಳಿದಿದ್ದೀರಿ? ಅದೇ ಏನು ನಿಮ್ಮ ಮೊದಲ ಪ್ರೇಯಸಿ? ಪ್ರವಾಸ ಕಾಲದ ಪ್ರೇಮ ಪ್ರಕರಣದ ಹಾಗೆ, ಲಿಫ್ಟಿನೊಳಗಿನ ಸಾಮೀಪ್ಯದ ಹಾಗೆ, ಮುಂಬಯಿಯ ಮೇಲಿನ ನಿಮ್ಮ ಒಲವು ಕ್ಷಣಿಕವೇನು? ಇಷ್ಟೊಂದು ಸುಲಭವಾಗಿ ನಿಮ್ಮ ಗೆಳೆಯರನ್ನು ಮರೆತುಬಿಟ್ಟಿರಾ?

ಮಳೆಗಾಲದ ಆರ್ಭಟ ಇಲ್ಲಿ ಮುಗಿಯಿತು. ಹವಾಮಾನದಲ್ಲಿ ಯಾವ ಅತಿರೇಕವೂ ಇಲ್ಲದ ನಿಮ್ಮೂರಿನ ಜನರು ಭಾಗ್ಯಶಾಲಿಗಳು....ಮಳೆಯ ಗಿಜಿಬಿಜಿ ಬೇಡವೆಂದೇ ಭಾಗ್ಯನಗರಕ್ಕೆ ಓಡಿದಿರಿ, ಅಲ್ಲವೆ? ಏನಿದ್ದರೂ ನೀವಿಲ್ಲಿಗೆ ಮರಳಲೇ ಬೇಕು. ಪಶ್ಚಿಮಾಭಿಮುಖವಾಗಿ ಪಯಣ ಬೆಳೆಸುವವರು ಜೆಟ್‌ಪ್ಲೇನ್‌ಗಳನ್ನೇರುವುದು ಈ ನಗರದಲ್ಲೇ.

ನನಗೊಂದು ವಿಚಿತ್ರ ಅನುಭವವಾಗುತ್ತಿದೆ. ಇಲ್ಲಿ ನೀವು ತೀರಾ ಸಮೀಪ ದಲ್ಲಿದ್ದಾಗಲೂ ಬಹಳ ದೂರವಿದ್ದಂತೆ ಭಾಸವಾಗುತಿತ್ತು. ಆದರೆ ಈಗ, ನೀವು ದೂರವಿದ್ದೂ ನನ್ನ ಹೃದಯಕ್ಕೆ ಹತ್ತಿರವಾಗಿದ್ದೀರಿ. ಎಚ್ಚರದ ಬದುಕಿನಲ್ಲಿ, ಮರೆವಿನ ನಿದ್ರಾವಸ್ಥೆಯಲ್ಲಿ, ಸದಾ ಕಾಲ ನೀವು ನನ್ನ ಸಂಗಡವಿದ್ದೀರಿ. ಪರೇಖ್ ನನ್ನನ್ನು ಕಾಣಲು ಬಂದಾಗ, ವಿಹಾರಕ್ಕೆಂದು ಹೊರಕ್ಕೆ ನನ್ನನ್ನು ಒಯ್ದಾಗ, ಅಲೆ ದಾಟದಿಂದ ದಣಿದು ನಾವೆಲ್ಲಾದರೂ ಉಳಿದುಕೊಂಡಾಗ, ನೀವೂ ಜತೆಯಲ್ಲಿರು ತ್ತೀರಿ. ನಿಮ್ಮಷ್ಟೇ ಎತ್ತರದ, ನಿಮ್ಮದೇ ಆಕಾರದ, ಯಾರಾದರೂ ಕಣ್ಣಿಗೆ ಬಿದ್ದಾಗ ನೀವೇ ಬಂದಿರೆನ್ನುವಂತೆ ಭ್ರಮಿಸಿ ಕೆಲ ನಿಮಿಷ ನಾನು ಮೈಮರೆಯು ತ್ತೇನೆ.

ಇದೊಂದು ಕಾಯಿಲೆ, ಅಲ್ಲವೆ ಸರ್ಜನ್? ಎಂಥ ಕಾಯಿಲೆ? ರೋಗ ಲಕ್ಷಣಗಳನ್ನು ಬರೆದಿದ್ದೇನೆ. ಬಂದು ಪರೀಕ್ಷಿಸುವುದಿಲ್ಲವೆ?

ಬಾಲ್ಯದಲ್ಲಿ ಹೆತ್ತವರ ಸಾನ್ನಿಧ್ಯಕ್ಕೂ ಪ್ರೀತಿಗೂ ಎರವಾದ ಮಗು, ತಾನು ಬೆಳೆದಂತೆ, ಹಿಂದೆ ತನಗೆ ದೊರೆಯದೇ ಹೋದುದನ್ನು ಇತರರಲ್ಲಿ ಅರಸುತ್ತದಂತೆ. ಈ ಶೋಧನೆಯನ್ನು ನಾನು ಬಹಳ ಮಾಡಿರಬೇಕು ಎನಿಸುತ್ತದೆ! ನನ್ನ ಬಗೆಗೆ ಲಘುವಾಗಿ ಮಾತನಾಡುವವರು ಎಷ್ಟೊಂದು ಜನ! ಆದರೆ ನನ್ನನ್ನು ತಿಳಿದು ಕೊಂಡವರ, ತಿಳಿದುಕೊಳ್ಳಲು ಯತ್ನಿಸುವವರ, ಸಂಖ್ಯೆ ಶೂನ್ಯ!

ಕೋಟ್ಯಧೀಶರಾದ ನಿಮ್ಮ ತಂದೆ ಬಹಳ ಉದಾರಿಯೆಂದು ಕೇಳಿದ್ದೇನೆ. ನೀವು ಮಾತ್ರ ಜಿಪುಣಾಗ್ರೇಸರ! ಒಲವಿನ ಅಮೂಲ್ಯ ಭಂಡಾರವಿದ್ದೂ ದಟ್ಟ ದರಿದ್ರನಂತೆ ದಿನಕಳೆಯುತ್ತೀರಲ್ಲಾ! ಹೋಗಲಿ, ನೀವು ಉಡುಗೊರೆ ನೀಡಬೇಕಾ ಗಿಲ್ಲ; ಕಾಣ್ಕೆ ಕೊಡಬೇಕಾಗಿಲ್ಲ. ಭಿಕ್ಷಾಪಾತ್ರೆ ಹಿಡಿದು ಬಂದ ವ್ಯಕ್ತಿಯ ಮೇಲಾ ದರೂ ಕರುಣೆ ಬೇಡವೆ? ಹೆಚ್ಚು ಕೇಳುವುದಿಲ್ಲ ನಾನು. ಒಂದು ಹಿಡಿ, ಒಂದೇ ಹಿಡಿ......

ನಾನು ಕೆ. ಇ. ಎಂ. ಆಸ್ಪತ್ರೆ ಸೇರಿದ ಮೊದಲ ದಿನಗಳ ಮಾತು. ಯಾವು ದೋ ಟ್ಯೂಮರಿನ ಕೇಸು. ಒ. ಟಿ. ಯಲ್ಲಿ ಬಹಳ ಹೊತ್ತಿನಿಂದ ಶಸ್ತ್ರಕ್ರಿಯೆ ನಡೆದಿತ್ತು. ದೊಡ್ಡ ಸರ್ಜನರಿಗೆ ನೀವು ಸಹಾಯಕರಾಗಿದ್ದಿರಿ. ನಾನೂ ಇಬ್ಬರು ಸಹೋದ್ಯೋಗಿಗಳೂ ಹೊರಗೆ ಕಾರಿಡರ್‌ನಲ್ಲಿ ಹರಟೆಹೊಡೆಯುತ್ತ ನಿಂತಿ ದ್ದೆವು. ಶಸ್ತ್ರಕ್ರಿಯೆ ಮುಗಿದು ಬಾಗಿಲಲ್ಲಿ ನೀವು ಕಾಣಿಸಿಕೊಂಡಿರಿ. ಬಿಳಿಯ

ನಿಲುವಂಗಿ, ಶಿರಸ್ತ್ರಾಣ, ಮುಖವಾಡ......ಕೃತಾರ್ಥತೆಯ ಹೊಳಪು ಕಣ್ಣುಗಳಲ್ಲಿ. ನೀವೊಬ್ಬರು ಗ್ರೀಕ್‌ದೇವರ ಹಾಗೆ ಕಂಡಿರಿ. ಓಡಿಹೋಗಿ ನಿಮ್ಮ ಪಾದಗಳನ್ನು ಸ್ಪರ್ಶಿಸಿ ಮುದ್ದಿಸಬೇಕು–ಎನಿಸಿತು ನನಗೆ. ನಿಮ್ಮ ಪಾವಿತ್ರ್ಯಕ್ಕೆ ಕುಂದು ಉಂಟಾಗಬಹುದೆಂಬ ಭೀತಿಯಲ್ಲದಿದ್ದರೆ ನಾನು ಹಾಗೆ ಮಾಡಿಯೂ ಮಾಡುತ್ತಿದ್ದೇನೇನೊ. ಹೇಗೂ ನಿರ್ಲಜ್ಜಳು ನಾನು!

ನಿಮಗೊಂದು ಸುದ್ದಿ. ಪರೇಖ್ ನನ್ನನ್ನು ಮದುವೆಯಾಗುವರಂತೆ. ಉಹುಂ–ಸುದ್ದಿಯಲ್ಲ, ವರದಿ. ಇದನ್ನು ಸಲ್ಲಿಸಿ ನಾನು ಕೇಳುತ್ತಿರುವುದು ನಿಮ್ಮ ಸಲಹೆಯನ್ನು. ಅವರಿಗೆ ಏನೆಂದು ನಾನು ಉತ್ತರವೀಯಲಿ?

ತಮ್ಮ ಹಿರಿಯರ ಸಮ್ಮತಿ ಅವರಿಗೆ ಸುಲಭವಾಗಿ ದೊರೆಯುವುದಂತೆ. ದೊರೆಯುವುದೇನು ಬಂತು? ಯಾರನ್ನಾದರೂ ಸರಿ, ಒಮ್ಮೆ ಈತ ಮದುವೆಯಾದರೆ ಸಾಕು–ಎಂದಿರುವರಂತೆ ಲಕ್ಷಾಧೀಶರಾದ ಅವರ ತಂದೆ ತಾಯಿ. ಪರೇಖ್ ಅನ್ನುತ್ತಾರೆ–ನಾನು ಹೂಂ ಎಂದೊಡನೆ ಮದುವೆ. ಅಲ್ಲಿಂದ ಸ್ವಿಜರ್ಲೆಂಡಿನಲ್ಲಿ ಮಧುಚಂದ್ರ. ಮುಂದೆ ಇಂಗ್ಲೆಂಡಿಗೆ ಪ್ರಯಾಣ. ಅಲ್ಲಿ ಪರೇಖ್ ಎಂ.ಆರ್.ಸಿ. ಪಿ. ಮಾಡಿಕೊಳ್ಳುತ್ತಾರೆ. ನಾನೂ ಮಾಡಿಕೊಳ್ಳಬಹುದು......ಹಿಂತಿರುಗಿದಮೇಲೆ ಇಬ್ಬರೂ ಜತೆಯಾಗಿ ಒಂದು ಚಿಕಿತ್ಸಾಲಯ ತೆರೆಯುವುದು......

–ಇದೀಗ ವಿವಾಹಮಂಟಪ ಪ್ರವೇಶದ ಪ್ರಾಸ್ಪೆಕ್ಟಸ್! ಹೇಳಿ, ಏನೆಂದು ಉತ್ತರಿಸಬೇಕು ನಾನು?

ನನ್ನನ್ನು ಹೆತ್ತವರು ಬದುಕಿಲ್ಲ. ಒಡಹುಟ್ಟಿದವರಿಲ್ಲ ನನಗೆ. ಇರುವವರೆಲ್ಲ ನನ್ನ ಬಗೆಗೆ ತಾತ್ಸಾರ ತೋರುವ ದೂರದ ಸಂಬಂಧಿಗಳು ಮಾತ್ರ. ಯಾರೊಡನೆ ಸಮಾಲೋಚನೆ ನಡೆಸಲಿ?

ನಿಮ್ಮನ್ನು ಕಾಣಲು ತವಕಿಸುತ್ತಿದ್ದೇನೆ. ಬೊಂಬಾಯಿಗೆ ಬರುತ್ತೀರಾ? ಯಾವತ್ತು ಹೊರಡುತ್ತೀರಿ? ವಿಮಾನಮಾರ್ಗವಾಗಿ ಬನ್ನಿ.

ಯಾವುದೇ ಕಾರಣದಿಂದ ಬೇಗನೆ ಬರುವುದು ನಿಮಗೆ ಅನನುಕೂಲವಾದರೆ ನಾನೇ ಭಾಗ್ಯನಗರಕ್ಕೆ ಬರುತ್ತೇನೆ. ನಿಮ್ಮನ್ನು ಎಲ್ಲಿ ಕಾಣಬಹುದೆಂದು ವಿವರವಾಗಿ ಬರೆದು ತಿಳಿಸಿ.

ಹೇಳುವುದನ್ನೆಲ್ಲ ಹೇಳಿಯಾಯಿತು ಎನಿಸುತ್ತಿದೆ. ಬಹಳ ದೀರ್ಘವಾಯಿ

ತಲ್ಲವೆ ಪತ್ರ? ನನ್ನ ಬರೆವಣಿಗೆ ನೋಡಿ. ಭಾಷೆ ಚೆನ್ನಾಗಿದೆ, ಕೈಬರೆಹ ಯಾವುದೋ ದೇವರ ಶಾಪ–ಎಂದವರುಂಟು. ದಯವಿಟ್ಟು ನನ್ನನ್ನು ಶಪಿಸಬೇಡಿ!

ಉಳಿದುದೆಲ್ಲ ಮುಖತಃ......

ಒಲವಿನೊಂದಿಗೆ

ನಿಮ್ಮ(ನ್ನ)

ಲೀಲಾ

–ಜಯರಾಮು ಓದಿ ಮುಗಿಸಿ, ಕುರ್ಚಿಗೊರಗಿ, ಶೂನ್ಯ ನೋಟ ಬೀರುತ್ತ ಛಾವಣಿಯನ್ನು ನೋಡಿದ. ಮೇಜಿನ ದೀಪದ ಹೊದಿಕೆ, ಛಾವಣಿಯ ಪಾಲಿಗೆ ಕತ್ತಲೆಯ ಪರದೆಯಾಗಿತ್ತು. ಓರಣವಾಗಿ ಒತ್ತಾಗಿ ಪೋಣಿಸಿದ್ದ ಮೋಹಕ ಪದ ಪುಂಜಗಳನ್ನೋದಿದ ಜಯರಾಮುಗೆ, ದೀಪ ಆರಿಹೋಗಿ ಕತ್ತಲೆಯಲ್ಲಿ ತಾನು ಕುಳಿತಿದ್ದಂತೆ ಭಾಸವಾಯಿತು.

ತನ್ನ ಪ್ರಜ್ಞೆಯ ದೀಪದ ಬತ್ತಿಯನ್ನು ಸರಿಪಡಿಸಿ, ಆತ ಮತ್ತೊಮ್ಮೆ–ಈ ಸಲ ನಿಧಾನವಾಗಿ–ಆ ಕಾಗದವನ್ನು ಓದಿದ.

ಆ ವಾಚನದ ಅನಂತರವೂ ಬೆಳಕು ಮತ್ತೆ ಕಣ್ಣುಮುಚ್ಚಿತು.

ಇರುಳಲ್ಲಿ ಲೀಲಾ ನಗುತ್ತಿದ್ದಳು. ಜಯರಾಮುವಿನ ತೊಡೆಯ ಮೇಲೆ ಕುಳಿತು ತನ್ನ ಬಾಹುಗಳಿಂದ ಆತನ ಕತ್ತನ್ನು ಬಳಸಿದ್ದಳು. 'ಮುಖತಃ ಮಾತ ನಾಡಲು' ಆರಂಭಿಸಿದ್ದಳು.

ಜಯರಾಮು ಎದ್ದು ನಿಂತ. ಕಾಗದದ ಹಾಳೆಗಳನ್ನು ಮಡಚಿದ. ಏನೊ ನೆನಪಾದವನಂತೆ ಮತ್ತೊಮ್ಮೆ ತೆರೆದು ದಿನಾಂಕವನ್ನು ಗಮನಿಸಿದ. ಅವನನ್ನು ಹುಡುಕಿಕೊಂಡು ನಾಲ್ಕು ದಿನ ಭಾಗ್ಯನಗರದಲ್ಲೇ ಅದು ಅಲೆದಿತ್ತು. ಹಾಳೆ ಗಳನ್ನು ಪುನಃ ಮಡಚಿ ಮೇಜಿನ ಮೇಲಿದ್ದ ಕವರಿನೊಳಗೆ ಇರಿಸಿದ. ಸುರಕ್ಷಿತ ವಾಗಿಡಲು ಸ್ಥಳ ಯಾವುದೆಂದು ಒಂದು ಕ್ಷಣ ಯೋಚಿಸಿ, ಸೂಟ್‌ಕೇಸನ್ನು ಕೆಳ ಗಿಳಿಸಿ ಟ್ರಂಕನ್ನು ತೆರೆದ.

ಲೀಲಾ ಕೊಟ್ಟಿದ್ದ 'ಲೊಲಿಟಾ'. [ಪುಸ್ತಕ ಓದಿದಿರಾ?–ಎಂದು ಕೇಳಿಲ್ಲ ಇವಳು. ತನಗೆ ಅದನ್ನು ಕೊಟ್ಟ ನೆನಪಾದರೂ ಇದೆಯೋ ಇಲ್ಲವೋ!......] ಅದರೊಳಗಿಡುವುದೇ ಸರಿ. ಎಲ್ಲಿ ಇಟ್ಟಿದ್ದೆ ತಾನದನ್ನು? ಉಡುಪುಗಳ ಕೆಳಗೆ. ಇಲ್ಲಿಲ್ಲ. ಈಚೆ ಸಾಲಿನಲ್ಲಿದೆಯೇನೋ. ಅರೇ–ಟ್ರಂಕಿಗೂ ಕೈ ಹಾಕಿದಾರಲ್ಲಾ ಯಾರೊ? ಈ ಕೆಲಸವನ್ನೂ ಮಾಡಿರಬಹುದೆ ತನ್ನ ತಂದೆ?

ಯಾವ ವೈಯಕ್ತಿಕ ಸ್ವಾತಂತ್ರ್ಯಕ್ಕೂ ಅವಕಾಶವಿಲ್ಲದ ಸೆರೆಮನೆ ಇದು !

ತಂದೆ ಮತ್ತು 'ಲೋಲಿಟಾ'.

ಜಯರಾಮುಗೆ ನಗುಬಂತು. ವಯಸ್ಸಾದವರಿಗೆ ಅಂತಹ ಪುಸ್ತಕ ಬಲು ರುಚಿ. ಓದಿಕೊಳ್ಳಲಿ......

ಕಾಗದವನ್ನು ಜಯರಾಮು ಟ್ರಂಕಿನ ತಳದಲ್ಲಿಟ್ಟ.

ನಿರ್ದಿಷ್ಟವಾಗಿ ಇಂಥದೇ ಕಾರಣಕ್ಕಾಗಿ ಎಂದು ಹೇಳಲಾಗದ ತುಮುಲ ಅವನ ಮನಸ್ಸಿನಲ್ಲಿ ಎದ್ದಿತು. ಶತಪಥ ತುಳಿದ. ಕಿಟಿಕಿಗಳ ಕೆಳಭಾಗವನ್ನೂ ತೆರೆದ. ಮಂದ ಪ್ರಕಾಶ ಬೀರುತ್ತಿದ್ದ ಬೀದಿಯ ದೀಪಗಳು ದೂರದಲ್ಲಿದ್ದುವು. ಕಿಟಿಕಿಯ ಬಳಿ ನಿಂತ. ತಂದೆಯ ಕೊಠಡಿಯಿಂದ ತೂರಿಬರುತಿದ್ದ ಬೆಳಕು ಕೆಳಗೆ ದೃಷ್ಟಿಹಾಯಿಸಿದಾಗ ಆತನಿಗೆ ಕಾಣಿಸಿತು.

ಇನ್ನೂ ನಿದ್ದೆಹೋಗಿರಲಿಲ್ಲ ತಂದೆ. 'ಲೊಲಿಟಾ' ಓದುತ್ತಿರುವರೇನೊ?

ಪತ್ರವನ್ನೂ ಅವರು ಓದಿದ್ದರೆ ಅವರಿಗೆ ಏನೆನಿಸಿರಬಹುದು? ಏನಿದ್ದಿರಬಹುದು ಅವರ ಪ್ರತಿಕ್ರಿಯೆ? ಸದಾಶಿವಯ್ಯನವರ ಮಗಳನ್ನು ಮದುವೆಯಾಗಲು ತಾನು ನಿರಾಕರಿಸಿದುದಕ್ಕೆ ಕಾರಣ ತಿಳಿಯಿತು-ಎಂದೆ? ಹಾಗೇನಾದರೂ ಅವರು ಯೋಚಿಸಿದ್ದರೆ ಅದೆಂಥ ಮೂರ್ಖತನವಿರಬೇಡ !

ಲೀಲಾ ದಿಟ್ಟೆ. ಸಂಶಯವಿಲ್ಲ. ಅಸಾಧಾರಣ ಹುಡುಗಿ. ಅದೂ ನಿಜ. ಅದೆಷ್ಟು ಸಲ ಬರೆದು ಹರಿದು ಮತ್ತೆ ಬರೆದಳೊ? ಏನೇ ಇರಲಿ, ಅಷ್ಟು ಸೊಗಸಾದ ಒಕ್ಕಣೆ ಬೇರೆ ಯಾವ ಹುಡುಗಿಯಿಂದ ಸಾಧ್ಯ? ಎಂ.ಬಿ.,ಬಿ.ಎಸ್. ಪದವಿ ಪಡೆಯಲು ಹಲವು ವರ್ಷ ತೆಗೆದುಕೊಂಡಳಲ್ಲ-ಇಂಗ್ಲಿಷ್ ಕಾದಂಬರಿಗಳನ್ನೋದುತ್ತ ಕಾಲಕಳೆದಿರಬೇಕು.

'ನನ್ನ ಕೈ ಹಿಡಿ' ಎಂದು ಪರೇಖ್ ಕೇಳುತ್ತಿರುವಾಗ ತನಗೆ ಬರೆಯ ಬೇಕೆ ಇವಳು? ಏನಿರಬಹುದು ಹವಣಿಕೆ?

ಹಲ್ಲಿ ಲೊಚಗುಟ್ಟಿತು. ಜಯರಾಮು ಕತ್ತು ತಿರುಗಿಸಿ ಅದರತ್ತ ನೋಡಿದ. ಈ ಶಕುನದ ಭಾಷೆ ಯಾವುದು? ಏನನ್ನು ಇದು ಹೇಳುತ್ತಿದೆ? ಗೋಡೆ ಛಾವಣಿಯನ್ನು ಕೂಡಿದೆಡೆ ನಸುಬೆಳಕಿನಲ್ಲಿ ಮೈಬಾಗಿ ಅಂಟಿಕೊಂಡಿತ್ತು ಹಲ್ಲಿ. ಕೊಕ್ಕೆ. ಪ್ರಶ್ನಾರ್ಥಕ ಚಿಹ್ನೆ.

ತನ್ನ ಬದುಕಿಗೆ ಕೊಕ್ಕೆ ಹಾಕಿ ಎಳೆಯಲೆತ್ನಿಸುತ್ತಿರುವ ಒಂದು ಪ್ರಶ್ನೆ.

ಉತ್ತರ ಸುಲಭವೆ? ಬಿಡಿಸಲಾಗದ ಒಗಟೆ?

ತನ್ನಿಂದ ಸುಖ್‌ಶಣ್‌ಕರ್ ಏನನ್ನು ಬಯಸುತ್ತಿದ್ದಾಳೆ?

ಜಯರಾಮು ಅಂದುಕೊಂಡ:

'ನನಗೆ ತಿಳಿಯದು. ಆದರೆ ನಾನು—ನಾನು ಮಾತ್ರ—ಅವಳನ್ನು ಬಯಸುತ್ತಿದ್ದೇನೆ.'

—ಅವನಿಗೆ ಆಶ್ಚರ್ಯವಾಯಿತು. ವಿಚಾರದ ತಪ್ಪಲೆಯಲ್ಲಿ ಕುದಿಯುತ್ತಿದ್ದ ದ್ರವ ಒಮ್ಮೆಲೆ ಘನೀಭವಿಸಿತ್ತಲ್ಲ!

ಬೊಂಬಾಯಿಯಲ್ಲಿ ಇತರರ ಜತೆಯಲ್ಲಿ ಆಕೆ ಓಡಾಡುತ್ತಿದ್ದಾಗಲೂ ತಾನು ಅವಳನ್ನು ಬಯಸಿದ್ದೆ. ಕಲ್ಯಾಣದ ರೈಲುನಿಲ್ದಾಣದ ಮೇಲೆಯೂ ಅವಳನ್ನು ಬಯಸಿದ್ದೆ. ಅನಂತರವೂ. ಯಾವಾಗಲೂ......

ಆಕೆಯೊಡನೆ ತನ್ನ ಮದುವೆ? ಮಧುಚಂದ್ರ? ವಿದೇಶಯಾತ್ರೆ?

'ಬಾ' ಎಂದರೆ ಸಾಕು; ಅವಳು ಓಡಿ ಬರುವಳು—ತೋಳತೆಕ್ಕೆಗೆ.

ಆದರೆ, ಸಾಹುಕಾರ ಶ್ರೀಕಂಠಯ್ಯನವರ ಆಸ್ತಿಗೆ ತಾನು ಹಕ್ಕುದಾರನಲ್ಲ ಎಂದು ಅವಳು ತಿಳಿದರೆ, ತಾನೊಬ್ಬ ಅಲ್ಪ ಸಂಭಾವನೆಗಾಗಿ ದುಡಿಯುವ ಬರಿಗೈಯ ಅಧ್ಯಾಪಕ ಎಂಬುದನ್ನು ಆಕೆ ಅರಿತರೆ? ಆಗ ಇಂಥದೇ ಇನ್ನೊಂದು ಕಾಗದವನ್ನು ಅವಳು ಮತ್ತೆಂದಾದರೂ ತನಗೆ ಬರೆಯುವಳೇನು?

ದಟ್ಟವಾಗಿ ತನ್ನನ್ನು ಸುತ್ತುವರಿದಿದ್ದ ಭ್ರಮೆಯ ಇಬ್ಬನಿ ಕರಗಿಹೋದಂತೆ ಜಯರಾಮುಗೆ ಕಂಡಿತು.

ಅವನೀಗ ನಿಟ್ಟುಸಿರುಬಿಟ್ಟ. ಬೆಳಗ್ಗೆ ಮಾಡಬೇಕಾದ ಕೆಲಸ ಬೆಟ್ಟದಷ್ಟು. ಬೇಗನೆ ಏಳುವುದಗತ್ಯ. ಇನ್ನು ತಡಮಾಡದೆ ನಿದ್ರಿಸುವುದು ಮೇಲು......

ಸೊಳ್ಳೆಪರದೆಯನ್ನು ಇಳಿಬಿಟ್ಟು ಕೋಣೆಯಿಂದ ಹೊರಬಂದು ಜಯರಾಮು ಶೌಚಗೃಹಕ್ಕೆ ಹೋದ. ಹಿಂತಿರುಗುತಿದ್ದಾಗ ತಂಗಿಯ ಕೊಠಡಿಯ ಬಾಗಿಲ ಸಂದಿಯಲ್ಲಿ ಬೆಳಕು ಕಾಣಿಸಿತು. ಇನ್ನೂ ಮಲಗಿಲ್ಲವೆ ಇವಳು?— ಎಂದು ಇಣಿಕಿ ನೋಡಿದ. ಮೇಜಿನ ದೀಪದ ಬೆಳಕಿನಲ್ಲಿ ಯಾವುದೋ ತೆರೆದ ಪುಸ್ತಕದ ಮೇಲೆ ತಲೆ ಇರಿಸಿ ಜಯಶ್ರೀ ನಿದ್ದೆಹೋಗಿದ್ದಳು.

'ಓದುತ್ತ ಓದುತ್ತ ಹಾಗೇ ನಿದ್ರೆ ಬಂದ್ಬಿಟ್ಟಿದೆ,' ಎಂದುಕೊಳ್ಳುತ್ತ ಜಯರಾಮು, ಒಳಕ್ಕೆ ಅಡಿ ಇರಿಸಿ, "ಜಯಾ, ಜಯಾ" ಎನ್ನುತ್ತ ಮೆಲ್ಲನೆ ಭುಜಮುಟ್ಟಿ, "ಕತ್ತು ಉಳುಕೀತು. ಏಳು. ಮಲಕೋ," —ಎಂದ.

ಜಯಶ್ರೀ ಗಡಬಡಿಸಿ ಎದ್ದಳು. ನಿದ್ದೆಕಣ್ಣಿನಲ್ಲೆ ಹಾಸಿಗೆಯತ್ತ ಚಲಿಸಿದಳು.

ಅಧ್ಯಯನದಲ್ಲಿ ಇಷ್ಟೊಂದು ಆಸಕ್ತಿಯೆ ಇವಳಿಗೆ? ಯಾವ ಪುಸ್ತಕವೊ?– ಎನ್ನುತ್ತ, ಮೇಜಿನ ಮೇಲೆ ಅಂಗಾತ ಮಲಗಿದ್ದುದನ್ನು ಆತ ಎತ್ತಿದ.

'ಲೊಲಿಟಾ' !

ಪುಸ್ತಕವನ್ನು ಮೊದಲಿದ್ದಂತೆಯೇ ಇರಿಸಿ, ನಸುನಕ್ಕು ಮೇಜಿನ ಮೇಲಿನ ದೀಪ ಆರಿಸಿ, ಬಾಗಿಲೆಳೆದುಕೊಂಡು ಜಯರಾಮು ತನ್ನ ಕೊಠಡಿಗೆ ಬಂದ.

ನಿದ್ದೆ ಹತ್ತಿರ ಬರದೆ ಬಹಳ ಹೊತ್ತು ಅವನನ್ನು ಕಾಡಿಸಿತು.

ಲೀಲಾ ಸುಖ್‌ಠಣ್‌ಕರ್‌ಗೆ ತಾನು ಬರೆಯಬೇಕಾದ ಮಾರೋಲೆಯ ಒಕ್ಕಣೆಯನ್ನು ಮನಸ್ಸಿನಲ್ಲೆ ಆತ ಸಿದ್ಧಗೊಳಿಸತೊಡಗಿದ.

೧೦

ಸೂರ್ಯನ ಮೊದಲ ಕಿರಣಗಳು ಪಸರುವುದಕ್ಕೆ ಮುನ್ನವೇ ಯಾವಾಗಲೂ ಏಳುವ ಶ್ರೀಕಂಠಯ್ಯ ಆ ಬೆಳಗ್ಗೆ ಎಚ್ಚರಗೊಂಡಾಗ ಏಳು ದಾಟಿತ್ತು. ತೆರೆದ ಕಣ್ಣುಗಳಿಂದ ಕಿಟಿಕಿಯ ಹೊರನೋಡುತ್ತ, ಹಿಂದಿನ ರಾತ್ರೆಯನ್ನು ಅವರು ಸ್ಮರಿಸಿ ಕೊಂಡರು.

ತಡವಾಗಿ ಮಲಗಿದ್ದರು. ಮಲಗಿದಮೇಲಲೂ ಬಹಳ ಹೊತ್ತು ನಿದ್ದೆ ಹತ್ತಿರಲಿಲ್ಲ. ಅನಂತರವೂ ನಡುನಡುವೆ ಎಚ್ಚರವಾಗಿತ್ತು. ಒಮ್ಮೆ ಜಲಬಾಧೆ ತಡೆಯಲಾಗದೆ ಎದ್ದಿದ್ದರು. ಅವರು ಓದಿದ ಕಾಗದ, ಬಳಿಕ ಜಯರಾಮು ವನ್ನು ಕುರಿತು ತ್ಯಾಗರಾಜನ್ ಒದಗಿಸಿದ್ದ ವದಂತಿ–ಅವರ ಮನಶ್ಶಾಂತಿಯನ್ನು ಕದಡಿದ್ದುವು. ಮಗನನ್ನು ದೂರವಿಡುವ ದುರ್ದಿನವೂ ತಮ್ಮ ಬದುಕಿನಲ್ಲಿ ಬರ ಬಹುದೆಂದು ಅವರು ಎಣಿಸಿರಲಿಲ್ಲ. ತಮ್ಮ ಪ್ರತಿಯೊಂದು ನುಡಿಯನ್ನೂ ವೇದ ವಾಕ್ಯವೆಂದು ಪರಿಗಣಿಸಿ ತಮ್ಮ ಕೃಪಾಕಟಾಕ್ಷವನ್ನು ಗಳಿಸಲು ಊರಿಗೆ ಊರೇ ಆತುರದಿಂದಿರುವಾಗ, ತಮ್ಮದೇ ಮಾಂಸದೊಂದು ತುಣುಕು ತಮಗೆ ಮುಳಿ ವಾಗಿದೆಯಲ್ಲ!

ಪುತ್ರಸಂತಾನ ಲಭ್ಯವಾಯಿತು. ಆದುದರಿಂದ ದುರ್ಗತಿ ಇಲ್ಲ. ಆ ದುರ್ಗತಿಗೆ ಬೆಂಕಿ ಹಚ್ಚಿತು! ಇದಕ್ಕಿಂತಲೂ ಗತಿ ಹೆಚ್ಚು ಕೆಡುವುದು ಸಾಧ್ಯವೇನು?

ಈಗ ತಡವಾಗಿ ಏಳುತ್ತಿದ್ದೇನೆ. ಯಾಕೆ ಇನ್ನೂ ಮಲಗಿದ್ದೀರಿ?–ಎಂದು ತನ್ನನ್ನು ಕೇಳುವ ಒಂದು ನರಹುಳುವಾದರೂ ಇದೆಯೆ ಈ ಮನೆಯಲ್ಲಿ? ಒಂದು ವೇಳೆ ನಿದ್ದೆಯಲ್ಲೇ ತಾನು ಸತ್ತೆ. ಕೊಠಡಿಯಿಂದ ದುರ್ನಾತ ಹೊರಡುವವರೆಗೂ ಈ ಜನಕ್ಕೆ ತಮ್ಮ ಸಾವಿನ ಗೊಡವೆ ಇರದೇನೊ? ತಮ್ಮ ಅಂತ್ಯಕ್ರಿಯೆಯನ್ನು ನೆರವೇರಿಸುವವರು ಯಾರು? ಪಂಚಮರು–ಪಂಚಮರು! ಅಥವಾ, ತ್ರಿವರ್ಣ

ಧ್ವಜದಿಂದ ಶವವನ್ನು ಸುತ್ತಿ, ಪುಷ್ಪರಾಶಿಯನ್ನು ಮೇಲೆ ಬಿಟ್ಟು, ರಾಜಸನ್ಮಾನದೊಡನೆ ತಮ್ಮ ಕೊನೆಯ ಮೆರವಣಿಗೆ? ಏನೇ ಆದರೂ ತಮ್ಮ ಮಗ ಅಲ್ಲಿರುವುದಿಲ್ಲ!

ಯಾತಕ್ಕೋಸ್ಕರ ತಮಗೆ ಇಷ್ಟೊಂದು ಐಶ್ವರ್ಯ? ತಂದೆಯಾದವನು ತಾನು ಗಳಿಸಿದ್ದನ್ನು ಮಕ್ಕಳಿಗೆ ಹಂಚಬೇಕೆಂದು ಯಾವ ಶಾಸ್ತ್ರ ಹೇಳಿದೆ? ದುಡಿಯಲಿ. ಯೋಗ್ಯತೆ ಇದ್ದರೆ ಸಂಪಾದಿಸಲಿ. ಇಲ್ಲವಾದರೆ ಉಪವಾಸಬಿದ್ದು ಸಾಯಲಿ!

ಎಂಥ ದುರ್ದೈವ! ಸಹಸ್ರಾರು ಜನರನ್ನು ಇಷ್ಟಬಂದಂತೆ ಕುಣಿಸುತ್ತಿರುವ ತಾವು ಒಬ್ಬ ಮಗನನ್ನು ಅಂಕೆಯಲ್ಲಿ ಇರಿಸಿಕೊಳ್ಳಲಾಗದೆ ಹೋದೆವಲ್ಲ!

......ದಟ್ಟನೆ ಹೆಣೆದುಕೊಳ್ಳುತ್ತಿದ್ದ ವಿಚಾರಗಳ ಬಲೆಯನ್ನು ಬದಿಗೆ ಸರಿಸಲಾಗದೆ, ಶ್ರೀಕಂಠಯ್ಯ ಮಲಗಿಯೇ ಇದ್ದರು.

ಒಮ್ಮೆಲೆ ಚೀತ್ಕಾರದ ಧ್ವನಿಯೊಂದು ದ್ವಾರಮಂಟಪದಿಂದ ಕೇಳಿಸಿತು.

"ಅಯ್ಯೋ! ನಾಯಿ ಕಚ್ಚಿಬಿಡ್ತು! ಜಗ್ಗಣ್ಣಾ!"

ಆರ್ತಧ್ವನಿ ಚಿಕ್ಕಣ್ಣನದು. ಈಗಾಗಲೇ ಬಂಗಲೆಗೆ ತಾನು ಹಳಬ ಎನ್ನುವ ಧೈರ್ಯದಿಂದ ಆತ ನಾಯಿಯನ್ನು ಸಮೀಪಿಸಿದ್ದ. ಅದು ಸದ್ದಿಲ್ಲದೆ ಕಚ್ಚಿತು. ಕಚ್ಚಿದ ಬಳಿಕ, ಚಿಕ್ಕಣ್ಣ ಕೂಗಿಕೊಳ್ಳುತ್ತಿದ್ದಂತೆ. 'ಹೌದು, ಕಚ್ಚಿದ್ದೇನೆ. ನನ್ನಿಷ್ಟ,' ಎನ್ನುವಂತೆ ಎರಡು ಬಾರಿ ಬಗುಳಿತು.

ಜಗ್ಗ ಬಂದ. ಓಡಿಬರುತ್ತ ಮಾರಣ್ಣನೆಂದ:

"ಇಂಗಾಗ್ತೈತೆ ಅಂತ ನಂಗೊತ್ತಿತ್ತು. ಸೀಜರ್‌ಗೆ ಉಚ್ಚು ಇಡಿದೈತ್ರಪೋ. ಅದರ ಕಣ್ಣು ನೋಡಿದರೆ ತಿಳಿಯಾಕಿಲ್ವ?"

ಚಿಕ್ಕಣ್ಣನ ಷರಾಯಿಯಲ್ಲಿ ತೊಡೆಯ ಬಳಿ ಆ ಕಡೆ ಈ ಕಡೆ ಎರಡೆರಡು ತೂತುಗಳಾಗಿದ್ದುವು. ಹಲ್ಲುಗಳು ಮೂಡಿದ್ದ ಗುರುತು. ಆ ತೂತುಗಳಿಂದ ರಕ್ತ ಒಸರತೊಡಗಿತ್ತು.

ಬೇಗನೆ ಎದ್ದಿದ್ದ ಜಯರಾಮು ಸ್ನಾನ ಮುಗಿಸಿ, ಮನಸ್ಸನ್ನು ಶಾಂತವಾಗಿಡಲೆತ್ನಿಸುತ್ತ, ಆ ಬೆಳಗಿನ ಪತ್ರಿಕೆಯನ್ನು ಹಜಾರದಲ್ಲಿ ಸೋಫಾದ ಮೇಲೆ ಕುಳಿತು ನೋಡತೊಡಗಿದ್ದ. ಚೀತ್ಕಾರ ಕೇಳಿಸಿದೊಡನೆ ಆತ ಎದ್ದು ಹೊರಬಂದ. ಗಾಯ ಯಾವ ಬಗೆಯದೆಂದು ನೋಡಲು, ಬಾಗಿ, ಚಿಕ್ಕಣ್ಣನ ತೊಡೆಯನ್ನು ಮುಟ್ಟಿದ.

"ಷರಾಯಿ ಬಿಚ್ಚು."

ಒಳಚಡ್ಡಿ ಇರಲಿಲ್ಲ. ಹೇಗೆ ಬಿಚ್ಚಬೇಕು ಚಿಕ್ಕಣ್ಣ? ಆತ ಅಳತೊಡಗಿದ.

"ನಾಯಿ ಕಚ್ಚಿದ್ದಕ್ಕೆ ಅಳ್ತಾನೆ. ಹೆಣ್ಣಿಗ! ಎತ್ತೋ ಷರಾಯಿನ ಮ್ಯಾಕೆ,"

—ಎಂದ ಜಗ್ಗ.

ಚಿಕ್ಕಣ್ಣ ಮೆಟ್ಟಿಲ ಮೇಲೆ ಕುಳಿತು, ನಡುಗುತ್ತ, ಕಚ್ಚಿಸಿಕೊಂಡ ಕಾಲಿನ ಷರಾಯಿಯನ್ನು ಮೇಲಕ್ಕೆ ಮಡಚಿದ.

ಅಷ್ಟರಲ್ಲಿ ಅಜೀಜ್ ಬಂದು ತಲಪಿದ್ದ.

"ನಾಯಿ ಮೂತಿಗೆ ಕಡ್ಡಿ ಆಕಾಕೋದ್ಯಾ? ಬುದ್ಧಿ ಬೇಡವಾ?"

—ಎಂದು ಆತ ಗದರಿದ.

ಒಸರುತ್ತಿದ್ದ ರಕ್ತವನ್ನು ಕಂಡು,

"ಒಳಗೆ ಅಯಡಿನು, ಬ್ಯಾಂಡೇಜು ಏನಾದರೂ ಇದೆಯೊ ಕೇಳು,"

—ಎಂದ ಜಯರಾಮು.

ಅಜೀಜನೆಂದ:

"ಕಾರಿಂದು ಫಸ್ಟೇಡ್ ಕಿಟ್ಟೈತೆ. ಒಂದ್ಸಲಿನೂ ಬಳಸಿಲ್ಲ. ಶಾಂತಮಲ್ಲಪ್ಪನವರ ಕೋಣೆಯಾಗೈತೆ."

ಜಗ್ಗ ಆ ಪೆಟ್ಟಿಗೆಯನ್ನು ತಂದ.

......ಬ್ಯಾಂಡೇಜು ಕಟ್ಟಿದ ಬಳಿಕ ಜಯರಾಮು ಅಂದ:

"ದೊಡ್ಡಾಸ್ಪತ್ರೆಗೆ ಹೋಗಿ ನಾಯಿ ಕಚ್ಚಿದ್ದಕ್ಕೆ ಅಂತ ಇಂಜೆಕ್ಷನ್ ತಗೋ. ದಿನಾ ಒಂದೊಂದು ತಗೋಬೇಕು. ನಾಯಿಗೆ ಹುಚ್ಚೂಂತ ಖಾತ್ರಿಯಾಯ್ತೋ ಒಟ್ಟು ಹದಿನಾಲ್ಕು ಬೇಕಾಗುತ್ತೆ."

ಚಿಕ್ಕಣ್ಣನನ್ನು ನೋಡಿ ಜಗ್ಗನೆಂದ:

"ನಿನಗೆ ಶನಿಕಾಟ. ನಿನ್ನೆ ಕಾರು ಅಂಗಾಯ್ತು, ಇವತ್ತು ಇಂಗೆ."

"ಈಗ್ಲೇ ಹೋಗು,"

—ಎಂದ ಜಯರಾಮು.

ಡಾಕ್ಟರು ಹೇಳಬಹುದು. ಆದರೆ ಸಾಹುಕಾರರ ಸಮ್ಮತಿ ಬೇಡವೆ?

ಜಗ್ಗ ಕೇಳಿದ:

"ಇಂಜೇಷನ್ ಇಲ್ಲೇ ಕೊಡೋಕಾಯ್ತುದಾ, ಬುದ್ಧಿ?"

"ಇಲ್ಲವಪ್ಪ. ಆ ಔಷಧೀನ ಆಸ್ಪತ್ರೇಲೇ ಇಟ್ಟಿರ್‍ತಾರೆ."

"ಹೊಟ್ಟೆಗೆ ಕೊಡ್ತಾರೆ ಇಂಜೆಕ್ಷನ್,"

—ಎಂದು ಅಜೀಜ್ ತನ್ನ ವೈದ್ಯಕೀಯ ಜ್ಞಾನವನ್ನು ಪ್ರದರ್ಶಿಸಿದ.

ಹಲ್ಲುಜ್ಜುತ್ತಿದ್ದ ಜಯಶ್ರೀ ಓಡಿಬಂದಳು:

"ಸೀಸರ್ ಕಚ್ಚಿದ್ನೆ? ಕಚ್ಚೇ ಬಿಟ್ನೆ?"

—ಎಂದಳು.

ಪಿಸ್ತೂಲು. ಗುಂಡು. ಸಾವು. ನಳಿನಿ ಮನೆ ನಾಯಿಗಾದ ಗತಿಯೇ ಸೀಸರ್‌ಗೂ.

ಕಮಲಮ್ಮ ಬಂದರು, ಲಚ್ಚಿ ಮತ್ತು ಭಟ್ಟನೊಡಗೂಡಿ.

"ಈ ಕ್ರೂರ ಮೃಗ ಬೇಡವಪ್ಪಾ ಅಂತ ಆವತ್ತೇ ಅಂದೆ. ಯಾರಾದರೂ ಕಿವಿಮೇಲೆ ಹಾಕ್ಕೊಂಡ್ರೇ ನನ್ನ ಮಾತ್ನ? ಅಯ್ಯೋ!"

ಜಯರಾಮು ಮಹಡಿಗೆ ಸಾಗಿದ. ಜಗ್ಗ ಪ್ರಥಮ ಚಿಕಿತ್ಸೆಯ ಪೆಟ್ಟಿಗೆಯನ್ನು ಒಳಕ್ಕೊಯ್ದು ಅದರ ಸ್ಥಾನದಲ್ಲಿರಿಸಿದ.

......ಮಲಗಿಕೊಂಡಿದ್ದ ಶ್ರೀಕಂಠಯ್ಯನ ಕಿವಿಗೆ ಹೊರಗಿನ ಮಾತುಗಳೆಲ್ಲ ಕೇಳಿಸಿದ್ದುವು. ಸಾಯಲಿ, ಹುಚ್ಚುನಾಯಿ ಕಚ್ಚಿಸಿಕೊಂಡು ಎಲ್ಲರೂ ಸಾಯಲಿ—ಎಂದು ಅವರು ಸ್ವರವೆತ್ತದೆಯೇ ಕಟೂಕ್ತಿಯಾಡಿದರು.

ಈ ಮನೆಯಲ್ಲಿ ಯಜಮಾನನೆಂಬುವ ಪ್ರಾಣಿಯೊಂದಿದೆ ಎಂಬುದನ್ನೇ ಗಮನಿಸದೆ ಹೊರಗೆ ಇಷ್ಟೊಂದು ಗದ್ದಲ ಮಾಡುತ್ತಿರುವರಲ್ಲ!

ಆ ಕ್ಷಣವೆ ಅಲ್ಲಿಂದ ಹೊರಟುಬಿಡಬೇಕು; ಎಲ್ಲಿಗಾದರೂ ಸರಿ, ದೂರ ದೂರ ಒಂಟಿಯಾಗಿ ಹೋಗಿಬಿಡಬೇಕು—ಎಂದು ಶ್ರೀಕಂಠಯ್ಯನವರಿಗೆ ಅನಿಸಿತು. ಆಗಲೇ ಅಲ್ಲಿಂದ ಮಾಯವಾದವರಂತೆ, ಮಗ್ಗುಲು ಹೊರಳಿ, ದಿಂಬಿನಲ್ಲಿ ತಮ್ಮ ಮುಖವನ್ನು ಅವರು ಮರೆಸಿಕೊಂಡರು. ಮತ್ತೂ ಕೆಲ ನಿಮಿಷ ಹಾಗೆ ನಿಶ್ಚಲವಾಗಿ ಅವರು ಮಲಗಿದರು.

"ಅಪ್ಪಯ್ಯ......"

ಮಗಳು. ಶ್ರೀಕಂಠಯ್ಯ ಸುಮ್ಮನಿದ್ದರು.

"ಅಪ್ಪಯ್ಯ......"

—ಬಾಗಿಲ ಹೊರಗಿಂದ ಮತ್ತೊಮ್ಮೆ.

"ಹುಂ......"

"ಕಾಫಿಗೆ ಬನ್ನಿ."

"ಹುಂ......"

ಈ ಹುಡುಗಿಯೊಬ್ಬಳಾದರೂ ತನ್ನನ್ನು ಕರೆದಳಲ್ಲ......ಮಕ್ಕಳ ವಿಷಯ ದಲ್ಲಿ ಸಾಕಷ್ಟು ಆಸಕ್ತಿ ವಹಿಸದ್ದು ಪ್ರಾಯಶಃ ತನ್ನತಪ್ಪೋ ಏನೋ. ಮಗ ನಂತೂ ಅಡ್ಡ ದಾರಿ ಹಿಡಿದ. ಮಗಳನ್ನೂ ಕಳೆದುಕೊಳ್ಳಲಿ?

ಒಂದು ದೃಷ್ಟಿಯಲ್ಲಿ, ತಾವು ಮುಳುಗುತ್ತಿರುವ ಮನುಷ್ಯ. ಯಾವ ಹುಲ್ಲುಕಡ್ಡಿಗಾದರೂ ಸರಿಯೆ ತಾವು ಆತುಕೊಳ್ಳಬೇಕು. ಅದು ಧರ್ಮ.

['ಸಾಹುಕಾರ ಶ್ರೀಕಂಠಯ್ಯನವರು ಧರ್ಮಿಷ್ಠ; ಧರ್ಮ ಬಿಟ್ಟು ನಡೆಯು ವವರಲ್ಲ.']

......ಶ್ರೀಕಂಠಯ್ಯ ಎದ್ದರು. ಮೈಮುರಿದು, ಅಳಿದುಳಿದ ನಿದ್ದೆಯನ್ನು ಕಣ್ಣುಗಳಿಂದ ಕೊಡವಿ, ಬಾಗಿಲು ತೆರೆದರು. ಜಯಶ್ರೀ ಅಲ್ಲಿರಲಿಲ್ಲ. ತೆಳು ಚಪ್ಪಲಿಗಳನ್ನು ಮೆಟ್ಟಿಕೊಂಡು ಮುಖಮಾರ್ಜನಕ್ಕೆಂದು ಹಜಾರವನ್ನು ದಾಟಿ ಒಳಕ್ಕೆ ಹೋದರು.

ಸಾಹುಕಾರರು ಎಚ್ಚರಗೊಂಡುದು ತಿಳಿದೊಡನೆಯೇ ಹಜಾರವೂ ಜಗ ಲಿಯೂ ನಿರ್ಜನವಾಗಿದ್ದುವು......

......ತಂದೆ ಕಾಫಿ ಹೀರತೊಡಗಿದಾಗ, ಮೇಜಿನ ಉದ್ದದಾಚೆಗೆ ಎದುರು ಬದಿಯಲ್ಲಿ ಕುಳಿತಿದ್ದ ಜಯಶ್ರೀ ಅಂದಳು.

"ಸೀಸರ್ ಹೊಸ ಡ್ರೈವರಿಗೆ ಕಚ್ಚಿಬಿಡ್ತು, ಅಪ್ಪಯ್ಯ."

ಮಗನ ವಿಷಯದಲ್ಲಿ ತಾವು ಕೈಕೊಳ್ಳಬೇಕಾದ ನಿರ್ಧಾರಕ್ಕೆ ಕೊನೆಯ ಒಪ್ಪವಿಡುತ್ತಿದ್ದ ಶ್ರೀಕಂಠಯ್ಯನವರಿಗೆ ಮಗಳ ಮಾತು ಕೇಳಿಸಲಿಲ್ಲ.

ತಂದೆಯ ಗಮನವನ್ನು ಸೆಳೆಯಲೆತ್ನಿಸುತ್ತ ಜಯಶ್ರೀ ಅಂದಳು:

"ಅಪ್ಪಯ್ಯ......"

"ಹ್ನ ?"

"ಹೊಸ ಡ್ರೈವರಿಗೆ ಸೀಸರ್ ಕಚ್ಚಿಬಿಡ್ತು ಅಂದೆ."

"ಹುಂ."

"ಅವನು ದೊಡ್ಡಾಸ್ಪತ್ರೆಗೆ ಹೋಗಿ ಇಂಜೆಕ್ಷನ್ ತಗೋಬೇಕಂತೆ— ಜಯಣ್ಣ ಹೇಳ್ದ......"

[ಜಯಣ್ಣ–ಉಶ್ !]

ತಂದೆ ಮೌನವಾಗಿದ್ದುದನ್ನು ಕಂಡು ತಾನೂ ನಿಮಿಷ ಸುಮ್ಮನಿದ್ದು, ಜಯಶ್ರೀ ಕೇಳಿದಳು.

"ಹೋಗು ಅನ್ನಲಾ ಅವನಿಗೆ ?"

"ಹೂಂ."

ಸಾಹುಕಾರರು ಅನುಮತಿ ಇತ್ತುದನ್ನು ಚಿಕ್ಕಣ್ಣನಿಗೆ ತಿಳಿಸಲು ಜಯಶ್ರೀ ಎದ್ದು ಹೋದಳು.

ಮುಂದಿನ ನಿತ್ಯ ವಿಧಿಗಳಲ್ಲಿ ಶ್ರೀಕಂಠಯ್ಯನವರು ನಿರತರಾಗಿದ್ದಾಗ ಕಮಲಮ್ಮ ಮಗನನ್ನು ಕಾಣಲು ಬಂದರು.

ಜಯರಾಮು ಬಾಗಿ ತಾಯಿಯ ಪಾದಗಳನ್ನು ಹಿಡಿದು ನಮಿಸಿದ.

ಕಣ್ಣಲ್ಲಿ ನೀರು ತಂದುಕೊಂಡು ಕಮಲಮ್ಮ ಅಂದರು:

"ಏಳು, ಮಗೂ......"

"ಈಗ ಹೋಗ್ತೀನಮ್ಮ."

"ನಾನು ತಡೆಯೋದಿಲ್ಲವಪ್ಪ......"

"ಬೇರೆ ದಾರೀನೇ ಇಲ್ಲ, ಅಮ್ಮ. ನಾನು ಹೋದ್ಮೇಲೆ ಅಪ್ಪಯ್ಯ ಸ್ವಲ್ಪ ಸುಧಾರಿಸಲೂ ಬಹುದು."

"ನನಗೆ ಅಂಥ ಭ್ರಮೆ ಇಲ್ಲ, ಜಯೂ."

"ಬೇಜಾರು ಮಾಡ್ಕೊ ಬೇಡ."

"ನಿನ್ನ ತಾಯಿೊನ ನೋಡೋಕೆ ಯಾವಾಗಲಾದರೂ ಬರ್‍ತ್ತೀಯೇನೊ ?"

"ಈ ಮನೆಯೊಳಗೆ ಕಾಲಿರಿಸಬಾರದೂಂತ ನಾನೇನಾದರೂ ಶಪಥ ಮಾಡಿದೀನಾ ? ನನ್ನ ತಾಯಿ ಇರೋ ಮನೆಗೆ ಬರದೇ ಇದ್ದೀನಾ ?"

"ನೀನೊಂದು ಮನೆಮಾಡು ಜಯೂ, ಬಂದ್ಬಿಡ್ತೀನಿ......"

ಅಷ್ಟು ಹೇಳಿ ಕಮಲಮ್ಮ ಮತ್ತೂ ಒಂದು ಮಾತು ಸೇರಿಸಿದರು.

"ಬೇರೆ ಊರಲ್ಲಾದರೆ ಚೆನ್ನು."

"ಆಗಲಮ್ಮ."

"ದುಡ್ಡುಗಿಡ್ಡು ಇದೆಯೇನೊ ?"

"ಸಾಕಷ್ಟಿದೆ. ಇನ್ನೊಂದು ತಿಂಗಳಲ್ಲಿ ಸಂಬಳ ಬರುತ್ತಲ್ಲ?"

"ನಿನ್ನ ಆರೋಗ್ಯ ಚೆನ್ನಾಗಿ ನೋಡ್ಕೊ ಕಂದ."

ಜಯರಾಮುಗೆ ನಗುಬಂತು. ಅಮ್ಮ ಅಮ್ಮನೇ. ತಾನು ಡಾಕ್ಟರಾದರೇನು, ರಾಷ್ಟ್ರಾಧ್ಯಕ್ಷನಾದರೇನು?–ತಾಯಿ ಪಾಲಿಗೆ ಸದಾ ಕಾಲವೂ ಮಗುವೇ.

"ಆಗಲಮ್ಮ."

"ತಾಳು. ಒಂದಿಷ್ಟು ತಿಂಡಿ ಕೊಡ್ತೀನಿ."

"ಬೇಡ, ಬೇಡ. ನೀನು ಕೆಳಗಿರು. ಹೊರಡೋ ಹೊತ್ತಿಗೆ ಬಂದು ಹೇಳ್ತೀನಿ."

"ಹೂ......"

"ಅಮ್ಮ ! ಇಲ್ಲಿದೀಯಾ ನೀನು? ಸಿಂಥಾಲ್ ಸೋಪೆಲ್ಲಿ ಅಂತ ಅಪ್ಪಯ್ಯ ಕಿರಿಚಾಡ್ತಿದಾರೆ,"

–ಎನ್ನುತ್ತ ಜಯಶ್ರೀ ಮೇಲಕ್ಕೆ ಬಂದಳು.

ಕಮಲಮ್ಮ ಕಣ್ಣೊರೆಸಿಕೊಳ್ಳುತ್ತ ಕೆಳಕ್ಕಿಳಿದರು.

"ಜಯೂ, ನೀನು ಹೋಗ್ತೀಯಂತೆ. ಈಗ್ಲೇ ಹೊರಡ್ತೀಯಾ?"

–ಎಂದು ಕೇಳಿದಳು ಜಯಶ್ರೀ.

"ಹ್ನ."

"ಟ್ರಾನ್ಸಿಸ್ಟರ್ ತಗೊಂಡ್ಹೋಗ್ತೀಯೇನು?"

ರೇಡಿಯೋ ಕೈಬಿಟ್ಟಂತೆಯೇ ಎನ್ನುವ ನಿರಾಸೆ ಇತ್ತು ಧ್ವನಿಯಲ್ಲಿ.

ಜಯರಾಮುಗೆ ಅದರ ನೆನಪಾದುದು ಆಗಲೇ. ಹಾಸ್ಟೆಲಿನ ಕೊಠಡಿಯಲ್ಲಿ ಉಪಯೋಗಕ್ಕೆ ಬೀಳುವ ವಸ್ತು. ಆದರೂ–

ತಂಗಿಯ ಮುಖಭಾವವನ್ನೊಮ್ಮೆ ದಿಟ್ಟಿಸಿ ಅವನೆಂದ:

"ಅದು ನಿನಗೆ ಪ್ರೆಸೆಂಟು."

"ಓ !"

"ಆ ಇನ್ನೊಂದೂ ನಿನಗೇನೇ?"

"ಯಾವುದು?"

"ಲೊಲಿಟಾ."

ಜಯಶ್ರೀಯ ಮುಖ ಕಪ್ಪಿಟ್ಟಿತು. ಕಣ್ಣುಗಳು ಕಿರಿದಾದುವು.

ನಕ್ಕು ಜಯರಾಮು ಅಂದ:

"ಕೇಳದೇ ತಗೊಂಡಿದೀಯಾ. ಕ್ಷಮಿಸಿದೀನಿ."

"ನಾನು ಓದಬಾರದಾಗಿತ್ತಾ?"

"ಛೆ! ವಿದ್ಯಾವಂತರು ಓದಬಾರದ ಪುಸ್ತಕವಾದರೂ ಉಂಟೆ? ನಿನಗಿಷ್ಟವಾಗುತ್ತೋ ಇಲ್ಲವೋ ಅಂತ ಕೊಟ್ಟಿರಲಿಲ್ಲ."

"ಟು ಜೆ–ಆರ್ ಫ್ರಮ್ ಎಲ್ ಅಂತಿದೆಯಲ್ಲ? ಯಾರಣ್ಣ ಆ ಎಲ್?"

"ಬೊಂಬಾಯಿಯಲ್ಲಿ ನನ್ನ ಸಹೋದ್ಯೋಗಿಯಾಗಿದ್ದ ಒಬ್ಬರು."

"ಗಂಡಸೋ ಹೆಂಗಸೋ?"

"ಎಲ್–ಲಕ್ಷ್ಮಿನೂ ಆಗುತ್ತೆ, ಲಕ್ಷ್ಮೀಪತಿನೂ ಆಗುತ್ತೆ."

"ಹೇಳು ಜಯೂ."

"ಗಂಡೂ ಅಲ್ಲದ ಹೆಣ್ಣೂ ಅಲ್ಲದ ಜಾತಿ......"

"ಹೋಗಪ್ಪ."

ಮಾತು ಬದಲಾಯಿಸಲೆಂದು ಜಯರಾಮು ನುಡಿದ:

"ಚಿಕ್ಕಣ್ಣ ಆಸ್ಪತ್ರೆಗೆ ಹೋದ. ಇವತ್ತು ಯಾರು ಕಾಲೇಜಿಗೆ ಕರಕೊಂಡು ಹೋಗ್ತಾರೆ ನಿನ್ನ? ತ್ಯಾಗರಾಜನ್ ಬರ್ತಾರೊ?"

ಜಯಶ್ರೀಯ ಮುಖ ಗಂಟಿಕ್ಕಿತು.

"ಅವರು ಯಾಕ್ಬರ್ತಾರೆ? ನಿನ್ನೆ ಬೇರೆ ದಾರಿ ಇಲ್ದೆ ಫೋನ್ ಮಾಡ್ದೆ."

"ಜಯಾ, ನೀನು ದಿನಾ ಸ್ವಲ್ಪ ನಡೀಬೇಕಮ್ಮ. ಸ್ವಲ್ಪ ನಡೆದು, ಬಸ್ ಸ್ಟಾಪ್ನಲ್ಲಿ ಸ್ವಲ್ಪ ಹೊತ್ತು ನಿಂತು, ಬಸ್ನಲ್ಲಿ ಕಾಲೇಜಿಗೆ ಹೋಗಿ ಬಂದೆ ಅಂದರೆ ನಿನ್ನ ಆರೋಗ್ಯ ಸುಧಾರಿಸುತ್ತೆ."

"ನನ್ನ ಆರೋಗ್ಯವೇನೂ ಈಗ ಕೆಟ್ಟಿಲ್ಲ."

"ಎಲ್ಲಿ ಹಾಗಂದೆ? ಪಚನಶಕ್ತಿ ಜಾಸ್ತಿಯಾಗಿ, ಹೆಚ್ಚು ಆಹಾರ ಹೊಟ್ಟೆಗೆ ಸೇರಿ, ಡಯಾನಾ ಸೈಮ್ ತರಹೆ ಆಗ್ತೀಯಾ ಅಂದೆ."

"ಆಗಲಿ, ಆಗಲಿ. ಹಾಸ್ಟೆಲ್ನಲ್ಲಿದ್ದುಕೊಂಡು ಮೈಲುಗಟ್ಟಲೆ ನಡೆದು ನೀನು ಹೆರ್ಕ್ಯುಲಸ್ ಆಗೋದು ನಾನು ನೋಡ್ತೀನಿ."

"ಶ್ರೀಸದನದ ಹವೆಗೂ ಹಾಸ್ಟೆಲಿನ ಹವೆಗೂ ಬಹಳ ವ್ಯತ್ಯಾಸವಿರುತ್ತೆ. ನೋಡುವಿಯಂತೆ!"

"ಹಾಸ್ಟೆಲ್ನಲ್ಲಿ ನಿನ್ನ ರೂಮಿನ ಫೋನ್ ನಂಬರೇನಣ್ಣ?"

ರೂಮಿಗೆ ಫೋನಿಲ್ಲ. ಹಾಸ್ಟೆಲಿಗಿದೆ. ಡಿರೆಕ್ಟರಿಯಲ್ಲಿರುತ್ತೆ ನಂಬರು."

"ಅಲ್ಲಿ ಹುಡುಗೀರೂ ಇರ್‍ತಾರಾ?"

"ಪಕ್ಕದ ಬಿಲ್ಡಿಂಗ್ನಲ್ಲಿರ್‍ತಾರೆ."

"ನಿನ್ನ ನೋಡೋಕೆ ನಾನು ಬರಬಹುದಾ?"

"ಒಂದೇ ಶರತ. ನಡಕೊಂಡು ಬರೋಹಾಗಿದ್ರೆ ಬಾ."

"ಸಾಕು, ಬಿಡಪ್ಪ."

ಕಟ್ಟಿಕೊಂಡಿದ್ದ ಕೈಗಡಿಯಾರದ ಕಡೆ ನೋಡಿ, ಜಯರಾಮು ಅಂದ:

"ಜಯಾ, ಒಂದು ಕೆಲಸ ಮಾಡ್ತೀಯಾ? ಕೆಳಗೆ ಹೋಗಿ ಜಗ್ಗನ್ನ ಕಳಿಸ್ಕೊಡು. ಹಾಗೇ, ಅಪ್ಪಯ್ಯ ಸ್ನಾನ ಮುಗಿಸಿ ತಮ್ಮ ರೂಮಿಗೆ ಹೋದ್ಕೂಡ್ಲೆ ನನಗೆ ತಿಳಿಸು."

"ಹ್ಞ."

"ಒಳ್ಳೇ ಹುಡುಗಿ."

......ಜಗ್ಗ ಬಂದ. ಅಡುಗೆ ಭಟ್ಟನ ಪ್ರಸಾರ ಕೇಂದ್ರ ಆತನಿಗೂ ಸುದ್ದಿ ಮುಟ್ಟಿಸಿತ್ತು.

"ಒಂಟೇ ಬಿಡ್ತೀರಾ ಬುದ್ಧಿ?"

"ಇಲ್ಲೇ ಇರೋಕಾಗುತ್ತೇನಯ್ಯ? ಉದ್ಯೋಗ ಮಾಡ್ಬೇಕಲ್ಲಪ್ಪ. ತಗೋ ಈ ಟ್ರಂಕ್ನ. ಸೂಟ್‌ಕೇಸ್ ನಾನು ತರ್‍ತೀನಿ."

"ಬ್ಯಾಡಿ. ಈ ಟರಂಕು ಒಸಿ ಇಡೀರಿ. ಹ್ಞ. ಅಂಗೆ. ಅದನ್ನೂ ಕೊಡಿ."

"ಭಾರ ಇದೆಯಪ್ಪ. ಜೋಪಾನ."

"ಓ ಬಿಡಿ ಬುದ್ಧಿ."

ಜಗ್ಗ ಟ್ರಂಕನ್ನು ತಲೆಯ ಮೇಲೆ ಹೊತ್ತುಕೊಂಡು, ಸೂಟ್‌ಕೇಸನ್ನು ಕೈಯಲ್ಲೆತ್ತಿಕೊಂಡು, ಒಂದೊಂದಾಗಿ ಮೆಟ್ಟಿಲುಗಳನ್ನು ಇಳಿಯತೊಡಗಿದ.

ನೆಲ ತಲಪಲು ಎರಡೇ ಹೆಜ್ಜೆಗಳಿದ್ದುವು. ಅಷ್ಟರಲ್ಲಿ ಶ್ರೀಕಂಠಯ್ಯ ಹಜಾರದ ಮಧ್ಯದಲ್ಲಿ ಪ್ರತ್ಯಕ್ಷರಾದರು.

ಖಾದಿಯ ಅಡ್ಡ ಪಂಚೆ, ಅರ್ಧ ತೋಳಿನ ಬನೀನು. ಬನೀನಿನ ಕತ್ತಿನ ಹೊರಗೆ ಇಣಿಕಿ ನೋಡುತ್ತಿದ್ದ ಎದೆಯ ಬಿಳಿ ಕಪ್ಪು ರೋಮಗಳು, ತ್ರೋಯ್ಡುದರಿಂದ ಜೋತಿದ್ದ ಮೀಸೆ, ಕೆದರಿದ್ದ ತಲೆಯ ಮೇಲಿನ ವಿರಳ ಕೂದಲು. ಕೊಠಡಿಯತ್ತ ನಡೆಯುತ್ತಿದ್ದವರು ಜಗ್ಗನನ್ನು ನೋಡಿ ನಿಂತರು.

"ಯಾರದೊ ಅದು?"

–ಮನೆ ನಡುಗುವಂತಹ ಗುಡುಗು ಧ್ವನಿ.

ಜಗ್ಗನ ನಾಲಿಗೆ ತಡವರಿಸಿತು.

"ಚಿಕ್ಬುದ್ಧಿಯೋರು......"

"ನೀನ್ಯಾಕೊ ಹೊತ್ಕೊಂಡ್ಬಂದೆ? ಮುಠ್ಠಾಳ! ಎಸಿ ಕೆಳಗೆ! ಎಸಿ–ಅಂದೆ!"

ಜಗ್ಗನ ಮನಸ್ಸು ಉಲಿಯಿತು: ಮಗನ ಮೇಲಿನ ಸಿಟ್ಟಿಗೆ ನಾನೀಗ ಬಲಿ. ತಕ್ಕೋ!

ಸೇವಕ ದಿಗ್ಮೂಢನಂತೆ ನಿಂತುದನ್ನು ಕಂಡ ಶ್ರೀಕಂಠಯ್ಯ ಗುಡುಗಿದರು:

"ಕೇಳಿಸ್ಲಿಲ್ವೇನೊ ಬೇಕೂಫ? ಅವನ್ನ ಎಸಿ ಅಂದೆ!"

ಜಗ್ಗ ದಡದಡನೆ ಉಳಿದೆರಡು ಮೆಟ್ಟಿಲುಗಳನ್ನು ಇಳಿದ. ಸೂಟ್ ಕೇಸನ್ನು ತುಸು ರಭಸದಿಂದ ಗೋಡೆಯ ಬದಿಯಲ್ಲಿರಿಸಿದ . ಟ್ರಂಕನ್ನು ಇಳಿಸುವ ಬಗೆ ಹೇಗೆ? ನೆರವಾಗುವವರು ಯಾರು?–ಎಂದು ಅತ್ತಿತ್ತ ನೋಡಿದ. ಸಾಹುಕಾರರ ಕೆಂಗಣ್ಣುಗಳನ್ನು ಕಂಡು, ಸ್ವಲ್ಪಮಟ್ಟಿಗೆ ನಿಜವಾಗಿಯೂ ದಿಗಿಲುಗೊಂಡು, ಟ್ರಂಕಿನ ಭಾರದ ಕೆಳಗೆ ತೊನೆದಾಡುತ್ತ [ಸ್ವಲ್ಪ ನಿಜ; ಸ್ವಲ್ಪ ನಟನೆ] ಮಂಡಿಯೂರಿ ಅಂತೂ ಇಂತೂ ಸದ್ದು ಮಾಡುತ್ತ ಟ್ರಂಕನ್ನು ನೆಲ ಮುಟ್ಟಿಸಿದ.

ಅಷ್ಟು ಮಾಡಿ ಜಗ್ಗ ಎದ್ದು ನಿಂತ.

ಶ್ರೀಕಂಠಯ್ಯ ಕೂಗಾಡಿದರು:

"ನಡಿಯಾಚೆಗೆ! ಇದನ್ನ ಮುಟ್ಟೋಕೆ ಯಾರಾದರೂ ಒಳಗೆ ಬಂದಿರೋ, ಜೋಕೆ! [ಸೇವಕ ತಲೆ ತಗ್ಗಿಸಿ ನಿಂತುದನ್ನು ಕಂಡು] ಹೂಂ–ಹೊರಟ್ಹೋಗು! ಅಲ್ಲಿರಬೇಡ!"

ಜಗ್ಗ ಜಗಲಿಯನ್ನು ದಾಟಿ ದ್ವಾರಮಂಟಪಕ್ಕಿಳಿದ. ಶ್ರೀಕಂಠಯ್ಯ ತಮ್ಮ ಕೊಠಡಿಗೆ ಹೋದರು. ಮರೆಯಲ್ಲಿ ನಿಂತು ಎಲ್ಲವನ್ನೂ ಕೇಳಿಸಿಕೊಂಡಿದ್ದ ಅಜೀಜ್, ಜಗ್ಗನತ್ತ ನೋಡಿ ತುಂಟ ನಗೆ ಬೀರಿದ. ಅದಕ್ಕೆ ಪ್ರತಿಯಾಗಿ ಜಗ್ಗ ಕೆಳತುಟಿಗಳನ್ನು ಮುಂದೆಮಾಡಿ ಹುಬ್ಬುಗಳನ್ನೇರಿಸಿದ.

ತಂದೆಯ ಧ್ವನಿ ಕೇಳಿದೊಡನೆ ಜಯರಾಮು ಹೊರಗೆ ಬಂದಿದ್ದ. ಒಯ್ದು ಕೆಳಗಿಡೆಂದು ಹೇಳಿದವನು ತಾನು–ಎಂದು ವಿವರಣೆ ನೀಡಲು ಬಾಯಿ ತೆರೆದವನು

ಂದೆ ತಳೆದ ಭೀಕರ ರೂಪವನ್ನು ಕಂಡು ಸ್ತಂಭಿತನಾದ. ತನಗೆ ಉದ್ಯೋಗ ದೊರೆತುದು, ಹಾಸ್ಟೆಲಿಗೆ ಹೋಗಲಿರುವುದು–ಇದೆಲ್ಲ, ತಾನು ಹೇಳುವುದಕ್ಕೆ ಮುಂಚೆಯೇ ತಂದೆಗೆ ತಿಳಿದಿದೆ, ಎಂಬ ಶಂಕೆ ಅವನಿಗೆ ಮೂಡಿತು. ಕೋಣೆಗೆ ಮರಳಿ ಒರಗು ಕುರ್ಚಿಯ ಮೇಲೆ ಆತ ಒಂದೆರಡು ನಿಮಿಷ ಮೌನವಾಗಿ ಕುಳಿತ. ಉಸಿರಾಟ ಕಷ್ಟವೆನಿಸಿತು. ತಲೆ ಚಿಟ್‌ಚಿಟ್ಟೆಂದು ಸಿಡಿಯತೊಡಗಿತು.

ಈಗ ವಿದಾಯ ಹೇಳುವ ಕ್ರಿಯೆಯನ್ನು ಮಾಡಿಮುಗಿಸುವುದು ಹೇಗೆ? ತಂದೆ ಹೆಡೆ ಎತ್ತಿ ಫೂತ್ಕರಿಸುತ್ತಿರುವಾಗಲೇ ದರ್ಶನಕ್ಕೆ ಹೋಗಲೆ ತಾನು? ಅಥವಾ ಇನ್ನೂ ಸ್ವಲ್ಪ ಹೊತ್ತು ಕಾದಿರಲೆ?

ಕಾಯುವುದು ಯಾತಕ್ಕಾಗಿ? ತಂದೆಯ ಕೋಪ ಶಮನವಾಗಿ ಸೌಹಾರ್ದ ಮಯ ಸನ್ನಿವೇಶದಲ್ಲಿ ಅವರಿಗೆ ವಂದಿಸಿ ಬರುವುದು ಸಾಧ್ಯವಾಗುವುದೆಂದೆ? ಅಂತಹ ನಿರೀಕ್ಷೆ ಮೂರ್ಖತನದ ಪರಮಾವಧಿ ಅಲ್ಲವೆ?......

ವೃಥಾ ವಿಲಂಬ ಮಾಡದೆ ತನ್ನ ಕರ್ತವ್ಯವನ್ನು ನೆರವೇರಿಸುವುದು ಮೇಲು ಎಂದು ಜಯರಾಮು ತೀರ್ಮಾನಿಸಿದ. ಎದ್ದ.

......ಕೊಠಡಿಯನ್ನು ತಲಪಿದ ಶ್ರೀಕಂಠಯ್ಯನ ಮೈ ಉರಿಯತೊಡಗಿತು. ಮಗನ ಕರಿಯ ಟ್ರಂಕು ಅವರ ಪಾಲಿನ ಇದ್ದಿಲಾಯಿತು. ನಿಂತಿರಲಾಗದೆ ಅವರು ತೀರ ಹತ್ತಿರವಿದ್ದ ತಿರುಗು ಕುರ್ಚಿಯ ಮೇಲೆ ಕುಸಿ ಕುಳಿತರು. ಇಳಿ ವಯಸ್ಸಿನಲ್ಲೂ ಅಲುಗಲು ನಿರಾಕರಿಸಿದ್ದ ಹಲ್ಲುಗಳು ಒಂದನ್ನೊಂದು ಕಟೆದುವು. ಮುಖದ ಸ್ನಾಯುಗಳು ಮಿಸುಕಿದುವು. ಬೆರಳುಗಳು ಮೀಸೆಯನ್ನು ಹುರಿಗೊಳಿಸಿದುವು.

ತಮ್ಮ ಧ್ವನಿ ಕೇಳಿದೊಡನೆ ಜಯರಾಮು ಬರುವನೆಂದು ಅವರು ನಿರೀಕ್ಷಿಸಿದ್ದರು. ಮುಗಿದು ಹೋಗಲಿ ಇದೊಮ್ಮೆ–ಎಂದುಕೊಂಡಿದ್ದರು. ಆದರೆ ಆತ ಬರಲಿಲ್ಲ.

ತಾವಾಗಿ ಕರೆಯಲೆಂದು ಶ್ರೀಕಂಠಯ್ಯ ಗಂಟಲು ಸರಿಪಡಿಸಿಕೊಳ್ಳುತ್ತಿದ್ದಂತೆ ಜಯರಾಮುವಿನ ಬೂಟುಗಳ ಸದ್ದು ಕೇಳಿಸಿತು. ಬರುತ್ತಲಿದ್ದವನನ್ನು ಒಂದೇ ಸಮನೆ ಶ್ರೀಕಂಠಯ್ಯ ದುರುದುರನೆ ನೋಡಿದರು.

ಜಯರಾಮು, ಬಾಗಿಲು ದಾಟಿದೊಡನೆ ನಿಂತು, ನೀಳವಾಗಿ ಒಮ್ಮೆ ಉಸಿರೆಳೆದು ಬಿಟ್ಟ.

ಶ್ರೀಕಂಠಯ್ಯನವರ ಫಿರಂಗಿಯೇ ಮೊದಲು ಸದ್ದುಮಾಡಿತು.

"ಏನು ?"

"ನನಗೆ ಕೆಲಸ ಸಿಗ್ತು."

"ಹಾಗೇಂತ ಕೇಳ್ದೆ. ಅವನು ಯಾವನು ನಿನಗೆ ಕೆಲಸ ಕೊಟ್ನೋ ವಿಚಾರಿಸ್ಕೋತೀನಿ."

"ನಾನಿನ್ನು ಹಾಸ್ಟೆಲ್ನಲ್ಲಿರ್ತೀನಿ."

"ಓಹೋ. ಹಾಸ್ಟೆಲ್ನಲ್ಲಿರ್ತೀಯೋ ?"

"ಈಗ ಹೊರಟಿದೀನಿ."

"ಕೆಳಗೆ ಬಂದ ಸಾಮಾನುಗಳು ತಮ್ಮವು !"

"ಹೌದು."

"ಹೌದು? ಇಲ್ಲಿಂದ ಕಳ್ಳತನ ಮಾಡ್ಕೊಂಡು ಹೋಗ್ತಿದೀಯಾ ಅಂತ ನಿನ್ನನ್ನ ಹಿಡಿದು ಪೋಲೀಸರ ಕೈಗೆ ಕೊಡಬಲ್ಲೆ !"

ಪಾದಕ್ಕೆ ಗಾಜಿನ ಚೂರು ನೆಟ್ಟಂತಾಯಿತು ಜಯರಾಮುಗೆ. ಆತನ ಕಣ್ಣುಗಳಿಂದ ರಕ್ತ ಚಿಮ್ಮಿತು.

"ಅಪ್ಪಯ್ಯ !"

"ಯಾಕೊ ಆ ರೀತಿ ನನ್ನ ಕರೀತೀಯಾ? ನೀನು ನನ್ನ ಮಗನೇನೊ ?"

"ನಿನ್ನೆ ನನಗೊಂದು ಕಾಗದ ಬಂದಿತ್ತು. ಯಾರೋ ಒಡೆದಿದ್ದರು. ತುಚ್ಛ ಕೆಲಸ."

"ನಾನು ಕಣಯ್ಯ ಒಡೆದಿದ್ದು."

"ತುಚ್ಛ ಕೆಲಸ ಅಂದೆ !"

"ಅಯೋಗ್ಯ ! ತೊಲಗಿಲ್ಲಿಂದ ! ನನಗಿನ್ನು ಮುಖ ತೋರಿಸ್ಬೇಡ. ಎಲ್ಲಾದರೂ ಹಾಳಾಗಿ ಹೋಗು !"

"ಇಗೋ ಹೊರಟೆ !"

ಜಯರಾಮು ದಡದಡನೆ ನಡೆದು ಹೋದ. ಬೂಟುಗಾಲುಗಳು ಮನೆ ತುಂಬ ಸಪ್ಪಳ ಮಾಡಿದುವು. ಶ್ರೀಕಂಠಯ್ಯ ಧಡಾರನೆ ತಮ್ಮ ಕೊಠಡಿಯ ಬಾಗಿಲು ಮುಚ್ಚಿದರು.

ಹಜಾರದ ಒಂದು ಒಳಬಾಗಿಲಲ್ಲಿ ಅರೆಜೀವವಾಗಿ ನಿಂತಿದ್ದ ಕಮಲಮ್ಮ; ಅವರ ಮಗ್ಗುಲಲ್ಲಿ ತಲ್ಲಣಿಸಿಹೋಗಿದ್ದ ಜಯಶ್ರೀ; ಇನ್ನೊಂದು ಬಾಗಿಲಲ್ಲಿ ಭಟ್ಟ;

ಆತನಿಗಿಂತ ತುಸು ದೂರದಲ್ಲಿ ಲಚ್ಚಿ–ದೇವಕ್ಕ; ಹೆಬ್ಬಾಗಿಲ ಒಂದು ಬದಿಯಲ್ಲಿ ಅಜೀಜ್; ಇನ್ನೊಂದು ಬದಿಯಲ್ಲಿ ಜಗ್ಗ–ಮಾರಣ್ಣ. ಈ ಜನರೆಲ್ಲ ಶಿಲ್ಪಿ ಕಡೆದ ಪ್ರತಿಮೆಗಳಾಗಿದ್ದರು ಆ ಬಂಗಲೆಯಲ್ಲಿ.

ಜಯರಾಮು ತಾಯಿಯನ್ನೊಮ್ಮೆ ನೋಡಿದ. ಅವನಿಗೆ ಅಳು ಬಂದಿತು. ಒಸರಿ ಬಂದ ಕಂಬನಿಯ ಬಿಂದುಗಳೆರಡು ಅವನ ಕೆನ್ನೆಗಳ ಮೇಲಿಂದ ಕೆಳಕ್ಕೆ ಜಿಗಿದುವು. ಆತ ಅಂಗಳಕ್ಕಿಳಿದ.

ಆಗ ತಾನೇ ಶಾಂತಮಲ್ಲಪ್ಪ ಸೈಕಲನ್ನು ಪೆಡ್ಡಿನಲ್ಲಿಸಿರಿ ಬಂಗಲೆಯ ಬಾಗಿಲಿಗೆ ಬಂದಿದ್ದ. ಅಸಾಧಾರಣವಾದುದೇನೋ ಜರಗಿದೆ ಎಂದು ಅಲ್ಲಿನ ನೋಟ ಸಾರುತಿತ್ತು. ಕಣ್ಸನ್ನೆ ಕೈಸನ್ನೆಗಳಿಂದ ಏನು? ಏನು? ಎಂದು ಹೊರಗಿದ್ದವರನ್ನು ಆತ ಕೇಳಿದ. ಯಾರ ತುಟಿಗಳೂ ತೆರೆಯಲಿಲ್ಲ.

ಜಯರಾಮುವಾಗಲೇ ಬೀದಿ ತಲಪಿದ್ದ. ಇಪ್ಪತ್ತು ನಿಮಿಷಗಳ ಬಳಿಕ ಒಂದು ಟ್ಯಾಕ್ಸಿ ಬಂತು. ಬಂಗಲೆಯ ಆವರಣದೊಳಕ್ಕೇ ಬಂತು.

ಆ ವೇಳೆಗಾಗಲೇ ಪ್ರತಿಮೆಗಳು ಕದಲಿದ್ದುವು.

ಟ್ಯಾಕ್ಸಿಯ ಚಾಲಕನ ನೆರವಿನಿಂದ ಸಾಮಾನುಗಳನ್ನು ಜಯರಾಮು ಹೊರಕ್ಕೆ ಸಾಗಿಸಿದ.

ಬಂದ ವಾಹನ ಮತ್ತೆ ಬೀದಿ ಸೇರಿದೊಡನೆಯೇ ಶ್ರೀಕಂಠಯ್ಯ ಹಜಾರಕ್ಕೆ ಬಂದರು. ಏನೂ ಸಂಭವಿಸಿಲ್ಲವೇನೋ ಎನ್ನುವಂತೆ ಅವರು ಶಾಂತವಾಗಿದ್ದರು.

ವಂದಿಸಿದ ಶಾಂತಮಲ್ಲಪ್ಪನಿಗೆ ಅವರೆಂದರು:

"ಶಿವರಾಮ್ ಮೆಡಿಕಲ್ ಕಾಲೇಜಿನ ಡೀನನ್ನು ಫೋನಿನ ಮೇಲೆ ಕೊಡು. ಶ್ರೀಕಂಠಯ್ಯ ಮಾತಾಡ್ತಾರೆ ಅಂತ ಹೇಳು. ಶ್ರೀಕಂಠಯ್ಯ ಅನ್ನೋ ಹೆಸರಿನವರು ಈ ದೇಶದಲ್ಲಿ ಲಕ್ಷ ಜನ. ಕಾಲೇಜಿಗೆ ಒಂದು ಲಕ್ಷ ವಾಗ್ದಾನ ಮಾಡಿದಾರಲ್ಲಾ–ಸಾಹುಕಾರ್ ಶ್ರೀಕಂಠಯ್ಯನವರು, ಅನ್ನು. ಬೇಗ!"

೧೧

ಶಿವರಾಮ್ ಮೆಡಿಕಲ್ ಕಾಲೇಜಿನ ಡೀನರು ಸಾಹುಕಾರ ಶ್ರೀಕಂಠಯ್ಯ ನವರಿಗೆ ವಿನಯಪೂರ್ಣವಾಗಿ–ಆದರೆ ನಿಸ್ಸಂದಿಗ್ಧ ಮಾತುಗಳಲ್ಲಿ–ತಿಳಿಸಿದರು:

'ಡಾ. ಜಯರಾಮು ಅರ್ಹತೆಯುಳ್ಳವರು. ಅವರು ಪ್ರಾಧ್ಯಾಪಕರಾಗಿರಲು ಒಪ್ಪಿರುವುದು ಕಾಲೇಜಿನ ಆಡಳಿತ ವರ್ಗಕ್ಕೆ ಸಂತೋಷ ಉಂಟುಮಾಡಿದೆ. ನೇಮಕಪತ್ರವನ್ನು ಕೊಟ್ಟಾಗಿದೆ. ಆದರೆ ಈ ನೇಮಕ ತಾತ್ಪೂರ್ತಿಕ. ಅವರು ಮನೆಯಲ್ಲೇ ವಾಸಮಾಡಬೇಕೆಂದು ತಾವು ಆಗ್ರಹಿಸುವ ವಿಷಯ ಮುಂಚಿತ ವಾಗಿಯೇ ತಿಳಿದಿದ್ದರೆ, ಹಾಸ್ಟೆಲಿನಲ್ಲಿ ಸ್ಥಳವಿಲ್ಲ–ಎನ್ನಬಹುದಿತ್ತು. ಆದರೆ ನಿನ್ನೆಯೇ ಅನುಮತಿ ನೀಡಿರುವ ಕಾರಣ ಈಗ ಏನನ್ನೂ ಮಾಡುವಂತಿಲ್ಲ. ಕ್ಷಮಿಸ ಬೇಕು. ಅನ್ಯಥಾ ಭಾವಿಸಬಾರದು.'......

ಸಿಡಿಮಿಡಿಗೊಂಡು ಶ್ರೀಕಂಠಯ್ಯ, ಕಾಲೇಜನ್ನು ನಡೆಸುತ್ತಿರುವ ಸಂಸ್ಥೆಯ ರೆಜಿಸ್ಟ್ರಾರರಿಗೆ ಫೋನ್ ಮಾಡಿದರು.

"ನನಗೆ ಗೊತ್ತಾಗದೇ ಹೋಯ್ತು. ಮೊದಲೇ ತಿಳಿದಿದ್ದರೆ ಇಂಥ ಅಚಾ ತುರ್ಯ ಆಗ್ತಿರ್ಲಿಲ್ಲ,"

–ಎಂದರು ಅವರು.

ಕಾಲೇಜಿನ ಸ್ಥಾಪನೆಗೆ ಕಾರಣರಾಗಿದ್ದ ಬೇರೆ ಒಬ್ಬಿಬ್ಬರಿಗೆ ಹೇಳೋಣವೆಂದು ಶ್ರೀಕಂಠಯ್ಯ ಯೋಚಿಸಿದರು. ಒಬ್ಬರು ಊರಲ್ಲಿರಲಿಲ್ಲ. ಇನ್ನೊಬ್ಬರು ಮನೆ ಯಲ್ಲಿರಲಿಲ್ಲ.

ಶ್ರೀಕಂಠಯ್ಯ ಹತಾಶರಾದರು.

ಮನೆಯಿಂದ ಹೊರಬಿದ್ದು ಭಾಗ್ಯನಗರದಲ್ಲೇ ವಾಸಿಸುವುದರ ಬದಲು ಬೊಂಬಾಯಿಗಾದರೂ ಹೋಗಬಾರದಿತ್ತೆ ಈತ?–ಎಂದು ಅವರು ಹಲುಬಿದರು.

ಏನೋ ಆಗಬೇಕಾಗಿದ್ದ ಮಗ ಏನೋ ಆದ. ದಿವಾನನಾಗಬೇಕಾಗಿದ್ದವನು ಜವಾನನಾದ. ಕಾಲೇಜಿನಲ್ಲಿ ಚಿಲ್ಲರೆ ಪ್ರಾಧ್ಯಾಪಕ; ಆಸ್ಪತ್ರೆಯಲ್ಲಿ ಸಾಮಾನ್ಯ ಸರ್ಜನ್...

[–"ಏನ್ರೀ ಶ್ರೀಕಂಠಯ್ಯ, ಫಾರೀನ್‌ಗೆ ಕಳಿಸೊಲ್ವೆ ಮಗನನ್ನು?"

–"ತಮ್ಮ ಮಗ ಇಲ್ಲೇ ಇದಾರಂತಲ್ಲ ಸಾಹುಕಾರ್ರೇ."

–"ಯಾಕ್ಸಾರ್, ಮನಸ್ತಾಪವೆ? ಮನೆಬಿಟ್ಟಿದಾನೆ!"]

ಹೊಸದಾಗಿ ಪಂಜರ ಸೇರಿಸಲ್ಪಟ್ಟ ಕಾಡು ಹುಲಿಯಾಗಿ ಶ್ರೀಕಂಠಯ್ಯ ಕೊಠಡಿಯಲ್ಲಿ ಒಂದು ಬದಿಯಿಂದ ಇನ್ನೊಂದು ಬದಿಗೆ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ನಡೆದಾಡಿದರು; ಮಲಗುವ ಕೋಣೆಗೆ ಹೋಗಿ ಗೋಡೆ ಕಪಾಟವನ್ನು ತೆರೆದು 'ಔಷಧಿ'ಯ ಬಾಟಲಿಯಿಂದ ಗಾಜಿನ ಲೋಟಕ್ಕೆ ಸ್ವಲ್ಪ ಸ್ವಲ್ಪವಾಗಿ ಮೊಗೆಯುತ್ತ, ನೀರು ಬೆರೆಸುತ್ತ, ಕುಡಿದರು. [ಸೋಡಾ ಬಾಟಲಿಗಳನ್ನೆಂದೂ ಅವರು ಸ್ವಗೃಹಕ್ಕೆ ತಂದವರಲ್ಲ.]

......ತಾನು ಸಾಕ್ಷಿಯಾಗಿದ್ದ ಘಟನೆಯಿಂದ ಜಯಶ್ರೀಯ ಮನಸ್ಸು ಮುದುಡಿಹೋಗಿತ್ತು. ಕಾಲೇಜಿಗೆ ಹೋಗದೆ ಮನೆಯಲ್ಲೇ ಇದ್ದುಬಿಡೋಣ ಎನಿಸಿತು ಒಮ್ಮೆ. ತಂದೆಗೆ ಎಲ್ಲಾದರೂ ತಿಳಿದು, ಯಾಕೆ ಹೋಗಲಿಲ್ಲ ಎಂದು ಕೂಗಾಡಿದರೊ? ಮೊದಲೇ ಸಿಟ್ಟಿನಲ್ಲಿರುವ ಅವರ ಕೈಯಿಂದ ಪಾರಾಗುವುದು ಕಷ್ಟ. ಈ ವಾತಾವರಣದಿಂದ ತಾನು ದೂರವಿರುವುದೇ ಮೇಲು. ಇವತ್ತು ಕಾರಿಲ್ಲ. ಇನ್ನೂ ಹೊತ್ತಿದೆ. ಬೇಗನೇ ಹೊರಟೆನೆಂದರೆ ನಳಿನಿಯ ಮನೆ ತಲಪಿ, ಅವಳ ಜತೆ ಅಲ್ಲಿಂದ ಹೋಗಬಹುದು. ತನ್ನ ದುರವಸ್ಥೆಯನ್ನು ತಿಳಿದು ನಳಿನಿ ಏನನ್ನುವಳೊ?......

ಆ ದಿನ ಕಾಲೇಜಿಗೆ ಒಯ್ಯಬೇಕಾದ ಪುಸ್ತಕಗಳನ್ನು ಜಯಶ್ರೀ ಜೋಡಿಸಿದಳು. ಓದಲು ಇನ್ನೂ ಕೆಲ ಅಧ್ಯಾಯಗಳಿದ್ದ 'ಲೊಲಿಟಾ'ವನ್ನು ಹಾಸಿಗೆಯ ದಿಂಬಿನ ಕೆಳಗೆ ಬಚ್ಚಿಟ್ಟಳು. ಕೊನೆ ತಲಪಿದಂತೆ, 'ಇವತ್ತೂ ತಲೆ ನೋವು' ಎಂದು ಸಾರುವಷ್ಟು ರುಚಿಕರವಾಗಿ ಆ ಪುಸ್ತಕ ಕಾಣಲಿಲ್ಲ.

ಕೆಳಗೆ ಹೋಗಿ,

"ಅಮ್ಮಾ,"

–ಎಂದು ಕರೆದಳು.

ಉತ್ತರ ಬರಲಿಲ್ಲ.

"ಅಮ್ಮ ಎಲ್ಲಿ?"

—ಎಂದು ಭಟ್ಟನನ್ನು ಕೇಳಿದಳು.

"ಮಲಕೊಂಡಿದಾರೆ,"

—ಎಂದ ಆತ.

ತಮ್ಮ ಹಾಸಿಗೆಯ ಮೇಲೆ ಉರುಳಿಕೊಂಡು ಸದ್ದಿಲ್ಲದೆ ಅಳುತ್ತಲಿದ್ದರು ಕಮಲಮ್ಮ. ಕಿಟಿಕಿಯನ್ನು ಮುಚ್ಚಿದ್ದುದರಿಂದ ಒಳಗೆ ಬೆಳಕಿರಲಿಲ್ಲ.

ಹೊಸ್ತಿಲಲ್ಲಿ ನಿಂತು ಜಯಶ್ರೀ ಕೇಳಿದಳು:

"ನಾನು ಕಾಲೇಜಿಗೆ ಹೋಗಲಾ ಅಮ್ಮ?"

ದಿಂಬಿಗೆ ಒತ್ತಿದ ಮುಖವನ್ನು ಎತ್ತದೆಯೇ ಕಮಲಮ್ಮ ಗೊಗ್ಗರ ಧ್ವನಿಯಲ್ಲಿ ಅಂದರು:

"ಹೋಗು."

"ಯಾಕಮ್ಮ ಮಲಗಿದೀಯ? ಮೈಲಿ ಹುಷಾರಿಲ್ವ?"

"ಹುಷಾರಾಗಿದೀನಿ. ಏಳ್ತೀನಿ. ನೀನು ತಿಂಡಿ ತಿಂದ್ಕೊಂಡು ಹೋಗು."

ಭಟ್ಟ ಉಪ್ಪಿಟ್ಟು ಕೊಡುತ್ತಾ,

"ಬಹಳ ಬೇಸರ, ಅಲ್ವಾ ಜಯಮ್ಮ?"

—ಎಂದ.

ಸಹಾನುಭೂತಿ ಎಲ್ಲಿಂದ ಬಂದರೂ ಸರಿಯೆ. ಆ ಘಳಿಗೆಯಲ್ಲಿ ಜಯಶ್ರೀಗೆ ಅದು ಹಿತಕರವಾಗಿತ್ತು.

"ಹೂಂ,"

—ಎಂದಳು ಅವಳು.

ಭಟ್ಟ ನಿಟ್ಟುಸಿರುಬಿಟ್ಟು ತಲೆಯಲ್ಲಾಡಿಸಿದ. ಮತ್ತೇನನ್ನೂ ಹೇಳಲಿಲ್ಲ.

ತನ್ನಂತಹ ಹತಭಾಗಿನಿ ಈ ಲೋಕದಲ್ಲಿ ಬೇರೆ ಯಾರಾದರೂ ಇರುವುದು ಸಾಧ್ಯವೆ? ಜಯಣ್ಣ ಎಷ್ಟೊಂದು ಗೊಂದಲಕ್ಕೆ ಕಾರಣನಾದ! ಹೀಗೆ ಆತ ಹಟ ಸಾಧಿಸುವ ಅಗತ್ಯವಾದರೂ ಏನಿತ್ತು?—ಎಂದು ಮನಸ್ಸಿನೊಳಗೇ ಗೋಗರೆಯುತ್ತ, ಜಯಶ್ರೀ ಉಪ್ಪಿಟ್ಟು ತಿಂದಳು.

ಸೀರೆ ಬದಲಿಸಿ, ಲಚ್ಚಿ ಒರೆಸಿ ಇರಿಸಿದ್ದ ಶೂ ಮೆಟ್ಟಿ, ಪುಸ್ತಕಗಳನ್ನೆತ್ತಿಕೊಂಡು ಜಯಶ್ರೀ ಹೊರಟಳು.

['ಅಪ್ಪಯ್ಯ ಇನ್ನೂ ಒಳಗೇ ಇದಾರೆ. ಬಾಗಿಲು ಮುಚ್ಕೊಂಡಿದೆ. ಮೆತ್ತಗೆ ಹೊರಟ್ಹೋಗ್ತೀನಿ.']

ಅಜೀಜ್ ದೊಡ್ಡ ಕಾರನ್ನು ಬೆಳಗುವುದರಲ್ಲಿ ನಿರತನಾಗಿದ್ದ. ಮಾರಣ್ಣ ಗಿಡಗಳ ಆರೈಕೆ ಮಾಡುತ್ತಿದ್ದ. ಜಗ್ಗ, ಜಯಶ್ರೀ ಹಾದು ಹೋಗಲು ದೊಡ್ಡ ಗೇಟನ್ನು ತುಸು ತೆರೆದ.

"ನಡಕೊಂಡ್ಹೋಗ್ತೀರಾ ಅಮ್ಮಣ್ಣಿ?"

–ಎಂದ ಆತ.

"ಹೂಂ ಕಣೋ."

–ನರಳಾಟದ ಧ್ವನಿಯಂತಿತ್ತು ಜಯಶ್ರೀ ಇತ್ತ ಉತ್ತರ......

......ಸ್ವಲ್ಪ ಹೊತ್ತಿನಲ್ಲಿ ಚಿಕ್ಕಣ್ಣ ಬಂದ.

"ಇಂಜೆಷನ್ ತಕಂಡಾ?"

–ಎಂದು ಕೇಳಿದ ಜಗ್ಗ.

"ಊನಣ್ಣ."

"ಎಂಗಿತ್ತು?"

"ಒಟ್ಟೆ ತೂತ ಮಾಡ್ಬುಟ್ರಣ್ಣ."

"ಓಗ್ಲಿ ಬುಡು. ಸಾಂತಮಲ್ಲಪ್ಪ ಬಂದವ್ನೆ. ಅವುಸದಿ ಕರ್ಚಿಗ್ಬೇಕೂಂತ ಅತ್ತು ರೂಪಾಯಿ ಅಡ್ವಾನ್ಸ್ ಇಸಕೋ. ತಿಂಗಳ ಕೊನೇಲಿ ಅದನ್ನ ಬಕ್ಸೀಸ್ ಅಂತ ಲೆಕ್ಕ ಇಡೀತಾರೆ."

ಚಿಕ್ಕಣ್ಣ ಉತ್ಸಾಹಿತನಾದ.

"ಅಂಗೇ ಮಾಡ್ತೀನಿ."

"ನಾಳೆಯಿಂದ ದೊಡ್ಡಾಸ್ಪತ್ರೇಲಿ ಚಿಕ್ಕ ಬುದ್ಧಿಯೋರೇ ಇರ್ತಾರೆ."

"ಔದಾ? ಅಲ್ಲಿ ಕೆಲ್ಸಕ್ಕೆ ಸೇರ್ಕೊಂಡವ್ರಾ?"

"ನೀನು ಓದ್ಮ್ಯಾಕೆ ಇಲ್ಲಿ ಏನಾಯ್ತು ಗೊತ್ತೇನೊ?"

"ಇಲ್ಲ. ಏನಾಯ್ತಣ್ಣ?"

ಜಗ್ಗ ಬಂಗಲೆಯ ಕಡೆಗೆ, ಸಾಹುಕಾರರ ಕೊಠಡಿಯ ಕಿಟಿಕಿಯತ್ತ, ಒಮ್ಮೆ ನೋಡಿ, ಚಿಕ್ಕಣ್ಣನೊಡನೆ ಗೋಡೆಯ ಮರೆಗೆ ತೆರಳಿ, ಜಯರಾಮು ಮನೆ ಬಿಟ್ಟು ಹೋದ ಬಗೆಯನ್ನು ಬಣ್ಣಿಸತೊಡಗಿದ.

......ಚಿಕ್ಕಣ್ಣನ ವಾಸನೆ ಹಿಡಿದೊಡನೆ ಸೀಸರ್ ಎದ್ದು ನಿಂತು ಒಂದೇ ಸಮನೆ ಬಗುಳತೊಡಗಿತು. 'ಯಾಕೋ ಸ್ವಲ್ಪ ವಿಕಾರವಾಗಿ ಬಗುಳುತ್ತಿದೆ ಯಲ್ಲ'–ಎನಿಸಿತು ಹೊರಗಿದ್ದ ಎಲ್ಲರಿಗೂ.

ಶ್ರೀಕಂಠಯ್ಯನವರ ಕೋಣೆಯ ಬಾಗಿಲು ಸದ್ದು ಮಾಡಿತು. ಅವರು ಹೊರಬಂದು ಶಾಂತಮಲ್ಲಪ್ಪನ ಕೊಠಡಿಯ ಮುಂದೆ ನಿಂತರು. ಸ್ನಾನ ಮಾಡಿ ತಲೆಯುಜ್ಜಿದ ಮೇಲೆ ಕೂದಲನ್ನು ಬಾಚಿರಲಿಲ್ಲ. ಸಿಕ್ಕುಗಟ್ಟಿದ ತುಕ್ಕು ಹಿಡಿದ ತಂತಿಗಳ ಕಿರೀಟವನ್ನು ಶಿರಸ್ಸಿಗೆ ಇಟ್ಟಂತಿತ್ತು ಈಗ. ಕಣ್ಣುಗಳು ಕೆಂಪಡರಿದ್ದುವು. ಹುರಿಗೊಂಡಿದ್ದ ಮೀಸೆ ಮುಖದ ಉಗ್ರತೆಯನ್ನು ಹೆಚ್ಚಿಸಿತ್ತು.

ಶಾಂತಮಲ್ಲಪ್ಪನನ್ನು ಉದ್ದೇಶಿಸಿ ಏನನ್ನೋ ಹೇಳಲೆಂದು ಅವರು ಬಾಯಿ ತೆರೆದರು. ಆತ ಗಡಬಡಿಸಿ ಎದ್ದುನಿಂತು ಆಜ್ಞಾಧಾರಕನಾಗಲು ಸಿದ್ಧನಾದ.

ಆದರೆ ಶ್ರೀಕಂಠಯ್ಯ ಮನಸ್ಸು ಬದಲಿಸಿ, ಏನನ್ನೂ ಹೇಳದೆ, ಪಾದ ಹೊರಳಿಸಿ ದ್ವಾರಮಂಟಪದ ಕಡೆ ನೋಡಿದರು. ಸೀಸರ್ ಯಜಮಾನನ ದೃಷ್ಟಿಯನ್ನು ಲಕ್ಷ್ಯಕ್ಕೆ ತಾರದೆ ಮತ್ತೂ ಬಗುಳಿತು.

ಶ್ರೀಕಂಠಯ್ಯ,

"ಜಗ್ಗಾ !"

–ಎಂದು ಕರೆದು ತಮ್ಮ ಕೊಠಡಿಗೆ ಮರಳಿದರು.

ಜಗ್ಗನನ್ನು ಹುಡುಕಿ ಕರೆತರಲು ಶಾಂತಮಲ್ಲಪ್ಪ ಓಡಿದ.

ಸಾಹುಕಾರರ ಕೋಣೆಯ ಎದುರು ಜಗ್ಗ ಬಂದು ನಿಂತಾಗ ಅವರ ಕೈಯಲ್ಲಿ ರಿವಾಲ್ವರಿತ್ತು. ಅದಕ್ಕೆ ಅವರು ಕಾಡತೂಸು ತುಂಬಿಸುತ್ತಿದ್ದರು. ಸೇವಕನೆಡೆಗೆ ಕಣ್ಣೆತ್ತಿ ನೋಡದೆ ಅವರು ಆಜ್ಞಾಪಿಸಿದರು.

"ಆ ನಾಯಿೂನ ತಗೊಂಡ್ಹೋಗಿ ಸಂಪಿಗೆ ಗಿಡಕ್ಕೆ ಕಟ್ಟು ! ಒಂದು ಕುರ್ಚೀನ ಉದ್ಯಾನದಲ್ಲಿಡು !"

ಜಗ್ಗನಿಗೆ ಅರ್ಥವಾಯಿತು. ಆತ ದ್ವಾರಮಂಟಪಕ್ಕೆ ಬಂದ. ಹುಚ್ಚು ನಾಯಿ ಎಂಬುದು ತೀರ್ಮಾನವಾಗುವುದಕ್ಕೆ ಮುಂಚೆಯೇ ಮರಣದಂಡನೆಯೆ ?–ಎಂದು ಆತನಿಗೆ ಕಸಿವಿಸಿಯಾಯಿತು. ಇದಕ್ಕೆಲ್ಲ ಚಿಕ್ಕಣ್ಣ ಕಾರಣ ಎಂದು ಅವನ ಮೇಲೆ ಸಿಟ್ಟು ಬಂತು. ಬಿಚ್ಚಲು ಹೋದಾಗ ತನಗೂ ಕಚ್ಚಿದರೆ ?–ಎಂಬ ಅಳುಕೂ ತಲೆದೋರಿತು.

ಆತ ಅನುಮಾನಿಸುತ್ತ ಎಚ್ಚರಿಕೆಯಿಂದ ಸೀಸರನ ಬಳಿಸಾರಿದ. ಅದು ಬಗುಳುವುದನ್ನು ನಿಲ್ಲಿಸಿ ಬಾಲ ಆಡಿಸಿತು. ಎದೆಯೊಡೆದ ಹಾಗಾಯಿತು ಜಗ್ಗ ನಿಗೆ. ಎಷ್ಟೆಂದರೂ, ಅದು ಮರಿಯಾಗಿದ್ದಾಗ ಇಸ್ಸಿಪಸ್ಸಿ ಬಳೆದು ದೊಡ್ಡದು ಮಾಡಿದವನು; ವಾರಕ್ಕೊಮ್ಮೆ ತನ್ನ ಹಟ್ಟಿಯಲ್ಲಿ ಮಾಂಸದ–ಮೂಳೆಯ–ಚೂರು ಕೊಟ್ಟವನು. ಭಾರವಾದ ಹೃದಯದಿಂದ ಸರಪಣಿ ಬಿಚ್ಚಿ ಮೆಲ್ಲನೆ ಹೆಜ್ಜೆಗಳ ನ್ನಿಡುತ್ತ, ಸೀಸರನ್ನು ಆತ ಸಂಪಿಗೆಯ ಗಿಡಕ್ಕೆ ಕರೆದೊಯ್ದು; ಅದಕ್ಕೆ ಕಟ್ಟಿದ.

ಇಲ್ಲಿ ಯಾಕೆ?–ಎಂದು ಕೇಳುವಂತೆ ನಾಯಿ ಅವನ ಕಡೆ ನೋಡಿತು.

ಜಗ್ಗ ಒಂದು ಕುರ್ಚಿಯನ್ನು ತಂದು ಸಂಪಿಗೆ ಗಿಡದಿಂದ ಸ್ವಲ್ಪ ದೂರದಲ್ಲಿ ಇಟ್ಟ. ಸಿಮೆಂಟಿನ ನೆಲವಾಗಿದ್ದರೆ ಸೋಂಕಿದ ರಭಸಕ್ಕೆ ಕುರ್ಚಿಯ ಕಾಲುಗಳು ಮುರಿಯುತಿದ್ದುವೇನೋ. ಹುಲ್ಲಿನ ನೆಲ. ಅವು ಬದುಕಿಕೊಂಡುವು.

ಶ್ರೀಕಂಠಯ್ಯ ರಿವಾಲ್ವರ್ ಹಿಡಿದು ದೃಢ ಹೆಜ್ಜೆಗಳನ್ನಿಡುತ್ತ ಹೊರಬಂದರು.

ಸಂಜ್ಞೆಯ ಭಾಷೆ ಸುದ್ದಿಯನ್ನಾಗಲೇ ಶ್ರೀಸದನದ ಆವರಣದ ಬೇರೆ ಬೇರೆ ಮೂಲೆಗಳಿಗೆ ಮುಟ್ಟಿಸಿತ್ತು.

ನಾಯಿಗೂ ಕುರ್ಚಿಗೂ ಇದ್ದ ಅಂತರ ಕಡಿಮೆಯಾಯಿತೆಂದು, ಪೀಠವನ್ನು ಶ್ರೀಕಂಠಯ್ಯ ಸ್ವಲ್ಪ ಹಿಂದಕ್ಕೆ ಇಡಹೇಳಿದರು.

ಏರ್ಪಾಟು ಸಮರ್ಪಕವಾಗಿದೆ ಎಂದೆನಿಸಿದಾಗ, ಅವರು ಕುರ್ಚಿಯ ಮೇಲೆ ಕುಳಿತು ಗುರಿಹಿಡಿದರು.

ಭಟ್ಟ ಕಮಲಮ್ಮನಿಗೆ ತಿಳಿಸಿದ:

"ಸೀಜರ್‌ಗೆ ಸಾಹುಕಾರ್ರು ಗುಂಡಿಕ್ತಿದಾರೆ!"

ಕಮಲಮ್ಮ, 'ಹೌದಾ' ಅನ್ನಲಿಲ್ಲ; 'ಅಯ್ಯೋ' ಅನ್ನಲಿಲ್ಲ. ಮಲಗಿದ್ದವರು ಏಳಲೂ ಇಲ್ಲ.

ಕೈ ಕೈ ಹಿಸುಕುತಿದ್ದ ಜಗ್ಗ, ಕಳೆ ಕೀಳುವ ಉಪಕರಣವನ್ನು ಕೈಯಲ್ಲಿ ಹಿಡಿದಿದ್ದ ಮಾರಣ್ಣ, ಕಾರು ಒರೆಸುವ ವಸ್ತ್ರದ ಮುದ್ದೆಯನ್ನು ಹಿಡಿದುಕೊಂಡಿದ್ದ ಅಜೀಜ್, ಎದೆಗಡ್ಡವಾಗಿ ಕೈಗಳನ್ನು ಕಟ್ಟಿದ್ದ ಚಿಕ್ಕಣ್ಣ, ಮೈ ಕಂಪಿಸುತಿದ್ದ ಶಾಂತಮಲ್ಲಪ್ಪ ಇವರೆಲ್ಲ ಸಾಹುಕಾರರ ಕುರ್ಚಿಯ ಹಿಂಬದಿಯಲ್ಲಿ ಸ್ವಲ್ಪ ದೂರದಲ್ಲಿ ನಿಂತರು. ಭಟ್ಟ, ಲಚ್ಚಿ, ದೇವಕ್ಕ–ಇವರು ಸಾಹುಕಾರರ ದೃಷ್ಟಿಗೆ ಬೀಳದಂತೆ ಮರೆಯಲ್ಲಿ ನಿಂತ ಪ್ರೇಕ್ಷಕರಾದರು.

ಶ್ರೀಕಂಠಯ್ಯ ಶಾಂತಮನಸ್ಕರಾಗಿ ಗುರಿ ನೋಡಿದರು. ಹೊಲಸು ಕೆಲಸ; ತಾನೇ ಇದನ್ನು ಮಾಡಬೇಕೆಂದು ಯಾಕೆ ಮನಸಾಯಿತೊ?–ಎಂದು ಒಂದು ಕ್ಷಣ ಅವರ ಏಕಾಗ್ರತೆ ಕದಡಿತು. ಮತ್ತೆ ತುಟಿಗಳನ್ನು ಬಿಗಿದು ಅವರು ಸಿದ್ಧರಾದರು.

ಪ್ರೇಕ್ಷಕರು ಉಸಿರು ಬಿಗಿಹಿಡಿದು ನಿಂತಿದ್ದರು. ಒಂದು ಕ್ಷಣ. ಒಂದು ಯುಗ.

ಸೀಸರ್, ಈ ದೃಶ್ಯ ಅರ್ಥವಾಗಲಿಲ್ಲ ತನಗೆ ಎಂದು ಬಾಲ ಅಲ್ಲಾಡಿಸಿತು.

"ಢಂ !"

ಶ್ರೀಕಂಠಯ್ಯ ಬೆಚ್ಚಿಬಿದ್ದು ಎದ್ದರು. ಕಣ್ಣು ಮುಚ್ಚಿದ್ದ ಪ್ರೇಕ್ಷಕರು, ಪ್ರಾಣಾಂತಿಕ, ಪೆಟ್ಟು ತಿಂದ ನಾಯಿಯ ಹೊರಳಾಟ ನೋಡಲೆಂದು ಕಣ್ಣು ತೆರೆದರು.

ಸೀಸರ್ ಬಗುಳುತಿತ್ತು. ಮನೆಗೆ ಬೆಂಕಿಬಿತ್ತೆಂಬಂತೆ ಕರ್ಕಶವಾಗಿ ರೋದಿ ಸುತಿತ್ತು. ಗುಂಡು ಅದಕ್ಕಿಂತ ಒಂದಡಿ ಎತ್ತರದಲ್ಲಿ ಸಂಪಿಗೆ ಗಿಡದ ಕಾಂಡದ ತೊಗಟೆಯನ್ನು ಹಾರಿಸಿ,ಹಿಂದಿದ್ದ ಬಲಿಷ್ಠವಾದ ಹಿತ್ತಲಗೋಡೆಯನ್ನುಹೊಕ್ಕಿತ್ತು.

ಗೋಡೆಯ ಮರೆಯಲ್ಲಿದ್ದ ಹೆಂಗಸರೂ ಭಟ್ಟನೂ ಬಾಯಿಗೆ ಅಂಗೈ ಅಡ್ಡ ಹಿಡಿದು ಬಿದ್ದು ಬಿದ್ದು ನಕ್ಕರು. ಸಾಹುಕಾರರ ಹಿಂಭಾಗದಲ್ಲಿದ್ದ ಪ್ರೇಕ್ಷಕರಿಗೂ ನಗು ಬಂದಿತು. ಆದರೆ ಅವರು ಪ್ರಯಾಸಪಟ್ಟು ಅದನ್ನು ಹತ್ತಿಕ್ಕಿದರು.

ಸಾಹುಕಾರರು ಇನ್ನೊಮ್ಮೆ ಗುಂಡು ಹಾರಿಸುವುದು ಖಂಡಿತ–ಎನಿಸಿತು ಜಗ್ಗನಿಗೆ.

ಅಷ್ಟರಲ್ಲೆ ಟೆಲಿಫೋನ್ ಘಂಟೆಯ ಕರೆ ಹೊರಗಿನ ವರೆಗೂ ಕೇಳಿಬಂತು. ಶಾಂತಮಲ್ಲಪ್ಪ ಅತ್ತ ಓಡಿದ.

"ಏನು ನೋಡ್ತಾ ನಿಂತಿದೀರೊ ಇಲ್ಲಿ?"

–ಎಂದು ಆಳುಗಳನ್ನು ನೋಡಿ ಶ್ರೀಕಂಠಯ್ಯ ಗದರಿದರು.

"ನಾಯಿೂನ ತಗೊಂಡು ಹೋಗಿ ಮುನಿಸಿಪಾಲಿಟಿ ಜಲಗಾರರಿಗೆ ಕೊಡು. ಉರುಳು ಹಾಕಿ ಸಾಯಿಸಬೇಕೂಂತ ಹೇಳು."

–ಎಂದು ಜಗ್ಗನಿಗೆ ಆಜ್ಞಾಪಿಸಿದರು.

ಕುರ್ಚಿ ಬಂಗಲೆಯೊಳಕ್ಕೆ ಬಂದಿತು. ನಾಯಿ ಶ್ರೀಸದನದ ಆವರಣವನ್ನು ಬಿಟ್ಟು, ಹೊರ ಹೋಯಿತು.

ರಿವಾಲ್ವರಿನೊಡನೆ ಮರಳಿದ ಪರಾಜಿತ ಜಟ್ಟಿಯನ್ನು [–ಮೀಸೆ ಸೋತಿತ್ತು ಜೋತಿತ್ತು–] ಶಾಂತಮಲ್ಲಪ್ಪ ಸಂಧಿಸಿದ.

"ಬ್ಯಾರಿಸ್ಟರ್ ಸಾಹೇಬರು ಫೋನ್ ಮಾಡಿದಾರೆ. ಬರಬೇಕೂಂತ ಹೇಳಿದ್ದಿರಂತೆ. ಈಗ ಬರಲೆ?–ಅಂತ ಕೇಳ್ತಿದಾರೆ. ತಾವು ಮಾತಾಡ್ತೀರಾ?"

ಶ್ರೀಕಂಠಯ್ಯ ಅಂದರು:

"ಬರ ಹೇಳು. ದಾರಿ ನೋಡ್ತಿದೀನಿ ಅನ್ನು. ಅಷ್ಟೆ."

......ಲಚ್ಚಿ ಬಂದು, ಗೆಲವಿನಿಂದ,

"ಅಮ್ಮಾವ್ರೇ, ಸೀಜರ್ ಸಾಯ್ಲಿಲ್ಲ,"

–ಎಂದಾಗ, ಕಮಲಮ್ಮ ಎದ್ದರು. ಅವರ ಮುಖದ ಮೇಲೆ ಕಿರುನಗೆಯೊಂದು ಮೂಡಿತು. ಎದ್ದವರು ದೇವರ ಮನೆಗೆ ಹೋದರು.

......ಶ್ರೀಕಂಠಯ್ಯನವರಿಗೆ ಆಯಾಸವಾಗಿತ್ತು, ಅವಮಾನವಾಗಿತ್ತು.

–ಗುರಿ ತಪ್ಪದಂತೆ ಗುಂಡು ಹಾರಿಸುವುದನ್ನು ತಾವು ಕಲಿಯಬೇಕು. ರೈಫಲ್ ಕ್ಲಬ್ಬಿನ ಸದಸ್ಯ ತಾವು. ಆದರೆ ಅಲ್ಲಿಗೆ ಹೋಗುವ ಪರಿಪಾಠ ಮಾತ್ರ ಇಲ್ಲ. ಒಂದು ನಾಯಿಯನ್ನು–ಹುಚ್ಚು ನಾಯಿಯನ್ನು–ಕೊಲ್ಲುವುದಾಗಲಿಲ್ಲವಲ್ಲ ತಮ್ಮಿಂದ?

ಶ್ರೀಕಂಠಯ್ಯ ನಿಟ್ಟುಸಿರುಬಿಟ್ಟರು.

......ಒಳಗೆ ಭಟ್ಟ ಪೇಚಿನಲ್ಲಿ ಸಿಲುಕಿದ್ದ. ಸಾಹುಕಾರರು ಉಪಾಹಾರ ಸ್ವೀಕರಿಸಲಿಲ್ಲ. ಅಡುಗೆಯೂ ಆಗುತ್ತ ಬಂದಿತ್ತು. ಊಟವನ್ನೇ ಮಾಡುವರೊ? ಕೇಳಿ ತಿಳಿಯುವುದು ಹೇಗೆ?

ಆತ ತನ್ನ ಸಮಸ್ಯೆಯೊಡನೆ ಶಾಂತಮಲ್ಲಪ್ಪನಲ್ಲಿಗೆ ಬಂದ.

ಶಾಂತಮಲ್ಲಪ್ಪನೆಂದ:

"ಅಮ್ಮಾವ್ರ ಕೈಲಿ ಹೇಳಿಸೋಹಂಗಿಲ್ವ?"

"ಅವರು ದೇವರ ಮನೇಲಿದಾರೆ."

"ಸರಿ. ಬ್ಯಾರಿಸ್ಟರು ಬರ್ತಾರೆ ಇಷ್ಟರಲ್ಲೆ. ಅವರ ಮೂಲಕ ಕೇಳಿಸೋಣ."

......ಕೆಲವೇ ನಿಮಿಷಗಳಲ್ಲಿ ತ್ಯಾಗರಾಜನ್ ಬಂದ. ಶ್ರೀಕಂಠಯ್ಯನವರ ಸಮ್ಮುಖಕ್ಕೆ ಹೋಗುವುದಕ್ಕೆ ಮುನ್ನ ಆತ ಶಾಂತಮಲ್ಲಪ್ಪನನ್ನು ಬದಿಗೆ ಕರೆದು, ಬೆಳಗ್ಗೆ ಏನಾಯಿತೆಂದು ಚುಟುಕಾಗಿ ಕೇಳಿ ತಿಳಿದ. ಪರಿಸ್ಥಿತಿ ಆತನ ನಿರೀಕ್ಷೆಗಿಂತಲೂ ಹೆಚ್ಚು ತೃಪ್ತಿಕರವಾಗಿ ರೂಪುಗೊಂಡಿದ್ದಂತೆ ಕಂಡಿತು.

"ಸಾಹುಕಾರ್ರು ಈಗ ಏನ್ಮಾಡ್ತಿದಾರೆ ?"

"ಗೊತ್ತಿಲ್ಲ. ಬೆಳಿಗ್ಗೆಯಿಂದ ಅವರೇನೂ ತಗೊಂಡಿಲ್ಲ ಬ್ಯಾರಿಸ್ಟರ್ ಸಾಹೇಬರೇ. ಮಾತಾಡಿಸೋಕೆ ಯಾರಿಗೂ ಧೈರ್ಯವಿಲ್ಲ. ಅಡುಗೆಯೂ ಆಗಿದೆ. ಸ್ವಲ್ಪ ಕೇಳಿ ನೋಡ್ತೀರಾ ?"

"ಆಗಲಿ."

......ಬಾಗಿಲು ತೆರೆದಿದ್ದರೂ ತನ್ನ ಬೂಟುಗಳು ಸಪ್ಪಳ ಮಾಡಿದ್ದರೂ ತ್ಯಾಗರಾಜನ್ ತೋರುಬೆರಳಿನ ಗಂಟಿನಿಂದ ಬಾಗಿಲ ಚೌಕಟ್ಟನ್ನು ಮೆಲ್ಲನೆ ತಟ್ಟಿದ.

ಆತ ತ್ಯಾಗರಾಜನ್ ಎಂಬುದನ್ನು ತಿಳಿದಿದ್ದ ಶ್ರೀಕಂಠಯ್ಯ ಅತ್ತ ಕತ್ತು ಹೊರಳಿಸಿ,

"ಬನ್ನಿ,"

—ಎಂದರು.

ವೃತ್ತಿಯ ಉಡುಪು. ಕೈಯಲ್ಲಿ ಬ್ರೀಫ್‌ಕೇಸ್. ತಾನು ಕುಳಿತುಕೊಳ್ಳುವುದೆಲ್ಲಿ ಎಂದು ತ್ಯಾಗರಾಜನ್ ಯೋಚಿಸುತ್ತಿದ್ದಂತೆ ಶ್ರೀಕಂಠಯ್ಯ ಅಂದರು:

"ಇಲ್ಲಿ ಬೇಡ. ಮಾಳಿಗೆಗೆ ಹೋಗೋಣ. ಅಲ್ಲಿ ಎರಡು ಕುರ್ಚಿ ಹಾಕಿಸಿ."

ತ್ಯಾಗರಾಜನ್ ಹೊರಬಂದು ಜಗ್ಗನನ್ನು ಕರೆದು ಸಾಹುಕಾರರ ಆದೇಶವನ್ನು ತಿಳಿಸಿದ.

ಬಿಸಿಲು ಮಾಳಿಗೆಗೆ ಮುಖಮಾಡಿದ್ದ ಕೊಠಡಿಯಲ್ಲಿ ಅನೇಕ ಪೀಠೋಪಕರಣಗಳಿದ್ದುವು. ಅವುಗಳಿಂದ ಒಂದು ಆರಾಮ ಕುರ್ಚಿಯನ್ನೂ ಇನ್ನೊಂದು ಸಾದಾ ಪೀಠವನ್ನೂ ಜಗ್ಗ ಆರಿಸಿ, ಬಿಸಿಲು ಮಾಳಿಗೆಯಲ್ಲಿ ನೆರಳಿದ್ದೆಡೆ ಇಟ್ಟು, ಧೂಳು ಝಾಡಿಸಿದ. ದಾರಿಯಲ್ಲಿ ಸಾಹುಕಾರರೂ ತ್ಯಾಗರಾಜನೂ ತನ್ನನ್ನು ಹಾದು ಹೋಗುವ ತನಕ ಬದಿಗೆ ಸರಿದು ನಿಂತು, ಬಳಿಕ ಕೆಳಕ್ಕಿಳಿದ.

ಮೇಲೆ ನಡೆಯುವ ಸಂಭಾಷಣೆ ಯಾವುದಕ್ಕೆ ಸಂಬಂಧಿಸಿದ್ದೆಂಬುದನ್ನು ಊಹಿಸಿದ್ದ ಶಾಂತಮಲ್ಲಪ್ಪ, ಜಗ್ಗನ ಕಡೆ ನೋಡಿದ.

ಕಾವಲಿನವನು ಕೇಳಿದ:

"ಏನು ಸಮಾಚಾರ, ಕಾರಕೂನ ಸಾಹೇಬರೇ ?"

ಲೆಕ್ಕ ಬರೆಯುವಾತನೆಂದ:

"ನಿನಗ್ಯಾತಕ್ಕೋ ಅದೆಲ್ಲ? ವಿಲ್ ಬರೆಸ್ತಾರೆ."

"ಅಂದರೆ?"

"ಪಟ್ಟಕ್ಕೆ ಮಗ ಹಕ್ಕುದಾರನಲ್ಲ ಅಂತ ಜಾಹೀರು ಮಾಡ್ತಾರೆ."

ಜಗ್ಗನಿಗೂ ಅರ್ಥವಾಯಿತು.

"ಅಂಗಾರೆ ಚಿಕ್ಕ ಬುದ್ಧಿಯೋರಿಗೆ ಪಾಲಿಲ್ಲ."

"ಚುರುಕು ಕಣಯ್ಯ ನಿನ್ನ ಬುದ್ಧಿ. ಪರವಾಗಿಲ್ಲ. ಹ್ನ. ಚಿಕ್ಕೋರಿಗೆ ಇನ್ನು ಮೂರು ನಾಮ."

ತನ್ನ ಹಣೆಯ ಮೇಲೆ ಮೂರು ಬೆರಳುಗಳಿಂದ ಉದ್ದನೆಯ ಗೆರೆ ಎಳೆದ, ಶಾಂತಮಲ್ಲಪ್ಪ.

......ಬಿಸಿಲು ಮಾಳಿಗೆಯಲ್ಲಿ, ಗೋಲ್ಡ್ ಫ್ಲೇಕ್ ಸಿಗರೇಟಿನ ಡಬ್ಬ ದೊಡನೆ ಬಂದಿದ್ದ ಶ್ರೀಕಂಠಯ್ಯ, ಒಂದನ್ನು ಹಚ್ಚಿದರು. ಅವರ ಮುಂದೆ ತ್ಯಾಗರಾಜನ್ ಸೇದಿದವನಲ್ಲ.

'ಕ್ಷಮಿಸಿ ಸರ್.'

—ಎಂದುಬಿಟ್ಟಿದ್ದ, ಹಿಂದೆಯೇ ಒಮ್ಮೆ.

ಎರಡು ಮೂರು ಸಾರೆ ಹೊಗೆಯುಗುಳಿದ ಮೇಲೆ ಶ್ರೀಕಂಠಯ್ಯ ಆರಂಭಿಸಿದರು:

"ನಿನ್ನೆ ಜಯರಾಮುಗೆ ಒಂದು ಕಾಗದ ಬಂತು—ಬೊಂಬಾಯಿಯಿಂದ. ಲೀಲಾ—ಅದೇನೋ ಹೆಸರಿದೆ—ಅಂತ ಒಬ್ಬಳು ಹುಡುಗೀದು. ಪ್ರೇಮಗೀಮದ ಹುಚ್ಚುಚ್ಚಾರ. ಅದರದೊಂದು ಪ್ರತಿ ಆಫೀಸ್ನಲ್ಲಿದೆ. ಟೈಪ್ ಮಾಡಿಸಿದೀನಿ. ಆ ಮೇಲೆ ಕೊಡ್ತೀನಿ."

ಸಾಹುಕಾರರು ಮಾತು ನಿಲ್ಲಿಸಿದುದನ್ನು ಕಂಡು ತ್ಯಾಗರಾಜನ್ ಅಂದ:

"ಕಾಗದ ಓದಿ ನೋಡಿ ಒಳ್ಳೆಯ ಕೆಲಸ ಮಾಡಿದಿರಿ."

"ಯಾರೋ ಒಬ್ಬ ಲಕ್ಷಾಧೀಶನ ಮಗ ಅವಳನ್ನು ಮದುವೆಯಾಗ್ತೀನಿ-ಅಂದಿದಾನಂತೆ. ಆದರೆ ಕೋಟ್ಯಧಿಪತಿಯ ಈ ಮಗನಿಗೆ ಹಾರ ಹಾಕ್ಬೇಕೊಂತ ಅವಳ ಇಚ್ಛೆ. ಹಹ್ಹ! ಹ್ಯಾಗಿದೆ?"

"ಇಂಥ ಹುಡುಗೀರು ಎಲ್ಲಾ ಕಡೆ ಇರ್ತಾರೆ. ನಾನು ಇಂಗ್ಲೆಂಡಿನಲ್ಲಿದ್ದಾಗ ಯಾವನೋ ಮಹರಾಜನ ಮಗ ಅಂತ ತಿಳ್ಕೊಂಡು ಒಬ್ಬಳು ನನ್ನ ಬೆನ್ನು ಹತ್ತಿದ್ಲು."

"ಬೆನ್ನು ಹತ್ತಿದ್ಲೋ? ಸರಿ. ಸರಿ."

ಶ್ರೀಕಂಠಯ್ಯ ಮತ್ತೆ ಎರಡು ನಿಮಿಷ ಸಿಗರೇಟು ಸೇದಿ, ಮುಂದುವರಿಸಿದರು:

"ನನ್ನ ವಿಲ್ ಬದಲಾಯಿಸ್ಬೇಕು."

"ಆಗಲಿ, ಸರ್."

"ಸದ್ಯಕ್ಕೆ ನನ್ನ ಎಲ್ಲಾ ಸಂಪತ್ತನ್ನ ಮಗಳ ಹೆಸರಿಗೆ ಬರೀತೇನೆ. ಇದು ಅವಳಿಗೆ ದಕ್ಕೋದು ತನ್ನ ತಂದೆಗೆ ಅವಳು ವಿಧೇಯಳಾಗಿ ಇರುವ ವರೆಗೆ ಮಾತ್ರ. ಎಲ್ಲಾದರೂ ತಲೆಕೆಟ್ಟು ಅವಳ ಅಣ್ಣನ ದಾರಿ ಹಿಡಿದ್ಲೋ–"

ಶ್ರೀಕಂಠಯ್ಯ ಮಾತು ಮುಗಿಸದೇ ಇದ್ದರೂ ಮುಂದಿನ ಪದಗಳು ಸ್ಪಷ್ಟ ವಾಗಿದ್ದುವು. ಅರ್ಥವಾಯಿತು ಎನ್ನುವಂತೆ ತ್ಯಾಗರಾಜನ್ ಗೋಣು ಹಾಕಿದ.

ಉರಿಯುತ್ತಿದ್ದ ಸಿಗರೇಟಿನ ತುಂಡನ್ನೆಸೆದು, ಬಿಸಿಲು ಮಾಳಿಗೆಯಲ್ಲಿ ಒಂದೆಡೆ ಅದು ಹೊಗೆಯಾಡುತ್ತಿದ್ದುದನ್ನು ಗಮನಿಸಿ, ಶ್ರೀಕಂಠಯ್ಯ ಅಂದರು:

"ನನಗೆ ಏನನಿಸ್ತಿದೆ ಗೊತ್ತೆ, ರಾಜನ್? ನನ್ನ ಸಂಪತ್ತಿನ ಒಂದೊಂದು ನಯಾ ಪೈಸಾವೂ ನಾನು ಸ್ವತಃ ಗಳಿಸಿದ್ದು. ಇದರ ಮೇಲೆ ಬೇರೆ ಯಾರಿಗೂ ಹಕ್ಕಿಲ್ಲ. ನನ್ನ ಸಂತಾನ ಎನ್ನುವ ವ್ಯಾಮೋಹ ಯಾಕೆ? ನನ್ನ ಆಸ್ತಿಯನ್ನು ನಾನು ಏನು ಬೇಕಾದರೂ ಮಾಡಬಹುದು. ನನಗಿಷ್ಟ ಬಂದ ಸೂಳೆಗೆ ಕೊಡಬಹುದು. ಇಲ್ಲವೆ ದಾನಮಾಡಬಹುದು. ಜನಕೋಟಿಯಿಂದ ಸಂಪಾದಿಸಿದ ದುಡ್ಡು ಜನಕೋಟಿಗೇ ಸಲ್ಲಿಸಿದರಾಯ್ತು. ಕೆರೆಯ ನೀರನ್ನು ಕೆರೆಗೇ ಚೆಲ್ಲೋದು......ಏನಂತೀರಾ?"

ತ್ಯಾಗರಾಜನ್ ಹುಸಿನಗೆ ಬೀರಿದ:

"ನಿಮ್ಮ ಘನತೆಗೆ ಒಪ್ಪುವ ಮಾತು, ಸರ್...ಆದರೆ ಜಯಶ್ರೀ ಸಾಮಾನ್ಯ ಹುಡುಗಿಯಲ್ಲ. ಅವಳ ನಡತೆಯಲ್ಲಿ ಗಾಂಭೀರ್ಯವಿದೆ, ಮಾತಿನಲ್ಲಿ ತೂಕವಿದೆ. ಎಲಿಜೆಬೆಥ್–ಮಾರ್ಗರೆಟ್‌ರಿಗಿಂತ ಇವಳೇನು ಕಮ್ಮಿ? ಅವಕಾಶ ಸಿಕ್ಕರೆ ದೇಶದ ಪ್ರಧಾನ ಮಂತ್ರಿಯಾಗೋ ಅರ್ಹತೆ ಜಯಶ್ರೀಗಿದೆ."

ಪರೀಕ್ಷಿಸುವ ನೋಟದಿಂದ ಶ್ರೀಕಂಠಯ್ಯ ತ್ಯಾಗರಾಜನನ್ನು ನೋಡಿದರು. ಮಗಳನ್ನು ಯಾಕೆ ಹೊಗಳುತ್ತಿದ್ದಾನೆ ಈತ? ಅವರಿಗನಿಸಿತು: ಮಗಳಿಗಲ್ಲ, ಪ್ರಶಂಸೆ ಸಂದಾಯವಾಗುತ್ತಿರುವುದು ಮಗಳ ತಂದೆಗೆ. ಇದ್ದರೂ ಇದ್ದೀತು. ತನ್ನ ಗುಣಗಳು ಮಗಳಲ್ಲಿ ಯಾಕೆ ಕಂಡುಬರಬಾರದು?

"ಹುಂ. ತಂದೆಯ ಸ್ವಭಾವ ಮಗನಲ್ಲೇ ಕಾಣಿಸಬೇಕೂಂತ ನಿಯಮವಿಲ್ಲ ವಲ್ಲ! ನನ್ನಲ್ಲಿರುವ ಗುಣ ನನ್ನ ತಂದೆಯಲ್ಲಿರಲಿಲ್ಲ; ಮಗನಲ್ಲೂ ಅದು ಇರಬೇ

ಕಾದ್ದಿಲ್ಲ. ಜಯಶ್ರೀ ಎಷ್ಟೆಂದರೂ ಹೆಣ್ಣು ಹುಡುಗಿ. ನಾನು ಹಾಕಿದ ಗೆರೆ ಅವಳು ಮೀರುವಂಥವಳಲ್ಲ."

"ನಿಜ, ಸರ್."

"ವಿಲ್ ಸಿದ್ಧಗೊಳಿಸಿಬಿಡಿ. ಅದೊಂದು ಆಗುವ ವರೆಗೆ ನನ್ನ ಮನಸ್ಸಿಗೆ ಸಮಾಧಾನವಿರೋದಿಲ್ಲ."

"ಹ್ಞ."

"ಸಮಾಜ ಸುಧಾರಿಸೋಕೆ ಹೊರಟಿದಾನಲ್ಲ ಆ ಕ್ರಾಂತಿಕಾರ? ಅವನ ಓಡಾಟದ ಮೇಲೆ ನೀವು ಸ್ವಲ್ಪ ಕಣ್ಣಿಡಬೇಕು. ಹಾಗೆಯೇ, ಜನರ ಮಾತಿಗೆ ನಾನು ಬೆಲೆ ಕೊಡದೇ ಇದ್ದರೂ ಅವರು ಏನು ಮಾಡ್ತಿದಾರೆ ಅಂತ ತಿಳಕೊಂಡಿರ ಬೇಕು."

"ಹೌದು."

"ಇಷ್ಟು ಹೇಳೋಣಾಂತ ಕರೆಸ್ದೆ."

ತ್ಯಾಗರಾಜನ್ ಎದ್ದ.

"ಹಾಗಾದರೆ ನಾಳೆ ಬರ್ತೀನಿ,"

–ಎಂದ.

"ಹ್ಞ."

ಶ್ರೀಕಂಠಯ್ಯನವರೂ ಎದ್ದರು.

ತ್ಯಾಗರಾಜನ್ ಅವರನ್ನು ಹಿಂಬಾಲಿಸಿದ.

ಬರುತ್ತ ಜಯಶ್ರೀಯ ಕೊಠಡಿಯ ತೆರೆದ ಕಿಟಿಕಿಗಳೆಡೆಯಿಂದ ತ್ಯಾಗರಾಜನ್ ದೃಷ್ಟಿ ಹಾಯಿಸಿದ. ಕುರ್ಚಿಯ ಮೇಲೆ ಹಸುರು ಬಣ್ಣದೊಂದು ಸೀರೆ ಮುದ್ದೆಯಾಗಿ ಬಿದ್ದಿತ್ತು. ಅದರ ಮೇಲೊಂದು ಬ್ರಾ ಇತ್ತು. ಮಂಚದ ಹಾಸಿಗೆಯ ಬಿಳಿ ಹೊದಿಕೆ ಅಸ್ತವ್ಯಸ್ತವಾಗಿತ್ತು.

[ಲಚ್ಚಿ ಮೇಲೆ ಬಂದಿರಲಿಲ್ಲ ಇವತ್ತು.]

ಕೆಳಗಡೆ ತ್ಯಾಗರಾಜನ್,

"ಬರ್ತೀನಿ,"

–ಎಂದು ಮತ್ತೊಮ್ಮೆ ನುಡಿದು ಹೊರಟುಹೋದ.

ತನ್ನ ಕಾರು ಗೇಟನ್ನು ದಾಟುತ್ತಿದ್ದಾಗ, ಮಾಲಿಯೊಡನೆ ಮಾತನಾಡುತ್ತಿದ್ದ

ಹುಡುಗಿಯನ್ನು ತ್ಯಾಗರಾಜನ್ ನೋಡಿದ. ಲಚ್ಚಿ. ಹೂ ಅರಳಿದೆ–ಎಂದುಕೊಂಡ.

ರಸ್ತೆಗಿಳಿದಾಗ ತ್ಯಾಗರಾಜನಿಗೆನ್ನಿಸಿತು:

"ಜಯರಾಮುವನ್ನು ನಾನು ಕಾಣಬೇಕು."

......ಮತ್ತೆ ಬಂದ ಭಟ್ಟನಿಗೆ,

"ಊಟದ ವಿಷಯ ಬ್ಯಾರಿಸ್ಟರು ಏನನ್ನೂ ಹೇಳಲಿಲ್ಲ,"

–ಎಂದ ಶಾಂತಮಲ್ಲಪ್ಪ.

ಹತ್ತು ನಿಮಿಷ ತಡೆದು ತಮ್ಮ ನಡೆಗೋಲಿನೊಡನೆ ಶ್ರೀಕಂಠಯ್ಯ ಹೊರ ಬಂದರು. ಅಜೀಜ್ ಓಡಿಯೋಡಿ ಕಾರು ಹೊರಡಿಸಿಕೊಂಡು ಬಂದ.

"ಕೋದಂಡಪುರಕ್ಕೆ,"

–ಎಂದರು ಶ್ರೀಕಂಠಯ್ಯ.

೧೨

ವಿದ್ಯಾರ್ಥಿನಿಲಯದ ವಾಚನಾಲಯದಲ್ಲಿ ರೇಡಿಯೋಗೆ ಸಮೀಪವಾಗಿ ಜಯರಾಮು ಕುಳಿತಿದ್ದ. ಸಂಜೆ ಏಳೂವರೆ ಘಂಟೆ ಆಗ.

ವಾಚನಾಲಯದ ಗೋಡೆಯ ಮೇಲಿದ್ದ ದೊಡ್ಡ ತಾರೀಕು ಪಟ್ಟಿಯಲ್ಲಿ ೨೨ರ ಅಂಕೆಯ ಸುತ್ತಲೂ ಕೆಂಪು ಪೆನ್ಸಿಲಿನಿಂದ ಯಾರೋ ವೃತ್ತವನ್ನು ರಚಿಸಿದ್ದರು. ಕಾರ್ಯಕ್ರಮಗಳ ಸೂಚಿಪಟ್ಟಿಯಲ್ಲಿ ೨೨ರ ಎದುರಿಗೆ, 'ರಾಷ್ಟ್ರದ ಪ್ರಧಾನಿಯಿಂದ ಪ್ರಸಾರ ಭಾಷಣ ೮.೩೦ಕ್ಕೆ' ಎಂದು ಬರೆದಿತ್ತು.

ಮತ್ತೊಮ್ಮೆ ಅಕ್ಟೋಬರ್ ತಿಂಗಳ ಹಾಳೆಯ ಕಡೆಗೆ ನೋಡಿದ ಜಯ ರಾಮು ಮನಸ್ಸಿನಲ್ಲೆ ಎಣಿಕೆ ಹಾಕಿದ: ತಾನು ವಿದ್ಯಾರ್ಥಿನಿಲಯಕ್ಕೆ ಬಂದು ಇಪ್ಪತ್ತೈದು ದಿನಗಳಾದುವು ಇವತ್ತಿಗೆ......

ವಾಚನಾಲಯದಲ್ಲಿ ಒಬ್ಬರೋ ಇಬ್ಬರೋ ಇದ್ದರು. ಬೇರೆ ದಿನವಾದರೆ ಟೆನ್ನಿಸ್ ಷಟ್‌ಲ್‌ಕಾಕ್ ಆಟಗಳನ್ನು ಮುಗಿಸಿ ವಿದ್ಯಾರ್ಥಿಗಳು ನಿಲಯದ ಆವರಣ ದಿಂದ ಅಷ್ಟು ಹೊತ್ತಿಗೆ ಮರಳುತ್ತಿರಬೇಕು. ಈದಿನ ಆಟವಿರಲಿಲ್ಲ. ಎಲ್ಲಿಯೂ. ಬೇಸರ ದಟ್ಟ ಮೋಡವಾಗಿ ಭಾಗ್ಯನಗರವನ್ನು—ಯಾಕೆ, ಇಡಿಯ ಭಾರತವನ್ನು— ಕವಿದಿತ್ತು. ವಿದ್ಯಾರ್ಥಿಗಳು ನಿಲಯದ ಸುತ್ತಲೂ ಅಲ್ಲಲ್ಲಿ ಗುಂಪುಕಟ್ಟಿಕೊಂಡು ಕೆಲವರು ಇಳಿದನಿಯಲ್ಲಿ ಕೆಲವರು ಉದ್ವೇಗದಿಂದ ಮಾತನಾಡುತ್ತಿದ್ದರು. ಇಬ್ಬರು ವಿದ್ಯಾರ್ಥಿಗಳು ನಿಲಯದ ಸುತ್ತಲಿನ ಬಯಲಿಗೆ ಬಾನುಲಿ ಕಾರ್ಯಕ್ರಮ ಕೇಳಿಸು ವಂತೆ ಮೂರು ಧ್ವನಿವರ್ಧಕಗಳನ್ನಿರಿಸಿ ಅವುಗಳನ್ನು ರೇಡಿಯೋಗೆ ಜೋಡಿಸುತ್ತಿ ದ್ದರು.

ಜಯರಾಮು ಸಾಯಂಕಾಲದ ಆಸ್ಪತ್ರೆಯ ರೌಂಡ್ ಮುಗಿಸಿ ಆದೇ ಆಗ ಮರಳಿದ್ದ. ಆ ಸಂಜೆ ಯಾರ ಸಹವಾಸವೂ ಅವನಿಗೆ ಬೇಕಿರಲಿಲ್ಲ. ಒಂಟಿಯಾ

ಗಿರಲು ಮನಸ್ಸಾಗಿತ್ತು. ಬೆಳಗ್ಗೆ ಓದಿದ್ದ ಪತ್ರಿಕೆಗಳನ್ನು ಒಂದೊಂದಾಗಿ ಆತ ಮತ್ತೆ ಎತ್ತಿಕೊಂಡ. ಸ್ವಾರಸ್ಯವಿದೆಯೆಂದೆ ಓದಿದ್ದನ್ನೆ ಓದುವುದು? ಹೃದಯ ಕರಗಿ ಲಾವಾರಸವಾಗುತ್ತಿತ್ತು ಆ ದಪ್ಪಕ್ಷರದ ಶೀರ್ಷಿಕೆಗಳನ್ನು ಕಂಡಾಗ. ಈ ಬಗೆಯ ಸುದ್ದಿಗಳನ್ನೂ ಪ್ರಕಟಿಸುವ ದುರವಸ್ಥೆಯೊದಗಬೇಕಾಯಿತೆ ಸ್ವತಂತ್ರ ದೇಶದ ಪತ್ರಿಕೆಗಳಿಗೆ?

ಇನ್ನೂ ವೇಳೆಯಿದೆ; ಕೊಠಡಿಗೆ ಹೋಗಿ ಬರೋಣ—ಎಂದು ಜಯರಾಮು ಎದ್ದ.

ಕೋಣೆ ತಲಪಿ ಉಡುಪು ಬದಲಿಸಿದ. ಎರಡು ದಿನಗಳ ಹಿಂದೆ ಅಗಸ ತಂದುಕೊಟ್ಟಿದ್ದ ಖಾದಿಯ ಜುಬ್ಬ ಪಾಯಜಾಮ ಅಲ್ಲಿದ್ದುವು. ಅವುಗಳನ್ನು ತೊಟ್ಟು ತೆಳು ಚಪ್ಪಲಿಗಳನ್ನು ಆತ ಮೆಟ್ಟಿಕೊಂಡ. ಬೇರೆ ಬಟ್ಟೆಗಳನ್ನು ಜಯ ರಾಮು ತೊಡುತ್ತಿದ್ದರೂ ಖಾದಿಯ ಮೇಲಿನ ಅವನ ವ್ಯಾಮೋಹ ಹೋಗಿರಲಿಲ್ಲ. ವಿದ್ಯಾರ್ಥಿ ದೆಸೆಯಲ್ಲೇ ಅವನಿಗಂಟಿದ ರಾಜಕೀಯ ಪ್ರಜ್ಞೆಯ ಸಂಕೇತವಾಗಿ ಖಾದಿಯ ಒಂದೆರಡು ಉಡುಪುಗಳು ಅವನಲ್ಲಿ ಸದಾ ಇರುತಿದ್ದುವು.

ಮನೆಯಿಂದ ತಾನು ಹೊರಟುಬಂದ ಮಾರನೆಯ ದಿನ ತ್ಯಾಗರಾಜನ್ ತನ್ನನ್ನು ಕಾಣಲು ಬಂದಿದ್ದಾಗ ಜಯರಾಮು ಜುಬ್ಬ ಪಾಯಜಾಮಗಳಲ್ಲಿದ್ದ.

"ರಾಷ್ಟ್ರೀಯವಾದಿಯ ಮನೆ ಬಿಟ್ಟು ಬಂದಿರಿ, ಇನ್ನೂ ಖಾದಿಯೆ?"

—ಎಂದು ಹೇಳಿ ನಗೆಯಾಡಿದ್ದ ತ್ಯಾಗರಾಜನ್.

ಅದಕ್ಕೆ ಜಯರಾಮು ಇತ್ತ ಉತ್ತರ:

"ಖಾದಿಯ ಮೇಲಿನ ಒಲವು ಪಿತ್ರಾರ್ಜಿತವಲ್ಲ; ನಾನೇ ಸಂಪಾದಿಸಿದ್ದು!"

ವಿಷಾದ ಸೂಚಿಸುವ ಅದೆಷ್ಟು ಮಾತುಗಳ ಪೀಠಿಕೆಯೊಡನೆ ಆರಂಭಿಸಿದ್ದ ತ್ಯಾಗರಾಜನ್......

ಆಗ ಜಯರಾಮು ನುಡಿದುದೊಂದೇ ಮಾತು:

"ಏನು ಸಮಾಚಾರ? ನೇರವಾಗಿ ಹೇಳಿ."

"ಸಾಹುಕಾರ ಶ್ರೀಕಂಠಯ್ಯನವರು ತೀರ್ಮಾನಿಸಿದ್ದಾರೆ. ಅವರ ಸ್ಥಿರ ಚರ ಆಸ್ತಿಗಳ ಮೇಲೆ ನಿಮಗೆ ಯಾವ ಹಕ್ಕೂ ಇಲ್ಲ."

"ಅಷ್ಟೇನೆ?"

"ಮಗಳು ಜಯಶ್ರೀಯೇ ಏಕಮಾತ್ರ ಹಕ್ಕುದಾರಳು."

"ನನ್ನ ತಂಗಿ ಅಲ್ಲವೆ? ಸಂತೋಷ."

"ವಿಲ್ ಡ್ರಾಫ್ಟಾಗಿದೆ."

"ನೀವೇ ಮಾಡಿದಿರಾ?"

"ಹ್ಞ. ಬೇಸರದ ಕೆಲಸ. ವೃತ್ತಿಗೆ ಸಂಬಂಧಿಸಿದ್ದು. ಮನಸ್ಸಿಲ್ಲದಿದ್ದರೂ ಮಾಡಬೇಕು."

ಜಯರಾಮು ವ್ಯಂಗ್ಯವಾಗಿ ನಕ್ಕು ಅಂದಿದ್ದ:

"ನಿಮ್ಮ ಸ್ವಂತದ ವಿಲ್ ಬರೆಯುವಾಗ ದಯವಿಟ್ಟು ನನ್ನನ್ನು ನೆನಪಿಡಿ ಬ್ಯಾರಿಸ್ಟರ್ ಬಾಬು."

"ನೀವು ನಗುತ್ತೀರಿ. ಆದರೆ ನನಗೆಷ್ಟು ದುಃಖವಾಗ್ತಿದೆ, ಗೊತ್ತೆ?"

ಜಯರಾಮುಗೆ ಸಿಟ್ಟುಬಂತು. ತ್ಯಾಗರಾಜನ ಕನಿಕರದ ಸೋಗನ್ನು ಮತ್ತೂ ಸಹಿಸಿಕೊಳ್ಳಲು ಇಷ್ಟಪಡದೆ ಆತನೆಂದಿದ್ದ:

"ನನಗೆ ಸಹಾನುಭೂತಿ ಬೇಕಾಗಿಲ್ಲ, ಮಿಸ್ಟರ್ ತ್ಯಾಗರಾಜನ್. ಸ್ವತಂತ್ರ ನಾದೆನಲ್ಲ—ಅಂತ ನಾನು ಉತ್ಸಾಹದಿಂದಿದ್ದೇನೆ. ನಿಮ್ಮ ಅಳು ಮೋರೆ ನೋಡೋ ದಕ್ಕೆ ಸಿದ್ಧನಿಲ್ಲ."

ಮಾತು ತೀಕ್ಷ್ಣವಾಗಿ ಚುಚ್ಚಿತ್ತು. ತ್ಯಾಗರಾಜನೆಂದಿದ್ದ:

"ಮೊನ್ನೆಯಷ್ಟೇ ಒಂದು ಸಂಜೆಯನ್ನು ನಾವು ಜತೆಯಾಗಿ ಕಳೆದ್ವಿ. ಇಷ್ಟು ಬೇಗ ಮರೀಲಾ?"

"ನನಗೀಗ ಕೆಲಸವಿದೆ. ಯಾರೋ ಬರಲಿದ್ದಾರೆ. ದಾರಿ ನೋಡ್ತಿದೇನೆ. ಇನ್ನೊಮ್ಮೆ ಭೇಟಿಯಾಗಿ ಇವತ್ತಿನ ಸಂವಾದವನ್ನು ಮುಂದುವರಿಸೋಣ, ಆಗದೆ?"

ಆಗ ತ್ಯಾಗರಾಜನ್ ಎದ್ದು ನಿಂತು ನುಡಿದ:

"ಅಂದಹಾಗೆ ನಿಮಗೊಬ್ಬರು ಫಯಾನ್ಸಿ ಇರುವ ವಿಷಯ ನಿಮ್ಮ ತಂದೆ ಯಿಂದ ಗೊತ್ತಾಯ್ತು. ನನಗೆ ಹೇಳೇ ಇರ್ಲಿಲ್ಲ ನೀವು."

"ಅದೆಲ್ಲಾ ಅವಸರದಲ್ಲಿ ಹೇಳೋ ವಿಷಯವೆ? ನಿಧಾನವಾಗಿ ಇನ್ನೊಂದು ಸಲ ಕಂಡಾಗ ಮಾತಾಡೋಣ. ಗುಡ್ ಈವ್ನಿಂಗ್......"

ತ್ಯಾಗರಾಜನ್ ಹೊರಟುಹೋದ. ಭೇಟಿಗೆ ಬರುತ್ತಾರೆ—ಎಂದು ಜಯ ರಾಮು ಸುಳ್ಳಾಡಿದ್ದ. ಆತ ಹೋದ ಮೇಲೆ, ಪ್ರಕ್ಷುಬ್ಧಗೊಂಡ ಮನಸ್ಸು ಶಾಂತ

ವಾಗಲು ಸ್ವಲ್ಪ ಹೊತ್ತು ಹಿಡಿಯಿತು. ಬಳಿಕ ಅವನು ಲೀಲಾ ಸುಖ್‌ಠಣ್‌ಕರಳ ಪತ್ರಕ್ಕೆ ಉತ್ತರ ಬರೆಯಲು ಕುಳಿತ.

ಚುಟುಕು ಉತ್ತರ.

ಎಸ್. ಎಂ. ಕಾಲೇಜ್ ವಿದ್ಯಾರ್ಥಿನಿಲಯ,
ಭಾಗ್ಯನಗರ
೩೦ ಸೆಪ್ಟೆಂಬರ್ ೧೯೬೨

ಪ್ರಿಯ ಡಾಕ್ಟರ್ ಲೀಲಾ ಸುಖ್‌ಠಣ್‌ಕರ್,

ಸೆಪ್ಟೆಂಬರ್ ೨೨ರ ನಿಮ್ಮ ಕಾಗದಕ್ಕಾಗಿ, ನೀವು ತೋರಿರುವ ವಿಶ್ವಾಸಕ್ಕಾಗಿ ಕೃತಜ್ಞ.

ಡಾ. ಪರೇಖ್ ಮತ್ತು ನೀವು ಪರಸ್ಪರ ವಿವಾಹವಾಗಲಿರುವಿರೆಂದು ತಿಳಿದು ಸಂತೋಷವಾಯಿತು. ಆ ಶುಭಕಾರ್ಯ ಬೇಗನೆ ಜರಗಲೆಂದೂ ನಿಮ್ಮಿಬ್ಬರ ದಾಂಪತ್ಯ ಜೀವನ ಸುಖಕರವಾಗಲೆಂದೂ ಹಾರೈಸುವೆ.

ಜೆಟ್ ಪ್ಲೇನಿನಲ್ಲಿ ಪ್ರವಾಸ ಬೆಳೆಸಲಿರುವ ನಿಮಗೂ ನನಗೂ ಈಗ ಬಹಳ ಅಂತರವಿದೆ. ಇಲ್ಲಿಗೆ ನಾನು ಬಂದ ಮೇಲೆ ನಡೆದ ಒಂದೆರಡು ಸಣ್ಣ ಘಟನೆಗಳ ಬಗೆಗೆ ನೀವು ತಿಳಿದರೆ ಮೇಲಿನ ನನ್ನ ಮಾತು ಮನದಟ್ಟಾದೀತು. ಒಂದು: ಮಂತ್ರಿಯೊಬ್ಬರ ಮಗಳ ಕೈಹಿಡಿಯಲು ನಾನು ಒಪ್ಪಲಿಲ್ಲ. ಎರಡು: ಇಲ್ಲಿನ ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಗೌರವ ವೇತನದ ಮೇಲೆ ಸಾಮಾನ್ಯ ಅಧ್ಯಾಪಕನಾಗಿ ಕೆಲಸಕ್ಕೆ ಸೇರಿದ್ದೇನೆ. ಮೂರು: ತಮ್ಮ ಸಂಪತ್ತಿಗೆ ನಾನು ಉತ್ತರಾಧಿಕಾರಿಯಲ್ಲವೆಂದು ಸಾಹುಕಾರ್ ಶ್ರೀಕಂಠಯ್ಯನವರು ಸಾರಿದ್ದಾರೆ.

ಇಷ್ಟೆ. ತಿಳಿಸಲು ಹೆಚ್ಚಿನ ವಿಷಯಗಳಿಲ್ಲ. ಬದುಕಿನಲ್ಲಿರುವಂತೆಯೇ ಬರೆವಣಿಗೆಯಲ್ಲೂ ಈತ ಅರಸಿಕ ಎಂದು ನೀವು ಭಾವಿಸಬಹುದು.

ಡಾ. ಪರೇಖರಿಗೆ ಹಾಗೂ ನಿಮಗೆ ನನ್ನ ಗೌರವದ ವಂದನೆಗಳು.

ಇತಿ,
ನಿಮ್ಮ ವಿಶ್ವಾಸದ,
ಜೆ. ರಾಮು

ಅಂಚೆಗೆ ಸೇರಿಸುವುದಕ್ಕೆ ಮುನ್ನ ಎರಡು ಮೂರು ಸಾರೆ, ತಾನು ಬರೆದುದನ್ನು ಜಯರಾಮು ಓದಿದ್ದ. ತೃಪ್ತಿಕರವಾಗಿ ಕಂಡಿತ್ತು. ಲೀಲಾ ಸುಖ್‌ಠಣ್‌ಕರ್ ತೋರಬಹುದಾದ ಪ್ರತಿಕ್ರಿಯೆಯನ್ನು ಕಲ್ಪಿಸಿಕೊಂಡು ನಗು ಬಂದಿತ್ತು.

ಮುಂದೆ ಆಕೆಯಿಂದ ಟೆಲಿಗ್ರಾಮ್ ಬಂತಲ್ಲ? ಹೌದು. ಹತ್ತು ದಿನಗಳ ಕೆಳಗೆ.

"ಪರೇಖ್ ನಾನು ಇವತ್ತು ಮದುವೆಯಾದೆವು. ರಾತ್ರೆ ಸ್ವಿಟ್ಜರ್ಲೆಂಡಿಗೆ ಹಾರುತ್ತೇವೆ—ಲೀಲಾ."

ಮಧ್ಯರಾತ್ರೆಗೆ ತಂತೀಜವಾನ ಬಂದು ತನ್ನನ್ನೆಬ್ಬಿಸಿ ಆ ಸಂದೇಶ ತಲಪಿಸಿದ್ದ. ತನ್ನ ಕೊಠಡಿ ಯಾವುದು ಎಂದು ತಿಳಿಯುವುದಕ್ಕೋಸ್ಕರ ಆತ, ವಿದ್ಯಾರ್ಥಿ ನಿಲಯದ ವಾರ್ಡನನ್ನು, ಇಬ್ಬರು ವಿದ್ಯಾರ್ಥಿಗಳನ್ನು, ಕೊನೆಗೆ ತನ್ನ ಮಗ್ಗುಲು ಕೊಠಡಿಯವನನ್ನು ಎಬ್ಬಿಸಿದ್ದ. ತಾನು ಎದ್ದು ಸ್ವಿಚ್ ಹಾಕಿ, ಕಣ್ಣು ಹೊಸಕಿಕೊಂಡು, ಕವರನ್ನು ಸ್ವೀಕರಿಸಿ, ಯಾರದಿರಬಹುದು ಎಂದು ಯೋಚಿಸುತ್ತ ಆತನ ಪೆನ್ನಿನಲ್ಲೇ ಆತ ತೋರಿಸಿದ ನಂಬರಿನೆದುರು ಸಹಿ ಹಾಕಿ, ಲಕೋಟೆಯನ್ನು ಒಡೆದಿದ್ದ.

ನಿದ್ದೆಕಣ್ಣಿನಲ್ಲೂ ಕೂಡಾ ಸಂದೇಶ ಮೊದಲ ಓದಿಗೇ ಅರ್ಥವಾಗಿತ್ತು. 'ಬೆಳಗ್ಗೆ ಕೊಟ್ಟುದು ಈಗ ಮುಟ್ಟಿದೆ; ಇಷ್ಟು ಹೊತ್ತಿಗೆ ಅವರು ರೋಮ್‌ನಗರ ತಲಪಿರಬಹುದು'—ಎಂದುಕೊಂಡ.

ಮಾರನೆಯ ದಿನ ಹಾಸ್ಟೆಲಿನ ವಾರ್ಡನೂ ಇತರ ಮೂವರೂ ಜಯರಾಮುವನ್ನು ಕೇಳಿದ್ದರು:

"ರಾತ್ರೆ ಒಂದು ಟೆಲಿಗ್ರಾಮ್ ಸಿಗ್ತೆ?"

"ಸಿಗ್ತು."

ಮೂವರಲ್ಲಿ ಒಬ್ಬರು—ವಾರ್ಡನ್—ತಿಳಿಯಬಯಸಿದರು:

"ಏನು ಸಮಾಚಾರ?"

"ಬೊಂಬಾಯಿಯಲ್ಲಿ ಇಬ್ಬರು ಡಾಕ್ಟರುಗಳಿಗೆ ಮದುವೆಯಾಯ್ತು."

"ಅಷ್ಟೇನಾ? ಥ್ಯೂ! ಅವರಿಗೆ ಸುಖ, ನಮಗೆ ತಲೆನೋವು."

—ಹಾಗೆ ಹೇಳಿ ವಾರ್ಡನ್ ತಮ್ಮ ಹಣೆ ಮುಟ್ಟಿಕೊಂಡರು. ಅವರಿಗೆ ವಯಸ್ಸಾಗಿತ್ತು. ನಿದ್ರಾಭಂಗವಾದಾಗಲೆಲ್ಲ ತಪ್ಪದೆ ತಲೆನೋವು ಅಂಟಿಕೊಳ್ಳುತಿತ್ತು ಅವರಿಗೆ.

"I am very sorry,"

—ಎಂದ ಜಯರಾಮು.

...ತಾನು ಅಧ್ಯಾಪಕ ಎಂದು ಕಟ್ಟಡದ ಕೆಳ ಅಂತಸ್ತಿನ ಕೊನೆಯ ಕೊಠಡಿ

ಯನ್ನು ಕೊಟ್ಟಿದ್ದರು ವಾರ್ಡನ್. ಆ ಕೋಣೆಗೆ ಮಗ್ಗುಲು ಕಿಟಿಕಿಯೊಂದು ಹೆಚ್ಚಿತ್ತು.

ಅಲ್ಲಿ ನಿಂತು ಜಯರಾಮು, ವಿದ್ಯಾರ್ಥಿನಿಲಯದ ಅಂಗಳವನ್ನೂ ಅದರಾಚೆಗಿನ ರಸ್ತೆಯನ್ನೂ ದಿಟ್ಟಿಸಿದ.

ರಾಷ್ಟ್ರವೇ ಯಾತನೆಗೊಳಗಾಗಿದ್ದ ದಿನ. ವೈಯಕ್ತಿಕ ನೋವು ಸಂಕಟಗಳು ಈಗ ಯಾವ ಲೆಕ್ಕ? ತಿಳಿವಳಿಕೆಯಿದ್ದ ಕೋಟಿ ಕೋಟಿ ಜನರ ದೃಷ್ಟಿ ಹಿಮಾಲಯದ ಗಿರಿ ಕಂದರಗಳಲ್ಲಿ ನೆಟ್ಟಿತ್ತಲ್ಲ?

–ಎಷ್ಟಾಯಿತೀಗ ಘಂಟೆ? ಗಡಿಯಾರ ಎಂಟು ಎನ್ನುತ್ತಿದೆ. ಇನ್ನು ಮೂವತ್ತು ನಿಮಿಷಗಳಿವೆ.

ಈ ವೇಳೆಯಲ್ಲಿ ಏನು ಮಾಡುತ್ತಿರಬಹುದು ತನ್ನ ತಂದೆ? ಎಷ್ಟರಮಟ್ಟಿಗೆ ಜಾಗೃತವಾಗಿರಬಹುದು ಅವರ ದೇಶಪ್ರೇಮ?

ಜಯಶ್ರೀಯೊ? ಟ್ರಾನ್‌ಸಿಸ್ಟರಿನ ಮುಂದೆ ಕುಳಿತು ರೇಡಿಯೊ ಸಿಲೋನಿಗೆ ಕಿವಿಗೊಡುತ್ತಿರುವಳೇನೊ? ಈಗಿನ ಸಂಭವಗಳ ವ್ಯಾಪ್ತಿಯನ್ನು ಎಂದಾದರೂ ಅರ್ಥಮಾಡಿಕೊಳ್ಳುವುದು ಸಾಧ್ಯವೆ ಅವಳಿಂದ?

ಕೆಲ ದಿನಗಳ ಹಿಂದೆ ಒಂದು ಭಾನುವಾರ ಅಪರಾಹ್ನ ಹೊರ ಹೋಗಲು ಜಯರಾಮು ಅಣಿಯಾಗುತ್ತಿದ್ದಾಗ, ಹಾಸ್ಟೆಲಿನ ಜವಾನ ಬಂದು ಹೇಳಿದ್ದ:

"ಫೋನ್ ಮೇಲೆ ಯಾರೋ ಎಂಗಸ್ರು ಕರೀತವರೆ."

ಜಯಶ್ರೀಯೇ ಇರಬೇಕು ಎಂದುಕೊಂಡು ಜಯರಾಮು ಫೋನಿನ ಬಳಿಗೆ ಬಂದಿದ್ದ. ಅದು ವಾರ್ಡನರ ಆಫೀಸು ರೂಮು. ಗುಮಾಸ್ತೆಯೊಬ್ಬನ ಹೊರತಾಗಿ ಅಲ್ಲಿ ಬೇರೆ ಯಾರೂ ಇರಲಿಲ್ಲ.

"ಜಯಶ್ರೀ ಅಂತ ಹೆಸರು ಹೇಳಿದ್ರು ಡಾಕ್ಟ್ರೆ,"

–ಎಂದ ಆತ.

ಜಯರಾಮು ರಿಸೀವರನ್ನೆತ್ತಿಕೊಂಡ:

"ಏನೇ?"

["ಜಯಣ್ಣನಾ?"]

"ಹೂಂ."

["ಅಪ್ಪಯ್ಯ ಯಾರೋ ಮಿನಿಸ್ಟರ ಜತೇಲಿ ದಿಲ್ಲಿಗೆ ಹೋಗಿದ್ದಾರೆ. ನಿನಗೆ ಫೋನ್ ಮಾಡೋಣ ಅನಿಸ್ತು."]

"ಚೆನ್ನಾಗಿದೀಯಾ? ಅಮ್ಮ ಏನ್ಮಾಡ್ತಿದಾಳೆ?"

["ಪಕ್ಕದಲ್ಲೇ ನಿಂತ್ಕೊಂಡಿದಾಳೆ."]

"ಏನ್ಸಮಾಚಾರ?"

["ಏನಿಲ್ಲ. ಆವತ್ತು ಹೊಸ ಡ್ರೈವರ್‌ಗೆ ನಾಯಿ ಕಚ್ತು ನೋಡು. ಅಪ್ಪಯ್ಯ ಅದರ ಮೇಲೆ ಗುಂಡು ಹಾರಿಸಿದ್ರು. ತಾಕಲೇ ಇಲ್ಲ."]

"ವಿಷಯ ಗೊತ್ತಾಯ್ತು. ಆ ಡ್ರೈವರ್ ಒಂದೆರಡು ಸಲ ಆಸ್ಪತ್ರೇಲಿ ಸಿಕ್ಕಿದ್ದ."

["ಅದು ಹುಚ್ಚು ನಾಯಿ ಅಲ್ಲ, ಅಲ್ವ ಜಯೂ?"]

"ಒಂದು ಹತ್ತು ದಿವಸ ಕಟ್ಟಿಹಾಕಿದ್ದಿದ್ರೆ ಗೊತ್ತಾಗ್ತಿತ್ತು."

["ಸಾಯಿಸೋಕೆ ಅಂತ ಜಲಗಾರರಿಗೆ ದಾಟಿಸಿದ್ರಲ್ಲ? ಅವರು ಅದನ್ನ ಸಾಕಿ ಯಾರಿಗಾದರೂ ಮಾರ್ಬಿಡ್ತಾರೆ ಅಂದ ಜಗ್ಗ."]

"ಸರಿ, ಇನ್ನೇನು ವಿಷಯ? ಪರೀಕ್ಷೆಗೆ ಓದೋಕೆ ಶುರುಮಾಡಿದೀಯಾ?

["ಏನವಸರ? ಇನ್ನೂ ಟೈಮಿದೆಯಲ್ಲ? (ಅಮ್ಮ–ನೀನು ಮಾತಾಡ್ತೀಯೊ?) ಅಮ್ಮ ಮಾತಾಡ್ತಾಳಂತೆ ಜಯೂ."]

ಕಮಲಮ್ಮ ಗಟ್ಟಿಯಾಗಿ ಅಂದಿದ್ದರು:

["ಹಲ್ಲೋ!"]

"ಚೆನ್ನಾಗಿದೀಯಾಮ್ಮ?"

["ಯಾವಾಗ್ಬರ್ತೀಯಾ?"]

"ಸ್ವಲ್ಪ ದಿವಸ ಹೋಗ್ಲಿ. ಬಂದು ನೋಡ್ಕೊಂಡು ಹೋಗ್ತೀನಮ್ಮ."

["ನಿನಗೇನಾದರೂ ಬೇಕಾ? ಕೋಡುಬಳೆ ರವೆ ಲಾಡು ಮಾಡಿ ಕಳಿಸ್ಲಾ?"]

"ಸುಮ್ನೆ ಯಾಕಮ್ಮ ತೊಂದ್ರೆ? ನನಗೇನೂ ಬೇಡ."

["ಒಂದ್ಸರ್ತಿ ಬಂದು ಹೋಗಪ್ಪ."]

"ಹೂನಮ್ಮ."

ಮತ್ತೆ ಜಯಶ್ರೀಯ ಸ್ವರ:

["ಇಷ್ಟೇ ಜಯೂ."]

"ಸರಿ."

ರಿಸೀವರ್ ಕೆಳಗಿರಿಸಿ ಹೊರಟಾಗ ಗುಮಾಸ್ತೆ ಕೇಳಿದ್ದ:

"ಮನೆಯವರಾ, ಡಾಕ್ಟ್ರೆ?"

ಜಯರಾಮು ಕೊಟ್ಟ ಉತ್ತರ:

"ತಂಗಿ ಮತ್ತು ತಾಯಿ."

......ಮಾರನೆಯ ಸಂಜೆ ಚಿಕ್ಕಣ್ಣ, ರವೆ ಲಾಡುಗಳೂ ಕೋಡುಬಳೆಗಳ ಪೊಟ್ಟಣವೂ ಇದ್ದ ಸ್ಟೇನ್‌ಲೆಸ್ ಸ್ಟೀಲಿನ ದೊಡ್ಡ ಕರಂಡಕದೊಡನೆ ಬಂದ. ಮೆಡಿಕಲ್ ಅಸೋಸಿಯೇಶನ್ ಲೈಬ್ರೆರಿಗೆ ಹೋಗಿದ್ದುದರಿಂದ ಜಯರಾಮು ವಿದ್ಯಾರ್ಥಿನಿಲಯಕ್ಕೆ ಬರುವುದು ತಡವಾಯಿತು.

ಚಿಕ್ಕಣ್ಣ ಕರಂಡಕವನ್ನೊಪ್ಪಿಸಿ,

"ಭಟ್ರು ಏಳಿದ್ರು. ಸ್ವಂತ ಅಮ್ಮಾವ್ರೇ ಮಾಡಿದ್ರುಂತೆ ಸಾರ್,"

—ಎಂದ.

"ಮನೆಗೆ ಹೊರಟಿದೀಯೇನು?"

—ಎಂದು ಕೇಳಿದ ಜಯರಾಮು.

ಚಿಕ್ಕಣ್ಣನ ಉತ್ತರದ ದಾರಿ ನೋಡದೆ, ಅವನ ಜೇಬಿಗೆ ಎಂಟಾಣೆಯ ನಾಣ್ಯ ಹಾಕಿ [ಆತ 'ಬೇಡ' 'ಬೇಡ' ಎಂದರೂ],

"ಬಸ್ ಛಾರ್ಜಿಗಾಗುತ್ತೆ, ಹೋಗು,"

—ಎಂದ.

ಮೈನಾಪುರದಲ್ಲಿ ತಾನು ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗ ಭಾಗ್ಯನಗರ ದಿಂದ ತನ್ನ ತಾಯಿ ರವೆಲಾಡು ಕೋಡುಬಳೆ ಚಕ್ಕುಲಿಗಳನ್ನು ಕಳುಹಿಕೊಡುವು ದಿತ್ತು. ಗೆಳೆಯರು ಸೇರಿಕೊಂಡು ಎರಡು ಮೂರು ದಿನಗಳಲ್ಲಿ ತಿಂದು ಮುಗಿಸು ತ್ತಿದ್ದರು. ಯಾವ ಯೋಚನೆಯೂ ಇಲ್ಲದೆ ವಿದ್ಯಾರ್ಥಿ ದೆಸೆಯನ್ನು ಕಳೆದೆನಲ್ಲ. ವಿಶೇಷ ವಿನೋದಗಳಲ್ಲಿ ಪಾಲುಗೊಳ್ಳುತ್ತಿರಲಿಲ್ಲ ಎಂದು ಸಹಪಾಠಿಗಳು ತನ್ನನ್ನು ಟೀಕಿಸುತ್ತಿದ್ದರು. ಅಭ್ಯಾಸ, ಪತ್ರಿಕೆ ಪುಸ್ತಕಗಳ ವಾಚನ, ತನಗೆ ಸರಿಯಾದವರು ದೊರೆತಾಗ ನಿರರ್ಥಕವಲ್ಲದ ವಿಚಾರ ವಿನಿಮಯ, ಎಂದಾದರೊಮ್ಮೆ ಒಂದು ಸೆಟ್ ಟೆನ್ನಿಸ್, ಅದೇ ರೀತಿ ಚಲಚ್ಚಿತ್ರ. ಕಟ್ಟುನಿಟ್ಟಾದ ಜೀವನವೇ. ಬೇಕಿದ್ದರೆ 'ಪ್ರಬುದ್ಧ' ಆಟಗಳಲ್ಲಿ ತಾನು ಮೈಮರೆಯಬಹುದಿತ್ತು. ನರ್ಸ್‌ಗಳಲ್ಲಿ ಸಹ-ವಿದ್ಯಾರ್ಥಿನಿಯರಲ್ಲಿ ಕೆಲವರು ಖಂಡಿತವಾಗಿಯೂ ಸಿದ್ಧರಿದ್ದರು. ಆದರೆ ಮನ ಸ್ಸೆಂದೂ ಚಂಚಲವಾಗಿರಲಿಲ್ಲ.

ಆಗಲೂ ಅಷ್ಟೆ. ಮುಂದೆ ಬೊಂಬಾಯಿಯಲ್ಲೂ ಅಷ್ಟೆ.

ಒಮ್ಮೊಮ್ಮೆ ಜಯರಾಮುಗೆ ಅನಿಸುತ್ತಿತ್ತು: ಏನು ಪ್ರಯೋಜನವಾಯಿತು ಆ ಬಗೆಯ ನಿಷ್ಠುರ ಶಿಸ್ತಿನ ಬದುಕನ್ನು ತಾನು ನಡೆಸಿ? ಇತರ ಬಹು ಜನರಂತೆ 'ಸ್ವಾಭಾವಿಕ ಬಾಳ್ವೆ'ಯನ್ನು ಸಾಗಿಸಿದ್ದರೂ ಲೋಕ ಈಗಿನ ರೀತಿಯಲ್ಲೇ ಇರುತಿತ್ತಲ್ಲ?

ಲೋಕದ ಡೊಂಕನು ತಿದ್ದುವರುಂಟೆ ಮರುಳೆ?

ಆದರೆ, ಇತರರಿಗಲ್ಲವಾದರೂ ತನಗೆ ಒಂದು ಬಗೆಯ ತೃಪ್ತಿ ದೊರಕಿಲ್ಲವೆ?

ಒಮ್ಮೆ ಪ್ರಾಧ್ಯಾಪಕರೊಬ್ಬರು ತಾನಿಲ್ಲದಿದ್ದಾಗ ಇಬ್ಬರು ವಿದ್ಯಾರ್ಥಿಗಳಿಗೆ ಹೇಳಿದರು:

"ಡಾಕ್ಟರ್ ರಾಮುವನ್ನು ನೋಡಿ. ಎಂಥ ನಿಗರ್ವಿ, ಎಷ್ಟೊಂದು ವಿನಯ ಸಂಪನ್ನ !"

ಆ ಹೊಗಳಿಕೆಯ ಮಾತನ್ನು ಸಹಪಾಠಿಯೊಬ್ಬ ವರದಿ ಮಾಡಿದಾಗ, 'ನಿಗರ್ವಿ'ಯಾದ ತನಗೆ 'ಹೆಮ್ಮೆ' ಎನಿಸಿತ್ತು !

ಆ ಮೇಲೆ ಹಲವರು 'ಪ್ರೊಫೆಸರ್ಸ್ ಪೆಟ್' ಎಂದು ತನಗೆ ಅಡ್ಡ ಹೆಸರಿಟ್ಟು, ಪರಿಹಾಸ್ಯದ ಮಾತುಗಳನ್ನು ಆಡಿದ್ದರು. ಅದನ್ನು ಕೇಳಿದಾಗ, 'ಈ ಜನ ಎಷ್ಟು ತುಚ್ಛವಾಗಿರ್ತಾರೆ !' ಎನಿಸಿತ್ತು.

ಪ್ರತಿಯೊಂದು ರಾಷ್ಟ್ರದ ಜನತೆಗೂ ಅವರದೇ ಆದ ಸ್ವಭಾವ ವೈಶಿಷ್ಟ್ಯವಿರುತ್ತದೆ. ಸಣ್ಣತನ ತನ್ನ ದೇಶವಾದ ಭಾರತದ ಜನತೆಯ ರಾಷ್ಟ್ರೀಯ ಗುಣವೆ?

ಭಾಗ್ಯನಗರದ ಪಂದ್ಯಾಟದ ಬಯಲಲ್ಲಿ ಲಕ್ಷಾವಧಿ ಜನರ ಜತೆ ಸೇರಿ ನಡು ಇರುಳು ಸಮೀಪಿಸುವುದನ್ನು, ಸ್ವತಂತ್ರ ರಾಷ್ಟ್ರ ಉದಯವಾಗುವುದನ್ನು, ತಾನು ಇದಿರು ನೋಡಿ ಹದಿನೈದು ವರ್ಷಗಳಾದುವಲ್ಲ? ಆಗ ತಾನು ಹದಿನೈದರ ಹುಡುಗ. ಹೈಸ್ಕೂಲು ಮೇಲಣ ತರಗತಿಯಲ್ಲಿದ್ದೆ. ವಿದ್ಯುದ್ದೀಪಗಳು ನಿರ್ಮಿಸಿದ್ದ ಬೆಳುದಿಂಗಳಲ್ಲಿ ರಾಷ್ಟ್ರಧ್ವಜ ಮೇಲೇರಿದಾಗ ಎಲ್ಲರ ಜತೆಗೂಡಿ ತಾನೂ ಹಾಡಿದ್ದೆನಲ್ಲವೆ?—'ಝಂಡಾ ಊಂಚಾ ರಹೇ ಹಮಾರಾ......'

ಏನಾಗಿಹೋಯಿತು ಮುಂದೆ? ಭಾಗ್ಯನಗರದಲ್ಲಿ ಆ ವೇಳೆಗಾಗಲೇ ತನ್ನ ತಂದೆ, ವೇದಿಕೆಯ ಮೇಲಿನ ಮುಖಂಡರ ಬಳಗವನ್ನು ಸೇರಿದ್ದರು. ತೀರಾ ಸಾಮಾನ್ಯ ಮಟ್ಟದಿಂದ ಮೇಲೆ ಬಂದಿದ್ದ ರಾಷ್ಟ್ರೀಯ ಪಕ್ಷದ ನಾಯಕರಿಗೆ ಅವ

ರೆಲ್ಲರನ್ನೂ ಒಂದೇ ಸಲ ಕೊಳ್ಳುವ ಸಾಮರ್ಥ್ಯವಿದ್ದ ಸಾಹುಕಾರ ಶ್ರೀಕಂಠಯ್ಯ ನವರ ಸ್ನೇಹ ಹಿತಕರವಾಗಿ ಕಂಡಿತ್ತು.

ಸಂಶಯವಿಲ್ಲ. ಭಾಗ್ಯನಗರದ ಕಥೆಯೇ ದೇಶದ ಇತರ ಕಡೆಗಳಲ್ಲಿ......

ಕನಸು ಏನಾಯಿತು? ಹಾಡು ಏನಾಯಿತು? ಒಮ್ಮೆಲೆ ಹಗಲು ಇರುಳಾಯಿತೆ? ಬೆಳಕಿನ ಗೋಲಗಳಿಗೆ ಶಾಶ್ವತ ಗ್ರಹಣ ಹಿಡಿಯಿತೆ?

ಹಾಗೆನ್ನಲಾರ ಜಯರಾಮು.

ಅಧಿಕಾರ ಹಸ್ತಾಂತರದ ವೇಳೆ ಕನಸನ್ನು ಕೃತಿಗಿಳಿಸುವ ಪ್ರತಿಜ್ಞೆಯ ಬಗೆಗೆ ಜವಾಹರರು ಮಾತನಾಡಿದರಲ್ಲ?

ಆಗ ಅವರೆಂದಿದ್ದರು:

"ನಮ್ಮ ಮುಂದಿರುವುದು ಸುಖಜೀವನದ ಅಥವಾ ವಿಶ್ರಾಂತಿಯ ಭವಿಷ್ಯತ್ತಲ್ಲ. ಅದು, ನಾವೆಷ್ಟೋ ಸಾರೆ ಸ್ವೀಕರಿಸುತ್ತ ಬಂದಿರುವ ಪ್ರತಿಜ್ಞೆಗಳೂ ಈ ದಿನ ಸ್ವೀಕರಿಸಲಿರುವ ಪ್ರತಿಜ್ಞೆಯೂ ಈಡೇರುವುದು ಸಾಧ್ಯವಾಗುವಂತೆ ನಾವು ನಡೆಸಬೇಕಾಗಿರುವ ಅವ್ಯಾಹತ ಹೋರಾಟದ ಭವಿಷ್ಯತ್ತು. ಭಾರತದ ಸೇವೆಯೆಂದರೆ, ಸಂಕಟಪಡುತ್ತಿರುವ ಕೋಟ್ಯಂತರ ಜನರ ಸೇವೆ ಎಂದರ್ಥ. ದಾರಿದ್ರ್ಯ, ಅಜ್ಞಾನ, ರೋಗರುಜಿನ, ಅವಕಾಶಗಳ ಅಸಮಾನತೆ—ಇವುಗಳನ್ನೆಲ್ಲ ಕೊನೆಗಾಣಿಸುವುದು, ಎಂದರ್ಥ."

ಈ ಗುರಿ ಸಾಧನೆಗಾಗಿ ಇಷ್ಟು ವರ್ಷಗಳ ಕಾಲ ಯತ್ನ ನಡೆದಿಲ್ಲವೆಂದೆ? ನಡೆದಿದೆ. ಆದರೆ ಆ ಯತ್ನದ ಜತೆಯಲ್ಲೇ ಸ್ವಾತಂತ್ರ್ಯದ ಫಲವನ್ನು ಕೆಲವೇ ಕೆಲವರಿಗಾಗಿ ಕಸಿದುಕೊಳ್ಳುವ ಪ್ರಬಲ ಪ್ರಯತ್ನವೂ ನಡೆದಿದೆ.

—ಯೋಚನೆಗಳ ಸುಳಿಯಲ್ಲಿ ಸಿಲುಕಿದ ಜಯರಾಮು ನಿಟ್ಟುಸಿರು ಬಿಟ್ಟ.

ಶತಮಾನಗಳ ದಾಸ್ಯದಲ್ಲಿ, ಅನೈಕ್ಯದಲ್ಲಿ, ಅಂಧಕಾರದಲ್ಲಿ ತೊಳಲಿದ ಈ ದೇಶ ಚೇತರಿಸಿಕೊಳ್ಳುವುದು, ಅಭಿವೃದ್ಧಿ ಹೊಂದುವುದು ಸಾಧ್ಯವೇ ಇಲ್ಲವೆ? ಸ್ವಾರ್ಥ ಸಾಧನೆಗೆ ಅಧಿಕಾರ ಲಾಲಸೆಗಳ ಅಡಕೊತ್ತಿಯಿಂದ ಈ ರಾಷ್ಟ್ರ ಎಂದೂ ಪಾರಾಗಲಾರದೆ?

ಆಮೆಯ ನಡಿಗೆಯಿಂದಲಾದರೂ ಜನಪದ ಎಚ್ಚರುತ್ತಿದೆ ಎಂದು ಭಾಸವಾಗುತ್ತಿದ್ದ ವೇಳೆಯಲ್ಲೇ ಈ ಆಘಾತ......

ಮೂವತ್ತು ವರ್ಷಗಳನ್ನು ಹೋರಾಡುತ್ತ ಕಳೆದಿರುವ ಯುದ್ಧದಾಹಿಗಳ

ಅಸಂಖ್ಯ ಪಡೆಗಳು ಆ ಕಡೆ; ವಿಶ್ವಶಾಂತಿಯೇ ತನ್ನ ಪರಮ ಗುರಿ ಎಂದು ಸಾರುತ್ತ ಬಂದಿರುವ ರಾಷ್ಟ್ರದ ಸೇನೆಗಳು ಈ ಕಡೆ. ಸಮಬಲರೊಳಗಿನ ಸಮರವೆ ಇದು?

ಒದಗಿರುವ ಪರಾಭವಗಳ ಪರಂಪರೆಗೆ ಏನರ್ಥ?

–ಆ ಅರ್ಥವನ್ನು ಹುಡುಕುವವನಂತೆ ಜಯರಾಮು ಹೊರಗೆ ನೋಡಿದ. ಆವರಣದಲ್ಲಿದ್ದ ವಿದ್ಯಾರ್ಥಿಗಳು ಹಲವರು ಬೇಗ ಬೇಗನೆ ಒಳ ಹೋಗುತ್ತಿದ್ದರು. ಬೇರೆ ಹಲವರು ಆ ಮೂಲೆಯಲ್ಲಿ ಇರಿಸಿದ್ದ ಧ್ವನಿವರ್ಧಕದ ಮುಂದೆ ಗುಂಪುಕೂಡು ತ್ತಿದ್ದರು.

"ಹೊತ್ತಾಗಿ ಹೋಯಿತು!"

–ಎಂದು ಗಟ್ಟಿಯಾಗಿಯೆ ಅಂದು, ಜಯರಾಮು ವಾಚನಾಲಯದತ್ತ ಧಾವಿಸಿದ.

ಅಲ್ಲಿ ವಿದ್ಯಾರ್ಥಿಗಳೂ ಅಧ್ಯಾಪಕರೂ ಕಿಕ್ಕಿರಿದಿದ್ದರು. ಪ್ರಸಾರಕ್ಕೆ ಪೂರ್ವದ ಕ್ಷಣ ಮೌನವನ್ನು ರೇಡಿಯೋ ಅನುಭವಿಸುತ್ತಿತ್ತು. ಸುತ್ತಲೂ ನೆಲೆಸಿತ್ತು ಸೂಜಿ ಬಿದ್ದರೂ ಸದ್ದಾಗುವಂತಹ ನೀರವತೆ.

"ಸಂಗಾತಿಗಳೇ, ಸ್ನೇಹಿತರೇ, ದೇಶಬಾಂಧವರೇ......"

–ಪ್ರಖರವಾಗಿದ್ದ ಅಸ್ವಾಸ್ಥ್ಯದಿಂದ ಆಗ ತಾನೇ ಚೇತರಿಸಿಕೊಂಡಿದ್ದ ರಾಷ್ಟ್ರದ ಪ್ರಧಾನಿಯ ಧ್ವನಿ......

ನೆರೆದವರಲ್ಲಿ ಒಬ್ಬನಾಗಿ ಜಯರಾಮು ಆಲಿಸಿದ:

"ದೀರ್ಘಕಾಲದ ಅಂತರದ ಬಳಿಕ ರೇಡಿಯೋದ ಮೂಲಕ ನಿಮ್ಮೊಡನೆ ಮಾತನಾಡುತ್ತಿದ್ದೇನೆ......"

[ಶಾಂತಿಪ್ರಿಯ ರಾಷ್ಟ್ರವಾದ ಭಾರತದ ಮೇಲೆ ಚೀಣಾ ನಡೆಸಿರುವ ದುರಾ ಕ್ರಮಣದ ಪ್ರಸ್ತಾಪ. ಉತ್ತರದ ಗಡಿಯಲ್ಲಿ ಉಂಟಾಗಿರುವ ಗಂಭೀರ ಪರಿಸ್ಥಿತಿ.]

"......ನಮ್ಮ ಜನತೆಯ ಸ್ವಾತಂತ್ರ್ಯವನ್ನೂ ನಮ್ಮ ರಾಷ್ಟ್ರದ ಸ್ವಾಧೀನತೆ ಯನ್ನೂ ಅಪಾಯಕ್ಕೀಡು ಮಾಡಿರುವ ಗಂಡಾಂತರವನ್ನು ಸಂಪೂರ್ಣವಾಗಿ ನಾವೀಗ ಮನಗಾಣುವುದು ಅಗತ್ಯವಾಗಿದೆ. ಅಂತಿಮವಾಗಿ ಯಾವ ಶಕ್ತಿಯೂ ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾರದೆಂಬುದನ್ನು ನಾನು ಬಲ್ಲೆ. ಆದರೂ ದೀರ್ಘ ಕಾಲದ ತ್ಯಾಗ ಬಲಿದಾನಗಳ ಫಲವಾಗಿ ನಾವು ಗಳಿಸಿದ ಸ್ವಾತಂತ್ರ್ಯ ವನ್ನೂ ರಾಷ್ಟ್ರದ ಸಮಗ್ರತೆಯನ್ನೂ ಉಳಿಸಿಕೊಳ್ಳುವುದಕ್ಕೋಸ್ಕರ ನಾವೀಗ ಟೊಂಕಕಟ್ಟಿ, ಸ್ವಾತಂತ್ರ್ಯಾನಂತರ ದೇಶಕ್ಕೊದಗಿರುವ ಅತ್ಯಂತ ಮಹತ್ತರದ್ದಾದ

ಅಪಾಯವನ್ನು ಇದಿರಿಸಬೇಕಾಗಿದೆ. ನಾವು ಯಶಸ್ವಿಯಾಗುವೆವೆಂಬ ಬಗ್ಗೆ ನನ್ನ ಮನಸ್ಸಿನಲ್ಲಿ ಸಂದೇಹವಿಲ್ಲ. ನಮ್ಮ ಜನತೆಯ ಹಾಗೂ ಮಾತೃಭೂಮಿಯ ಸ್ವಾತಂತ್ರ್ಯದ ಎದುರಿನಲ್ಲಿ ಉಳಿದುದೆಲ್ಲ ಕ್ಷುಲ್ಲಕವಾಗಿದೆ......

[ಚೀಣಾ–ಭಾರತ ಸಂಬಂಧ ಹೊಸ ರೂಪ ತಳೆದುದರ ಸೂಕ್ಷ್ಮಾವಲೋಕನದ ಬಳಿಕ–]

"ಉತ್ತರದ ಗಡಿಯಲ್ಲಿ ನಮ್ಮ ಪಡೆಗಳಿಗೆ ಆಗಿರುವ ಸೋಲಿನಿಂದ ನನಗೆ ವ್ಯಥೆಯಾಗಿದೆ. ಅಪರಿಮಿತ ಸೇನಾಬಲ, ಘನ ಮಾರಕಾಸ್ತ್ರಗಳು, ನಮ್ಮವರನ್ನು ಆರಂಭದಲ್ಲಿ ಅಸಹಾಯರನ್ನಾಗಿ ಮಾಡಿವೆ. ಇಂಥ ಪರಿಸ್ಥಿತಿಯನ್ನು ಧೈರ್ಯದಿಂದ ಇದಿರಿಸಿರುವ ನಮ್ಮ ಸೇನಾಧಿಕಾರಿಗಳೂ ಸೈನಿಕರಿಗೂ ನಾನು ಗೌರವ ಸಲ್ಲಿಸ ಬಯಸುತ್ತೇನೆ. ಈ ಪ್ರದೇಶದಲ್ಲಿ ಇನ್ನಷ್ಟು ಪರಾಭವಗಳು ಆಗಬಹುದು. ಆದರೆ ಒಂದು ಮಾತ್ರ ಖಂಡಿತ: ಈ ಘಟನೆಯ ಅಂತಿಮ ಪರಿಣಾಮದಲ್ಲಿ ನಮಗೆ ಗೆಲುವಾಗುವುದು......ಈ ಘರ್ಷಣೆ ದೀರ್ಘ ಕಾಲ ನಡೆಯಬಹುದು. ಮಾನಸಿಕವಾಗಿಯೂ ಬೇರೆ ವಿಧಗಳಲ್ಲೂ ಅದಕ್ಕಾಗಿ ನಮ್ಮನ್ನು ನಾವು ಸಜ್ಜುಗೊಳಿಸಬೇಕು......ನಮ್ಮಲ್ಲಿ ನಮಗೆ ನಂಬುಗೆಯಿರಬೇಕು; ದುರಾಕ್ರಮಣಕಾರನಿಂದ ನಮ್ಮ ದೇಶವನ್ನು ಸ್ವತಂತ್ರಗೊಳಿಸುವ ದೃಢ ನಿರ್ಧಾರ ನಮ್ಮದಾಗಬೇಕು......

[ಬಳಿಕ, ವಿವಿಧ ರಂಗಗಳಲ್ಲಿ ಜನತೆ ನಿರ್ವಹಿಸಬೇಕಾದ ಕರ್ತವ್ಯಗಳನ್ನು ಕುರಿತು ಕರೆ. ಕೊನೆಯಲ್ಲಿ–]

"ಯಾವುದೇ ಮತ, ಪಕ್ಷ ಅಥವಾ ಗುಂಪಿಗೆ ನೀವು ಸೇರಿರಿ, ನಮ್ಮ ಮೇಲೆ ಹೇರಲ್ಪಟ್ಟಿರುವ ಈ ಹೋರಾಟದಲ್ಲಿ ಸಂಗಾತಿಗಳಾಗಬೇಕೆಂದು ನಿಮ್ಮೆಲ್ಲರನ್ನು ಆಹ್ವಾನಿಸುತ್ತಿದ್ದೇನೆ. ನಮ್ಮ ಜನತೆಯಲ್ಲೂ ನಮ್ಮ ಮುಂದಿರುವ ಧ್ಯೇಯದಲ್ಲೂ ನಮ್ಮ ರಾಷ್ಟ್ರದ ಭವಿಷ್ಯತ್ತಿನಲ್ಲೂ ನನಗೆ ಪೂರ್ಣ ವಿಶ್ವಾಸವಿದೆ......

"ನಿಮಗೆ ಒಳಿತಾಗಲೆಂದು ಹಾರೈಸುತ್ತೇನೆ. ನೀವು ತಲೆಗಳನ್ನೆತ್ತಿ ಹಿಡಿದು ನಮ್ಮ ರಾಷ್ಟ್ರಕ್ಕಾಗಿ ನಾವು ಯೋಜಿಸಿರುವ ಮಹಾ ಭವಿತವ್ಯದಲ್ಲಿ ಶ್ರದ್ಧೆಯನ್ನೂ ಪೂರ್ಣ ವಿಶ್ವಾಸವನ್ನೂ ತಳೆದಿರಬೇಕೆಂಬುದು ನನ್ನ ಅಪೇಕ್ಷೆಯಾಗಿದೆ. ಜಯ್ ಹಿಂದ್!"

–ಹೃದಯದ ಭಾರ ತುಸು ಕಡಮೆಯಾದವನಂತೆ ಜಯರಾಮು ಉಸಿರು ಬಿಟ್ಟ. ಅಲ್ಲಿ ನೆರೆದಿದ್ದ ಇತರರಲ್ಲೂ ಅದೇ ಬಗೆಯ ಪ್ರತಿಕ್ರಿಯೆಯನ್ನು ಆತ ಕಂಡ.

೧೩

ಚೀಣೀ ದೌರ್ಜನ್ಯ ದುರಾಕ್ರಮಣಗಳಿಗೆ ತುತ್ತಾಗಿ ಭಾರತ ಕನಲಿದಾಗ ಸಾಹುಕಾರ ಶ್ರೀಕಂಠಯ್ಯನವರು ಹೊಸ ಹುರುಪಿನಿಂದ ಓಡಾಡಿದರು. ಸ್ವಲ್ಪ ಸಮಯದಿಂದ ಅವರನ್ನು ಕವಿದಿದ್ದ ಮೌಢ್ಯ ಚೆದರಿಹೋಯಿತು. ಮತ್ತೊಮ್ಮೆ ಯೌವನ ಮೈಗೂಡಿತೆಂಬಂತೆ ಲವಲವಿಕೆಯಿಂದ ನಿತ್ಯದ ವ್ಯವಹಾರಗಳಲ್ಲಿ ಅವರು ನಿರತರಾದರು.

ದಿಲ್ಲಿಯಲ್ಲಿ ಎರಡುದಿನ ಇದ್ದಾಗ, ಉತ್ತರದ ಗಡಿಯಲ್ಲಿ ಯುದ್ಧವೇರ್ಪಡುವ ಸಂಭವವೇನಾದರೂ ಉಂಟೆ?—ಎಂದು ಶ್ರೀಕಂಠಯ್ಯ ತರ್ಕಿಸಿದ್ದರು. ಆದರೆ ದೇಶದ ಇತರರಂತೆ ಅವರೂ ಭಾಯಿ-ಭಾಯಿ ತತ್ವಜ್ಞಾನದ ಜಲಧಾರೆಯಲ್ಲಿ ತಲೆ ತೋಯಿಸಿಕೊಂಡಿದ್ದುದರಿಂದ, ಮುಂದಿನ ಆಗುಹೋಗುಗಳನ್ನು ಸ್ಪಷ್ಟವಾಗಿ ಊಹಿಸಲು ಸಮರ್ಥರಾಗಲಿಲ್ಲ. ಒಮ್ಮಿಂದೊಮ್ಮೆಲೆ ಸಮರ ಪರಿಸ್ಥಿತಿ ಉಂಟಾದಾಗ ಮಾತ್ರ ಅವರು ಬೆಚ್ಚಿಬೀಳದೆ, ಆ ಕ್ಷಣವೇ ಹೊಸ ಸನ್ನಿವೇಶಕ್ಕೆ ಅನುಗುಣವಾಗಿ ತಮ್ಮ ಚಟುವಟಿಕೆಗಳನ್ನು ರೂಪಿಸಿಕೊಂಡರು.

ಮಾರುಕಟ್ಟೆಯ ಕುಸಿತದಿಂದ ವಣಿಕಲೋಕವೂ ಇತರ ಆಸಕ್ತರೂ ತಲ್ಲಣಿಸಿದಾಗ, ಶ್ರೀಕಂಠಯ್ಯ ತಮ್ಮ ಮೇಜಿನೆದುರು ಕದಲದೆ ಕುಳಿತು ದಾಳಗಳನ್ನು ಸರಿಸಿದರು. ಸಾಹಸ ಪ್ರವೃತ್ತಿ, ಕೊಳ್ಳುವ ಮಾರುವ ಕಲೆಯಲ್ಲಿ ಪಾರಂಗತರಾದ ಅವರ ವೈಶಿಷ್ಟ್ಯವಾಗಿತ್ತು. ಹೋದರೊಂದು ಲಕ್ಷ, ಬಂದರೊಂದು ಕೋಟಿ.

ಕಳೆದ ಮಹಾ ಯುದ್ಧ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಲು ಶ್ರೀಕಂಠಯ್ಯನವರಿಗೆ ನೆರವಾಗಿತ್ತು. ಜೀವಮಾನದಲ್ಲಿ ಇನ್ನೊಂದು ಯುದ್ಧದ ['ಸದ್ಯಕ್ಕೇನೋ ಸಣ್ಣ ಪ್ರಮಾಣದ್ದು'] ಅವಕಾಶ ದೊರೆತುದು ಅವರಿಗೆ ಈಗ ಅಪಾರ ಹರ್ಷವನ್ನುಂಟುಮಾಡಿತು. ಹಿಂದೆ ಮಿಲಿಟರಿಗೆ ಸರಬರಾಜು ಮಾಡಿ ಅವರು ಎಣಿಸ

ಲಾಗದಷ್ಟು ಹಣ ಗಳಿಸಿದ್ದರು. ಈ ಸಲ ಕಂಟ್ರಾಕ್ಟುದಾರನ ಮಟ್ಟಕ್ಕೆ ಸ್ವತಃ ಶ್ರೀಕಂಠಯ್ಯ ಇಳಿಯುವಂತಿರಲಿಲ್ಲ. ಬದಲು, ತಮ್ಮ ನೇತೃತ್ವದಲ್ಲಿ ಅನೇಕ ಕಂಟ್ರಾಕ್ಟುದಾರರ ಪಡೆಯೊಂದನ್ನು ರಚಿಸಲು ಅವರು ಉದ್ಯುಕ್ತರಾದರು. ಬಟ್ಟೆ, ಆಹಾರಧಾನ್ಯ, ಇತ್ಯಾದಿ ಆವಶ್ಯಕ ವಸ್ತುಗಳನ್ನು 'ಸುರಕ್ಷಿತವಾಗಿ' ಇಡಬಯಸಿದವರಿಗೆ ಶ್ರೀಕಂಠಯ್ಯ ಸಂತೋಷದಿಂದ ನೆರವಾದರು.

ಜನತೆಯ–ರಾಷ್ಟ್ರದ–ದೃಷ್ಟಿಯಿಂದ ಅವರು ಯೋಚಿಸಲಿಲ್ಲ, ಆ ಸಂಬಂಧವಾಗಿ ಏನನ್ನೂ ಮಾಡಲಿಲ್ಲ–ಎಂದೆ? ಅಂತಹ ಆರೋಪಕ್ಕೆ ಎಂದೂ ಆಸ್ಪದವಿತ್ತವರಲ್ಲ ಶ್ರೀಕಂಠಯ್ಯ. ಯುದ್ಧಕ್ಕೆ ನೆರವಾಗುವಂತೆ ಜನರನ್ನು ಹುರಿದುಂಬಿಸುವ ಉದ್ದೇಶದಿಂದ ಜರಗಿದ ಪ್ರತಿಯೊಂದು ಸಭೆಯಲ್ಲಿ ರಾಜ್ಯದ ರಾಷ್ಟ್ರವಾದಿ ಮುಖಂಡರ ಜತೆ ಶ್ರೀಕಂಠಯ್ಯನವರೂ ಭಾಗವಹಿಸಿದರು.

ಪ್ರಧಾನ ಮಂತ್ರಿ ಪ್ರಸಾರ ಭಾಷಣ ಮಾಡಿದ ಒಂದೆರಡು ದಿನಗಳ ಅನಂತರ ರಾಜ್ಯದ ಮುಖ್ಯ ಸಚಿವರು ಶ್ರೀಕಂಠಯ್ಯನವರೊಡನೆ ಮಾತನಾಡ ಬಯಸಿದರು, ಫೋನಿನ ಮೇಲೆ.

["ಶ್ರೀಕಂಠಯ್ಯ, ಈ ರಕ್ಷಣಾ ನಿಧೀದು ಏನಾದರೂ ಮಾಡಬೇಕಲ್ಲಪ್ಪ..."]

"ಹೇಳು, ಏನು ಮಾಡೋಣ?"

["ರಾಜ್ಯ ಮಟ್ಟದಲ್ಲಿ ಕಿಷ್ಕಿಂಧೆಗೋಸ್ಕರ ನನ್ನ ಅಧ್ಯಕ್ಷತೇಲಿ ಒಂದು ಸಮಿತಿ ರಚಿಸಿದೇನೆ. ನೀನು ಒಬ್ಬ ಸದಸ್ಯ."]

"ಆಗಲಿ."

["ಆದರೆ ರಾಜಧಾನಿಗೆ ಸಂಬಂಧಿಸಿ–ಭಾಗ್ಯನಗರಕ್ಕೋಸ್ಕರವೇ ಅಂತ–ಒಂದು ರಕ್ಷಣಾನಿಧಿ ಸಮಿತಿ ಬೇಕು. ಅದಕ್ಕೆ ನೀನು ಅಧ್ಯಕ್ಷ. ಸದಸ್ಯರು ಯಾರ‍್ಯಾರು ನಿನಗಿಷ್ಟವೋ ಒಂದು ಪಟ್ಟಿ ಮಾಡು."]

"ನನ್ನ ತಲೆಗ್ಯಾಕಪ್ಪ ಕಟ್ತೀಯಾ ಇದನ್ನ?"

["ನೋಡು, ನೋಡು. ಹಾಗಂದರೆ ಹ್ಯಾಗೊ? ನೀನಿಲ್ದೆ ನಿಧಿ ಕೂಡುತ್ತೇನೊ?"]

"ಸರಿ!"

["ನಿನ್ನ ಕಾಣಿಕೆ ಮೊದಲ್ನೇದು. ಎಷ್ಟು ಕೊಡ್ತೀಯಾ?"]

"ಬಡವ. ಏನು ಕಾಣ್ಕೆ ಕೊಟ್ಟೇನಪ್ಪ?"

["ಬಡವ ತಲೆಕಾಯಿ. ಒಂದು ಲಕ್ಷ ಕೊಟ್ಟಿಡು."]

"ಏನು ನನ್ನ ಮುಳುಗಿಸ್ಬೇಕೂಂತಿದೀಯೊ ಹ್ಯಾಗೆ?"

["ಫಿಗರ್ ಒಂದು ಲಕ್ಷ ಅಂತಿರ್ಲಿ. ಮೊದಲ್ನೆ ಕಂತು ಸ್ವಲ್ಪ ಕೊಡು. ಇಡೀ ರಾಜ್ಯದಲ್ಲಿ ಐದು ಕೋಟಿಯಾದರೂ ಕೂಡಿಸದಿದ್ರೆ ಕಿಷ್ಕಿಂಧೆಯ ಮಾನ ಉಳೀತದಾ? ಕೇಂದ್ರದವರು ನಮ್ಮ ಮುಖಕ್ಕೆ ಉಗೀತಾರೆ."]

"ಸರಿಯಪ್ಪ."

["ನೋಡು, ನೀನು ಡೈರೆಕ್ಟರಾಗಿರೋ ಮಿಲ್ಲು, ಬ್ಯಾಂಕು, ಇನ್ನೂ ಏನೇನೊ ಸಂಘ ಸಂಸ್ಥೆಗಳಿವೆಯಲ್ಲ—ಅವರಿಂದೆಲ್ಲಾ ಭಾರೀ ಮೊತ್ತಗಳನ್ನ ಕೊಡಿಸು."]

"ಅದಕ್ಕೇನಂತೆ ಕೊಡಿಸೋಣ."

["ಚೀಣಾದವನು ತೊಲಗೋ ವರೆಗೆ ನಿನ್ನ ವ್ಯವಹಾರವೆಲ್ಲ ಕಟ್ಟಿಡು. ಈ ನಿಧಿ ಸಂಗ್ರಹ ಫುಲ್ ಟೈಮ್ ಜಾಬ್."]

"ಅಪ್ಪಣೆ."

["ಬಂಗಾರ ಬೇಕೂಂತ ಕೇಳಿದಾರೆ."]

"ಕನಕ ದಾನವೊ?"

["ಹ್ಞ. ಹೆಂಗಸರೆಲ್ಲಾ ಒಡವೆಗಳನ್ನ ಕಾಣಿಕೆ ಕೊಡಬೇಕೂಂತ ಒಂದು ವಿನಂತಿ ಹೊರಡಿಸ್ತೀನಿ. ರಾಜಧಾನೀಲಿ ಅದರ ಸಂಗ್ರಹದ ಜವಾಬ್ದಾರೀನೂ ನಿನ್ನದೇ."]

"ಇದಕ್ಕೆಲ್ಲ ಒಂದು ಆಫೀಸು, ಸಿಬ್ಬಂದಿ, ಬೇಕಾಗುತ್ತಲ್ಲ."

["ಮಾಡ್ಕೊ. ನೇಮಿಸ್ಕೊ. ಖರ್ಚು ಮಾಡದೆ ಉತ್ಪನ್ನ ಬರುತ್ತೇನಪ್ಪ?"]

"ಸರಿ!"

["ಕಮಿಟೀನ ವಿಶಾಲ ತಳಹದಿ ಮೇಲೆ ರಚಿಸು. ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರು—ಹೀಗೆ ಎಲ್ಲರ ಪ್ರತಿನಿಧಿಗಳೂ ಇರಲಿ."]

"ಅದಕ್ಕೇನಂತೆ? ಇರಲಿ."

["ನಾಳೇನೇ ಮೀಟಿಂಗ್ ಕರೆದು ಪತ್ರಿಕೆಗಳಲ್ಲಿ ಪ್ರಕಟಿಸ್ಬೇಕು. ಆಗುತ್ತಾ?"]

"ಏನು ದೊಡ್ಡ ಕೆಲಸ? ಮಾಡೋಣ. ಸ್ವಲ್ಪ ಹೊತ್ತು ಬಿಟ್ಟು ನಾನೇ ಫೋನ್ ಮಾಡ್ತೀನಿ. ಅಥವಾ ಭೇಟಿಗೇ ಬರಲಾ?"

["ಪುರಸೊತ್ತು ಮಾಡ್ಕೊಂಡು ಒಂದು ಐದು ನಿಮಿಷದ ಮಟ್ಟಿಗೆ ಬಂದು ಹೋಗು."]

......ಸಾಹುಕಾರ್ ಶ್ರೀಕಂಠಯ್ಯನವರು ಮುಖ್ಯ ಸಚಿವರನ್ನು ಭೇಟಿಯಾಗಿ ಬಂದರು. ಇವರ ಕಮಿಟಿ ಮಾರನೆಯ ದಿನದಿಂದಲೆ ತನ್ನ ಕಾರ್ಯಕಲಾಪಗಳನ್ನು ಆರಂಭಿಸಿತು. ಭಾರತೀಯ ಪಡೆಗಳು ನಡೆಸುತ್ತಿದ್ದ ನಿಕರದ ಹೋರಾಟದ ವಿವರ, ಸೈನಿಕರ ಸಾಹಸದ ಕಥೆಗಳು, ಪಕ್ಷ ಪಂಗಡಗಳ ವೈಷಮ್ಯ ಮರೆತು ಜನತೆ ಒಂದಾದುದರ ಬಣ್ಣನೆ–ಇವುಗಳ ಜತೆಗೆ ಭಾಗ್ಯನಗರದ ಪತ್ರಿಕೆಗಳು ಶ್ರೀಕಂಠಯ್ಯನವರ ರಕ್ಷಣಾನಿಧಿ ಸಮಿತಿಯ ಚಟುವಟಿಕೆಗಳನ್ನೂ ವರದಿ ಮಾಡಿದುವು.

"ರಕ್ಷಣಾನಿಧಿಗೆ ಒಂದು ಲಕ್ಷ ರೂಪಾಯಿ ! ಸಾಹುಕಾರ ಶ್ರೀಕಂಠಯ್ಯನವರ ಮುಕ್ತ ಹಸ್ತದ ವಂತಿಗೆ."

–ಹೆಚ್ಚು ಕಡಮೆ ಈ ರೀತಿ ಪ್ರಕಟವಾದ ದಪ್ಪಕ್ಷರದ ಶೀರ್ಷಿಕೆಗಳನ್ನು ಶ್ರೀಕಂಠಯ್ಯ ಸಮಾಧಾನದಿಂದ ಓದಿದರು.

ತಮ್ಮ ವ್ಯವಹಾರದಲ್ಲಿ ಎಂತೋ ಅಂತೆಯೇ ಈ ಸಾರ್ವಜನಿಕ ಕಾರ್ಯದಲ್ಲೂ ಸಾಹುಕಾರರು ಅವಿಶ್ರಾಂತವಾಗಿ ದುಡಿದರು. ಅವರ ಮಾತಿಗೆ ಬೆಲೆ ಇತ್ತು. ಅವರಿದ್ದೆಡೆ ಕೆಲಸ ಬಿರುಸಾಗಿ ನಡೆಯುತ್ತಿತ್ತು.

ರಕ್ಷಣಾನಿಧಿ ಸಮಿತಿಯ ಕಚೇರಿಗಾಗಿ ತಮ್ಮ ಬಂಗಲೆಯಲ್ಲೇ ಒಂದು ಕೊಠಡಿಯನ್ನು ಶ್ರೀಕಂಠಯ್ಯ ತೆರವು ಮಾಡಿದರು.

ರಾಷ್ಟ್ರವಾದಿ ಮುಖಂಡರೊಬ್ಬರು ಸಮಿತಿಯ ಗೌರವ ಕಾರ್ಯದರ್ಶಿಯಾದರು. ಆದರೆ, ದೈನಂದಿನ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗಿ ಶ್ರೀಕಂಠಯ್ಯ ನಿಯೋಜಿಸಿಕೊಂಡ ವ್ಯಕ್ತಿ, ಯುವಕ ಸೋಮನಾಥ. ಶ್ರೀಕಂಠಯ್ಯನವರ ಆತ್ಮೀಯ ಸಚಿವರೊಬ್ಬರು ಕೊಟ್ಟ ಪರಿಚಯ ಪತ್ರದೊಡನೆ ಆತ ಬಂದಿದ್ದ ಆ ಪತ್ರದ ಒಕ್ಕಣೆ ಈ ತೆರನಾಗಿತ್ತು:

"ಪ್ರಿಯ ಶ್ರೀಕಂಠಯ್ಯ,

ಈ ಕಾಗದ ತರುತ್ತಿರುವ ಸೋಮನಾಥ, ದಿವಂಗತ ಹಿರಿಯಣ್ಣನವರ ಮಗ. ತಲೆಮಾರುಗಳಿಂದ ಬಂದ ಆಸ್ತಿ ಕರಗಿ ಸದ್ಯಃ ಇವನ ಕುಟುಂಬ ಸ್ವಲ್ಪ ಬಡತನದಲ್ಲಿದೆ. ಕಾಲೇಜಿನಲ್ಲಿ ರಾಜನೀತಿಯನ್ನು ಅಭ್ಯಾಸ ಮಾಡಿ ಪದವೀಧರ

ನಾಗಿದ್ದಾನೆ. ವಿದ್ಯಾರ್ಥಿನಾಯಕನಾಗಿ ಹೆಸರುವಾಸಿಯಾಗಿದ್ದಾನೆ. ಒಂದೆರಡು ಮುಷ್ಕರಗಳನ್ನೂ ನಡೆಸಿದ್ದಾನೆ. ಒಳ್ಳೇ ವಾಗ್ಮಿ. ನಿಮ್ಮ ಕೈಕೆಳಗೆ ಈತ ರಾಜಕೀಯದ ಪ್ರಾಯೋಗಿಕ ಪಾಠಗಳನ್ನು ಕಲಿತುಕೊಳ್ಳಬೇಕೆಂದು ನನ್ನ ಅಪೇಕ್ಷೆಯಾಗಿದೆ. ಹುರುಪಿನ ಈ ಹುಡುಗನನ್ನು ರಕ್ಷಣಾನಿಧಿ ಸಂಗ್ರಹ ಕಾರ್ಯದಲ್ಲಿ ನೀವು ಉಪಯೋಗಿಸಿಕೊಳ್ಳಬಹುದು.

ಇತಿ ವಂದನೆಗಳು,

............"

ಖಾದಿಧಾರಿಯಾಗಿದ್ದ, ಸಾಕಷ್ಟು ಸ್ಫುರದ್ರೂಪಿಯಾಗಿದ್ದ ಆ ಯುವಕನನ್ನು ಶ್ರೀಕಂಠಯ್ಯ ಆಪಾದಮಸ್ತಕ ದಿಟ್ಟಿಸಿ ನೋಡಿದರು. ರಾಜಕೀಯ ಕ್ಷೇತ್ರಕ್ಕೆ ಬರಲು, ರಾಜನೀತಿಯ ಅಭ್ಯಾಸ ಹಾಗೂ ಪದವಿ ನೆರವಾಗುತ್ತವೆಂಬುದು ಶ್ರೀಕಂಠಯ್ಯ ಒಪ್ಪದ ವಿಷಯ.

"ಯಾಕಪ್ಪ ಲಾ ಓದಲಿಲ್ಲ?"

–ಅವರು ಕೇಳಿದರು.

ನಿಂತೇ ಇದ್ದ ಸೋಮನಾಥನೆಂದ:

"ಮುಂದೆ ಓದಿಕೋಬೇಕೂಂತಿದೀನಿ. ರಾಷ್ಟ್ರಕ್ಕೆ ಗಂಡಾಂತರ ಒದಗಿರುವಾಗ ಆ ಯೋಚನೆ ಬೇಡ ಅಂತ......"

ಮೂಡಿಬಂದ ಕಿರುನಗೆಯನ್ನು ಹತ್ತಿಕ್ಕಿ ಶ್ರೀಕಂಠಯ್ಯ ಅಂದರು:

"ಅದ್ಸರಿ, ಅದ್ಸರಿ. ರಕ್ಷಣಾನಿಧಿ ಸಮಿತಿಯ ಆಫೀಸು ಕಾರ್ಯದರ್ಶಿ ಆಗ್ತೀಯೇನು?"

"ಆಗಲಿ, ಸಾರ್. ನಾನು ಸ್ವಯಂಸೇವಕ. ಯಾವ ಕೆಲಸ ನಿರ್ವಹಿಸಿದರೂ ಸಮರ್ಪಕವಾಗಿ ನೋಡ್ತೀನಿ."

"ನಿನ್ನ ಹತ್ತಿರ ಸೈಕಲಿದೆಯೆ?"

"ಇತ್ತು; ಮಾರಿಬಿಟ್ಟೆ. ಈಗ ಸ್ಕೂಟರಿದೆ."

ಶ್ರೀಕಂಠಯ್ಯ ಪಿಳಿಪಿಳಿ ಕಣ್ಣುಬಿಟ್ಟು ನೋಡಿದರು. ಐವತ್ತೋ ಎಪ್ಪತ್ತೈದೋ ವೇತನ ಕೊಡೋಣ ಎಂದಿದ್ದವರು, ಕ್ಷಿಪ್ರನಿರ್ಧಾರ ಕೈಗೊಂಡು,

"ತಿಂಗಳಿಗೆ ನೂರು ರೂಪಾಯಿ ಗೌರವ ವೇತನ ಕೊಡೋದು ಸಾಧ್ಯ, ಸಾಕೆ?"

—ಎಂದು ಕೇಳಿದರು.

"ವೇತನವಿಲ್ಲ ಅಂತ ನೀವು ಅಂದರೂ ದುಡಿಯೋದಕ್ಕೆ ಸಿದ್ಧ, ಸಾರ್."

ಇವನು ಮೂರ್ಖನೋ ಕಪಟಿಯೋ ಎಂದು ತೀರ್ಮಾನಿಸಲಾರದಾದರು, ಶ್ರೀಕಂಠಯ್ಯ. ಜಯರಾಮು ಆಡುವ ಮಾತುಗಳಂತಿದ್ದುವು, ಆ ಯುವಕನ ಉತ್ತರ. ಈಗಿನ ಕಾಲದ ಎಲ್ಲ ಯುವಕರಿಗೂ ಆದರ್ಶದ ಗೀಳು ಅಂಟಿರುತ್ತ ದೇನೋ—ಎಂದುಕೊಂಡು, ಶ್ರೀಕಂಠಯ್ಯ ಅಂದರು:

"ಸರಿಯಪ್ಪ. ತ್ಯಾಗಶೀಲನಾಗೋದು ಬಹಳ ಒಳ್ಳೇದು. ಆದರೆ ತ್ಯಾಗ ಮಾಡೋಕೆ ಸ್ವಲ್ಪ ಶಕ್ತಿ ಇರಬೇಕಲ್ಲ? ಅದಕ್ಕಾಗಿ ಈ ಅಲ್ಪ ವೇತನ."

"ಒಪ್ಪಿಗೆ, ಸಾರ್."

"ಆ ರೂಮಿಗೆ ಹೋಗು. ಒಬ್ಬ ಟೈಪಿಸ್ಟ್, ಒಬ್ಬ ಕ್ಲಾರ್ಕ್, ಒಬ್ಬ ಜವಾನ ಆಗಲೇ ಕೆಲಸ ಶುರುಮಾಡಿದಾರೆ. ನೀನು ಛಾರ್ಜ್ ತಕೋ."

"ಹೂಂ, ಸಾರ್."

"ನ್ಯಾಷನಲ್ ಬ್ಯಾಂಕಿನಲ್ಲಿ ರಕ್ಷಣಾನಿಧಿ ಸಮಿತಿಯ ಹೆಸರಲ್ಲಿ ಒಂದು ಅಕೌಂಟ್ ತೆರೆದಿದೇನೆ. ಬಂದ ಹಣವನ್ನೆಲ್ಲ ಅಲ್ಲಿಗೆ ಜಮೆ ಮಾಡ್ಬೇಕು."

"ಆಭರಣಗಳು ಸಾರ್?"

"ಒಳಗೊಂದು ಖಾಲಿ ತಿಜೋರಿಯಿದೆ. ಅದರಲ್ಲಿಟ್ಟು ವಾರಕ್ಕೊಮ್ಮೆ ರಿಸರ್ವ್ ಬ್ಯಾಂಕಿಗೆ ಕಳಿಸೋದು."

"ಸರಿ, ಸಾರ್."

"ನಿನ್ನ ಹೆಸರು ಏನು ಅಂದೆ?"

"ಸೋಮನಾಥ."

"ನಮ್ಮ ಜನವೊ?"

ಆಕರ್ಷಕ ದಂತಪಂಙ್ತಿಗಳನ್ನು ತೋರ್ಪಡಿಸಿ ಯುವಕನೆಂದ:

"ಹೌದು, ಸಾರ್."

"ಹುಂ. ಕಷ್ಟಪಟ್ಟು ಕೆಲಸ ಮಾಡು."

ಎಲ್ಲ ಜನರಿಗೂ ಸರ್ವಕಾಲಗಳಲ್ಲೂ ಶ್ರೀಕಂಠಯ್ಯ ನೀಡುವ ಸಂದೇಶ ವಾಗಿತ್ತು, ನಾಲ್ಕು ಪದಗಳ ಆ ಸೂತ್ರ:

'ಕಷ್ಟಪಟ್ಟು ಕೆಲಸ ಮಾಡು.'

"ತಮ್ಮ ಆಶೀರ್ವಾದ, ಸಾರ್,"

—ಎಂದ ಸೋಮನಾಥ.

......ಸ್ವಂತದ ವ್ಯವಹಾರವನ್ನೂ ಸಾರ್ವಜನಿಕ ಕಾರ್ಯವನ್ನೂ ಪ್ರತ್ಯ ಪ್ರತ್ಯೇಕವಾಗಿ—ಅಗತ್ಯಬಿದ್ದಾಗ ಒಂದಕ್ಕೊಂದು ಹಾಸುಹೊಕ್ಕಾಗಿ—ಮಾಡುವ ಕೌಶಲ ಶ್ರೀಕಂಠಯ್ಯನವರದು. ತಮ್ಮ ಭವಿಷ್ಯತ್ತಿನಲ್ಲಿ ಅವರಿಗೆ ದೃಢ ವಿಶ್ವಾಸ ವಿದ್ದುದರಿಂದ ರಾಷ್ಟ್ರದ ಭವಿತವ್ಯದ ಬಗೆಗೂ ಅಂತಹದೇ ನಂಬುಗೆ ಅವರಿಗಿತ್ತು.

ಅವರೆನ್ನುತಿದ್ದರು:

"ದಿನಕ್ಕೆ ಇಪ್ಪತ್ತನಾಲ್ಕು ಘಂಟೆ ಸಾಲದಪ್ಪ ಸಾಲದು !"

ಅವರೊಂದು ಪಾದಯಾತ್ರೆಯನ್ನೇರ್ಪಡಿಸಿದರು. ಭಾಗ್ಯನಗರದ ಮುಖ್ಯ ಬೀದಿಗಳಲ್ಲಿ. ನಗರದ ಪ್ರಥಮ ಪ್ರಜೆ, ಇಬ್ಬರು ಸಚಿವರು ಹಾಗೂ ಶ್ರೀಕಂಠಯ್ಯ ಅವರ ಮಗ್ಗುಲಲ್ಲಿ ಜಯಶ್ರೀ. ದಾರಿಯುದ್ದಕ್ಕೂ ಹಿಂದುಮುಂದು ನೋಡದೆ ಜನ ತಮ್ಮಲ್ಲಿದ್ದುದನ್ನು—ಹಣ, ಉಂಗುರ, ಗಡಿಯಾರ, ಸರ, ಟ್ರಾನ್ಸಿಸ್ಟರ್ ರೇಡಿಯೋ—ಸಂಗ್ರಹಿಸುತ್ತಿದ್ದವರ ಕೈಗಿತ್ತರು. ಕೇಂದ್ರದ ವಾರ್ತಾಶಾಖೆಯ ಚಲನಚಿತ್ರ ಮಂಡಲದವರು ಆ ಕಾರ್ಯಕ್ರಮದಿಂದ ಐದು ನಿಮಿಷಗಳ ನ್ಯೂಸ್ ರೀಲ್ ಸಿದ್ಧಗೊಳಿಸಿದರು. ಅದು ರಾಜ್ಯದಾದ್ಯಂತ, ರಾಷ್ಟ್ರದಾದ್ಯಂತ, ಪ್ರದರ್ಶಿ ಸಲ್ಪಟ್ಟಿತು.

ಈ ಎಲ್ಲ ಚಟುವಟಿಕೆಗಳಿಂದ ತುಸು ಬೇಸರವೆನಿಸಿದುದು ತ್ಯಾಗರಾಜನ್‌ಗೆ. ರೀಲ್ ಸಿದ್ಧಗೊಳಿಸುವ ಕೆಲಸವಾದ ಮೇಲೆ ಶ್ರೀಕಂಠಯ್ಯನವರೊಡನೆ ದೀರ್ಘ ಮಾತುಕತೆಗೆ, ಜಯಶ್ರೀಯ ಭೇಟಿಗೆ, ಅವನಿಗೆ ಅವಕಾಶ ಸಿಕ್ಕಿರಲಿಲ್ಲ. ಫೋನ್ ಯಾವಾಗಲೂ 'ಎಂಗೇಜ್ಡ್' ಆಗಿರುತ್ತಿತ್ತು. ಬಂಗಲೆಗೆ ಬಂದರೆ ಬರುವ ಹೋಗುವ ಜನರ ನಿತ್ಯ ಜಾತ್ರೆ.

ಒಂದು ಸಂಜೆ ಕತ್ತಲಾದ ಮೇಲೆ ತ್ಯಾಗರಾಜನ್ ಶ್ರೀಸದನಕ್ಕೆ ಬಂದ. ಆಗ ತಾನೇ 'ಔಷಧಿ' ಸೇವಿಸಿದ್ದ ಶ್ರೀಕಂಠಯ್ಯ ಸಿಗರೇಟು ಸೇದುತ್ತ ಆರಾಮ ಕುರ್ಚಿ ಯಲ್ಲಿ ಆಸೀನರಾಗಿದ್ದರು.

"ಬರೋಣವಾಗಲಿ, ಬ್ಯಾರಿಸ್ಟರ್ ಸಾಹೇಬರು."

ಶ್ರೀಕಂಠಯ್ಯನವರ ಪರಿಹಾಸ್ಯದ ಸ್ವಾಗತಕ್ಕೆ ಉತ್ತರವೀಯುತ್ತ ತ್ಯಾಗ ರಾಜನ್ ಅಂದ:

"ಈ ರೀತಿ ನಿಮ್ಮನ್ನ ನೋಡೋದು ಒಂದು ಸೌಭಾಗ್ಯ, ಸರ್. ಖುಷಿಲಿದೀರಿ."

"ಕೂತ್ಕೊಳ್ಳಿ."

ತಮ್ಮ ಸಮೀಪದಲ್ಲಿದ್ದ ಕುರ್ಚಿಯ ಮೇಲೆ ತ್ಯಾಗರಾಜನ್ ಕುಳಿತಾಗ ಶ್ರೀಕಂಠಯ್ಯ ಕೇಳಿದರು:

"ನ್ಯೂಸ್ ರೀಲ್ ನೋಡಿದಿರಾ?"

"ಹ್ಞಾ. ತುಂಬಾ ಚೆನ್ನಾಗಿದೆ. ಫಿಲ್ಮ್‌ಸ್ಟಾರ್‌ಗಳು ನಾಚ್ಕೋಬೇಕು."

"ಅವರ ಮುಂಡಮೋಚ್ತು."

"ಹಪ್ಪ. ಆದರೆ ಒಂದು ಚಿಕ್ಕ ದೋಷ. ವಿವರಣೆ ಕೊಡ್ತಿದ್ದ ಮನುಷ್ಯ, ಪಾದಯಾತ್ರೆಯ ನಾಯಕತ್ವ ವಹಿಸಿದ್ದವರ ಹೆಸರು ಹೇಳಬೇಕಾಗಿತ್ತು."

ಶ್ರೀಕಂಠಯ್ಯನವರ ಮನಸ್ಸಿನಲ್ಲಿದ್ದುದನ್ನು ತ್ಯಾಗರಾಜನ್ ನುಡಿದಿದ್ದ. ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸದೆ ಸಿಗರೇಟು ಸೇದುವುದರಲ್ಲೆ ಶ್ರೀಕಂಠಯ್ಯ ಮಗ್ನರಾದರು.

ಸಾಹುಕಾರರ ಯೋಚನೆಗೆ ಭಂಗ ಬರದಂತೆ ತ್ಯಾಗರಾಜನ್ ಮೌನವಾಗಿ ಕುಳಿತ.

ಒಮ್ಮೆ ಉಸಿರೆಳೆದು ಎದೆ ಹಿಗ್ಗಿಸಿ ಶ್ರೀಕಂಠಯ್ಯ ಅಂದರು:

"ಇವತ್ತು ಒಬ್ಬ ಮೇಸ್ಟ್ರು, ಮಗಳ ಮದುವೆಗೇಂತ ಕೂಡಿಸಿಟ್ಟಿದ್ದ ಸಾವಿರ ದ್ವೈನೂರು ರೂಪಾಯಿಗಳನ್ನ ರಕ್ಷಣಾನಿಧಿಗೆ ತಂದ್ಕೊಟ್ಟ. ಒಬ್ಬಳು ಹೆಂಗಸು, ಕರಿಮಣಿಸರ ಒಂದು ಬಿಟ್ಟು ಉಳಿದ ಎಲ್ಲಾ ಆಭರಣ ತೆಗೆದು ಕೊಟ್ಲು. ಇವತ್ತು ಒಬ್ಬ ಭಿಕ್ಷುಕ ಗೇಟ್ಹತ್ರ ಬಂದಾಗ, ಹೋಗಾಚೆ ಅಂತ ಜಗ್ಗ ಓಡಿಸ್ದ. ಬೇಡುವವನು ಏನಂದ ಗೊತ್ತೆ? ರಕ್ಷಣಾನಿಧಿಗೆ ಕಾಣಿಕೆ ಕೊಡೋಕೆ ಬಂದಿದೇನೆ, ನೂರ ಒಂದು ರೂಪಾಯಿ ಐತೆ–ಅಂತ. ಇದಕ್ಕೆ ನೀವು ಏನು ಹೇಳ್ತೀರಾ ತ್ಯಾಗರಾಜನ್?"

"ಇದು ಪವಾಡ, ಸರ್. ಒಂದು ರೀತಿಯ ಯಕ್ಷಿಣಿ. ಹದಿನ್ಯೆದು ವರ್ಷಗಳಿಂದ ಸಾಧ್ಯವಾಗದೇ ಇದ್ದ ಐಕ್ಯ ಕೆಲವೇ ದಿನಗಳಲ್ಲಿ ಸಾಧಿಸಿಬಿಟ್ಟಿದೆ. ನನಗೆ ಯುದ್ಧಕಾಲದ ಇಂಗ್ಲೆಂಡಿನ ನೆನಪಾಗ್ತಿದೆ, ಸರ್. ಚರ್ಚಿಲ್ ಎರಡು ಬೆರಳು ತೋರಿಸಿ V ಫರ್ Victory ಅಂದ. ಇಂಗ್ಲಿಷ್ ಜನತೆ ಹುರ್ರಾ ಅಂತು."

ಶ್ರೀಕಂಠಯ್ಯ ಸಿಗರೇಟು ಆರಿಸಿ ಸಣ್ಣನೆ ನಕ್ಕರು, ತಾವು ಹೇಳಬಯಸಿದುದನ್ನು ಮನಸ್ಸಿನಲ್ಲೇ ರೂಪಿಸಿ.

"ನಿಜ, ಬ್ಯಾರಿಸ್ಟರ್ ಸಾಹೇಬರೇ. ಆದರೆ ಯುದ್ಧ ಮುಗಿದ ತಕ್ಷಣ ನಿಮ್ಮ ಇಂಗ್ಲಿಷ್ ಜನ ಚರ್ಚಿಲ್ನನ್ನು ಮನೆಗೆ ಕಳಿಸಿದ್ರು."

"ಹೆಹ್ಹೆ. ಅದು ನಿಜ, ಸರ್."

"ನಮ್ಮ ಜನರ ವಿಚಾರ ನನಗೆ ಗೊತ್ತಿಲ್ವೆ? ಜನ ಮರುಳೋ, ಜಾತ್ರೆ ಮರುಳೋ?–ಅಂತ. ಇವತ್ತು ಎಂಥ ತ್ಯಾಗ ಬೇಕಾದರೂ ಮಾಡ್ತೀವಿ ಅನ್ನೋ ಮಂದಿ, ನಾಳೆ ಸಾಮಾನುಗಳ ಬೆಲೆ ಕೊಂಚ ಏರಿದಾಗ ತಲೆಕೆಟ್ಟು ಕೂಗಾಡದೇ ಇದ್ದರೆ ಆಮೇಲೆ ಹೇಳಿ. ಇವತ್ತು ಇದ್ದದ್ದನ್ನೆಲ್ಲಾ ತ್ಯಾಗಮಾಡೋ ದಾನಶೀಲರು ನಾಳೆ ಭಿಕ್ಷಾಪಾತ್ರೆಯೇ ಗತಿಯಾದಾಗ, ಅವತ್ತು ಯಾಕಪ್ಪ ಕೊಟ್ಟೆ ಅಂತ ಕೈ ಕೈ ಹಿಸಕೋತಾರೆ. ಹೌದೆ?"

"ಹೀಗಾಗಬಾರದು, ಸರ್."

"ಆಗುತ್ತೆ. ಬುರುಗಿಗೆ ಅಷ್ಟೇ ಬೆಲೆ. ಶೀಷೆಯಿಂದ ಸ್ವಲ್ಪ ಸ್ವಲ್ಪ ಸುರಿತಾ ಇದ್ದರೂ ಗಾಜಿನ ಲೋಟದಲ್ಲಿ ಸುಂಯ್ ಅಂತ ನೊರೆ ಮೇಲಕ್ಬಂದು ಉಕ್ಕುತ್ತೆ. ಸ್ವಲ್ಪ ಹೊತ್ತು ಹಾಗೇ ಬಿಡಿ. ಅದು ನಾಪತ್ತೆ."

"ಸೊಗಸಾಗಿ ಹೇಳಿದಿರಿ."

"ನಾಳೆ ಹೀಗೇ ಆಗುತ್ತೆ. ಈಗಿನ ಐಕ್ಯವೆಲ್ಲ ಮಂಗಮಾಯ. ತೆರಿಗೆ ಹಾಕದೆ ದುಡ್ಡು ಬರೋದಿಲ್ಲ. ಭಾರೀ ಹೊಡೆತ ಬೀಳೋದು ನಮ್ಮಂಥವರಿಗೆ."

"ಏನೇ ಅನ್ನಿ, ಸರ್. ವಾತಾವರಣದಲ್ಲಿ ಈಗ ಜೀವವಿದೆ."

ತ್ಯಾಗರಾಜನ್ ಅಂದುದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಶ್ರೀಕಂಠಯ್ಯ ತಮ್ಮದೇ ಯೋಚನೆಯ ಬಾಲ ಹಿಡಿದು ನಕ್ಕರು. ಅವರಾಗಿ ಹೇಳುವರೆಂದು ತ್ಯಾಗರಾಜನ್ ಕಾದ. ಮಾತನಾಡುವ ಲಕ್ಷಣ ಕಾಣಿಸದಿದ್ದಾಗ ತಾನೇ ಅಂದ:

"ಏನೋ ಹೇಳಲು ಹೊರಟಿದ್ದಿರಿ......"

"ಹೌದೆ? ಹುಂ. ಅಲ್ಲಾ, ಕಳೆದ ಮಹಾ ಯುದ್ಧದ ಕಾಲದಲ್ಲಿ ಯುದ್ಧ ಪ್ರಚಾರ ಸಮಿತಿಗೋ ಯಾವುದಕ್ಕೋ ಅಧ್ಯಕ್ಷನಾಗಿದ್ದೆ. ಈ ಸಲ ಯುದ್ಧ ರಕ್ಷಣಾನಿಧಿಗೇ ನಾನು ಅಧ್ಯಕ್ಷ. ಏನಂತೀರಿ ಅಧಕ್ಕೆ?"

"ಸರಕಾರಗಳು ಬದಲಾದರೂ ನೀವು ಬದಲಾಗಿಲ್ಲ ಅಂತ!"

"ಪರವಾಗಿಲ್ಲ!"

"ಇಂಗ್ಲಿಷರು ನಿಮ್ಮನ್ನ ರಾವ್ ಸಾಹೇಬ್ ಬಿರುದು ಕೊಟ್ಟು, ಗೌರವಿ

ಪಿದ್ರು. ಈ ಸಲ ನಮ್ಮವರೇ ಭಾರತರತ್ನ ಪದವಿ ಇತ್ತು ನಿಮ್ಮನ್ನು ಸತ್ಕರಿಸ ಬಹುದು."

"ಇದೆಲ್ಲ ರಾಜಕೀಯ ತ್ಯಾಗರಾಜನ್. ಇಲ್ಲಿಂದ ಹೆಸರು ಕಳಿಸೋದು ದೊಡ್ಡ ಕೆಲಸವಲ್ಲ. ಆದರೆ ಕೇಂದ್ರದಲ್ಲಿರ್ರಾರಲ್ಲ ಕೆಲವರು–ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಅಂತ...ನಾನು ಹೇಳ್ತೀನಿ ಕೇಳಿ. ನಮ್ಮಲ್ಲಿ ದ್ವೇಷ ಅಸೂಯೆ ಇರದೇ ಇದ್ದಿದ್ರೆ ಈ ದೇಶದ ಕಥೆಯೇ ಬೇರೆಯಾಗ್ತಿತ್ತು. ನಮ್ಮ ಪೂರ್ವಜರ ಪುಣ್ಯ ವಿಶೇಷದಿಂದ ನಾವು ಇಷ್ಟರಮಟ್ಟಿಗಾದರೂ ಇದೇವೆ."

"ದೊಡ್ಡ ದೇಶ. ಸಮಸ್ಯೆಗಳು ಬಹಳ."

"ನೆಹರೂ ತನ್ನ ಧೋರಣೆ ಬದಲಾಯಿಸ್ಬೇಕು. ಸಮಾಜವಾದ, ಸಮಾಜ ವಾದ ಅಂತ ಜನಸಾಮಾನ್ಯರನ್ನ ಎತ್ತಿಕಟ್ಟೋದು ಅಪಾಯಕರ. ಎಲ್ಲ ಜನರೂ ಸುಖಿಗಳಾಗಲಿ–ಅನ್ನೋ ಸದಾಶಯ ಅನಾದಿ ಕಾಲದಿಂದ ಇಲ್ವೆ ನಮ್ಮಲ್ಲಿ? ಸೋಷಲಿಸಂ ಅಂತ ಅದಕ್ಕೊಂದು ಪಾಶ್ಚಾತ್ಯ ಹೆಸರಿಟ್ಟು ಜನರ ತಲೆ ಕೆಡಿಸ್ಬೇಕೆ?"

"ಇದಕ್ಕೆಲ್ಲ ಕೃಷ್ಣ ಮೆನನ್ ಕಾರಣ, ಸರ್."

"ಲಂಡನ್ ಬ್ಯಾರಿಸ್ಟರು!"

–ಎಂದರು ಶ್ರೀಕಂಠಯ್ಯ, ಕಣ್ಣು ಮಿಟಿಕಿಸಿ ನಕ್ಕು.

"ಹೆಹ್ಹೆ,"

–ಎಂದ ತ್ಯಾಗರಾಜನ್.

"ಖಾದಿ ತೊಟ್ಕೊಂಡು ನೀವೂ ರಾಜಕೀಯಕ್ಕೆ ಯಾಕಿಳೀಬಾರದು ಅಂತೀನಿ."

"ಬೇಡಿ, ಸರ್. ಹೊರಗಿದ್ದು ನೋಡೋದೆ ಚಂದ."

"ಜುಡೀಷಿಯರಿ ಇಷ್ಟವೊ?"

"ಹೆಹ್ಹೆ......"

"ಆಗಲಿ, ಸಂದರ್ಭ ನೋಡಿ ಪ್ರಸ್ತಾಪ ಮಾಡ್ತೀನಿ."

"ಥ್ಯಾಂಕ್ ಯು. ಇನ್ನೂ ಒಂದೆರಡು ವರ್ಷದ ಮಟ್ಟಿಗೆ ಹೀಗೇ ಇರ್ತೀನಿ."

"ಹ್ಲ. ಚೆನ್ನಾಗಿ ಒಂದಿಷ್ಟು ದುಡ್ಡು ಮಾಡ್ಕೊಳ್ಳಿ. ಒಂದು ಮದುವೆ ಯಾಗಿ ಗೃಹಸ್ಥ–ಸಂಭಾವಿತ–ಅನ್ನಿಸ್ಕೊಳ್ಳಿ."

"ಹೆಹ್ಹೆ......"

ಬಾಗಿಲಲ್ಲಿ ಸೋಮನಾಥ ಕಾಣಿಸಿಕೊಂಡ.

"ಏನಪ್ಪ?"

–ಎಂದು ಕೇಳಿದರು ಶ್ರೀಕಂಠಯ್ಯ.

"ಪ್ರೆಸ್‌ನೋಟ್ ಕಳಿಸಿಯಾಯ್ತು, ಸಾರ್."

"ಮಿಲ್ ಅಸೋಸಿಯೇಷನ್‌ನವರಿಗೆ ಬರೆದ ಕಾಗದಕ್ಕೆ ಸಹಿ ಹಾಕಿದೆನಲ್ಲ–ಅದನ್ನು ಕಳಿಸಿದಿಯೊ?"

"ಆಗಲೇ ಹೋಯ್ತು, ಸಾರ್,"

"ಪೆಂಡಿಂಗ್ ಏನೂ ಇಲ್ಲ?"

"ಇಲ್ಲ."

"ಸಿಬ್ಬಂದಿ ಹೋದರೊ?"

"ಆಗಲೇ ಹೋದರು ಸಾರ್."

"ಹಾಗಾದರೆ ನೀನೂ ಹೊರಡು."

"ನಮಸ್ಕಾರ, ಸಾರ್."

ಸೋಮನಾಥ ವಂದಿಸಿ ಹೊರಟೊಡನೆ ಶ್ರೀಕಂಠಯ್ಯ ತ್ಯಾಗರಾಜನನ್ನು ಕೇಳಿದರು:

"ನಮ್ಮ ಕಾರ್ಯದರ್ಶೀನ ನೋಡಿದಿರೊ? ಪಾಲಿಟಿಕ್ಸ್ ಪದವೀಧರ."

"ಹಾಗೇನು?"

"ಚೂಟಿಯಾಗಿಲ್ವೆ ಹುಡುಗ?"

"ಇದಾನೆ, ಇದಾನೆ,"

–ಎಂದ ತ್ಯಾಗರಾಜನ್, ಸ್ವಲ್ಪ ಯೋಚನೆಗೀಡಾಗಿ.

ಶ್ರೀಕಂಠಯ್ಯ ಎದ್ದು, ಕಿಟಿಕಿಯ ಬಳಿ ನಿಂತು ಆಕಳಿಸಿದರು.

ಹೊರಗೆ ಸ್ಕೂಟರ್ ಚಲಿಸತೊಡಗಿ ರಸ್ತೆಯ ಕಡೆಕೆ ಸಾಗಿದ ಸದ್ದಿಗೆ ತ್ಯಾಗರಾಜನ್ ಕಿವಿಗೊಟ್ಟ.

ತಾನಿನ್ನು ಏಳುವುದು ಮೇಲೆಂದು ಆತ ಎದ್ದು ನಿಂತ.

ಔಪಚಾರಿಕವಾಗಿ ಶ್ರೀಕಂಠಯ್ಯ ಕೇಳಿದರು:

"ಇಲ್ಲೇ ಊಟಮಾಡ್ತೀರೇನು?"

ಜಯಶ್ರೀ ಕಣ್ಣಿಗೆ ಬಿದ್ದಿರಲಿಲ್ಲ. ಊಟಕ್ಕೆ ನಿಂತರೆ ಅವಳನ್ನು ಕಾಣುವುದು ಸಾಧ್ಯವಿತ್ತು. ಆದರೆ ತನ್ನ ಮನೆಗೆ ಒಂದು ವ್ಯಕ್ತಿಯನ್ನು ಬರಹೇಳಿದ್ದ–ಎಂಟು ಘಂಟೆಗೆ. ಆ ವ್ಯಕ್ತಿಯ ಭೇಟಿಗಾಗಿ ತ್ಯಾಗರಾಜನ್ ಆತುರಗೊಂಡಿದ್ದ.

"ಕ್ಷಮಿಸಿ, ಸರ್. ಕಕ್ಷಿದಾರರು ಮನೇಲಿ ಕಾದಿರ್ತಾರೆ."

"ಹಾಗಾದರೆ ನಿಮ್ಮನ್ನ ತಡೆಯೋದಿಲ್ಲ. ಬಿಡುವು ಮಾಡ್ಕೊಂಡು ಇನ್ನೊಮ್ಮೆ ಬನ್ನಿ."

"ಹಾಗೆ ಹೇಳೋದು ನಿಮ್ಮ ಸೌಜನ್ಯ; ಬಿಡುವಿರಬೇಕಾದ್ದು ನಿಮಗೆ."

ಶ್ರೀಕಂಠಯ್ಯನವರ ತುಟಿಗಳು ಕಿರುನಗೆ ಬೀರಿದುವು.

"ಗುಡ್ ನೈಟ್,"

—ಎಂದು ವಂದಿಸಿ ತ್ಯಾಗರಾಜನ್ ಹೊರಟುಹೋದ.

......ಶ್ರೀಕಂಠಯ್ಯ ಭೋಜನದ ಕೊಠಡಿಗೆ ತೆರಳಿದರು. ಅವರ ಪಾದಗಳ ಸಪ್ಪಳ ಕೇಳಿ ಭಟ್ಟ ಅವಸರ ಅವಸರವಾಗಿ ಮೇಜನ್ನು ಅಣಿಗೊಳಿಸಿದ.

ಊಟಕ್ಕೆ ಕುಳಿತವರು ಶ್ರೀಕಂಠಯ್ಯ ಒಬ್ಬರೇ. ಜಯಶ್ರೀ ಬರಲಿಲ್ಲ.

ತುಸು ದೂರದಲ್ಲಿ ನಿಂತಿದ್ದ ಪತ್ನಿಯನ್ನುದ್ದೇಶಿಸಿ ಶ್ರೀಕಂಠಯ್ಯ ಕೇಳಿದರು:

"ಎಲ್ಲಿ ಜಯ?"

"ಸಾಯಂಕಾಲದಿಂದ ತಲೆನೋವು ತಲೆನೋವು ಅಂತಿದ್ಲು. ಒಂದು ತುತ್ತು ಊಟ ಮಾಡಿಸ್ದೆ. ಮಲಕೊಂಡ್ಬಿಟ್ಟಿದಾಳೆ."

ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸದೆ ಶ್ರೀಕಂಠಯ್ಯ ಉಣತೊಡಗಿದರು. ಅವರಿಗೆ ಹಸಿವಾಗಿತ್ತು. ಉಣ್ಣುತ್ತ ಅವರು ಯೋಚಿಸಿದರು:

ಸಾವಿರ ಕೆಲಸ. ಹಲವು ಸಾವಿರ ಜನಕ್ಕೆ ಸಂಬಂಧಿಸಿದ್ದು. ಅಷ್ಟಿದ್ದರೂ ತಾನು ದುಃಖಿ. ಸಂಸಾರವಿದ್ದೂ ಒಂಟಿ. ಬರಿದಾದ ಕುರ್ಚಿಗಳನ್ನು ನೋಡುತ್ತ ತಾನು ಉಣ್ಣಬೇಕು. ಉಣ್ಣುವುದಾದರೂ ಯಾಕೆ? ನಾಳೆ ಏಳಬೇಕಲ್ಲ—ಅದಕ್ಕೋಸ್ಕರ. ಎದ್ದು ಮಾಡುವುದೇನು? ಇವತ್ತು ಮಾಡಿದ ಕೆಲಸವನ್ನೇ. ಇದು ಯಾಂತ್ರಿಕ ಜೀವನ. ಜವಾಬ್ದಾರಿಯನ್ನು ಹೊರುವವರಿದ್ದರೆ ತಾವು ವಿದೇಶ ಪ್ರವಾಸವನ್ನಾದರೂ ಕೈಗೊಂಡು ಉಲ್ಲಸಿತರಾಗಿ ಮರಳಬಹುದಿತ್ತು. ಈ ಚೀಣೀ ಗಲಾಟೆ ಮುಗಿಯುವ ವರೆಗಂತೂ ಭಾಗ್ಯನಗರ ಬಿಡುವ ಹಾಗಿಲ್ಲ. ಅವರ ಪಡೆಗಳು ಬಯಲಿಗೆ ಇಳಿಯುವ ವರೆಗೂ ಸರಿಯಾದ ಪ್ರತಿಭಟನೆ ಸಾಧ್ಯವಾಗದೇನೊ? ಆಗಲೂ ನಮ್ಮವರು ಜಯಶಾಲಿಗಳಾಗದಿದ್ದರೆ? ಸರಕಾರ ದಿಲ್ಲಿಯನ್ನೂ ತ್ಯಜಿಸಬೇಕಾಗಿ ಬಂದರೆ? ಅಂಥ ದುಸ್ಥಿತಿ ಒದಗಲಾರದು. ಏನಿದ್ದರೂ ವಿಂಧ್ಯಾಚಲವನ್ನು ದಾಟಿ ವೈರಿಸೇನೆ ಕೆಳಗೆ ಬಂದೀತೆನ್ನುವುದು ಸುಳ್ಳು. ಗಂಡಾಂತರ

ವೇನಾದರೂ ಇದ್ದರೆ ಆಕಾಶದಿಂದ. ಆ ಬಗ್ಗೆ ಹುಷಾರಿಯಲ್ಲಿರಬೇಕು. ಬಾಂಬು, ಕಾರ್ಖಾನೆಗಳ ಮೇಲೆ ಬೀಳಬಹುದೇ ಹೊರತು, ಇಂಥ ವಿಸ್ತರಣಗಳಿಗೆ ತಟ್ಟದು. ಬರಿ ಮನೆಗಳ ಮೇಲೆ ಬಾಂಬೆಸೆಯಲು ಅವರೇನು ಮೂರ್ಖರೆ?......ನ್ಯೂಸ್ ರೀಲೊಂದು ಚೆನ್ನಾಗಿ ಬಂತು. ಸಾಧ್ಯವಾದರೆ ಅದರ ಒಂದು ಪ್ರತಿ ದೊರಕಿಸಿ ಕೊಳ್ಳಬೇಕು. ಜಯಶ್ರೀ ಅದನ್ನು ನೋಡಲು ತನ್ನ ತಾಯಿಯನ್ನೂ ಕರೆದು ಕೊಂಡು ಹೋದಳಂತಲ್ಲ? ಇನ್ನು ಆ ಮುತ್ಯಾಳ–ಆತನೂ ನೋಡಿರಬಹುದು. ನೋಡಲಿ. ತನಗೆ ಜನ್ಮ ಕೊಟ್ಟವನು ಎಷ್ಟು ದೊಡ್ಡ ಮನುಷ್ಯ ಎಂಬುದನ್ನು ತಿಳಿದುಕೊಳ್ಳಲಿ. ಊಟದ ವೇಳೆಯಲ್ಲಿ ಯಾಕೆ ಆ ಅಯೋಗ್ಯನ ಸ್ಮರಣೆ?

"ಅನ್ನ."

"ತಾ."

ತಮ್ಮ ರುಚಿ ತಿಳಿದುಕೊಂಡು ಅಡುಗೆ ಮಾಡಬಲ್ಲ ಈ ನಳನಿಲ್ಲದೇ ಹೋಗಿದ್ದರೆ ಈ ಮನೆಯ ಗತಿ ಏನಾಗುತಿತ್ತೊ?......

......ಊಟ ಮುಗಿಸಿದ ಶ್ರೀಕಂಠಯ್ಯ ಎರಡು ಸಲ ತೇಗಿದರು.....ಹಜಾರಕ್ಕೆ ಬಂದರು. ಮತ್ತೊಮ್ಮೆ ತೇಗಿ, ರೇಡಿಯೋ ಹಾಕಿದರು. ಪ್ರಸಾರವಾಗುತ್ತಲಿದ್ದ ದೇಶಪ್ರೇಮ ಗೀತದ ಕೊನೆಯ ಚರಣ ಮುಗಿಯಿತು. ಮುಂದಿನ ಕಾರ್ಯಕ್ರಮ: A Nation Prepares!

ಅದನ್ನು ಆಲಿಸಿದರು ಶ್ರೀಕಂಠಯ್ಯ. ಬಳಿಕ ವಾರ್ತೆ. ನಿರುತ್ಸಾಹದಾಯಕ ಶೀರ್ಷಿಕೆಗಳನ್ನು ಕೇಳಿದರು. ಮತ್ತೂ ಒಂದು ನಿಮಿಷ ಕಿವಿಗೊಟ್ಟು, ರೇಡಿಯೋ ನಿಲ್ಲಿಸಿ, ತಮ್ಮ ಕೋಣೆಗೆ ನಡೆದರು.

ಆಗಲೇ ಊಟ ಮುಗಿಸಿ ತಮ್ಮ ಪತಿ ಏಳುವುದಕ್ಕೇ ಕಾದಿದ್ದ ಕಮಲಮ್ಮ, ಅವರನ್ನು ಹಿಂಬಾಲಿಸಿ ಬಂದರು.

"ಏನು?"

–ಎಂದು ಪ್ರಶ್ನಿಸಿದರು ಶ್ರೀಕಂಠಯ್ಯ.

"ನಿಮಗೆ ಪುರಸೊತ್ತಿದ್ದರೆ......"

"ಏನಿದೆಯೋ ಹೇಳಿ ಹೋಗು."

೧೪

ವಿದ್ಯಾರ್ಥಿನಿಲಯದಿಂದ ಕಾಲೇಜಿನ ಆಸ್ಪತ್ರೆಗೆ ಐದು ನಿಮಿಷಗಳ ನಡಿಗೆ. ಬೆಳಗ್ಗೆ ೭-೫೫ಕ್ಕೆ ಸರಿಯಾಗಿ ಡಾಕ್ಟರ್ ಜಯರಾಮು ವಿಶಾಲವಾದ ರಾಜಬೀದಿಯನ್ನು ದಾಟಿ ಆಸ್ಪತ್ರೆಯ ಪ್ರಾಂಗಣವನ್ನು ಪ್ರವೇಶಿಸುತ್ತಿದ್ದ. ಆತ ಆ ರಸ್ತೆ ದಾಟುವುದನ್ನು ಕಂಡೊಡನೆ 'ಈಗ ೭-೫೫' ಎಂದು ಗಡಿಯಾರ ನೋಡದೆಯೇ ಯಾರು ಬೇಕಾದರೂ ಹೇಳುವುದು ಸಾಧ್ಯವಿತ್ತು.

ಆತನಂತೆಯೇ ಕಾಲೇಜಿನ ಡೀನ್. ಆಸ್ಪತ್ರೆಯ ದೊಡ್ಡ ಗಡಿಯಾರದಲ್ಲಿ ಡಣ್ ಡಣ್ ಎಂದು ಎಂಟು ಹೊಡೆಯುತ್ತಿರುವಂತೆ ಅವರ ಆಗಮನ. ಎಂದಾದರೂ ಅವರ ಕಾರು ಬರುವುದಕ್ಕೆ ಮುಂಚೆಯೇ ಘಂಟೆಯ ಸಪ್ಪಳ ಕೇಳಿಸಿದರೆ, ಅಥವಾ ಕಾರು ಬಂದಾಗ ಘಂಟೆ ಬಾರಿಸದೇ ಇದ್ದರೆ, ಆ ಗಡಿಯಾರ ಕೆಟ್ಟಿದೆ ಎಂಬುದು ಸ್ಪಷ್ಟ.

ಡೀನ್ ಬರುತ್ತಿದ್ದಂತೆ ಮೆಟ್ಟಲುಗಳ ಮೇಲಿಂದ ಜಯರಾಮು ಅವರಿಗೆ ವಂದಿಸುವುದು ನಿತ್ಯದ ಪರಿಪಾಠ.

"ಗುಡ್ ಮಾರ್ನಿಂಗ್, ಸರ್."

"ಗುಡ್ ಮಾರ್ನಿಂಗ್, ಜಯರಾಮು."

ಈಗ ಸಹಾಯಕನಾದರೂ ಹಿಂದೆ ತಮ್ಮ ವಿದ್ಯಾರ್ಥಿಯಾಗಿದ್ದವನಲ್ಲವೆ? ಜಯರಾಮು ಬಗೆಗೆ ಡೀನರಿಗೆ ಸ್ವಲ್ಪ ಸಲಿಗೆ. ಕೋಟು ತೊಟ್ಟಿದ್ದರೆ ಅದನ್ನು ತೆಗೆದಿರಿಸಿ, ಬುಷ್‌ಕೋಟಾದರೆ ಅದರ ಮೇಲ್ಗಡೆಯೆ, ಬಿಳಿಯ ನೀಳ ಕೋಟು ಧರಿಸುತ್ತ ಜಯರಾಮು ಜತೆ ಡೀನರು, ಹಿಂದಿನ ದಿನದ ಕೇಸುಗಳಿಗೆ ಸಂಬಂಧಿಸಿಯೋ, ಆ ದಿನದ ತರಗತಿಗಳನ್ನು ಕುರಿತೋ, ಶಸ್ತ್ರಕ್ರಿಯೆ ನಡೆಸುವ ದಿನವಾದರೆ ಅಂದಿನ

ರೋಗಿಗಳ ಬಗೆಗೋ ಮಾತನಾಡುತ್ತಿದ್ದರು. ಜಯರಾಮುವಿನ ಸಲಹೆ ಕೇಳು ತ್ತಿದ್ದರು. ಆತನ ಮಾತನ್ನು ಗೌರವದಿಂದ ಆಲಿಸುತ್ತಿದ್ದರು.

ಹಾಗೆ ಆರಂಭವಾದ ಹಗಲು, ಅಪರಾಹ್ನ ಒಂದೂವರೆ–ಎರಡು–ಮೂರು ಘಂಟೆಗಳ ತನಕ ಸಾಗುತ್ತಿತ್ತು. ಮತ್ತೆ ಸಂಜೆ ಐದರಿಂದ ಏಳೂವರೆ ಎಂಟರ ವರೆಗೆ. ವಾರದಲ್ಲಿ ಕೆಲ ದಿನಗಳು ಮಧ್ಯಾಹ್ನದ ಅನಂತರವೂ ತರಗತಿಗಳಿರು ತ್ತಿದ್ದುವು.

ಡೀನರು ಮಿತಭಾಷಿಯಾದರೂ, ವಯಸ್ಸಿಗೆ ಅನುಗುಣವಾದ ಗಾಂಭೀರ್ಯ ವನ್ನು ಅವರು ತೋರುತ್ತಿದ್ದರೂ, ಹಸನ್ಮುಖಿಯಾಗಿರುತಿದ್ದರು.

ಕಳೆದ ಕೆಲ ದಿನಗಳಲ್ಲಿ ಅವರಲ್ಲೊಂದು ಬದಲಾವಣೆಯಾಗಿತ್ತು. ಇದ್ದಕ್ಕಿ ದ್ದಂತೆ ಮಾಯವಾಗಿತ್ತು, ಮುಖದ ಮೇಲಿನ ಸ್ಥಿರ ಮಂದಹಾಸ.

ಹಾಗೆ ನೋಡಿದರೆ ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಆಸ್ಪತ್ರೆಯ ಸಿಬ್ಬಂದಿ, ರೋಗಿಗಳು–ಎಲ್ಲರಲ್ಲೂ ಒಂದು ಬಗೆಯ ಪರಿವರ್ತನೆಯಾಗಿತ್ತು. ಜಯ ರಾಮು ವಿಸ್ಮಯಗೊಂಡಿದ್ದ: ಸಂಬಳ, ಭಡತಿ, ಸೀನಿಯಾರಿಟಿ, ಸ್ಕಾಲರ್‌ಶಿಪ್, ವಿದೇಶ ವ್ಯಾಸಂಗ, ಆತ ಹಾಗೆ, ಇವಳು ಹೀಗೆ, ಇಂತಹ ವಿಷಯಗಳನ್ನು ಹೊರತು ಬೇರೆ ಮಾತೇ ಈ ಜನರ ನಡುವೆ ಸಾಧ್ಯವಿಲ್ಲ–ಎಂಬ ತೀರ್ಮಾನಕ್ಕೆ, ದುಡಿಮೆ ಆರಂಭಿಸಿದ ಕೆಲವೇ ದಿನಗಳಲ್ಲಿ ತಾನು ಬಂದಿದ್ದನಲ್ಲ? ಈಗ ಒಮ್ಮಿಂದೊಮ್ಮೆಲೆ ಆ ಚಿತ್ರ ಅದೃಶ್ಯವಾಗಿಬಿಟ್ಟಿತ್ತು.

ಜಯರಾಮುಗೆ ಅನಿಸುತ್ತಿತ್ತು: ಚೀಣಾ ವಿಶ್ವಾಸದ್ರೋಹ ಬಗೆದುದು, ದುರಾಕ್ರಮಣ ನಡೆಸಿದುದು, ಒಳಿತೇ ಆಯಿತು. ಹುಚ್ಚುಚ್ಚಾರ ಮಾಡತೊಡ ಗಿದ್ದ ದೇಶಕ್ಕೆ ಇದೊಳ್ಳೆಯ ಶಾಕ್ ಟ್ರೀಟ್‌ಮೆಂಟ್.

ತುರ್ತು ಪರಿಸ್ಥಿತಿಯನ್ನೂ ಭಾರತ ರಕ್ಷಣಾ ಶಾಸನವನ್ನೂ ರಾಷ್ಟ್ರಾಧ್ಯಕ್ಷರು ಘೋಷಿಸಿದ ದಿನ ಡೀನರೆಂದರು:

"ಸಮರದ ಶಾಖ ಈಗ ತಟ್ಟಿದಹಾಗಾಯ್ತು. ಇನ್ನು ನಮ್ಮ ಹುಡುಗರು ವಿದೇಶ ವ್ಯಾಸಂಗದ ಯೋಚನೆ ಬಿಟ್ಟುಬಿಡಬಹುದು. ಅಧ್ಯಕ್ಷರ ಘೋಷಣೆಗೆ ದೊರೆತಿರುವ ಸ್ವಾಗತ ನೋಡಿದರೊ? ವಾಕ್‌ಸ್ವಾತಂತ್ರ್ಯ ಲೇಖನ ಸ್ವಾತಂತ್ರ್ಯ ಗಳನ್ನೆಲ್ಲ ಸದ್ಯಕ್ಕೆ ತ್ಯಾಗ ಮಾಡಲು ಪ್ರಜೆಗಳು ಒಪ್ಪಿದ್ದಾರೆ."

ಶಿವರಾಮ್ ಮೆಡಿಕಲ್ ಕಾಲೇಜಿನ ಅಧ್ಯಾಪಕ ವರ್ಗವೂ ಆಸ್ಪತ್ರೆಯ ಸಿಬ್ಬಂ

ದಿಯೂ ಆ ತಿಂಗಳು ತಮ್ಮ ಕೈಯಲ್ಲಿ ಉಳಿದಿದ್ದುದನ್ನೆಲ್ಲ ರಕ್ಷಣಾನಿಧಿಗೆ ನೀಡಿದರು. ಮುಂದೆ ಪ್ರತಿ ತಿಂಗಳೂ ಒಂದು ದಿನದ ವೇತನ ಕೊಡುವುದಾಗಿ ಜಾಹೀರು ಮಾಡಿದರು.

ಸಾಹುಕಾರ ಶ್ರೀಕಂಠಯ್ಯನವರ ಒಂದು ಲಕ್ಷ ರೂಪಾಯಿ ಕೊಡುಗೆಯ ವಾರ್ತೆ ಪತ್ರಿಕೆಗಳಲ್ಲಿ ಪ್ರಕಟವಾದಾಗ, ಡೀನರು ಕಣ್ಣು ಮಿಟಕಿಸಿ ಜಯರಾಮುವಿನೊಡನೆ ಅಂದರು:

"ಸಾಹುಕಾರರ ಕಾಣಿಕೆ ಯಾವುದಕ್ಕೇ ಆಗಲಿ ಒಂದು ಲಕ್ಷಕ್ಕಿಂತ ಕಮ್ಮಿಯಿಲ್ಲ!"

ಕಾಲೇಜಿಗೆ ಕೊಡುವೆನೆಂದಿದ್ದ ಒಂದು ಲಕ್ಷದ ವಂತಿಗೆ ಇನ್ನೂ ಸಂದಾಯವಾಗಿಲ್ಲ–ಎಂಬ ಅಂಶವನ್ನು ಬಾಯಿ ತೆರೆದು ಅವರು ಹೇಳಲಿಲ್ಲ.

ಭಾಗ್ಯನಗರದ ರಕ್ಷಣಾನಿಧಿ ಸಮಿತಿಯ ರಚನೆ, ಶ್ರೀಕಂಠಯ್ಯನವರ ನೇತೃತ್ವದಲ್ಲಿ ಅದರ ಚಟುವಟಿಕೆಗಳು–ಇವುಗಳನ್ನು ಕುರಿತು ಜಯರಾಮು ಪತ್ರಿಕೆಗಳಲ್ಲಿ ಓದುತ್ತಿದ್ದ. ತನ್ನ ತಂದೆಯ ದೇಶಭಕ್ತಿಯ ಆಳ ಎತ್ತರಗಳನ್ನು ಚೆನ್ನಾಗಿ ಅರಿತಿದ್ದ ಜಯರಾಮುಗೆ ಆ ವರದಿಗಳ ವಾಚನ ಮನೋರಂಜನೆಯನ್ನೊದಗಿಸುತಿತ್ತು.

ಶ್ರೀಸದನದಲ್ಲಿ ರಕ್ಷಣಾನಿಧಿ ಸಮಿತಿಯ ಕಚೇರಿ. ಎಂತಹ ತಮಾಷೆ! ಆ ಭವನದಲ್ಲಿ ದೇಶಭಕ್ತರ ಓಡಾಟ...ಇದಕ್ಕೆಲ್ಲ ತನ್ನ ತಾಯಿಯ ಪ್ರತಿಕ್ರಿಯೆ ಏನೊ? ಪ್ರಸ್ತುತ ಘಟನೆಗಳಿಂದ ಜಯಶ್ರೀಯ ಮೇಲೆ ಕಿಂಚಿತ್ತಾದರೂ ಪರಿಣಾಮ ಉಂಟಾಗಿರಬಹುದೆ? ಅಥವಾ ಈಗಲೂ ಟ್ರಾನ್ಸಿಸ್ಟರ್ ಮುಂದೆ ಕುಳಿತು ರೇಡಿಯೋ ಸಿಲೋನಿನ ಹಾಡುಗಳನ್ನು ಆಕೆ ಕೇಳುತ್ತಿರಬಹುದೆ?

ಮನುಷ್ಯ ಸ್ವಭಾವ ಎಂಥದು? ಪರಿಸ್ಥಿತಿಯ ತೀವ್ರ ಒತ್ತಡಕ್ಕೆ ಅದು ಬದಲಾಗುತ್ತದಲ್ಲ? ಕೊರೆಯುವ ಹಿಮದಲ್ಲಿ ಭಾರತೀಯ ಸೈನಿಕರು ಪ್ರಾಣ ನೀಗುತ್ತಿರುವಾಗ–ಪ್ರಾಣದ ಹಂಗು ತೊರೆದು ಕಾದುತ್ತಿರುವಾಗ–ಹೃದಯಗಳನ್ನು ಹಿಂಡಿದ ಭಾವನೆ ದೇಶಬಾಂಧವರಿಗೆ. ಆದರೆ ನಾಳೆ ಅಪಾಯ ಒಂದಿಷ್ಟು ಕಡಮೆಯಾದಾಗ? ಇದೇ ಒಗ್ಗಟ್ಟು ಆಗಲೂ ಉಳಿಯಬಹುದೆ? ತೆರೆದ ಹೃದಯದಿಂದ ಜನ ನೀಡುತ್ತಿರುವ ಧನಕನಕಗಳ ಕಾಣಿಕೆಯ ಮಹಾಪೂರ ಇಳಿದು, ನದಿಯಾಗಿ, ತೊರೆಯಾಗಿ, ಮರಳಾಗಿ ಬತ್ತದೆ ಹೋಗಬಹುದೆ?

ಸಾರ್ವಜನಿಕ ಕ್ಷೇತ್ರದಲ್ಲಿ, ಒಂದಲ್ಲ ಒಂದು ಬಗೆಯ ಪ್ರತಿಫಲಾಪೇಕ್ಷೆಯಿಂದಲೇ ರಕ್ಷಣೆಯ ಹೆಸರಲ್ಲಿ ಘೋಷಗಳನ್ನು ಕೂಗುವವರು ಇರಬಹುದಲ್ಲವೆ?

ಪತ್ರಿಕೆಗಳಲ್ಲಿ ಹೆಸರುಬರುತ್ತದೆಂದು, ಪ್ರಸಿದ್ಧಿಯ ಆಸೆಯಿಂದ, ರಕ್ಷಣಾನಿಧಿಗೆ ವಂತಿಗೆ ಕೊಡುವವರು ಇಲ್ಲವೆಂದೆ?

ಒಂದು ಚಲಚ್ಚಿತ್ರ ನೋಡಿಬಂದ ಜಯರಾಮುವಿನ ಸಹೋದ್ಯೋಗಿಯೊಬ್ಬರು ಅಂದರು:

"ಡಾಕ್ಟ್ರೆ, ಹೋದ ವಾರ ನಿಧಿಸಂಗ್ರಹದ ಪಾದಯಾತ್ರೆಯಾಯ್ತಲ್ಲ? ಅದರ ನ್ಯೂಸ್ ರೀಲ್ ಬಂದಿದೆ. ನೋಡಿದಿರಾ?"

"ಇಲ್ಲ ಡಾಕ್ಟ್ರೆ. ನಾನು ಚಿತ್ರಮಂದಿರಗಳ ಕಡೆಗೆ ಸುಳಿದು ಬಹಳ ದಿನ ಆಯ್ತು."

"ಎಮರ್ಜೆನ್ಸಿ ಅಂತಲೋ?"

"ಹಾಗೇನಲ್ಲ......"

"ನ್ಯೂಸ್ ರೀಲ್ ತಮಾಷೆಯಾಗಿದೆಯಪ್ಪ. ಒಮ್ಮೆ ಹೋಗಿ ನೋಡಿ. ನನ್ನ ಪಕ್ಕದಲ್ಲಿ ಕೂತಿದ್ದವರು ಒಬ್ಬರು ಹೇಳಿದ್ರು—ಆ ಯಾತ್ರೆಯ ಮುಖಂಡರು ಸಾಹುಕಾರ ಶ್ರೀಕಂಠಯ್ಯನವರು ಅಂತ. ಅಂದರೆ ನಿಮ್ಮ ತಂದೆ ಅಲ್ವೆ? ಅವರ ಮಗಳು ಕೂಡಾ—ಅಂದರೆ ನಿಮ್ಮ ತಂಗಿ—ಆ ನ್ಯೂಸ್‌ರೀಲ್ನಲ್ಲಿದಾರೆ. ನೋಡ್ಬೇಕ್ನೀಪ್ಪಾ......"

......ತಾನೇ ತಾನಾಗಿ ಹೊಮ್ಮಿತ್ತು, ಭಾರತೀಯ ಜನತೆಯ ಪ್ರತಿಭಟನೆಯ ವೀರಗಾನ. ಅದರ ಶ್ರವಣಮಾತ್ರದಿಂದಲೇ ರೋಮಾಂಚನ ಉಂಟಾಗುತಿತ್ತು. ಆದರೆ ಈಗ, ಆ ಗಾನಕ್ಕೆ ವಾದ್ಯವೃಂದದ ಕೃತ್ರಿಮ ಹಿಮ್ಮೇಳವನ್ನು ಒದಗಿಸತೊಡಗಿದ್ದರು. ವೀರಗಾನ ನಾಟಕೀಯವಾಗಿ ಕೇಳಿಬರುತ್ತಿತ್ತು.

ಪರಿಸ್ಥಿತಿ ಕಣ್ಣೆದುರಲ್ಲೇ ರೂಪುಗೊಳ್ಳುತ್ತಿದ್ದ ರೀತಿ ಎಷ್ಟೊಂದು ಅಸಹನೀಯವಾಗಿತ್ತು!

ಜಯರಾಮು ನ್ಯೂಸ್ ರೀಲ್ ನೋಡಲು ಹೋಗಲಿಲ್ಲ.

ಜಯಶ್ರೀ ಫೋನ್ ಮಾಡಿದಳು:

["ಏನಣ್ಣ—ಎಷ್ಟೊಂದ್ಸಲ ರಿಂಗ್ ಮಾಡ್ದೆ. ನೀನು ರೂಮ್ನಲ್ಲೇ ಇರೋದಿಲ್ವಂತೆ."]

"ಹ್ಞ ಜಯಾ. ಏನೋ ಕೆಲಸ. ಹೊರಗೆ ಹೋಗಿರ್‍ತೀನಿ. ಏನ್ಸಮಾಚಾರ?"

["ಏನಿಲ್ಲ......ನ್ಯೂಸ್‌ರೀಲ್ ನೋಡಿದಿಯಾ? ಎಲ್ಲಾ ಥಿಯೇಟರುಗಳಲ್ಲೂ ತೋರಿಸ್ತಿದಾರೆ."]

"ನೋಡಿಲ್ಲ ಜಯಾ. ಯಾರೋ ನೋಡಿದವರು ಬಂದು ಹೇಳಿದ್ರು."

["ಹೌದೆ? ನಾನು ಚೆನ್ನಾಗಿ ಕಾಣ್ತೆದೀನೀಂತ ಹೇಳಿದ್ರಾ?"]

"ಹ್ಞ."

["ಕಾಲೇಜ್ನಲ್ಲಿ ಫಂಡಿಗೆ ನಾನು ದುಡ್ಡು ಕೂಡಿಸ್ತಿದೀನಿ."]

"ಒಳ್ಳೇ ಕೆಲಸ. ಮಾಡಬೇಕಾದ್ದೇ."

["ನೀನೂ ಕೂಡಿಸ್ತಿದೀಯಾ?"]

"ಇಲ್ಲೂ ಕೂಡಿಸ್ತಿದಾರೆ, ಜಯಾ."

["ಡಿಫೆನ್ಸ್ ಫಂಡ್ ಆಫೀಸು ನಮ್ಮನೇಲೇ ಇದೆ."]

"ಒಳ್ಳೇದಾಯ್ತು. ಅನುಕೂಲ."

["ತ್ಯಾಗರಾಜನ್ ಸಿಕ್ಕಿದ್ರಾ?"]

"ಇಲ್ಲ."

["ನನಗೂ ಸಿಕ್ಕೇ ಇಲ್ಲ. ನಮ್ಮ ಫೋನಿಗಂತೂ ಯಾವಾಗ ನೋಡಿದ್ರೂ ಪುರಸೊತ್ತಿಲ್ಲ."]

"ಅಮ್ಮ ಚೆನ್ನಾಗಿದಾಳಾ?"

["ಹೂಂ. ಒಳಗಡೆ ಇದಾಳೆ. ಕರೀಲೇನು?"]

"ಬೇಡ, ಬೇಡ. ನಾನು ಕೇಳ್ದೆ ಅಂತ ಹೇಳು."

["ಹೇಳ್ತೀನಿ."]

"ಸರಿ. ಅಷ್ಟೇ ತಾನೆ?"

["ಹುಂ. ಅಷ್ಟೇ." ರಿಸೀವರ್ ಕೆಳಗಿರಿಸಿದ ಟಕ್ ಶಬ್ದ.]

ಜಯರಾಮು ನಿಟ್ಟುಸಿರುಬಿಟ್ಟ.

ನಡೆಯುತ್ತಿರುವ ನಾಟಕದಲ್ಲಿ ತನ್ನ ತಂಗಿಯೂ ಒಬ್ಬಳು ಪಾತ್ರಧಾರಿಣಿ ಈಗ.

ಸ್ವಾಭಾವಿಕ ಸೌಂದರ್ಯವಿದ್ದರೂ ಕೃತ್ರಿಮ ಲಾವಣ್ಯವರ್ಧಕಗಳ ಮೋಹಕ್ಕೆ ನಾವು ದಾಸರು. ಮನಮುಟ್ಟುವಂತೆ ಸರಳವಾಗಿ ಹೇಳಬಹುದಾದ ಒಂದು ಮಾತಿಗೂ ನಮಗೆ ಬಾಜಾಬಜಂತ್ರಿ ಬೇಕು......

ಮೆಡಿಕಲ್ ಕಾಲೇಜಿನ ಕೆಲ ವಿದ್ಯಾರ್ಥಿಗಳು—ನಾಟಕ ಸಂಗೀತಗಳಲ್ಲಿ ಅಭಿರುಚಿ ಇದ್ದವರು—ಡೀನರ ಬಳಿಗೆ ಹೋಗಿ.

"ರಕ್ಷಣಾನಿಧಿಯ ಸಹಾಯಾರ್ಥ ಪುರಭವನದಲ್ಲಿ ವಿವಿಧ ವಿನೋದಾವಳಿ ಏರ್ಪಾಟು ಮಾಡಬೇಕೂಂತಿದೇವೆ,"

—ಎಂದರು.

ಡೀನರು ಸಮ್ಮತಿ ನಿರಾಕರಿಸಲಿಲ್ಲ. ಆದರೆ ಒಂದು ಮಾತು ಅಂದರು:

"ಎಲ್ಲರೂ ತಾವಾಗಿಯೇ ವಂತಿಗೆ ಕೊಡ್ತಿದಾರೆ. ಟಿಕೆಟ್ ಮಾರುವಾಗ ಕೊಳ್ಳಲೇಬೇಕು ಅಂತ ಯಾರನ್ನೂ ಪೀಡಿಸ್ಬೇಡಿ, ಬಲಾತ್ಕರಿಸ್ಬೇಡಿ."

ಕಾರ್ಯಕ್ರಮಕ್ಕೆ ಸಿದ್ಧತೆ ಭರದಿಂದ ನಡೆಯಿತು. ಆ ಸಂಜೆಯ ಮುಖ್ಯ ಅತಿಥಿಯಾಗಿ ಬರಲು ಸಾಹುಕಾರ ಶ್ರೀಕಂಠಯ್ಯನವರನ್ನು ಕರೆದುದಾಯಿತು. ಆರೋಗ್ಯ ಸಚಿವರನ್ನು, ಅವರು ದೊರೆಯದಿದ್ದರೆ ಬೇರೆ ಯಾರಾದರೂ ಸಚಿವರನ್ನು, ಕರೆಯಬೇಕೆಂಬುದು ಮೊದಲ ತೀರ್ಮಾನವಾಗಿತ್ತು. ಆದರೆ ಎಲ್ಲ ಸಚಿವರೂ ಅಂತಹ ಕಾರ್ಯಕ್ರಮಗಳಲ್ಲಿ ಎಡೆಬಿಡದೆ ಭಾಗವಹಿಸುತ್ತಿದ್ದುದರಿಂದ, ಆ ಎಲ್ಲ ಸಮಾರಂಭಗಳು ಮೊದಲೇ ಗೊತ್ತಾಗಿದ್ದುದರಿಂದ, ಸಚಿವಸಂಪುಟ ಮೆಡಿಕಲ್ ವಿದ್ಯಾರ್ಥಿಗಳನ್ನು ನಿರಾಸೆಗೊಳಿಸಿತು.

ಒಬ್ಬ ಮಂತ್ರಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು:

"ಸಾಹುಕಾರ ಶ್ರೀಕಂಠಯ್ಯನವರನ್ನು ಕರೆದುಕೊಂಡು ಹೋಗಿ. ಅವರಲ್ವೆ ನಗರ ಸಮಿತಿ ಅಧ್ಯಕ್ಷರು?"

ವಿದ್ಯಾರ್ಥಿಗಳು ಶ್ರೀಸದನಕ್ಕೆ ಧಾವಿಸಿದರು.

ಉದ್ಯಾನದಲ್ಲಿ ಒಂದೆಡೆ ಗುಲಾಬಿ ಹೂಗಳನ್ನು ಆರಿಸುತ್ತ ನಿಂತಿದ್ದ ಜಯಶ್ರೀ ನೋಟಮಾತ್ರದಿಂದ, ಬಂದವರು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳೆಂಬುದನ್ನು ಅರಿತಳು.

"ಏನು ಬೇಕು?"

—ಎಂದು ಆಕೆ ಕೇಳಿದಳು.

"ಸಾಹುಕಾರರ ಮಗಳು ಕಣೋ,"

—ಎಂದ ಒಬ್ಬ ವಿದ್ಯಾರ್ಥಿ ಇನ್ನೊಬ್ಬನಿಗೆ, ಪಿಸುದನಿಯಲ್ಲಿ.

ಅವರ ಮುಖಂಡನೆಂದ:

"ನಾವು ಮೆಡಿಕಲ್ ಕಾಲೇಜಿನಿಂದ ಬಂದಿದೀವಿ. ನಾಡದು ಸಂಜೆ ರಕ್ಷಣಾ ನಿಧಿಯ ಸಹಾಯಾರ್ಥ ಪುರಭವನದಲ್ಲಿ ವಿವಿಧ ವಿನೋದಾವಳಿ ಇಟ್ಟುಕೊಂಡಿ ದೀವಿ. ಮುಖ್ಯ ಅತಿಥಿಯಾಗಿ ಸಾಹುಕಾರ ಶ್ರೀಕಂಠಯ್ಯನವರನ್ನು ಕರಿಬೇಕೂಂತ–"

ಜಯಶ್ರೀ ಅಂದಳು:

"ಹಾಗೇನು? ಕೇಳಿ ನೋಡ್ತೀನಿ. ವೆರಾಂಡಾದಲ್ಲಿ ಕೂತ್ಕೊಳ್ಳಿ."

ಜಯಶ್ರೀ ತಂದೆಯನ್ನು ಕಾಣಲು ಒಳಹೋದಳು. ವಿದ್ಯಾರ್ಥಿಗಳು ಉದ್ಯಾನದ ಹಾಗೂ ಬಂಗಲೆಯ ಸೊಬಗನ್ನು ಸವಿಯುತ್ತ ದ್ವಾರಮಂಟಪದಲ್ಲೇ ನಿಂತರು.

ಕೆಲವೇ ನಿಮಿಷಗಳಲ್ಲಿ ಶ್ರೀಕಂಠಯ್ಯನವರು ದರ್ಶನವಿತ್ತರು.

ವಿದ್ಯಾರ್ಥಿಗಳು ವಂದಿಸಿದರು. ಮುಖಂಡ ಕೋರಿಕೆ ಸಲ್ಲಿಸಿದ.

"ಹೇಗಪ್ಪ ಬರಲಿ? ಪುರಸೊತ್ತೇ ಇಲ್ವಲ್ಲಪ್ಪ."

"ಹಾಗನ್ಬಾರದು, ಸರ್. ತಾವು ಬರದೇ ಇದ್ದರೆ ನಮಗೆ ತುಂಬಾ ನಿರಾಸೆ ಯಾಗುತ್ತೆ, ಸರ್. ಸಂಗ್ರಹಿಸಿದ ಹಣವನ್ನು ಅಲ್ಲೇ ತಮ್ಮ ಕೈಗೇ ಕೊಡ್ತೀವಿ..."

"ನಿಮ್ಮ ಡೀನ್ ಈ ವಿಚಾರವಾಗಿ ನಮಗೇನೂ ತಿಳಿಸಿಲ್ವಲ್ಲ!"

"ಈ ಕಾರ್ಯಕ್ರಮವನ್ನು ಏರ್ಪಾಟು ಮಾಡಿರೋದು ವಿದ್ಯಾರ್ಥಿಗಳೇ, ಸರ್. ಕಾಲೇಜು ಸ್ಟಾಫಿನವರಿಗೂ ಇದಕ್ಕೂ ಸಂಬಂಧವಿಲ್ಲ."

"ಅಂದರೆ? ಅವರ ಅನುಮತಿ ಇಲ್ದೇನೇ–"

"ಹಾಗಲ್ಲ, ಸರ್. ಅನುಮತಿ ಇಲ್ದೆ ಮಾಡೋದುಂಟೆ?"

"ಎಷ್ಟು ಹಣ ಕೂಡಿಸಿದೀರಿ?"

"ಇನ್ನೂ ರಿಸೀಟ್ ಪುಸ್ತಕಗಳು ಬಂದಿಲ್ಲ, ಸರ್. ಸಂಗ್ರಹ ಚೆನ್ನಾಗಿ ಆಗಿದೆ."

"ಒಳ್ಳೇದು. ಸಂಗ್ರಹದ ಶೇಕಡಾ ಹತ್ತಕ್ಕಿಂತ ಹೆಚ್ಚು, ಏರ್ಪಾಟಿಗೆ ವೆಚ್ಚ ವಾಗಬಾರದು."

"ಅಷ್ಟೂ ಆಗಲಾರದು ಅನಿಸುತ್ತೆ, ಸರ್."

"ಬಹಳ ಒಳ್ಳೇದು. ನಾವು ಬರ್ತೇವೆ. ಪತ್ರಿಕೆಗಳಿಗೆ ಜಾಹೀರಾತು ಕೊಡಿ. ರಕ್ಷಣಾನಿಧಿಯ ಸಹಾಯಾರ್ಥ ಅಂದ್ಮೇಲೆ ಜಾಹೀರಾತು ದರದಲ್ಲಿ ಅವರು ರಿಯಾ ಯತಿ ತೋರಿಸ್ತಾರೆ."

"ನಾಡದು ಕರಕೊಂಡು ಹೋಗೋದಕ್ಕೆ–"

"ಎಷ್ಟು ಗಂಟೆಗೆ ಶುರು?"

"ಸಾಯಂಕಾಲ ಆರು ಘಂಟೆಗೆ."

"ಐದೂವರೆ ಹೊತ್ತಿಗೆ ಯಾರಾದರೊಬ್ಬರು ಬನ್ನಿ."

"ಟ್ಯಾಕ್ಸಿ—"

"ಬೇಡ, ಬೇಡ. ಅದಕ್ಕೋಸ್ಕರ ಖರ್ಚು ಮಾಡ್ಬೇಡಿ. ನಡಕೊಂಡು ಬನ್ನಿ."

ವಿದ್ಯಾರ್ಥಿಗಳು ವಂದನೆ ಸಲ್ಲಿಸಿ ತೆರಳಿದರು.

ಜಯಶ್ರೀಗೆ ಕುತೂಹಲ. ಅಣ್ಣನೂ ಬರಬಹುದೆ ಪುರಭವನಕ್ಕೆ? 'ಅವರ ಕಾಲೇಜಿನದಲ್ಲವೆ? ಬರದೇ ಇರಲಾರ'—ಎಂದು ಆಕೆಯ ಅಂಬೋಣ. ತಾನೂ ಹೋಗಬೇಕು—ಎಂಬ ಆಸೆ. ಕೊನೇ ಘಳಿಗೆಯಲ್ಲಿ ತಂದೆ ಬೇಡ ಅಂದರೊ?—ಎಂಬ ಅಳುಕು.

ಹಾಗನ್ನಲಾರರು, ಎಂದು ತನಗೆ ತಾನೇ ಸಮಾಧಾನಪಡಿಸಿಕೊಳ್ಳುತ್ತ ಆಕೆ, ತಾಯಿಗೆ ಆ ಸುದ್ದಿ ತಿಳಿಸಲು ಒಳಹೋದಳು.

......ಸಂಗ್ರಹವಾದುದು ಒಂದೇ ಸಾವಿರ ರೂಪಾಯಿಯಾದರೂ ಕಾರ್ಯಕ್ರಮ ಚೆನ್ನಾಗಿತ್ತು. ನಾಟಕಾಭಿನಯಕ್ಕೆ ಮೆಡಿಕಲ್ ಕಾಲೇಜಿನ ತಂಡ ಹೆಸರುವಾಸಿ. ಅವರ ವಾದ್ಯವೃಂದವೂ ನಗರದಲ್ಲಿ ಪ್ರಖ್ಯಾತವಾಗಿತ್ತು.

ಜಯರಾಮು ಐದು ರೂಪಾಯಿಗಳ ಟಿಕೆಟು ಕೊಂಡಿದ್ದ. ಆದರೆ ಪುರಭವನಕ್ಕೆ ಹೋಗಿರಲಿಲ್ಲ.

ಮಾರನೆಯ ಬೆಳಗ್ಗೆ ಡೀನ್ ಕೇಳಿದರು:

"ನೀವು ಬಂದಿರ್ಲಿಲ್ವೆ?"

"ಇಲ್ಲ, ಸರ್."

ಯಾಕೆ?—ಎಂದು ಪ್ರಶ್ನಿಸಲಿಲ್ಲ ಅವರು. ಅರ್ಧ ಕ್ಷಣ ಮೌನವಾಗಿದ್ದು,

"ಷೋ ಸೊಗಸಾಗಿತ್ತು,"

—ಅಂದರು.

"ಪ್ರತಿಭಾಶಾಲಿ ಹುಡುಗರು."

—ಎಂದ ಜಯರಾಮು, ಏನನ್ನೂ ಹೇಳದಿರುವುದು ಸರಿಯಾಗದೆಂದು.

"ನಿಜ. ಒಂದು ತಮಾಷೆಯಾಯ್ತು. ದೇಶಪ್ರೇಮದ ಹಾಡು ಆಗ್ತಿದ್ದಾಗ ಯಾರೋ ವೇದಿಕೆಯ ಕಡೆಗೆ ದುಡ್ಡೆಸೆದರು. ಒಂದಷ್ಟು ರೂಪಾಯಿ

ಗಳೂ ನೋಟುಗಳೂ ಬಂದುವು. ಫ್ರಂಟ್ ರೋನಲ್ಲಿದ್ದ ಒಬ್ಬಳು ಹುಡುಗಿ ಎದ್ದು ತನ್ನ ಎರಡೂ ಬಳೆಗಳನ್ನ ತೆಕ್ಕೊಟ್ಲು, ರಕ್ಷಣಾನಿಧಿಗೆ ಅಂತ. ಬಂಗಾರದ ಬಳೆಗಳು. ಅವಳ ಹೆಸರು ಅದೇನೋ ಹೇಳಿದ್ರಪ್ಪ—ಮರೆತ್ಹೋಯ್ತು. ಆಕೆ ಯಾರಿರಬಹುದು ಊಹಿಸಿ ನೋಡೋಣ."

"ನಮ್ಮ ಕಾಲೇಜಿನವಳೆ, ಸರ್?"

"ಅಲ್ಲ, ಅಲ್ಲ......ಊಹೂಂ. ನೀವು ಊಹಿಸಲಾರಿರಿ. ಆ ಹುಡುಗಿ ಸಾಹುಕಾರ ಶ್ರೀಕಂಠಯ್ಯನವರ ಮಗಳು. ಕಾರ್ಯದರ್ಶಿ ಕೊನೇಲಿ ಆ ವಿಷಯ ವನ್ನ ಅನೌನ್ಸ್ ಮಾಡಿದ."

"ಜಯಶ್ರೀ—"

"ಹ್ಞಾ, ಹ್ಞಾ. ಅದೇ ಹೆಸರು."

"ನನ್ನ ತಂಗಿ."

"ಏನಂತೀರಾ ಅದಕ್ಕೆ? ನಿಮ್ಮ ಸಂಸಾರವೆಲ್ಲ ದೇಶಪ್ರೇಮಿಗಳದ್ದೇ!"

ಇದೇ ವಿಷಯವನ್ನು ಜಯರಾಮುವಿನ ಸಹೋದ್ಯೋಗಿಗಳೂ ಒಬ್ಬಿಬ್ಬರು ಆತನೊಡನೆ ಪ್ರಸ್ತಾಪಿಸಿದರು.

ಸಂಘದ ಕಾರ್ಯದರ್ಶಿ ಬಂದು,

"ನಿನ್ನೆ ನಿಮ್ಮನ್ನ ಬಹಳ ಹುಡುಕಿದ್ವಿ, ಸರ್,"

—ಎಂದ.

"ಯಾಕೆ?"

"ಮಿಸ್ ಜಯಶ್ರೀ ಅಂತ—ಸಾಹುಕಾರರ ಮಗಳು—ನಿಮ್ಮನ್ನ ನೋಡಬೇಕು ಅಂದ್ರು."

"ಹೌದೆ? ನಾನು ಬಂದಿರ್‍ಲಿಲ್ಲ."

"ಪ್ರೋಗ್ರಾಂ ತುಂಬಾ ಚೆನ್ನಾಗಿ ಆಯ್ತು. ಜಯಶ್ರೀಯವರು ನಿಮ್ಮ ಸಂಬಂಧವೆ, ಸರ್?"

"ಹ್ಞೂ,"

—ಎಂದಷ್ಟೇ ಉತ್ತರಿಸಿ, ಜಯರಾಮು ಆತನನ್ನು ಬಿಟ್ಟು ತನ್ನ ದಾರಿಹಿಡಿದ.

'ನಿಮ್ಮ ಸಂಸಾರವೆಲ್ಲ ದೇಶಪ್ರೇಮಿಗಳದ್ದೇ.' ದೇಶಭಕ್ತರ ಕುಟುಂಬದಲ್ಲಿ ಹುಟ್ಟಿದವನು ತಾನು! ಈ ಸ್ವದೇಶಾಭಿಮಾನದ ಬೆಲೆ? ನಕಲಿ ಚಿನ್ನವನ್ನು ಅಪ್ಪಟ

ಬಂಗಾರವೆಂದು ತಿಳಿದು ಮೋಸಹೋಗುವುದಲ್ಲ ಲೋಕ? ಒಂದು ವೇಳೆ, ಜನರ ಅಭಿರುಚಿಯೇ ಇಂಥದಾಗಿದ್ದರೆ? ಈ ಬಗೆಯ ಪ್ರದರ್ಶನಗಳಿಂದಲೇ ಜನರ ಮನಸ್ಸಿಗೆ ಸಮಾಧಾನವೆನಿಸುವಂತಿದ್ದರೆ?

ಎಲ್ಲರೂ ನಿಧಿ ಸಂಗ್ರಹಿಸುವವರೇ. ಎಲ್ಲೆಲ್ಲೂ ಸಂಗ್ರಹವೇ. ಸಾರ್ವಜನಿಕರಿಂದ ಹಣ ಕೂಡಿಸುವ ಪರಂಪರೆ ಈ ದೇಶಕ್ಕೆ ಹೊಸತಲ್ಲ. ಸತ್ತವರ ಹೆಸರಲ್ಲಿ ಸ್ಮಾರಕ ನಿಧಿಗಳು ಎಷ್ಟೊಂದು ಇಲ್ಲಿ ಏರ್ಪಟ್ಟಿಲ್ಲ? ಅವುಗಳಲ್ಲಿ ಅನೇಕ ನಿಧಿಗಳು ಸದ್ದಿಲ್ಲದೆ ಕರಗಿದುವಲ್ಲ? ತಿಲಕರಾದರೇನು, ಗಾಂಧಿಯಾದರೇನು, ರಾಷ್ಟ್ರದ ರಕ್ಷಣೆಯಾದರೇನು?–ಎಲ್ಲಾ ಒಂದೇ ಅಲ್ಲವೆ? ಸಾರ್ವಜನಿಕ ನಿಧಿ ಸಂಗ್ರಹವೇ ಕಸಬಾಗಿರುವ ಪುಢಾರಿಗಳು ಪಾವಿತ್ರ್ಯದ ಕಲ್ಪನೆಯಿಂದ ಬಾಧಿತರಾಗುವುದುಂಟೆ? ಶೇಖರಿಸಲ್ಪಟ್ಟ ಧನಕನಕಗಳೆಲ್ಲ ಕೇಂದ್ರ ಭಂಡಾರವನ್ನು ತಲಪುತ್ತವೆಂಬ ಭರವಸೆಯೇನು? ಹಳ್ಳಿಯಿಂದ ಹಿಡಿದು ದಿಲ್ಲಿಯ ತನಕ, ಹಣ ಸಂಗ್ರಹಿಸಿದವರಲ್ಲಿ ಹಲವರು ತಮ್ಮ ರಕ್ಷಣೆಗಾಗಿಯೇ ಅದನ್ನು ವಿನಿಯೋಗಿಸಿದರೊ?

ಯೋಚನೆಗಳ ಪ್ರವಾಹವನ್ನು ಅಲ್ಲಿಗೇ ತಡೆದು, ಜಯರಾಮು ತನ್ನ ಮೇಲೆ ರೇಗಿದ. ಶಂಕಿಸುವುದೊಂದು ತನ್ನ ನಿತ್ಯದ ಕಾಹಿಲೆಯಾಯಿತಲ್ಲ? ಇಂತಹ ವಿಚಾರಗಳಿಂದ ಯಾಕೆ ತಲೆ ಕೆಡಿಸಿಕೊಳ್ಳಬೇಕು ತಾನು?

ತಾನೊಬ್ಬ ವಿಚಾರಜೀವಿಯಾಗಿರುವುದೇ ತಪ್ಪು. ಬದಲು, ಯಾವ ಶಂಕೆ–ಸಂದೇಹಗಳೂ ಇಲ್ಲದ, ಯಾವ ನಂಬುಗೆ–ಆದರ್ಶಗಳೂ ಇರದ, ಸಾಮಾನ್ಯ ಮನುಷ್ಯ ತಾನಾಗಿದ್ದರೆ? ಹುಟ್ಟುವುದು, ದುಡಿಯುವುದು, ಗಳಿಸುವುದು, ಮದುವೆಯಾಗಿ, ಮಕ್ಕಳನ್ನು ಪಡೆದು, ಮುದುಕನಾಗಿ, ಮೊಮ್ಮಕ್ಕಳ ಮುಖ ನೋಡಿ, ಬಾಳು ಕೃತಾರ್ಥವಾಯಿತು–ಎನ್ನುವುದು.

ಆದರೆ ಮನುಷ್ಯ ಶೂನ್ಯದಲ್ಲಿ ಬದುಕಲಾರನಲ್ಲ? ಅವನ ಸುತ್ತಲೂ ಇತರ ಮಾನವರಿದ್ದಾರೆ. ಅವರೆಲ್ಲರೂ ಸೇರಿರುವ ಸಮುದಾಯವಿದೆ, ಸಮಾಜವೆಂಬ ಹೆಸರು ಹೊತ್ತು. ಮಧ್ಯ ಯುಗದ ಪಾಳೆಯಗಾರಿಕೆಗಿಂತ, ಗುಲಾಮಗಿರಿಗಿಂತ, ನಿರಂಕುಶ ಪ್ರಭುಗಳ ಆಳ್ವಿಕೆಗಿಂತ, ಭಿನ್ನವಾದ ಪ್ರಜಾಪ್ರಭುತ್ವ ವ್ಯವಸ್ಥೆಯೊಂದಿದೆ. ಸಮಾಜದ–ರಾಷ್ಟ್ರದ–ಬದುಕನ್ನು ರೂಪಿಸಲು. ಅಂದಮೇಲೆ ಮನುಷ್ಯ–ಪ್ರಜೆ–ತನ್ನ ಪರಿಸರದ ಬಗೆಗೆ ಪ್ರತಿಕ್ರಿಯೆ ವ್ಯಕ್ತಪಡಿಸದೇ ಇರುವುದೆಂತು?

–ಛೆ! ಮತ್ತೆ ವಿಚಾರಗಳ ಸುಳಿಯಲ್ಲಿ ಸಿಲುಕಿಕೊಂಡೆ!–ಎಂದು. ಆ ಸುಳಿ

ಯಿಂದ ಪಾರಾಗಲು ಯತ್ನಿಸುವವನಂತೆ ಜಯರಾಮು ನಡಿಗೆಯನ್ನು ತೀವ್ರಗೊಳಿಸಿದ. ಕಾಲೇಜಿನ ಜಗಲಿಯ ಮೂಲೆಯಲ್ಲಿ ವಿದ್ಯಾರ್ಥಿನಿಯರ ಗುಂಪೊಂದು ನಿಂತಿತ್ತು. ಜಯರಾಮು ಸಮೀಪ ಬಂದಾಗ ಅದು ಆತನಿಗೆ ನಮಸ್ಕರಿಸಿತು.

"ಹಲೋ !"

–ಎಂದ ಜಯರಾಮು, ಅವರೆಲ್ಲರನ್ನೂ ಉದ್ದೇಶಿಸಿ.

ಗುಂಪನ್ನು ದಾಟಿ ಹೋದರೆ ಪುನಃ ವಿಚಾರಗಳ ದೆವ್ವ ತನ್ನನ್ನು ಬೆನ್ನಟ್ಟಬಹುದೆಂದು, ಆತ ಅಲ್ಲಿ ನಿಂತು,

"ಈದಿನ ತರಗತಿಯಿಲ್ಲವೆ ?"

–ಎಂದು ಅವರನ್ನು ಕೇಳಿದ.

ಉತ್ತರ. ಹಿಹ್ಹಿಹ್ಹಿ ನಗೆ. ಕುಶಲ ಸಂಭಾಷಣೆ.

"ನಿನ್ನೆ ಪ್ರೋಗ್ರಾಮ್ ಹ್ಯಾಗಿತ್ತು ಸರ್ ?"

"ಚೆನ್ನಾಗಿತ್ತಂತಲ್ಲ......"

"ನೀವು ಬಂದಿರ್‍ಲಿಲ್ವ, ಸರ್ ? ನಿನ್ನೆ ಇವಳ ಡ್ಯಾನ್ಸಿತ್ತು. ನೀವು ನೋಡ್ಲಿಲ್ವ ಸರ್ ?"

ವಿವಿಧ ವಿನೋದಾವಳಿಯನ್ನು ಕುರಿತ ಚರ್ಚೆಯ ಹಾವಳಿಯಿಂದ ತಪ್ಪಿಸಿಕೊಳ್ಳಬಹುದಾದ ತಾಣವೇ ಇಲ್ಲವೆ ಈ ಕಾಲೇಜಿನಲ್ಲಿ ?–ಆಸ್ಪತ್ರೆಯಲ್ಲಿ ?

ಜಯರಾಮು ಬೇಗ ಬೇಗನೆ ಕಾಲುಹಾಕಿದ. ಕೊನೆಯೇ ಇಲ್ಲವೆಂಬಂತೆ ಗೋಡೆಗಳನ್ನು ಬಳಸಿದ್ದ ಜಗಲಿಯುದ್ದಕ್ಕೂ ಆತ ನಡೆದ. ಹಾಗೆ ಎಷ್ಟು ಹೊತ್ತು ನಡೆದನೋ. ಆಯಾಸವೆನಿಸಿತು. ವಿದ್ಯಾರ್ಥಿ ನಿಲಯದ ತನ್ನ ಕೊಠಡಿಯ ಏಕಾಂತದ ರಕ್ಷಣೆಯನ್ನಾದರೂ ಪಡೆಯೋಣ–ಎಂದು ಆತ ಮೆಟ್ಟಿಲುಗಳನ್ನಿಳಿದ.

......ಆ ರಾತ್ರೆ ಜಯರಾಮು, ರುಚಿಸದ ಊಟವನ್ನು ಮುಗಿಸಿ ಮರಳುತ್ತಿದ್ದಾಗ ಸಂದರ್ಶಕರ ಕೊಠಡಿಯಲ್ಲಿ ತ್ಯಾಗರಾಜನನ್ನು ಕಂಡ.

"ಹಲೋ ಡಾಕ್ಟರ್, ನಿಮಗೋಸ್ಕರ ಕಾದಿದೀನಿ ಅರ್ಧ ಘಂಟೆಯಿಂದ,"

–ಎಂದ ಆತ, ಕುಳಿತಿದ್ದವನು ಎದ್ದು.

"ಹಲೋ, ಏನು ಬಂದಿರಿ ?"

–ಎಂದ ಜಯರಾಮು, ಅಲ್ಲೇ ನಿಂತು, ಕೊಠಡಿಗೆ ಆತನನ್ನು ಕರೆದೊಯ್ಯಲು ಇಷ್ಟಪಡದೆ.

ಅದನ್ನು ಗ್ರಹಿಸಿದ ತ್ಯಾಗರಾಜನೆಂದ:

"ಊಟ ಆಯ್ತೂಂತ ಕಾಣುತ್ತೆ. ಬನ್ನಿ, ಒಂದು ರೌಂಡ್ ಹೋಗಿ ಬರೋಣ."

"ಕ್ಷಮಿಸಿ, ಕೆಲಸವಿದೆ. ಆದರೂ ಗೇಟ್ ತನಕ ಬರ್ತೀನಿ, ನಿಮ್ಮನ್ನ ಕಳಿಸಿ ಕೊಡೋಕೆ."

ತ್ಯಾಗರಾಜನ ಮುಖದ ನರಗಳು ಬಿಗಿದುವು. ಅಂಗಳದಲ್ಲಿ ಮಂದ ಪ್ರಕಾಶದಲ್ಲಿ ಆತನೆಂದ:

"ವಿಶೇಷವೇನಿಲ್ಲ. ನನ್ನ ಒಬ್ಬ ಕಕ್ಷಿದಾರರು ಆಸ್ಪತ್ರೆಗೆ ಅಡ್ಮಿಟಾಗಿದಾರೆ. ನೋಡ್ಕೊಂಡು ಹೋಗೋಣ ಅಂತ ಬಂದೆ."

"ಹ್ಞ."

"ಹಾರ್ಟ್ ಅಟ್ಯಾಕು. ಡಾ. ಶೆಟ್ಟಿ ನೋಡ್ತಿದಾರೆ."

"ವಿಲ್ ಮಾಡಿಟ್ಟಿದಾರೊ?"

"ಹೌದು. ಕೊನೇ ಘಳಿಗೆ ವರೆಗೆ ನಾನು ಸಿದ್ಧವಾಗಿರಬೇಕಲ್ಲ? ಬದಲಾಯಿಸೋ ಮನಸ್ಸು ಮಾಡಿದ್ರು ಅಂದರೆ–"

"ನಿಜ, ನಿಜ."

"ಹಾಗೆ ನಿಮ್ಮ ಕ್ಷೇಮ ಸಮಾಚಾರ ತಿಳಕೊಂಡು ಹೋಗೋಣ ಅಂತ ಇಲ್ಲಿ ವರೆಗೆ ಬಂದೆ. ನಿನ್ನೆ ಟೌನ್ ಹಾಲ್‌ನಲ್ಲಿ ನೀವು ಸಿಗ್ತೀರೇನೋಂತಿದ್ದೆ. ಬಂದ ಹಾಗೆ ಕಾಣಿಸ್ಲಿಲ್ಲ."

['ಮತ್ತೆ ಆ ಭೂತ!']

"ಬರೋಕೆ ಆಗ್ಲಿಲ್ಲ."

"ಜಯಶ್ರೀ ನಿನ್ನೆ ಬಂಗಾರದ ಬಳೆ ಕೊಟ್ಬಿಟ್ಲು."

"ಹೌದಂತೆ."

"ಇವತ್ತು ಗೊತ್ತಾಯ್ತು–ಮನೆಗೆ ಹೋದ್ಮೇಲೆ ನಿಮ್ಮ ತಂದೆ ಆಕೇನ ತರಾಟೆಗೆ ತಗೊಂಡ್ರೂಂತ."

"ಆಹಾ!"

"ಸವೆದ್ಹೋಗಿತ್ತು, ಹಳೇ ಪ್ಯಾಟರ್ನು; ಹೊಸತಾಗಿ ಬೇರೆ ಮಾಡಿಸಿದರಾಯ್ತು ಅಂತ ಕೊಟ್ಟೆ, ಅಂದ್ಲು ಜಯಶ್ರೀ!"

"ಪರವಾಗಿಲ್ಲ!"

"ನಾನು ಇಂಗ್ಲೆಂಡ್ನಲ್ಲಿದ್ದಾಗ ಯುದ್ಧ ಏನೂಂತ ನೋಡಿದೀನಿ. ಆದರೆ ಈ ಧನದಾನ, ಕನಕದಾನ, ರಕ್ತದಾನದ ಹುಚ್ಚು ಎಲ್ಲೂ ಕಂಡಿಲ್ಲಪ್ಪ."

"ಜನ ಹೀಗೆ ತ್ಯಾಗ ಮಾಡೋದು ತಪ್ಪು, ಅಂತೀರೇನು?"

"ತಪ್ಪಲ್ಲ, ತಪ್ಪಲ್ಲ. ಆದರೆ ಇದರಲ್ಲಿ ಪ್ರಾಮಾಣಿಕತೆಯ ದಾಮಾಶಯು ಎಷ್ಟೂಂತ?"

ತುಟಿ ಕಚ್ಚಿ ಜಯರಾಮು ಅಂದ:

"ಇದು ಕೂಟ ಪ್ರಶ್ನೆ ಮಿಸ್ಟರ್ ತ್ಯಾಗರಾಜನ್. ಒಬ್ಬೊಬ್ಬ ವ್ಯಕ್ತಿಯಲ್ಲೂ ಪ್ರಾಮಾಣಿಕತೆ ಅಂಶ ಎಷ್ಟಿದೇಂತ ಅಳೆಯೋದು ಕಷ್ಟ, ಅಲ್ವೆ?"

ಜಯರಾಮುವನ್ನೊಮ್ಮೆ ತೀಕ್ಷ್ಣ ನೋಟದಿಂದ ದಿಟ್ಟಿಸಿ ತ್ಯಾಗರಾಜನ್ ಅಂದ:

"ಹೆಹ್ಹೆ! ನಿಮ್ಮ ಬಗ್ಗೆ ನನ್ನ ಅಭಿಪ್ರಾಯ ದಿನ ಕಳೆದಹಾಗೆ ಹೆಚ್ಚು ಹೆಚ್ಚು ದೃಢವಾಗ್ತಿದೆ, ಜಯಣ್ಣ. ಅಪಾರ ಆಸ್ತಿಯನ್ನ ಧಿಕ್ಕರಿಸಿ ಮನೆಬಿಟ್ಟವರು ನೀವು. ನಿಜ ಹೇಳಬೇಕಾದರೆ ನೀವಿಲ್ಲಿ ಇವತ್ತು ಕಾಣೋಕೆ ಸಿಗ್ತೀರೋ ಇಲ್ವೋ ಅಂತ ಅನುಮಾನ ಇದ್ದೇ ಇತ್ತು. ಸೈನ್ಯದ ಜತೇಲಿ ದುಡೀತೇನೆ ಅಂತ ಫ್ರಂಟಿಗೆ ನೀವು ಹೊರಟುಬಿಟ್ಟಿದ್ದರೂ ಇರಬಹುದು—ಅನಿಸಿತ್ತು."

ಜಯರಾಮು ಪದಗಳನ್ನು ಬಿಡಿಸಿ ಬಿಡಿಸಿ ಅಂದ:

"ಹೊರಡುವಾಗ ನಿಮಗೆ ಹೇಳದೆ ಹೋಗ್ತೀನಾ? ಬಹಳ ಹೊತ್ತಾಯ್ತು. ನಮಸ್ಕಾರ."

"ಹೆಹ್ಹೆ! ಗುಡ್ ನೈಟ್."

ರಸ್ತೆಗಿಳಿದು ತ್ಯಾಗರಾಜನ್ ಕಾರನ್ನು ತಲಪುವವರೆಗೂ ಆತನನ್ನು ನೋಡುತ್ತಿದ್ದು, ಜಯರಾಮು ತನ್ನ ಕೋಣೆಯನ್ನು ಸೇರಿದ.

ನಿದ್ದೆ ಕಣ್ಣುಮುಚ್ಚಾಲೆಯಾಡಿದ ದೀರ್ಘ ಇರುಳನ್ನು ಆತ ಕಳೆದ.

ಬೆಳಗ್ಗೆ ಬೇಗನೆದ್ದು ಡೀನರನ್ನು ಕಾಣಲೆಂದು ಅವರ ಮನೆಗೆ ನಡೆದ.

೧೫

ಕಮಲಮ್ಮ ಪತಿಯನ್ನು ಹಿಂಬಾಲಿಸಿ ಆ ರಾತ್ರೆ ಬಂದಿದ್ದರಲ್ಲ?

"ಏನು?"

—ಆಗ ಪ್ರಶ್ನಿಸಿದ್ದರು ಶ್ರೀಕಂಠಯ್ಯ.

ಕಮಲಮ್ಮ ರಾಗವೆಳೆದಿದ್ದರು:

"ನಿಮಗೆ ಪುರಸೊತ್ತಿದ್ದರೆ......"

ಸ್ವಲ್ಪ ಒರಟಾಗಿ ಶ್ರೀಕಂಠಯ್ಯನೆಂದಿದ್ದರು:

"ಏನಿದೆಯೋ ಹೇಳಿ ಹೋಗು."

ಇದಕ್ಕಿಂತ ಹೆಚ್ಚು ಪ್ರಸನ್ನರಾಗಿ ಶ್ರೀಸದನದ ಒಡೆಯರನ್ನು ಕಾಣುವುದು ಕನಸಿನ ಮಾತು ಎನಿಸಿರಬೇಕು ಕಮಲಮ್ಮನಿಗೆ. ದೇವರ ಮೇಲೆ ಭಾರ ಹಾಕಿ ಅವರು ಆರಂಭಿಸಿದರು:

"ನಮ್ಮ ಜಯಾ ವಿಷಯ ಏನು ಮಾಡಿದಿರೀಂದ್ರೆ......"

ತಮ್ಮ ಮಾತು ಯಾವುದಕ್ಕೆ ಸಂಬಂಧಿಸಿದ್ದೆಂಬುದನ್ನು ಕಮಲಮ್ಮ ಮುಂದೆ ವಿವರಿಸುವ ಅಗತ್ಯವಿರಲಿಲ್ಲ.

ಶ್ರೀಕಂಠಯ್ಯನೆಂದರು:

"ಯಾವ ಕಾಲದಲ್ಲಿ ಯಾವ ಕೆಲಸ ಮಾಡಬೇಕು ಅನ್ನೋದು ನನಗೆ ಗೊತ್ತಿದೆ. ಅಯ್ಯೋ ಹೆಂಗಸರ ಬುದ್ಧಿಯೇ! ಏನಾಗ್ತಿದೆ ದೇಶದಲ್ಲಿ? ನೀನು ಮಾತಾಡ್ತಿರೋದೇನು?"

"ಮಗಳ ವಿಷಯ ಮಾತನಾಡೋದು ತಪ್ಪೇ?"

"ಅಲ್ಲವಪ್ಪ ಅಲ್ಲ! ಏನಾಗಿದೆ ನಿನ್ನ ಮಗಳಿಗೆ?"

"ದಿವಸದಿಂದ ದಿವಸಕ್ಕೆ ಸೊರಗಿಕೊಂಡು ಹೋಗ್ತಿದಾಳೆ."

“ಹೋಗಿ ಡಾಕ್ಟರನ್ನ ನೋಡ್ಲಿ. ಟಾನಿಕ್ ಬರಕೊಡ್ತಾರೆ.”

“ಟಾನಿಕ್ಕಿಂದ ವಾಸಿಯಾಗುತ್ತಾ ಅಂದ್ರೆ ಇದು?”

“ಇನ್ಯಾತರಿಂದ ಆಗುತ್ತೆ ಅಂತಿ?”

“ಜಯೂದಂತೂ ತೀರ್ಮಾನವಾಗ್ಲಿಲ್ಲ. ಇವಳದಾದರೂ ಒಂದು ಆಯ್ತೂ ಅಂದರೆ–”

“ಮದುವೆ, ಮದುವೆ, ಮದುವೆ! ಈಗ ಬ್ಯಾಂಡ್ ಬಾರಿಸಿದರೆ ಮುಖಕ್ಕೆ ಉಗೀತಾರೆ ಕಣೇ. ಇದು ಯುದ್ಧಕಾಲ, ಗೊತ್ತಾಯ್ತೇನೆ? ಯುದ್ಧ ನಡೀತಿದೆ, ಯುದ್ಧ!”

“ಅದೆಲ್ಲಾ ನನಗೇನು ತಿಳಿಯುತ್ತೆ? ಹುಡುಗಿ ಹೊರಗೆ ಓಡಾಡ್ತಾಳೆ, ತಿರುಗಾಡ್ತಾಳೆ. ಏನಾದರೂ ಆಗಬಾರದಲ್ಲ?”

“ಏನಾಗುತ್ತೆ? ಮಿಲಿಟರಿಯವರು ಹೊತ್ಕೊಂಡು ಹೋಗುತಾರೆಯೆ ಅವಳ್ನ?”

“ಎಂಥ ಮಾತು ಆಡ್ತೀರೀಂದ್ರೆ......”

“ಇನ್ನೇನೆ?”

“ಮನೆಗೂ ಬರೋರು ಹೋಗೋರು ಜಾಸ್ತಿ ಜನ......”

“ಯಾಕೆ? ನಿನ್ನ ಮಗಳು ಇಲ್ಲಿದಾಳೇಂತ ಹೊರಗಿಂದ ಯಾರೂ ಇಲ್ಲಿಗೆ ಬರಲೇ ಬಾರದೊ?”

ಮನಸ್ಸಿನಲ್ಲಿದ್ದುದನ್ನು ಕಮಲಮ್ಮ ಹೇಳಲು ಹೊರಟರು. ಆದರೆ ಪದಗಳು ಅರ್ಧ ದಾರಿಯಲ್ಲಿಯೇ ಗತಪ್ರಾಣವಾದುವು. ಅವರ ಊಹೆ ಸರಿ ಎಂಬುದಕ್ಕೆ ಶ್ರೀಕಂಠಯ್ಯನವರ ಮಾತಿನಿಂದ ಯಾವ ಪುಷ್ಟಿಯೂ ದೊರೆತಿರಲಿಲ್ಲ. ತಾವು ಸುಮ್ಮನಿರುವುದೇ ಮೇಲು–ಎಂದು ನಿರ್ಧರಿಸಿ, ಕಮಲಮ್ಮ ನಿಟ್ಟುಸಿರುಬಿಟ್ಟರು.

ಹೆಂಡತಿಯು ನಿರುತ್ತರಳಾದುದನ್ನು ಗಮನಿಸಿ ಶ್ರೀಕಂಠಯ್ಯ ಅಂದರು:

“ಹೋಗು, ಮಲಕೋ.”

ಕಮಲಮ್ಮ ಭಾರವಾದ ಹೃದಯದೊಡನೆ ಕೊನೆಯ ಉಸ್ತುವಾರಿ ಮುಗಿಸಿ, ದೀಪ ಆರಿಸಿ, ಮಂಚದ ಮೇಲೆ ಪವಡಿಸಿದರು.

ಬಹಳ ಹೊತ್ತು, ಕಣ್ಣು ತೆರೆದು ಇರುಳನ್ನು ದಿಟ್ಟಿಸುತ್ತ ತಮ್ಮ ಶಂಕೆ–ಭಯ–ಆಸೆಗಳ ತುಣುಕು ಚಿತ್ರಗಳನ್ನು ಒಂದಕ್ಕೊಂದು ಜೋಡಿಸಲು ಅವರು ಯತ್ನಿಸಿದರು.

ಆ ಹೊಸ ಹುಡುಗ ಸೋಮನಾಥ ಇಲ್ಲಿಗೆ ಯಾಕೆ ಬಂದ?

ಅವನ ಕುಲ ಗೋತ್ರಗಳನ್ನು ಶಾಂತಮಲ್ಲಪ್ಪನ ಮೂಲಕ ಬಹಳ ಎಚ್ಚರಿಕೆಯಿಂದ, ಸಂದೇಹ ಬರದ ಹಾಗೆ, ಕಮಲಮ್ಮ ಕೇಳಿ ತಿಳಿದಿದ್ದರು. ಮನೆಯಳಿಯನನ್ನಾಗಿ ಮಾಡಿಕೊಳ್ಳುವ ಉದ್ದೇಶದಿಂದಲೇ ತಮ್ಮ ಪತಿ ಆತನಿಗೆ ಉದ್ಯೋಗ ಕೊಟ್ಟಿರಬಹುದು ಎಂದು ತರ್ಕಿಸಿದ್ದರು. ಶ್ರೀಕಂಠಯ್ಯನಿಲ್ಲದ ವೇಳೆ ಸೋಮನಾಥನಿಗೂ ಇಬ್ಬರು ಗುಮಾಸ್ತೆಯರಿಗೂ ಕಾಫಿ ಮಾಡಿಸಿ ಕೊಟ್ಟು ಕಳುಹಿದ್ದರು. ಒಂದೆರಡು ಸಾರೆ ಸಂಜೆ ಆ ಯುವಕ ಮನೆಗೆ ಹೊರಟಾಗ ವಾತ್ಸಲ್ಯದಿಂದ ಮಾತನಾಡಿಸಿಯೂ ಇದ್ದರು.

–'ಆಯ್ತಾ ಕೆಲಸ?'

–'ಹೋಗ್ತೀರಾ?'

–'ತಾಯಿ ದಾರಿ ನೋಡ್ತಿರಬಹುದು ಪಾಪ!'

ಸತ್ಕುಲಪ್ರಸೂತ, ವಿದ್ಯಾವಂತ, ವಿನಯಸಂಪನ್ನ–ಇನ್ನೇನು ಗುಣಗಳು ಬೇಕು ಗಂಡಿಗೆ? ಇದನ್ನೆಲ್ಲ ಲಕ್ಷ್ಯಕ್ಕೆ ತಂದೇ ಶ್ರೀಕಂಠಯ್ಯ ಇವನನ್ನು ಮನೆಯಲ್ಲಿ ಇರಿಸಿಕೊಂಡಿರಬಹುದು–ಎಂಬುದು ಅವರ ಎಣಿಕೆ.

ಆ ನಂಬುಗೆಯನ್ನು ಬಲಪಡಿಸುವ ಯಾವ ಪುರಾವೆಯೂ ದೊರೆಯದೆ ಹೋದಾಗ ಕಮಲಮ್ಮ ವ್ಯಥಿತರಾದರು.

ಜಯರಾಮುವಿನ ಕಥೆ ಹಾಗಾಯಿತು. ಇವರ ಮನಸ್ಸು ಕಲ್ಲಾದರೆ ಅವನ ಮನಸ್ಸು ಕಬ್ಬಿಣ. ಮುಂದೆಯೊಂದು ದಿನ ಮಗ ಮನೆಗೆ ಮರಳಿ ಬರುತ್ತಾನೆ; ಆಗ ಎಲ್ಲ ಸರಿಹೋಗುತ್ತದೆ–ಎಂದು ತಾನು ಆಸೆ ಕಟ್ಟಿಕೊಳ್ಳುವುದು ವ್ಯರ್ಥ.

ಹಾಗೆ ನೋಡಿದರೆ ಈ ಬಂಧನದಿಂದ ತಮಗೂ ಒಮ್ಮೆ ಬಿಡುಗಡೆಯಾಗಲಿ –ಎಂದು ಹಾರೈಸುವುದಿಲ್ಲವೆ ತಾವು?

ಹುಟ್ಟಿಸಿ ಜೀವನದಿಯಲ್ಲಿ ತೇಲಿಬಿಟ್ಟ ಮಕ್ಕಳು. ಒಮ್ಮೆ ದಡ ಸೇರಲಿ ಎನ್ನುವ ಆಸೆ. ಆ ಬಳಿಕ ಮಗನಿರುವಲ್ಲಿ ತಾನು. ಬದುಕಿ ಉಳಿದರೆ, ಪರಮಾತ್ಮ ಕರುಣಿಸಿದರೆ, ಮೊಮ್ಮಗುವಿನ ಮುಖ ಕಾಣುವುದು. ಇಲ್ಲವಾದರೆ ಇಲ್ಲ. ದೇವರ ಧ್ಯಾನ ಮಾಡುತ್ತ ಕೊನೆಯ ಘಳಿಗೆಯನ್ನು ಇದಿರು ನೋಡುವುದು.

ಸತ್ತ ಮೇಲೆ ಅಲ್ಲೇನು ಕಾದಿದೆಯೊ? ತಾಯಿಯಾದ ನೀನು ನಿನ್ನ ಕರ್ತವ್ಯ ನೆರವೇರಿಸಲಿಲ್ಲ ಎಂದು ಜರೆಯುವನೊ ದೇವರು? ತಿಳಿದೂ ತಿಳಿದೂ ಯಾವ

ಪಾಪ ಕಾರ್ಯವೂ ತನ್ನಿಂದ ಆಗಿಲ್ಲ. ದಾನ ಧರ್ಮ ಒಂದಿಷ್ಟು ಮಾಡಬಹು ದಿತ್ತು. ಆದರೆ ಕಬ್ಬಿಣದ ಗೇಟಿನ ಕೋಟೆಯೊಳಗೆ ಬಡಬಗ್ಗರು ಹೇಗೆ ಬರ ಬೇಕು? ಅದಕ್ಕಂತೂ ತಾವು ಹೊಣೆಯಲ್ಲವಲ್ಲ?

ಗಂಡನ ವ್ಯವಹಾರಗಳು ತಮಗೆ ಎಂದಾದರೂ ಅರ್ಥವಾದೀತೆನ್ನುವುದು ಭ್ರಮೆ. ಹಿಮಾಲಯದ ಹತ್ತಿರ ಎಲ್ಲಿಯೋ ಯುದ್ಧವಂತೆ. ಅದಕ್ಕಾಗಿ ಇಲ್ಲಿ ದುಡ್ಡು ಕೂಡಿಸುವ ಗದ್ದಲ. ಇಪ್ಪತ್ತು ವರ್ಷಗಳಿಗೆ ಹಿಂದೆಯೂ ತಮ್ಮ ಗಂಡ ಹೀಗೆಯೇ ಮಾಡಿದ್ದರು. ಆಗ ಲೋಕದಲ್ಲಿ ಎಲ್ಲಿಯೋ ಒಂದು ಕಡೆ ಯುದ್ಧ ನಡೆದಿತ್ತು. ಅದಕ್ಕಾಗಿ ಈ ಊರಲ್ಲಿ ಒತ್ತಾಯದಿಂದ ಹಣ ಕೂಡಿಸಲಾಗಿತ್ತು. ಆ ದಿನಗಳಲ್ಲಿ ತ್ರಿವರ್ಣಧ್ವಜದವರನ್ನು ಗಂಡ ಹೀಗಳೆಯುತ್ತಿದ್ದರು. ಜಯ ರಾಮು ಒಮ್ಮೆ ಅವರ ಕೈಯಲ್ಲಿ ಕಿವಿ ಹಿಂಡಿಸಿಕೊಂಡಿದ್ದ. ಈಗಲೋ ಮೂರು ಬಣ್ಣಗಳ ಬಾವುಟವೆಂದರೆ ಬೀಸುವ ಚಾಮರವಿದ್ದ ಹಾಗೆ ಇವರಿಗೆ.

ದಸರೆಯ ಹುಲಿವೇಷದಂತೆ ರಸ್ತೆಯಲ್ಲಿ ಹೋಗಿ ಹಣ ಸಂಗ್ರಹಿಸಿದ್ದಂತೂ ವಿಚಿತ್ರ ಸಂಗತಿ. ಅದರ 'ಸಿನೆಮಾ' ನೋಡಲು ಮಗಳು ತಮ್ಮನ್ನು ಕರೆ ದೊಯ್ದಳಲ್ಲ? ಆ 'ಸಿನೆಮಾ'ದಲ್ಲಿ ಗಂಡಸರ ಜತೆ ಜಯಶ್ರೀಯೂ ಕುಣಿದಿದ್ದ ಳಲ್ಲ! ಇವಳು ಮಾನಗೆಟ್ಟ ಹೆಣ್ಣು ಅಂತ ಗಂಡು ಹೆತ್ತವರು ನಾಳೆ ಉಪೇಕ್ಷಿ ಸಿದರೆ? ಪಾರ್ಟಿ ಮಾಡುವ ಹುಡುಗಿ ಯಾರಿಗೆ ತಾನೇ ಇಷ್ಟವಾಗಬಹುದು? ಮಗಳದೇನೋ ಹುಡುಗು ಬುದ್ಧಿ. ಆದರೆ ತಂದೆಯೆನಿಸಿದ ವ್ಯಕ್ತಿಗೂ ವಿವೇ ಚನೆ ಇಲ್ಲವೆಂದರೆ?

ಯಾವ ದುಸ್ಥಿತಿಯನ್ನು ತಂದೊಡ್ಡುವುದಕ್ಕೋಸ್ಕರ ದೇವರು ಇಂತಹ ಆಟಗಳನ್ನು ಆಡಿಸುತ್ತಿರುವನೊ? ಯಾವ ಘಳಿಗೆಯಲ್ಲಿ ಈ ಅರಗಿನ ಮನೆ ಉರಿ ಯುವುದೊ?

ಐವತ್ತು ವರ್ಷಗಳ ಆಯುಸ್ಸಿನಲ್ಲಿ ಎಷ್ಟು ಸುಖ ಉಂಡೆವು ತಾವು? ಒಪ್ಪೊ ತ್ತಿನ ಊಟದ ಹಳೆಯ ದಿನಗಳಲ್ಲೇ ಒಂದು ಬಗೆಯ ಆನಂದವಿದ್ದಿತಲ್ಲವೆ?

......ಮುಗಿಯದ ವೇಳೆ. ಮುಗಿಯದ ಯೋಚನೆಗಳು.

ಶ್ರೀಕಂಠಯ್ಯನವರ ಕೋಣೆಯಿಂದ ಗೊರಕೆಯ ಸದ್ದು ಕೇಳಿಸುತ್ತಿತ್ತು. ಹಗಲೆಲ್ಲ ಹತ್ತಾರು ಜನರನ್ನು ಗೋಳಾಡಿಸಿ ರಾತ್ರೆ ಸುಖವಾಗಿ ನಿದ್ದೆಹೋಗುವ ಇವರು ಪುಣ್ಯಪುರುಷ.

ಕಮಲಮ್ಮ ಎದ್ದು, ಹೊರಗಿನಿಂದ ತೂರಿಬರುತ್ತಿದ್ದ ವಿದ್ಯುದ್ದೀಪದ ನಸುಬೆಳಕಿನ ನೆರವಿನಿಂದಲೆ ಬಚ್ಚಲು ಮನೆಯ ತನಕ ಹೋಗಿ ಬಂದು, ಹಾಸಿಗೆಯನ್ನು ಮಡಚಿ ಎತ್ತಿ ನೆಲದ ಮೇಲೆ ಹಾಸಿ, ಮಲಗಿಕೊಂಡರು.

ಸ್ವಲ್ಪ ಹೊತ್ತಿನಲ್ಲೆ ಅವರಿಗೆ ನಿದ್ದೆ ಬಂತು.

....

ಕೆಲವು ದಿನಗಳ ಅನಂತರದ ಒಂದು ಇರುಳು. ಶ್ರೀಸದನ ನಿದ್ರಿಸುತ್ತಿತ್ತು.

ಜಯಶ್ರೀ ಕನಸು ಕಾಣುತ್ತಿದ್ದಳು. ಅದೊಂದು ಆಟ ನಳಿನಿಯ ಜತೆ.

ನಳಿನಿ ಕೇಳಿದಳು:

"ಮುಟ್ಟಿ ನೋಡು ಪುಟಿಯುತ್ತೆ ಅಲ್ಲವಾ?"

"ಏನದು?"

"ಒಂದು ತರಹೆ ದಿಂಬು. ಊದಿದರೆ ಉಬ್ಬಿಕೊಳ್ಳುತ್ತೆ. ಬೇಡ ಅನಿಸಿದಾಗ ಚಪ್ಪಟೆ."

ಜಯಶ್ರೀ ಪರೀಕ್ಷಿಸ ಬಯಸಿದಳು. ನಳಿನಿ ನಗುತ್ತ, ಕೊಡದೆ, ಅದನ್ನು ಎದೆಗೆ ಬಿಗಿಯಾಗಿ ಹಿಡಿದುಕೊಳ್ಳಬೇಕೆ?

ಕೈಹಾಕಿ ಜಯಶ್ರೀ ಅದನ್ನೆಳೆದುಕೊಂಡಳು. ನಳಿನಿಯದು ಬಿಗಿ ಹಿಡಿತ. ನಗುತ್ತ ಇಬ್ಬರೂ ಒಬ್ಬರೊಬ್ಬರ ಮೇಲೆ ಬಿದ್ದು ಉರುಳಿದರು. ಅವರ ಒತ್ತಡಕ್ಕೆ ದಿಂಬಿನ ಗಾಳಿ ಠುಸ್ಸೆಂದು ಹೊರಟು ಹೋಯಿತು.

"ಅಯ್ಯೋ!"

—ಎಂದಳು ಜಯಶ್ರೀ.

ಅವಳಿಗೆ ಎಚ್ಚರವಾಯಿತು. ಮಲಗಿದ್ದುದು ಡನ್ಲೊಪಿಲ್ಲೊ ಹಾಸಿಗೆಯ ಮೇಲೆ. ದೇಹ ಅಂಕುಡೊಂಕಾಗಿತ್ತು. ಹೊರಳಾಡಿದ್ದುದು ನಿಜ. ಆದರೆ ನಳಿನಿ ಇರಲಿಲ್ಲ. ಕತ್ತಲು. ಇದು ತನ್ನ ಮನೆ.

ತನಗೆ ಕನಸು ಬಿದ್ದಿತ್ತು. ತಮಾಷೆ ಕನಸು. ನಾಳೆ ನಳಿನಿಗೆ ಅದನ್ನು ಹೇಳಬೇಕು.

ಜಡವಾದ ಕಣ್ಣೆವೆಗಳು ಮತ್ತೆ ಮುಚ್ಚಿಕೊಳ್ಳಲು ಜಯಶ್ರೀ ಮುಗುಳುನಕ್ಕಳು. ನಿದ್ದೆ ಮತ್ತೆ ಮೋಡಿ ಬೀಸಿತು.

......ಬೆಳಗ್ಗೆ ಎದ್ದಾಗ ಜಯಶ್ರೀ ತಲೆಗೂದಲನ್ನು ಹಿಂದಕ್ಕೆ ತಳ್ಳಿ ಸರಳ

ಗಂಟಿನ ತುರುಬು ಕಟ್ಟುತ್ತ, ರಾತ್ರೆ ತನಗೊಂದು ಕನಸು ಬಿತ್ತಲ್ಲ—ಅದು ಯಾವುದು ಎಂದು ಸ್ಮರಿಸಿಕೊಳ್ಳಲು ಯತ್ನಿಸಿದಳು. ಕ್ರಮೇಣ ನೆನಪಾಗಿ ನಗು ಬಂತು. ಮನಶ್ಶಾಸ್ತ್ರದ ಪ್ರಾಧ್ಯಾಪಿಕೆ ಹೇಳಿದ್ದರಲ್ಲ, ಪ್ರತಿಯೊಂದು ಕನಸಿಗೂ ಒಂದರ್ಥವಿದೆ— ಎಂದು? ಇದರದೇನು ಅರ್ಥವೊ? ಅವರಿಗೆ ಹೇಳಬೇಕು. ಅಸಹ್ಯವಾದ ಅರ್ಥವನ್ನೇನಾದರೂ ಅವರು ತಿಳಿಸಿ, ತರಗತಿಯಲ್ಲಿ ತಾನು ಅಪಹಾಸ್ಯಕ್ಕೆ ಗುರಿಯಾದರೆ? ಸುಮ್ಮನಿರುವುದು ಮೇಲು. ನಳಿನಿಯೊಬ್ಬಳಿಗೆ ಹೇಳಿದರಾಯಿತು.

ನಳಿನಿ ಮತ್ತು ತಾನು ಚರ್ಚಿಸಿ ಆ ಕನಸಿನ ಅರ್ಥ ಕಂಡುಹಿಡಿಯುವುದು ಸಾಧ್ಯ. ನಳಿನಿ ಗೆಳತಿಯಾಗಿ ದೊರೆತಿರುವುದು ತನ್ನ ಭಾಗ್ಯ. ಅವಳೊಡನೆ ಯಾವ ಮುಚ್ಚುಮರೆಯೂ ಇಲ್ಲದೆ ಮಾತನಾಡಬಹುದು. ಅವಳಂತೂ ಸೂಕ್ಷ್ಮಮತಿ. ತಾನು ಏನನ್ನಾದರೂ ಮರೆಮಾಚಲೆತ್ನಿಸಿದರೆ ಅವಳು ಬಿಡುವಳೆ?

ಆದಿನ 'ಲೊಲಿಟಾ' ಕೊಟ್ಟಾಗ ಅವಳೆಂದಿದ್ದಳು:

"ಮೊನ್ನೆ ನಿನಗೆ ತಲೆನೋವು ಬಂದಿತ್ತು ನೋಡು. ಅದರರ್ಥ ಈಗ ತಿಳೀತು."

"ಹೋಗಲಿ ಬಿಡು. ಮನಸ್ಸಿದ್ದರೆ ಓದು."

"ಆಗಲಿ ಜಯಮ್ಮನವರೇ. ಓದಿ ನೋಡ್ತೇನೆ."

ನಳಿನಿ ಆ ಪುಸ್ತಕವನ್ನೋದಿ ಮುಗಿಸಿದ ಮೇಲೆ ಅದನ್ನು ಕುರಿತು ಅವರು ನಡೆಸಿದ ಚರ್ಚೆ ಇಬ್ಬರಿಗೂ ಅದೆಂತಹ ತೃಪ್ತಿಯನ್ನು ನೀಡಿತು!

ನಳಿನಿ ಅಂದಳು:

"ನಮ್ಮ ಒಳಗಡೆ ಆಳದಲ್ಲಿ ಎಷ್ಟೋ ಬಯಕೆಗಳಿರ್ತವೆ. ನಮ್ಮ ಸಹಜೀವಿಗಳಿಗೆ ಹೆದರಿ ಅವುಗಳನ್ನ ಹತ್ತಿಕ್ತೇವೆ. ನಮ್ಮ ನಮ್ಮಲ್ಲೇ ಕೊರಗ್ತೇವೆ. ಪರಿಣಾಮವಾಗಿ ಮಾನಸಿಕ ರೋಗಿಗಳಾಗ್ತೇವೆ."

ತಿಳುವಳಿಕೆಯ ಪ್ರಪಂಚದೊಳಕ್ಕೆ ಮೆಲ್ಲ ಮೆಲ್ಲನೆ ಕಾಲಿಡುತ್ತ, ನಳಿನಿ ಆಡಿದ ಪ್ರತಿಯೊಂದು ಪದವನ್ನೂ ದೀರ್ಘಕಾಲದಿಂದ ಹಸಿದಿದ್ದವಳಂತೆ ಜಯಶ್ರೀ ನುಂಗಿದಳು.

ತಾನೇ ಸ್ವತಃ ಸಂಶೋಧಿಸಿದ ಒಂದು ಸತ್ಯಾಂಶವೆನ್ನುವಂತೆ ನಳಿನಿ ಅಂದಳು:

"ಪಶ್ಚಿಮದ ರಾಷ್ಟ್ರಗಳಲ್ಲಿ ಹುಡುಗಿಯರು ಬೇಗನೆ ಪ್ರಬುದ್ಧೆಯರಾಗ್ತಾರೆ. ನಮ್ಮಲ್ಲಿ ಇಪ್ಪತ್ತು ದಾಟಿದರೂ ನಾವು ಹಸುಳೆಗಳೇ."

ಬೇರೊಂದು ಸಂದರ್ಭದಲ್ಲಿ ಜಯಶ್ರೀ ಗೆಳತಿಯನ್ನು ಕೇಳಿದಳು:

"ಪರೀಕ್ಷೆ ಅಂದರೆ ನನಗೆ ಭಯ. ಎರಡು ಮೂರು ತಿಂಗಳು ಇದೆ ಅನ್ನು ವಾಗಲೇ ಜಾಯಿಂಟ್ ಸ್ಟಡಿ ಶುರುಮಾಡೋಣವೇನೆ? ಒಂದು ವಾರ ನಮ್ಮ ನೇಲಿ, ಒಂದು ವಾರ ನಿಮ್ಮನೇಲಿ."

"ಓ ಯೆಸ್, ಅಗತ್ಯವಾಗಿ,"

—ಎಂದಳು ನಳಿನಿ.

ಆದರೆ ದೇಶದ ಮೇಲೆ ಚೀಣೀ ಆಕ್ರಮಣ ನಡೆದು ಗಂಡಾಂತರದ ಪರಿಸ್ಥಿತಿ ಘೋಷಿಸಲ್ಪಟ್ಟಾಗ, ಚಟುವಟಿಕೆಯ ಮತ್ತೊಂದು ಲೋಕ ಜಯಶ್ರೀಯ ಮುಂದೆ ತೆರೆದುಕೊಂಡಿತು.

ಗೆಳತಿಯನ್ನು ಆಕೆ ಕೇಳಿದಳು:

"ಯುದ್ಧ ನಿಲ್ಲದೇ ಇದ್ರೆ, ಈ ವರ್ಷ ಪಬ್ಲಿಕ್ ಪರೀಕ್ಷೆ ಇರೊಲ್ಲ ಅಲ್ವೇನೆ?"

"ಎಲ್ಲರಿಗೂ ಡಿಗ್ರಿ ಕೊಟ್ಬಿಡ್ತಾರೆ ಅಂತಲೋ ನೀನು ಹೇಳೋದು?"

"ಕೊಡೋಕಾಗೊಲ್ವ?"

"ಗೊತ್ತಿಲ್ಲವಮ್ಮ. ಲೀಗಲ್ ಪಾಯಿಂಟು. ನಿನ್ನ ತ್ಯಾಗರಾಜರನ್ನ ಕೇಳು!"

ಗೌಹಾತಿ ವಿಶ್ವವಿದ್ಯಾನಿಲಯವನ್ನು ಮುಚ್ಚಿದ್ದರು; ಪರಿಸ್ಥಿತಿ ವಿಷಮಿಸಿದರೆ ಬೇರೆ ವಿಶ್ವವಿದ್ಯಾನಿಲಯಗಳನ್ನೂ ಮುಚ್ಚಬಹುದು—ಎಂದೂ ನಳಿನಿ ನುಡಿದಳು.

ವೇಲಾಂಗ್, ಬೊಮ್ಡಿ-ಲಾ, ಸೇ-ಲಾ ಅವು ಎಲ್ಲಿವೆಯೋ ಯಾರು ಬಲ್ಲರು? ನಕಾಶೆ ನೋಡಿ ತಿಳಿದುಕೊಳ್ಳಬೇಕೆಂಬ ಕುತೂಹಲ ಜಯಶ್ರೀಗೆ ಇರಲಿಲ್ಲ. ಆದರೆ ಸುತ್ತಲೂ ಕೇಳಿ ಬರತೊಡಗಿದ ಕೂಗಾಟಗಳಲ್ಲಿ, ಜಯ ಘೋಷಗಳಲ್ಲಿ, ಅವಳ ಆಸಕ್ತಿ ಕೆರಳಿತು. ಹೊಸ ಪಾತ್ರದಲ್ಲಿ ತನ್ನ ತಂದೆಯನ್ನು ಕಂಡು ಅವಳಿಗೆ ಅಭಿಮಾನವೆನಿಸಿತು.

ಸೋಮನಾಥನನ್ನು ತನ್ನ ಮನೆಯಲ್ಲಿ ಮೊದಲು ನೋಡಿದಾಗ, ಪರಿಚಿತ ಮುಖ; ಈ ಮೊದಲು ಎಲ್ಲಿ ಕಂಡಿದೀನಿ?—ಎಂದು ತನ್ನನ್ನೇ ಜಯಶ್ರೀ ಕೇಳಿಕೊಂಡಳು.

ಕಳೆದ ವರ್ಷ ಅಂತರ ಕಾಲೇಜುಗಳ ವಾಕ್‌ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ ಯುವಕ.

ಸಮಯ ಸಾಧಿಸಿ ಜಯಶ್ರೀ ಆತನೆದುರು ಕಾಣಿಸಿಕೊಂಡು, ಸಾಹುಕಾರರ ಮಗಳಿಗೆ ಆತ ಸಲ್ಲಿಸಿದ ವಂದನೆಯನ್ನು ಸ್ವೀಕರಿಸಿದಳು.

"ನಿಮ್ಮನ್ನು ನಾನು ಮುಂಚೇನೇ ನೋಡಿದೀನಿ,"

—ಎಂದಳು.

ಸೋಮನಾಥನ ಗಂಡುತನ ನಕ್ಕಿತು. ಆತ ಸುಳ್ಳಾಡಿದ:

"ನಾನೂ ನಿಮ್ಮನ್ನು ನೋಡಿದೀನಿ, ಅನಿಸುತ್ತೆ."

"ಹೋದ ಸಲದ ವಾಕ್‌ಸ್ಪರ್ಧೆಯಲ್ಲಿ ನಿಮ್ಮ ಭಾಷಣ ಚೆನ್ನಾಗಿತ್ತು."

"ಹ್ಞಾ, ಈಗ ತಿಳೀತು. ನೀವು ಮೊದಲ್ನೇ ಸಾಲ್ನಲ್ಲಿ ಕೂತಿದ್ದಿರಿ."

"ಇಲ್ಲ, ಎರಡನೇ ಸಾಲ್ನಲ್ಲಿ ಕೊನೇಲಿದ್ದೆ."

ಗುರಿ ತಪ್ಪಿತೆಂದು ಅಳುಕದೆ ಸೋಮನಾಥನೆಂದ:

"ಹೌದು, ಹೌದು ! ನೆನಪಿದೆ !"

ಜಯಶ್ರೀಗೆ ಹೆಮ್ಮೆ ಎನಿಸಿತು. 'ನೀನು ಅನುಪಮ ಲಾವಣ್ಯವತಿ' ಎಂಬ ಪ್ರಶಂಸೆಗೆ ಸಮನಾಗಿತ್ತು, ಆತ ನೋಡಿ ಮರೆತಿರಲಿಲ್ಲವೆಂಬ ಅಂಶ.

ಶ್ರೀಕಂಠಯ್ಯನವರಿಲ್ಲದ ವೇಳೆಯಲ್ಲಿ ಏನಾದರೂ ನೆಪಮಾಡಿಕೊಂಡು ಜಯಶ್ರೀ, ರಕ್ಷಣಾನಿಧಿ ಸಮಿತಿಯ ಕಚೇರಿಯಿದ್ದ ಕೋಣೆಯ ಮುಂದುಗಡೆ ಯಿಂದ ಅತ್ತಿತ್ತ ಹಾಯುತ್ತಿದ್ದಳು. ಸಣ್ಣ ಪುಟ್ಟ ಸಂಭಾಷಣೆಗಳಾಗುತ್ತಿದ್ದುವು ಸೋಮನಾಥ ಮತ್ತು ಆಕೆಯ ನಡುವೆ.

ಎಲ್ಲಿ ಹೇಗೆ ವರ್ತಿಸಬೇಕೆಂಬ ವಿಷಯದಲ್ಲಿ ಸಾಕಷ್ಟು ಅನುಭವಿಯಾಗಿದ್ದ ಸೋಮನಾಥ ಅವಳೊಡನೆ ಗಂಭೀರವಾಗಿಯೆ ನಡೆದುಕೊಳ್ಳುತ್ತಿದ್ದ.

ಅವರಿಬ್ಬರ ನಡುವೆ ಸಮೀಪದ ಸಂಪರ್ಕ ಬಂದುದು ನಿಧಿ ಸಂಗ್ರಹದ ಪಾದಯಾತ್ರೆಯ ಸಮಯದಲ್ಲಿ. ಯಾತ್ರೆಯುದ್ದಕ್ಕೂ ಸಾಹುಕಾರರು ಮತ್ತು ಆಕೆಯ ಹಿಂದೆಯೇ ಸೋಮನಾಥನಿದ್ದ. ನೂಕು ನುಗ್ಗಲು ಹೆಚ್ಚಿದಾಗ, ಯಾರೂ ಜಯಶ್ರೀಯ ಮೈಮುಟ್ಟದಂತೆ ಆತ ಅಂಗರಕ್ಷಕನಾಗಿದ್ದ.

"ನೀವಿದ್ದದ್ರಿಂದ ಆಯ್ತು. ಇಲ್ದೇಹೋಗಿದ್ರೆ ಅಪ್ಪಚ್ಚಿಯಾಗ್ಬಿಡ್ತಿದ್ದೆ,"

—ಎಂದಳು ಜಯಶ್ರೀ, ಮೈ ಕೈ ನೋವಿಗಾಗಿ ಲಚ್ಚಿಯ ಕೈಯಲ್ಲಿ ಎಣ್ಣೆ ಯುಜ್ಜಿಸಿಕೊಂಡು ಬಿಸಿನೀರಿನ ಸ್ನಾನ ಮಾಡಿದ ಬಳಿಕ.

"ನಮ್ಮ ಜನ ಅನಾಗರಿಕರು. ಅವರಿಗೆ ಶಿಸ್ತು ಅನ್ನೋದೇ ತಿಳೀದು,"

—ಎಂದ ಸೋಮನಾಥ.

ನ್ಯೂಸ್‌ರೀಲ್ ನೋಡಿದ ಬಳಿಕ ಅವನೆಂದ:

"ಜಯಶ್ರೀ, ಮುಖಸ್ತುತಿ ಅಂತ ಭಾವಿಸ್ಬೇಡಿ. You look splendid, so natural, so human."

ಕತ್ತು ಕೊಂಕಿಸಿ ಮಾದಕನಗೆ ನಕ್ಕು ಜಯಶ್ರೀ ಅಂದಳು:

"ಅದರಲ್ಲಿ ನೀವೂ ಚೆನ್ನಾಗಿಯೇ ಕಾಣಿಸ್ತೀರಿ......"

ಆ ಪಾದಯಾತ್ರೆಗೆ ನಳಿನಿಯನ್ನೂ ಕರೆದೊಯ್ಯುವ ಇಚ್ಛೆ ಜಯಶ್ರೀಗಿತ್ತು.

"ಬಾರೇ. ದೇಶಕ್ಕೋಸ್ಕರ,"

—ಎಂದಿದ್ದಳು.

"ಇಲ್ಲಮ್ಮ. ನೀನು ಲೀಡರ್ ಮಗಳು. ಏನು ಬೇಕಾದರೂ ಮಾಡಬಹುದು. ನಾನು ಅಧಿಕಾರಿಯ ಮಗಳು. ಡ್ಯಾಡಿ ಒಪ್ಪೊಲ್ಲ. ಕಾಲೇಜ್ನಲ್ಲೇ ಸಂಗ್ರಹಿಸಿ ಅಳಿಲ ಸೇವೆ ಸಲ್ಲಿಸ್ತೀನಿ,"

—ಎಂದು ಉತ್ತರವಿತ್ತಿದ್ದಳು ನಳಿನಿ.

ಸೋಮನಾಥ ಮಾತ್ರ ಅವಳ ಕೀಟಲೆಗೆ ವಸ್ತುವಾಗಿದ್ದ.

"ನಾಥ್ ನನಗೆ ಗೊತ್ತಿಲ್ವೆ? ಸೀನಿಯರ್ ಹುಡುಗೀರು ಅವನನ್ನ ರೋಮಿಯೋ ಅಂತ ಕರೀತಿದ್ರು. ಸ್ವಲ್ಪ ಹುಷಾರಿ!"

ಆ ಮಾಹಿತಿಯಿಂದ ಜಯಶ್ರೀ ಸಂತುಷ್ಟಳಾಗಿದ್ದಳು.

"ರೋಮಿಯೋನಂತೆ. ಶುದ್ಧ ಅರಸಿಕ! ತಲೆ ಎತ್ತಿ ಮಾತನಾಡೊಲ್ಲ."

"ಆಗಲಿ ನೋಡೋಣ."

"ಬಾ, ಪರಿಚಯ ಮಾಡ್ಕೊಡ್ತೀನಿ."

"ಯಾಕಮ್ಮ ಅವಸರ? ಖಂಡಿತ ಬರ್ತೀನಿ ಇನ್ನೊಂದು ದಿವಸ ಯಾವತ್ತಾದರೂ......"

......ಲಚ್ಚಿ ಮೊದಲ ದಿನ ಹೇಳಿದಳು:

"ಚೆಂದಾಕವ್ರೆ."

"ಯಾರೆ?"

"ಆಯಪ್ಪ. ಕೂಟರ್ ಮ್ಯಾಕೆ ಬತ್ತಾರಲ್ಲಾ—ಒಸಬ."

"ಅವರ ಚಂದ ತಗೊಂಡು ನೀನೇನ್ಮಾಡ್ತೀಯೆ? ನಾಚ್ಕೇನೂ ಇಲ್ವಲ್ಲೆ ನಿಂಗೆ!

ನಾಚಿಕೆ ಇತ್ತು. ಎರಡೇ ದಿನಗಳ ಬಳಿಕ ಅವಳು ದೂರು ತಂದಿದ್ದಳು.

"ಆಯಪ್ಪ ದುರ್ದುರ್ನೆ ನೋಡ್ತಾರಮ್ಮಣ್ಣಿ. ಎಂಗೆಂಗೋ ಆಯ್ತದೆ."

"ಲಚ್ಚಿಯ ವಿಷಯದಲ್ಲಿ ಗಾಂಭೀರ್ಯದ ಮುಖವಾಡ ಅಗತ್ಯವೆಂದು ಸೋಮನಾಥನಿಗೆ ಅನಿಸಿರಲಿಲ್ಲ. ಅವನ ಕಣ್ಣುಗಳ ಹಸಿವಿಗೆ ಅವಳ ಸೊಬಗು ಒಳ್ಳೆಯ ಆಹಾರವಾಗಿತ್ತು.

ಜಯಶ್ರೀ ಛೀಮಾರಿ ಹಾಕಿದ್ದಳು ಲಚ್ಚಿಗೆ:

"ನೀನು ಲಜ್ಜೆಗೆಟ್ಟವಳು. ವೈಯಾರ ಮಾಡ್ಕೊಂಡು ಅವರ ಮುಂದೆ ಹೋಗಿ ನಿಂತ್ಕೊಳ್ತಿ, ಅಲ್ವಾ? ತಾಳು, ಅಮ್ಮನಿಗೆ ಹೇಳ್ತೀನಿ."

ಲಚ್ಚಿ ದೈನ್ಯ ನಟಿಸಿದಳು:

"ಬ್ಯಾಡಿ ಜಯಮ್ನೋರೆ. ಹಿಂಥಾದೆಲ್ಲ ದೊಡ್ಡೋರ್ತಾವ ಯೋಳೋ ಕಾತದಾ?"

"ಸರಿ ಮತ್ತೆ. ನೀನು ಅವರ ತಂಟೆಗೆ ಹೋಗ್ಬೇಡ."

"ನೀವು?"

ಲಚ್ಚಿಯ ಕಣ್ಣುಗಳಲ್ಲಿ ತುಂಟತನ ತುಳುಕಿತು.

ಜಯಶ್ರೀ ಸಿಟ್ಟಾಗಿ ಅವಳ ತಲೆಗೂದಲು ಹಿಡಿದು ಜಗ್ಗಿದಳು.

"ಬಿಡ್ರಮ್ಮೋ,"

—ಎನ್ನುತ್ತ, ಲಚ್ಚಿ, ಅಡಿತಪ್ಪಿದಂತಾಗಲು ಒಡತಿಯ ಮೇಲೆ ಎರಗಿ ಅವಳ ಭುಜಗಳನ್ನು ತನ್ನ ಬಾಹುಗಳಿಂದ ಬಳಸಿದಳು.

ಭಾರ ತಡೆಯಲಾಗದೆ ಜಯಶ್ರೀ ಹಾಸಿಗೆಯ ಮೇಲೆ ಬಿದ್ದಳು. ಅಪ್ಪುಗೆಯಿಂದ ಒಡತಿಯನ್ನು ಮುಕ್ತಳನ್ನಾಗಿ ಮಾಡಿ ಲಚ್ಚಿ ಎದ್ದಳು.

"ಕತ್ತೆ! ಕತ್ತೆ!"

—ಎನ್ನುತ್ತ ಜಯಶ್ರೀ ಲಚ್ಚಿಯನ್ನು ಒದೆದಳು.

"ಕಾಲು ಜಾರ್ತು. ನಾ ಏನ್ಮಾಡ್ಲಿ?"

—ಎಂದಳು ಲಚ್ಚಿ.

"ಕಾಲು ಜಾರುತ್ತೆ ನಿಂಗೆ! ಜಾರುತ್ತೆ ಕಾಲು!"

—ಎನ್ನುತ್ತ ಜಯಶ್ರೀ ಮತ್ತೂ ಒದೆದಳು.

ಪಾದಗಳಿಗೆ ನೋವಾಯಿತು. ಆದರೆ ಆ ಘಟನೆಯಿಂದ ಅವಳಿಗೆ ಹಿತವೆನಿಸಿತು......

......ಈ ಬೆಳಗ್ಗೆ ಎದ್ದ ಜಯಶ್ರೀ, ಕೆಳಗಿಳಿದು, ಹಜಾರವನ್ನು ದಾಟಿ, ಸೇವಕಿಯನ್ನು ಕರೆದಳು:

"ಲಚ್ಚೀ, ಲಚ್ಚೀ, ಎಲ್ಲಿದೀಯಾ? ನನ್ನ ಸೀರೆ ಇಸ್ತ್ರಿ ಮಾಡ್ಕೊಡು."

ಆ ಘಳಿಗೆಯಲ್ಲಿ ಲಚ್ಚಿ ಚಿಕ್ಕಣ್ಣನೊಡನೆ ಮಾತನಾಡುತ್ತ ಶೆಡ್ಡಿನ ಬಳಿ ನಿಂತಿದ್ದಳು.

"ಇವತ್ತು ಯಾಕಿಷ್ಟು ಜಲ್ದಿ ಬಂದೆ?"

"ಕಾರು ಕ್ಲೀನ್ ಮಾಡೋದು ಬೇಡವಾ?"

"ಅದಕ್ಬಂದಾ—ಯಾರಾದರೂ ಸಿಕ್ಕರೆ ಲಲ್ಲೆ ಒಡ್ಯೋಣ ಅಂತ ಬಂದಾ?"

ಚಿಕ್ಕಣ್ಣ ಅತ್ತಿತ್ತ ನೋಡಿ, ಬಕೀಟಿನಿಂದ ಅಂಗೈಯಲ್ಲಿ ಕೊಳೆ ನೀರನ್ನೆತ್ತಿ ಲಚ್ಚಿಯತ್ತ ಎರಚಿದ. ಅವಳು ಸರಕ್ಕನೆ ಬಾಗಿ ತಪ್ಪಿಸಿಕೊಂಡಳು.

"ಇದೇನಾ ಕಾರು ತೊಳ್ಯೋದು ನೀನು? ಜಯಾಮ್ನೋರಿಗೆ ಯೋಳ್ತೀನಿ. ನಿನ್ನ ಕೆಲಸ್ದಿಂದ ತೆಗೆದ್ಹಾಕ್ತಾರೆ,"

—ಎಂದು ಲಚ್ಚಿ ಸುಳ್ಳು ಬೆದರಿಕೆಯ ಮಾತನ್ನಾಡಿದಳು.

ಬಿರುಸಾಗಿ ಕಾರಿನ ಮೈ ಒರೆಸುತ್ತ ಚಿಕ್ಕಣ್ಣನೆಂದ:

"ಓ ನಾಯೇನೂ ಎದರಾಕಿಲ್ಲ. ಡ್ರೈವರ್‌ಗಳನ್ನ ಭರ್ತಿ ಮಾಡ್ಕೊಂತವರೆ, ಯುದ್ಧಕ್ಕೆ ಒಂಟೊಗ್ತೀನಿ."

"ಯುದ್ಧಕ್ಕೋಗ್ತಾನಂತೆ! ಮೂರೆ ಲಕ್ಷಣ ನೋಡಿದ್ರೆ ಗೊತ್ತಾಗಾಕಿಲ್ವ?"

ಜಯಶ್ರೀ ಉತ್ತರ ಬರಲಿಲ್ಲವೆಂದು ಹಿಂಬಾಗಿಲ ಹೊಸ್ತಿಲ ಮೇಲೆ ನಿಂತು ಸೇವಕಿಯನ್ನು ಮತ್ತೆ ಕರೆದಳು:

"ಲಚ್ಚೀ! ಏ ಲಚ್ಚೀ!"

"ಬಿಗಿಲ್ ಕೇಳಸ್ತೇತೆ. ಓತೀನಿ ಡ್ರೈವರಪ್ಪ,"

—ಎಂದು ನುಡಿದು, ಮೇಕೆ ಮರಿಯಂತೆ ಕುಪ್ಪಳಿಸುತ್ತ ಲಚ್ಚಿ ಹೊರಟು ಹೋದಳು.

......ಯುದ್ಧದ ಮಾತನ್ನು ಚಿಕ್ಕಣ್ಣನೂ ಆಡುತ್ತಿದ್ದ; ಅಜೀಜನೂ ಆಡುತಿದ್ದ. ಜಗ್ಗನಿಗೂ ಕೇಳಿ ತಿಳಿಯುವ ತವಕ. ಬಂಗಲೆಗೆ ಬರಹೋಗುವವರ ಸಂಖ್ಯೆ ಹೆಚ್ಚಿದೆ; ಈ ಜನ ಹೂವಿನ ಗಿಡಗಳನ್ನು ತುಳಿದರೂ ತುಳಿದರೇ; ಇನ್ನು ಹೆಚ್ಚು ಜಾಗರೂಕನಾಗಿರಬೇಕು—ಎಂದುಕೊಂಡು, ಮಾರಣ್ಣ ಕೇಳುತ್ತಿದ್ದ:

"ಏನ್ಸಮಾಸಾರ? ಏನ್ಕತೆ ಯುದ್ದದ್ದು?"

ಅಜೀಜ್ ಪತ್ರಿಕೆಯೋದುತ್ತಿರಲಿಲ್ಲವಾದರೂ ವಾರ್ತಾಪ್ರಜ್ಞೆ ಇದ್ದವನು.

ಸುದ್ದಿ ಸಂಗ್ರಹದಲ್ಲಿ ಅವನು ನಿಪುಣ. ಸಾಹುಕಾರರ ವಾಹನದ ಚಾಲಕನೆಂದ ಮೇಲೆ ಅವನು ಅಜ್ಞನಾಗಿರುವುದು ಹೇಗೆ ಸಾಧ್ಯ? ಅಲ್ಲದೆ, ಯುದ್ಧ–ಲಡಾಯಿ –ಎಂದರಂತೂ ಅವನ ಕಿವಿ ನೆಟ್ಟಗೆ. ಆತನ ತಂದೆ ಮಿಲಿಟರಿಯಲ್ಲಿ ಸಿಪಾಯಿ ಯಾಗಿದ್ದವನು. ಸಮಯ ಬಂದರೆ ತಾನೂ ಹೊರಟೆನೇ–ಎನ್ನುವುದು ಅಜೀಜನ ಈಗಿನ ಪಲ್ಲವಿ.

ಅವರೊಡನೆ ಹರಟೆಗೆ ಆಗೊಮ್ಮೆ ಈಗೊಮ್ಮೆ ರಕ್ಷಣಾನಿಧಿ ಸಮಿತಿಯ ಕಚೇರಿಯ ಜವಾನನೂ ಸೇರಿಕೊಳ್ಳುತ್ತಿದ್ದ.

ಇವರೆಲ್ಲರ ಆಸಕ್ತಿಗೊಂದು ನಿರ್ದಿಷ್ಟ ರೂಪ ಲಭ್ಯವಾದುದು ತಿಂಗಳ ವೇತನದ ವಿತರಣೆಯ ದಿನ.

ಶಾಂತಮಲ್ಲಪ್ಪನೆಂದ:

"ಸಾಹುಕಾರ್ರು ಹೇಳಿದಾರಪೋ. ಸಂಬಳದಲ್ಲಿ ಮುರಕೊಂಡು ವಾರ್ ಫಂಡಿಗೆ ಕೊಡ್ಬೇಕಂತೆ. ಡ್ರೈವರ್‌ಗಳದ್ದು ಐದೈದು ರೂಪಾಯಿ. ಸಾಮಾನ್ಯ ಕೆಲಸಗಾರರದು ಒಂದೊಂದು ರೂಪಾಯಿ."

ಯಾರೂ ಇದಿರಾಡಲಿಲ್ಲ.

"ತಕಳ್ಳಿ ಸೋಮಿ. ಅದಕ್ಕೇನು?"

–ಎಂದ ಅಜೀಜ್, ಉಳಿದೆಲ್ಲರ ಪರವಾಗಿ.

"ನಾನೂ ಈ ಸರ್ತಿ ಹತ್ತು ರೂಪಾಯಿ ಕೊಡ್ತಿದೀನಿ,"

–ಎಂದ ಶಾಂತಮಲ್ಲಪ್ಪ.

ನಿಧಿ ಸಮಿತಿಯ ಸಿಬ್ಬಂದಿಯೂ ಅದೇ ಬಗೆಯ ತ್ಯಾಗವನ್ನು ಮಾಡಿದರು.

ಈ ವಾರ್ತೆಯನ್ನು ಕುರಿತು ಒಂದು ಪ್ರೆಸ್‌ನೋಟನ್ನು ಸೋಮನಾಥ ಸಿದ್ಧಗೊಳಿಸಿದ......

......ಜಯಶ್ರೀ ಕಾಲೇಜಿಗೆ ಹೊರಡಲು ಅಣಿಯಾಗುತ್ತಿದ್ದ ಆ ಬೆಳಗ್ಗೆ, ಶ್ರೀಕಂಠಯ್ಯ ಸೋಮನಾಥನಿಗೆ ಅಂದರು:

"ನಾನು ಹೊರಗೆ ಹೋಗ್ತೀನಪ್ಪ. ಯಾರಾದರೂ ಫೋನ್ ಮಾಡಿದರೆ ಕಲೆಕ್ಟರನಿಗೆ ಹೋಗಿದಾರೆ ಅನ್ನು. ಸಾಯಂಕಾಲ ನಾನು ವಾಪಾಸು ಬರೋ ತನಕ ಇರು."

"ಆಗಲಿ, ಸರ್."

ತಂದೆ ಹೊರಟುಹೋದ ಬಳಿಕ ಜಯಶ್ರೀ ಫೋನಿನ ಬಳಿ ಬಂದು ಬಹಳ ದಿಟ್ಟತನದ ಕೆಲಸ ಮಾಡಿದಳು.

"ಮಿಸ್ಟರ್ ಸೋಮನಾಥ್, ಸ್ವಲ್ಪ ಡಿರೆಕ್ಟರಿ ನೋಡಿ ಬ್ಯಾರಿಸ್ಟರ್ ತ್ಯಾಗ ರಾಜನ್‌ರ ನಂಬರ್ ತಿಳಿಸ್ತೀರಾ?"

–ಎಂದು ಕೇಳಿದಳು.

ಆತ ನಂಬರ್ ಕೊಟ್ಟಾಗ ಅಲ್ಲಿಗೆ ಫೋನ್ ಮಾಡಿ ಆಕೆ ಅಂದಳು:

"......ಗುರುತು ಸಿಕ್ತಾ? ಯಾರು ಹೇಳಿ?......ಭೇಷ್. ಟೌನ್ ಹಾಲ್ ಫಂಕ್ಷನ್ ಆದ್ಮೇಲೆ ನೀವು ನಾಪತ್ತೆ. 'ಲೊಲಿಟಾ' ಓದಿ ಆಯ್ತೆ?...... ಮಾತಾಡೋಣ, ಮಾತಾಡೋಣ......ಕೋರ್ಟಿದೆಯಾ ಇವತ್ತು?......ಮುಗಿ ಸ್ಕೊಂಡು ಸಾಯಂಕಾಲ ಕಾಲೇಜು ಕಡೆ ಬರ್ತೀರಾ?......ಐದು–ಐದೂವರೆಗೆ ......ನಿಮ್ಮನ್ನ ಏನೋ ಸಲಹೆ ಕೇಳ್ಬೇಕು......ಅಷ್ಟೆ......ಅಪ್ಪಯ್ಯ ಈಗ್ತಾನೆ ಹೊರಗೆ ಹೋದ್ರು......ಬಯ್ ಬಯ್......"

ರಿಸೀವರ್ ಕೆಳಗಿರಿಸಿ ಜಯಶ್ರೀ ಕುಡಿನೋಟದಿಂದ ಸೋಮನಾಥನನ್ನು ನೋಡಿದಳು.

ಆತನ ಹುಬ್ಬುಗಳು ತುಸು ಮೇಲೇರಿದ್ದುವು.

೧೬

ಬಾಗಿಲಿನ ಕರೆಗಂಟೆಯ ಸದ್ದಾಗಿ, ಒಂದು ನಿಮಿಷದ ಬಳಿಕ ಜವಾನ ಬಂದು,

"ಆಸ್ಪತ್ರೆ ಡಾಕ್ಟ್ರು ಬಂದವ್ರೆ."

–ಎಂದು ತಿಳಿಸಿದಾಗ, ಅದೇ ಆಗ ಮುಖಕ್ಷೌರಮಾಡಿಕೊಂಡು ಟವೆಲಿನ ತುದಿಯಿಂದ ಮುಖವನ್ನು ಒತ್ತಿಕೊಳ್ಳುತಿದ್ದ ಡೀನರು, ಯಾರಿರಬಹುದು? ಅಪಾಯಕರ ಸ್ಥಿತಿಯಲ್ಲಿ ನಿನ್ನೆ ಸಂಜೆ ಯಾವ ರೋಗಿ ಇದ್ದ? ಆಸ್ಪತ್ರೆಯಿಂದ ಯಾರೂ ಫೋನ್ ಮಾಡಲಿಲ್ಲವಲ್ಲ......ಎಂದು ಯೋಚಿಸುತ್ತ ಹೊರಗೆ ಬಂದರು. ಅವರ ಕಿವಿಗಳ ಬಳಿ ಕಾಲ್ಗೇಟ್‌ಕ್ರೀಮಿನ ನೊರೆ ಅಂಟಿಕೊಂಡಿತ್ತು. ಅವರಿನ್ನೂ ರಾತ್ರೆಯ ಉಡುಪಿನಲ್ಲಿದ್ದರು. ಭುಜದ ಮೇಲೆ ಟವೆಲಿತ್ತು.

ಜಯರಾಮು ನಮಸ್ಕರಿಸಿದ.

ಮುಗುಳ್ನಕ್ಕು ಡೀನರೆಂದರು:

"ಬನ್ನಿ ಜಯರಾಮು."

ಹಜಾರಕ್ಕೆ ಅವರನ್ನು ಹಿಂಬಾಲಿಸುತ್ತ ಜಯರಾಮು ಅಂದ:

"ನಿಮ್ಮನ್ನ ನೋಡ್ಬೇಕು ಅನಿಸ್ತು, ಸರ್. ಎಂಗೇಜ್‌ಮೆಂಟ್ ಇಲ್ದೇನೇ ಬಂದದ್ದಕ್ಕೆ ಕ್ಷಮಿಸ್ಬೇಕು, ಸರ್."

"ಅಷ್ಟೇ ತಾನೆ? ಕ್ಷಮಿಸೋಣ. ಕೂತ್ಕೊಳ್ಳಿ. ಒಂದ್ನಿಮಿಷ. ಬಂದ್ಬಿಟ್ಟೆ."

ಏನು ಕಾಡುತ್ತಿರಬಹುದು ಈ ಯುವಕನನ್ನು?–ಎಂದು ಊಹಿಸಲು ಯತ್ನಿಸುತ್ತ, ಡೀನರು ಒಳಗೆ ಸಿಂಕಿನ ಬಳಿ ಹೋಗಿ, ಮುಖಕ್ಕೆ ನೀರು ಹನಿಸಿ, ಒರೆಸಿ ಕೊಂಡು, ಟವೆಲನ್ನು ಪರಿತ್ಯಜಿಸಿ, ಅತಿಥಿಯೊಬ್ಬರು ಇರುವುದನ್ನು ಹೆಂಡತಿಗೆ ತಿಳಿಸಿ, ಮತ್ತೆ ಹಜಾರಕ್ಕೆ ಬಂದರು.

ದೊಡ್ಡ ಸೋಫಾದ ಒಂದು ಮೂಲೆಯಲ್ಲಿ ಕುಳಿತು, ಗೋಡೆಗಳ ಮೇಲಿದ್ದ ಚಿತ್ರಕೃತಿಗಳನ್ನು ಜಯರಾಮು ಈಕ್ಷಿಸುತ್ತಿದ್ದ. ತಾನು ಹೊಕ್ಕು ಬಂದಿದ್ದ ಬಾಗಿಲಿನ ಚೌಕಟ್ಟಿನ ಮೇಲ್ಗಡೆ ಸುಂದರ ತರುಣನ ದೊಡ್ಡದೊಂದು ಭಾವಚಿತ್ರವಿತ್ತು. ಯಾರದಿರಬಹುದು ?–ಎಂದು ನೆನಪಿನ ಗೂಡನ್ನು ಜಯರಾಮು ಕೆದಕುತ್ತಿದ್ದಂತೆ, ಅಲ್ಲಿಗೆ ಬಂದು ಆತ ಕುಳಿತಿದ್ದ ಸೋಫಾದ ಇನ್ನೊಂದು ಕಡೆ ತಾವು ಆಸೀನರಾಗಿ ಡೀನರೆಂದರು:

"ನನ್ನ ಹಿರೇ ಮಗ, ಶ್ರೀಕಾಂತ. ಸ್ಟೇಟ್ಸ್‌ನಲ್ಲಿ ತೀರ್ಕೊಂಡ. ಮೂರು ವರ್ಷ ಆಯ್ತು."

"ಕೇಳಿದೀನಿ, ಸರ್. ಎಂಜಿನಿಯರ್. ಕಾರ್ ಆಕ್ಸಿಡೆಂಟೋ ಏನೋ ಆಗಿತ್ತು, ಅಲ್ವೆ ?"

"ಹುಂ."

ಡೀನರು ಶಾಂತವಾದ ಒಂದೇ ಸಮನಾದ ಧ್ವನಿಯಲ್ಲಿ ಆ ಮಾತುಗಳನ್ನು ಆಡಿದ್ದರು. ಆ ಭಾವಚಿತ್ರ ಯಾರದೆಂಬುದನ್ನು ಬಂದವರಿಗೆಲ್ಲ ವಿವರಿಸುವುದು ಅವರಿಗೆ ಸರ್ವಸಾಮಾನ್ಯವಾಗಿತ್ತು.

"ಒಳ್ಳೊಳ್ಳೆಯ ಪೇಯಿಂಟಿಂಗ್ಸ್ ಸಂಗ್ರಹಿಸಿದೀರಿ, ಸರ್."

ಇದು ಡೀನರಿಗೆ ಪ್ರಿಯವಾದ ವಿಷಯ.

"ಮೇಲೂ ಕೆಲವಿವೆ. ಪುರುಸೊತ್ತಾಗಿ ಒಮ್ಮೆ ಬನ್ನಿ. ತೋರಿಸ್ತೀನಿ."

ಜಯರಾಮು ತನ್ನ ಕೈಗಡಿಯಾರ ನೋಡಿದ.

"ಏಳೂ ಹದಿನೈದು, ಅಲ್ವೆ ?"

–ಎಂದು ಡೀನರು ನುಡಿದು ಅವನನ್ನು ಚಕಿತಗೊಳಿಸಿದರು.

ಅಷ್ಟೆ. ಒಂದು ನಿಮಿಷ ಹೆಚ್ಚೂ ಇರಲಿಲ್ಲ. ಒಂದು ನಿಮಿಷ ಕಡಮೆಯೂ ಇರಲಿಲ್ಲ !

ವಿಲಂಬ ಸರಿಯಲ್ಲವೆಂದು ಜಯರಾಮು ಆರಂಭಿಸಿದ:

"ನಾನು ಎ. ಎಂ. ಸಿ.ಗೆ ಸೇರೋಣಾಂತಿದೀನಿ, ಸರ್."

ಸಶಸ್ತ್ರ ವೈದ್ಯಕೀಯ ದಳವನ್ನು ಜಯರಾಮು ಸೇರಲು ಬಯಸುತ್ತಿರುವನೆಂಬ ಅಂಶದಿಂದ ಡೀನರಿಗೆ ಆಶ್ಚರ್ಯವೇನೂ ಆಗಲಿಲ್ಲ. ವಾಸ್ತವವಾಗಿ, ಯಾವ ಭಾವವೂ ಅವರ ಮುಖದ ಮೇಲೆ ಇರಲಿಲ್ಲ.

ಜಯರಾಮುವೇ ಮಾತು ಮುಂದುವರಿಸಿ ಅಂದ:

"ನೀವು ವಿಶ್ವಾಸವಿಟ್ಟು ಸ್ಟಾಫಿಗೆ ತಗೊಂಡಿರಿ. ನಾನು ಒಂದು ಟರ್ಮ್ ಕೂಡಾ ಇರದೆ ಹೊರಟು ಹೋಗ್ತಿದೀನಿ. ಇದರಿಂದ ನಿಮಗೆ ನೋವಾಗುತ್ತೆ ಅಂತ ಗೊತ್ತಿದೆ......"

"ಇಲ್ಲ, ಜಯರಾಮು. ನೋವಿನ–ಬೇಸರದ–ಪ್ರಶ್ನೆಯೇ ಇಲ್ಲ."

ಡೀನರ ಹೆಂಡತಿ ಒಳಬಾಗಿಲಲ್ಲಿ ಕಾಣಿಸಿಕೊಂಡರು.

"ಮಿಸೆಸ್ ಡೀನ್,–ಡಾಕ್ಟರ್ ಜಯರಾಮು."

–ಎಂದು ಡೀನರು ಪರಿಚಯ ಮಾಡಿಕೊಡುತ್ತಿದ್ದಂತೆ, ಜಯರಾಮು ಎದ್ದು ಆಕೆಗೆ ವಂದಿಸಿದ.

"ಹಿಂದೆ ಒಮ್ಮೆ ಇಬ್ಬರು ವಿದ್ಯಾರ್ಥಿಗಳ ಜತೆ ತಮ್ಮ ನಿವಾಸಕ್ಕೆ ಬಂದಿದ್ದಾಗ ಕಂಡಿದ್ದೆ. ಆರು ವರ್ಷ ಆಯ್ತು."

–ಎಂದ.

ಬೆಳ್ಳಿಕೂದಲ ಕಿರೀಟ ಧರಿಸಿದ್ದ, ವಯಸ್ಸಾದರೂ ಯುವತಿಯಂತಿದ್ದ, ಡೀನರ ಪತ್ನಿ ನಸುನಕ್ಕು,

"ಹೌದು. ಆಗ ಮೈನಾಪುರದಲ್ಲಿದ್ವಿ."

–ಎಂದರು.

ಗಂಡ ಮತ್ತು ಜಯರಾಮು ಇಬ್ಬರ ಕಡೆಗೂ ನೋಡಿ,

"ಬನ್ನಿ."

–ಎಂದು ಕರೆದರು.

ಆಹ್ವಾನ ಇಂಥದಕ್ಕೇ ಎಂದು ಸರಿಯಾಗಿ ತರ್ಕಿಸಿದ ಜಯರಾಮುವೆಂದ:

"ಕ್ಷಮಿಸ್ಬೇಕು. ನಾನು ಈಗ ತಾನೇ ಕಾಫಿ ಕುಡಿದಿದೀನಿ."

ಡೀನರೆದ್ದು ಜಯರಾಮುವಿನ ಭುಜ ಮುಟ್ಟಿ,

"ಏಳಿ, ಇಲ್ಲಿ ನಮ್ಮ ಯಾವ ಮಾತೂ ನಡೆಯೊಲ್ಲ."

–ಎಂದರು.

ಜಯರಾಮು ನಗುತ್ತ ಎದ್ದ.

ಫೋರ್ಕ್ ಚಾಕು ನ್ಯಾಪ್‌ಕಿನ್‌ಗಳ ಮುಂದೆ ಮೇಜಿನ ತುದಿಯ ದೊಡ್ಡ ಪೀಠದ ಮೇಲೆ ಡೀನರು ಕುಳಿತರು. ಅವರ ಬಲಮಗ್ಗುಲಲ್ಲೆ ಇನ್ನೊಬ್ಬರಿಗಾಗಿ

ಉಪಕರಣಗಳನ್ನು ಇಡಲಾಗಿತ್ತು. ಆ ಕುರ್ಚಿಯನ್ನು ಡೀನರು ಜಯರಾಮುಗೆ ಬೊಟ್ಟುಮಾಡಿ ತೋರಿಸಿದರು.

ಮನೆಯೊಡತಿ ಓಟ್ ಧಾನ್ಯದ 'ಗಂಜಿ'ಯಿದ್ದ ಪಿಂಗಾಣಿ ತಟ್ಟೆಗಳನ್ನು ತಂದಿಡುತ್ತಿದ್ದಂತೆ ಡೀನರೆಂದರು:

"ನಂಬುತ್ತೀರೋ ಇಲ್ಲವೋ—ನಾನೊಂದು ಒಂಟಿ ಜೀವ. ಬ್ರೇಕ್‌ಫಾಸ್ಟಿಗೆ ಕೂತುಕೊಳ್ಳೋದು ಒಬ್ಬನೇ!"

ಅವರ ಪತ್ನಿ ನಗುತ್ತ ಅಂದರು:

"ಇಷ್ಟು ಬೆಳಗ್ಗೆ ಇವರಿಗೆ ಜೋಡಿ ಯಾರು ಸಿಗಬೇಕು ಹೇಳಿ?"

'ಗಂಜಿ' ಮುಗಿದೊಡನೆ ಆಮ್ಲೆಟ್ ಹೊತ್ತ ತಟ್ಟೆಗಳು ಬರಲು,

"ಕ್ಷಮಿಸಿ. ನನಗೆ ಜಾಸ್ತಿಯಾಯ್ತು,"

—ಎಂದ ಜಯರಾಮು.

ಡೀನರೆಂದರು:

"Don't be silly. ನಿಮ್ಮ ವಯಸ್ನಲ್ಲಿ ಇದರ ಎರಡರಷ್ಟು ತಿನ್ಬೇಕು. ದಷ್ಟಪುಷ್ಟವಾಗಿದ್ರೇನೇ ಮಿಲಿಟರಿಯವರು ಸೇರಿಸ್ಕೋತಾರೆ."

ಪ್ರತಿಭಟನೆಯಿಂದ ಪ್ರಯೋಜನವಿಲ್ಲವೆಂಬುದು ಸ್ಪಷ್ಟವಾಗಿತ್ತು.

ಡೀನರ ಪತ್ನಿ, ಮಿಲಿಟರಿಯ ಪ್ರಸ್ತಾಪ ಬಂತೆಂದು ಜಯರಾಮುವಿನ ಕಡೆಗೊಮ್ಮೆ ನೋಡಿದರು. ಏನನ್ನೂ ಹೇಳಲಿಲ್ಲ.

ಕೊನೆಯದಾಗಿ ಬಂದ ಕಾಫಿ ರುಚಿಕರವಾಗಿತ್ತು. ಈಗ ಮನೆಯ ಯಜಮಾನಿತಿ ತಾವೂ ಒಂದು ಕಪ್ಪನ್ನೆತ್ತಿಕೊಂಡು ಗಂಡನಿಗೆ ಎದುರು ಬದುರಾಗಿ ಕುಳಿತರು.

ಉಪಾಹಾರ ಮುಗಿದೊಡನೆ ಜಯರಾಮುವನ್ನು ಹಜಾರದ ತನಕ ತಂದು ಬಿಟ್ಟು,

"ಸ್ನಾನದ ಶಾಸ್ತ್ರ ಮುಗಿಸಿ ಬರ್ತೀನಿ,"

—ಎಂದು ಡೀನರು ಒಳಹೋದರು.

ಎದುರಿಗಿದ್ದ ದಿನಪತ್ರಿಕೆಯನ್ನು ಜಯರಾಮು ಕೈಗೆತ್ತಿಕೊಂಡ. ವಿದ್ಯಾರ್ಥಿ ನಿಲಯದಿಂದ ಹೊರಬಿದ್ದುದಕ್ಕೆ ಮುನ್ನ ಆ ದಿನದ ವೃತ್ತಪತ್ರಿಕೆಯ ಶೀರ್ಷಿಕೆಗಳ ಕಡೆಗೊಮ್ಮೆ ಅವಸರವಾಗಿ ಆತ ಕಣ್ಣೋಡಿಸಿದ್ದ.

–'ಭಾರತಕ್ಕೆ ಪಶ್ಚಿಮ ರಾಷ್ಟ್ರಗಳ ನೆರವು'

–'ಭಾರತಕ್ಕೆ ರಷ್ಯದ ಎಂ. ಐ. ಜಿ. ವಿಮಾನಗಳ ಪೂರೈಕೆ ನಿಲ್ಲದು'

–'ಲದಾಖಿನಲ್ಲಿ ನಮ್ಮ ಜವಾನರ ಅಪ್ರತಿಮ ಹೋರಾಟ'

–'ಮಹಿಳೆಯರಿಗೆ ರೈಫ಼ಲ್ ಶಿಕ್ಷಣ'

–'ಹಳ್ಳಿಹಳ್ಳಿಯಲ್ಲೂ ಹೋಮ್‌ಗಾರ್ಡ್ ಸ್ಥಾಪನೆ'

–'ವೈದ್ಯರು–ನರ್ಸ್‌ಗಳಿಗಾಗಿ ಕರೆ'

ದೃಷ್ಟಿ ಕೊನೆಯ ಶೀರ್ಷಿಕೆಯ ಮೇಲೆ ತಂಗಲು ಅದರ ಕೆಳಗೆ ಅಚ್ಚಾಗಿದ್ದುದನ್ನು ಜಯರಾಮು ನಿಧಾನವಾಗಿ ಓದಿದ.

ಸ್ನಾನ ಮುಗಿಸಿ, ಪೋಷಾಕು ಧರಿಸಿ ಕಾರಿನ ಸ್ವಿಚ್ ಕೀಯನ್ನು ಕೈಯಲ್ಲಿ ಹಿಡಿದುಕೊಂಡು ಡೀನರು ಬಂದು,

"ಹೋಗೋಣ,"

–ಎಂದರು.

ಮನೆಯ ಆಳು ಗೇಟನ್ನು ತೆರೆದಿದ್ದ. ಡೀನರು ಗರಾಜಿನಿಂದ ಕಾರನ್ನು ಹೊರತಂದು, ತಮ್ಮ ಮಗ್ಗುಲಲ್ಲಿ ಜಯರಾಮುವನ್ನು ಕೂಡಿಸಿಕೊಂಡು ಬೀದಿಗಿಳಿದರು.

ಭಾಗ್ಯನಗರದ ನರನಾಡಿಗಳನ್ನೆಲ್ಲ ಬಲ್ಲೆನೆಂಬಂತೆ ಕಾರು ಲೀಲಾಜಾಲವಾಗಿ ಮುಂದುವರಿಯಿತು.

ದಾರಿಯಲ್ಲಿ ಡೀನರು ಕೇಳಿದರು:

"ಮಿಲಿಟರಿಯಲ್ಲಿ ತಾತ್ಪೂರ್ತಿಕ ಸೇವೆ ಸಲ್ಲಿಸ್ಬೇಕೂಂತಿದೀರೊ, ಅಥವಾ ದೀರ್ಘಾವಧಿ ಉದ್ಯೋಗ ಅಂತಲೇ ತೀರ್ಮಾನಿಸಿದೀರೊ?"

ಜಯರಾಮು ಉತ್ತರಿಸಿದ:

"ದೀರ್ಘಾವಧಿ ಉದ್ಯೋಗ ಅಂತಲೇ, ಸರ್."

"ಮೊದಲು ನಿಮ್ಮನ್ನ ಕ್ಯಾಪ್ಟನ್ ಆಗಿ ತಗೋತಾರೆ. ಸ್ನಾತಕೋತ್ತರ ಪದವಿ ಇರೋದರಿಂದ ಬೇಗನ್ ಮೇಜರ್ ಮಾಡ್ತಾರೆ. ಕ್ರಮೇಣ ಭಡತಿಗಳಿರ್ತವೆ. ಆದರೆ ಜೀವನ ಸುಲಭವಲ್ಲ."

"ಕಠಿಣ ಜೀವನಕ್ಕೆ ನಾನು ಸಿದ್ಧವಾಗಿದೇನೆ, ಸರ್."

"ದೇಶದಲ್ಲಿ ವೈದ್ಯರ ಅಭಾವವಿದೆ. ಹಾಗೇ ಮಿಲಿಟರಿಯಲ್ಲೂ. ಎಂ. ಬಿ.,

ಬಿ. ಎಸ್. ಆದ ತಕ್ಷಣ ಫಾರೀನಿಗೆ ಓಡ್ತಾರೆ. ಸರಕಾರೀ ಉದ್ಯೋಗದಲ್ಲಿ ಭಡತಿಗೆ ಸಹಾಯಕವಾಗಲೀಂತ ಡಿಗ್ರಿಗಳನ್ನ ಸಂಪಾದಿಸಿ ತರ್ತ್ತಾರೆ. ಅನುಭವದ ಮಾತೇ ಇಲ್ಲ. ಬದುಕಿನಲ್ಲಿ ಒಂದು ಗುರಿ, ಆದರ್ಶ, ಅನ್ನೋದಕ್ಕೆಲ್ಲಾ ಈಗಿನ ಕಾಲದಲ್ಲಿ ಅರ್ಥವಿಲ್ಲ."

"ಜೀವನದ ಆದರ್ಶ ನನಗಿದೆಯೋ ಇಲ್ಲವೋ ಹೇಳಲಾರೆ, ಸರ್. ಆದರೆ, ಉಸಿರು ಕಟ್ಟಿಸುವ ವಾತಾವರಣದಿಂದ ನನಗೆ ಬಿಡುಗಡೆ ಬೇಕು. ದೂರ ಎಲ್ಲಾದರೂ ಕಷ್ಟಪಟ್ಟು ದುಡಿಯೋದರಿಂದ ನನಗೆ ನೆಮ್ಮದಿ ಸಿಗುತ್ತೆ– ಅಂದ್ಕೊಂಡಿದೀನಿ."

"ಸರಿ, ಜಯರಾಮು. ಕಮಿಶನಿಗೆ ಅರ್ಜಿ ಹಾಕಿ. ನೀವು ಹೋಗೋದ ರಿಂದ ಕಾಲೇಜು ಬಡವಾಗುತ್ತೆ, ವೈಯಕ್ತಿಕವಾಗಿ ನನಗೆ ನಷ್ಟ. ಆದರೆ ಅದು ದೊಡ್ಡದಲ್ಲ. ನಿಮ್ಮಂಥವರು ಸಶಸ್ತ್ರ ವೈದ್ಯಕೀಯ ದಳದಲ್ಲಿ ಇರೋದರಿಂದ ರಾಷ್ಟ್ರಕ್ಕೆ ಲಾಭವಾಗ್ತದೆ."

ಅಷ್ಟು ಹೇಳಿ ಡೀನರು ಯೋಚನಾಮಗ್ನರಾದರು.

ದೂರದಲ್ಲಿ ದೊಡ್ಡಾಸ್ಪತ್ರೆಯ ಗೋಪುರ ಕಾಣಿಸಿದಾಗ ಅವರೆಂದರು:

"ಈ ಅಲ್ಪರ ಆಡಂಬರ, ಅಧಿಕಾರ ಲಾಲಸೆ, ಲಂಚರುಷುವತ್ತು ಕಂಡಾಗ –ಈ ರಾಜ್ಯ ವ್ಯವಸ್ಥೆಗೆ ಕೊನೆಯೇ ಇಲ್ಲವೆ ಅನಿಸುತ್ತೆ. ಆದರೆ, ಇದನ್ನು ಬಿಟ್ಟರೆ ಬೇರೆ ಯಾವುದಿದೆ ನಮಗೆ? ಪ್ರಜಾಪ್ರಭುತ್ವ ಎಷ್ಟೇ ಅಸಮರ್ಪಕ ವಾದರೂ ಅದಕ್ಕಿಂತ ಉತ್ತಮವಾದ ಆಡಳಿತ ವ್ಯವಸ್ಥೆ ಈ ಲೋಕದಲ್ಲಿಲ್ಲ. ಈಗಲ್ಲವಾದರೆ ಮುಂದಿನ ಶತಮಾನದಲ್ಲಾದರೂ ಜನರಿಗೆ ಒಳ್ಳೆಯ ಪ್ರತಿನಿಧಿ ಗಳು ಸಿಗಲಿ ಅಂತ ನಾವು ಪ್ರಾರ್ಥಿಸಬೇಕು. ಅಷ್ಟೆ."

ಮಾತು ಬದಲಿಸಿ ಅವರು ಕೇಳಿದರು:

"ಹಾಸ್ಪಿಟಲ್‌ಗೆ ಬರ್ತೀರೋ? ಹಾಸ್ಟೆಲ್ ಹತ್ತಿರ ಇಳೀತೀರೋ?"

"ಇಳಿಯೋದಿಲ್ಲ. ಬರ್ತೀನಿ."

ಆಸ್ಪತ್ರೆಯ ಆವರಣವನ್ನು ಕಾರು ಪ್ರವೇಶಿಸಿದಂತೆ ಡೀನರೆಂದರು:

"ನಾನು ಮುದುಕನಾಗಿ ಹೋದೆ. ನಿಮ್ಮಷ್ಟೇ ವಯಸ್ಸಿನವನಾಗಿದ್ದಿದ್ದರೆ ನಾನೂ A. M. C.ಗೆ ಸೇರ್ಕೊಳ್ತಿದ್ದೆ."

ಜಯರಾಮು ಕೃತಜ್ಞತೆಯ ನೋಟದಿಂದ ಡೀನರನ್ನು ನೋಡಿದ.

ಕಾರು ನಿತ್ಯ ನಿಲ್ಲುವ ಸ್ಥಳವನ್ನು ತಲಪಿತು. ದೊಡ್ಡ ಗಡಿಯಾರ ಢಣ್ ಢಣ್ ಎನ್ನುತಿತ್ತು.

"In time,"

–ಎಂದರು ಡೀನರು.

......ಜಯರಾಮು ತನ್ನ ಅರ್ಜಿಯನ್ನು ಕಳುಹಿದ್ದ, ಡೀನರ ಒಪ್ಪಿಗೆ ಪತ್ರದೊಡನೆ. ಇಂಟರ್‌ವ್ಯೂ ಮುಗಿದು ನೇಮಕ ಖಚಿತವಾದ ಮೇಲೆ ಇತರರಿಗೆ ಹೇಳಿದರಾಯಿತು–ಎಂದು ತನ್ನ ಅರ್ಜಿಯ ಬಗೆಗೆ ಮೌನ ತಳೆದ.

ಸ್ವಾತಂತ್ರ್ಯ ರಕ್ಷಣೆಯ ಕರೆಗೆ ರಾಷ್ಟ್ರ ಓಗೊಟ್ಟಿತ್ತು. ಮಿಲಿಟರಿ ಭರ್ತಿಯ ಎಲ್ಲ ಕೇಂದ್ರಗಳಲ್ಲೂ ಜನರು ಉತ್ಸಾಹ ತೋರಿದರು. ಭಾಗ್ಯನಗರದಲ್ಲಿ ಭೂಸೇನೆಯನ್ನೂ ವಾಯು ಪಡೆಯನ್ನೂ ಸೇರಲು ಆ ಕಚೇರಿಗಳ ಮುಂದೆ ಯುವಕರು ಸಾಲುಗಟ್ಟಿದರು. ಪ್ರಾದೇಶಿಕ ಸೇನೆ ಮತ್ತು ಎನ್. ಸಿ. ಸಿ. ಬಲಗೊಳಿಸಲ್ಪಟ್ಟುವು. ಗೃಹರಕ್ಷಕ ದಳದ ಸಂಘಟನೆ ಭರದಿಂದ ನಡೆಯಿತು.

ಸಶಸ್ತ್ರ ವೈದ್ಯಕೀಯ ದಳವನ್ನು ಸೇರಲು ಕೆಲ ಸರಕಾರೀ ಡಾಕ್ಟರರೂ ನರ್ಸ್‌ಗಳೂ ಮುಂದಾದರು. ಖಾಸಗಿ ಪ್ರಾಕ್ಟೀಸು ಕೈಗೊಂಡು ವಿಫಲರಾಗಿದ್ದ ಇಬ್ಬರು ಮೂವರು ವೈದ್ಯರು, ಅಂಗಡಿಗಳನ್ನು ಮುಚ್ಚಿ ಸಮವಸ್ತ್ರ ಧರಿಸುವ ಅಪೇಕ್ಷೆ ವ್ಯಕ್ತಪಡಿಸಿದರು.

......ತನ್ನ ಅರ್ಜಿಗೆ ಜಯರಾಮು ಉತ್ತರವನ್ನಿದಿರು ನೋಡುತ್ತಿದ್ದಾಗ, ಏರ್‌ಮೇಯಿಲ್ ಕಾಗದವೊಂದು ಅವನಿಗೆ ಬಂದು ತಲಪಿತು. ಆ ಹಗುರ ಲಕೋಟೆಯ ಮೇಲೆ ಬ್ರಿಟಿಷ್ ರಾಣಿಯ ಅಂಚೆ ಚೀಟಿ. ಲಂಡನಿನ ಮುದ್ರೆ.

ಲಕೋಟೆಯಷ್ಟು ಹಗುರವಾಗಿರಲಿಲ್ಲ ಒಳಗಿದ್ದ ವಿಷಯ.

ಬಿಳಿಯ ತೆಳು ಕಾಗದದ ಮೇಲೆ ಲೀಲಾ ಬರೆದಿದ್ದಳು:

ಲಂಡನ್,

೧೫ ನವೆಂಬರ್ ೧೯೬೨

ನನ್ನ ಪ್ರೀತಿಯ ಡಾ. ರಾಮು,

ಬೊಂಬಾಯಿ ಬಿಡುವುದಕ್ಕೆ ಮುಂಚೆ, ಆ ದುರ್ದಿನ, ನಿಮಗೊಂದು ತಂತಿ ಕಳಿಸಿದ್ದೆ. ವಿಮಾನ ಹೊರಡುವ ಕೊನೆಯ ಕ್ಷಣದ ವರೆಗೂ, ನಿಮ್ಮಿಂದ ಶುಭಾಶಯ ಬರುವುದೆಂದು (ಆಶೀರ್ವಾದ ಎನ್ನಲೆ?) ಕಾದಿದ್ದೆ. ನಿರಾಶೆಯಾಯಿತು.

ಪ್ರಾಯಶಃ ನನ್ನ ತಂತಿ ನಿಮಗೆ ತಡವಾಗಿ ಮುಟ್ಟಿರಬೇಕು. ಏಷ್ಟೆಂದರೂ ಶತ ಮಾನೋತ್ಸವ ಆಚರಿಸುವ ಭಾರತೀಯ ಅಂಚೆ–ತಂತಿ ಇಲಾಖೆ ತಾನೆ? ಶೀಘ್ರ ಚಲನೆ ಅದರಿಂದ ಹೇಗೆ ಸಾಧ್ಯವಾದೀತು?

ದುರ್ದಿನ ಎಂದು ಬರೆದೆನೆ? ತಪ್ಪಿದ್ದಾಳೆ–ಎಂದುಕೊಂಡಿರಾ? ಸುದಿನ ಎನ್ನಬೇಕಾಗುತ್ತಲ್ಲವೆ?

ಈ ಕಾಗದ ನಾನು ಬರೆಯಲು ಇದು ಅವೇಳೆ ಅನಿಸುತ್ತಿದೆ. ನಮ್ಮ ಮಾತೃ ಭೂಮಿಯ ಮೇಲೆ ಪರಕೀಯರ ದಾಳಿ ನಡೆದಿದೆ ಎನ್ನುವುದು ಈ ಅಭಾಗಿನಿಗೂ ತಿಳಿದಿದೆ. ನಾನು ಮರೆತರೂ ನನ್ನನ್ನು ಸಂಧಿಸುವ ವಿದೇಶೀಯರೆಲ್ಲ ಸಹಾನು ಭೂತಿ ತೋರಿಸುವುದರ ಮೂಲಕ, ನನ್ನ ದೇಶ ಗಂಡಾಂತರದಲ್ಲಿದೆ ಎಂಬುದನ್ನು ನನಗೆ ನೆನವರಿಕೆ ಮಾಡಿಕೊಡುತ್ತಿದ್ದಾರೆ. ಭಾರತ ಮತ್ತು ಕ್ಯೂಬಾ ಪರಿಸ್ಥಿತಿಗಳ ಹೊರತಾಗಿ ಬೇರೆ ವಿಷಯದ ಬಗ್ಗೆ ಇಲ್ಲಿನ ಜನ ಮಾತನಾಡುವುದನ್ನೇ ಈಗ ನಾನು ಕಾಣೆ. ಪತ್ರಿಕೆಗಳು, ರೇಡಿಯೋ, ಟೆಲಿವಿಷನ್, [ವಾಸ್ತವವಾಗಿ ಪ್ರಾಶಸ್ತ್ಯಕ್ಕೆ ಅನು ಗುಣವಾಗಿ ಟೆಲಿವಿಷನ್, ರೇಡಿಯೋ, ಪತ್ರಿಕೆಗಳು ಎಂದು ನಾನು ಬರೆಯಬೇಕು] ಭಾರತ–ಕ್ಯೂಬಾಗಳನ್ನು ಇಲ್ಲಿನ ಜನರ ಮೇಲೆ ಆಳವಾಗಿ ಬಿಂಬಿಸಿಬಿಟ್ಟಿವೆ. ನನ್ನ ಬೊಂಬಾಯಿಯಲ್ಲಿ, ನಿಮ್ಮ ಭಾಗ್ಯನಗರದಲ್ಲಿ, ದೇಶದ ಎಲ್ಲೆಲ್ಲೂ ಈಗ ಏನು ನಡೆಯುತ್ತಿದೆ ಎಂಬುದನ್ನು ಊಹಿಸಿಕೊಳ್ಳಬಲ್ಲೆ. ಆಪರೇಷನ್ ಥಿಯೇಟರಿನ ಗ್ರೀಕ್ ದೇವತೆಯಾದ ನೀವು ಸಾರ್ವಜನಿಕ ಸಭೆಗಳಲ್ಲಿ ಜನರನ್ನು ಹುರಿದುಂಬಿಸು ತ್ತಿರುವುದನ್ನು ನಾನು ಚಿತ್ರಿಸಿಕೊಳ್ಳಬಲ್ಲೆ.

ದೂರದ ತಾಯ್ನಾಡಿನಲ್ಲಿ ಹೀಗಾಗುತ್ತಿರುವುದು ಗೊತ್ತಿದ್ದೂ ನನ್ನ ವೈಯ ಕ್ತಿಕ ವಿಷಯಕ್ಕೆ ಸಂಬಂಧಿಸಿ ಈ ಕಾಗದವನ್ನು ನಾನು ಬರೆಯುತ್ತಿರುವೆನಲ್ಲ? ನಿಮಗೆ ಇದರಿಂದ ಅಸಮಾಧಾನವೆನಿಸಬಹುದಲ್ಲವೆ?

ಆದರೆ ನಾನು ಅಸಹಾಯಳು. ಅನುಭವಿಸುತ್ತಿರುವ ತೀವ್ರ ವೇದನೆಗೆ ನಾನು ಬಲಿಯಾಗದಿರಬೇಕಾದರೆ ಈ ಕಾಗದವನ್ನು **ನಿಮಗೆ** ಬರೆಯಲೇಬೇಕು.

ನಮ್ಮ 'ಮಧುಚಂದ್ರ' ಯಾವ ದುರ್ಘಟನೆಗಳೂ ಇಲ್ಲದೆ ಸ್ವಿಟ್ಜರ್ಲೆಂಡಿ ನಲ್ಲಿ ನಡೆಯಿತು. ನಾನು ಸುಖಿಯಾಗಿದ್ದೆ. ನನಗೆ ತಿಳಿದಮಟ್ಟಿಗೆ ಪರೇಖ್ ಕೂಡಾ ಸುಖಿಯಾಗಿದ್ದ. ಅಲ್ಲಿಂದ ರೋಮ್–ಪ್ಯಾರಿಸ್‌ಗಳಿಗೆ ಹೋದೆವು. ಅವು ನನ್ನ ಅನೇಕ ವರ್ಷಗಳ ಕನಸಿನ ಮಾಯಾ ನಗರಿಗಳು. ಸ್ವರ್ಗದ ಹೊಸ್ತಿಲುಗಳಲ್ಲವೆ

ಅವು? ಆದರೆ ನನ್ನ ಪಾಲಿಗೆ ಅವು ನರಕದ ಪೆಟ್ಟಿಲುಗಳಾದುವು. ಆ ಎರಡು ನಗರಗಳಲ್ಲೂ ನಾನು ಹೋಟೆಲಿನ ಕೊಠಡಿಗಳಲ್ಲಿ ಬಂದಿ. ನನ್ನನ್ನು ಅಲ್ಲಿ ಬಿಟ್ಟು ಪರೇಖ್ ಅಪ್ಸರೆಯರನ್ನು ಬೇಟೆಯಾಡಿದ. ಅಂತೂ ಲಂಡನ್ ತಲಪಿದೆವು. ಪರೇಖನ ಮಿತ್ರನೊಬ್ಬ, ಮಧ್ಯಮ ವರ್ಗದ ಒಂದು ಆಂಗ್ಲ ಕುಟುಂಬದ ಮನೆಯಲ್ಲಿ ಎರಡು ಕೊಠಡಿಗಳನ್ನುನಮಗಾಗಿ, ನಾವು ಸಂಸಾರ ಹೂಡುವುದಕ್ಕಾಗಿ, ದೊರಕಿಸಿದ್ದ.

ಅಲ್ಲಿ ಪರೇಖ್ ಹೊಸ ರೂಪದಲ್ಲಿ ಕಾಣಿಸಿಕೊಂಡ. ಎಂ. ಆರ್. ಸಿ. ಪಿ. ಅಧ್ಯಯನಕ್ಕೆ ಸೇರಿದೊಡನೆ ಅವನೆಂದ:

"ಲೀಲಾ, ಇದು ವಿಲಾಯತಿ. ತಲೆ ತಿರುಗೀತು, ಜೋಕೆ. ರೆಕ್ಕೆ ಬಿಚ್ಚೀಯೆ! ನೀನೀಗ ಗೃಹಿಣಿ. ಮನೆಯಲ್ಲಿದ್ದುಕೊಂಡು ಹೊತ್ತು ಹೊತ್ತಿಗೆ ಅಡುಗೆಮಾಡಿ ಹಾಕು."

ನಾನು ದಂಗಾಗಿ ಹೋದೆ. ರೋಮ್–ಪ್ಯಾರಿಸ್‌ಗಳಲ್ಲಿ ಅವನು ವರ್ತಿಸಿದ್ದನ್ನು ನೆನಪು ಮಾಡಿಕೊಟ್ಟೆ. ನನ್ನನ್ನು ಯಾಕೆ ಮದುವೆಯಾದಿರಿ?–ಅಂದೆ. ಆತ ಏನೆಂದ ಗೊತ್ತೆ?

"ನಿನ್ನ ರೂಪ ಮತ್ತು ದೇಹ ಬೇಕೂಂತ ಮದುವೆಯಾದೆ."

"ಈಗ ಇವೆರಡೂ ಬೇಡವಾಗ್ಹೋಯ್ತೆ?"–ಅಂತ ಕೇಳಿದೆ.

"ನಾನು ನಿನ್ನನ್ನು ಮದುವೆಯಾಗಿದೇನೆ. ಆ ಎರಡರ ಮೇಲೂ ನನಗೆ ಪೂರ್ಣ ಅಧಿಕಾರವಿದೆ. ಬಳಸೋದೂ ಬಿಡೋದೂ ನನಗೆ ಸೇರಿದ್ದು."

ಮಾತು ಬೆಳೆಯಿತು. ನನ್ನ ಮೇಲೆ ಕೈಮಾಡಿದರು. ನಾನು ಚೀರಿಕೊಂಡೆ. ಮನೆಯ ಆಂಗ್ಲ ದಂಪತಿಗಳು ಬಂದು ಮಧ್ಯೆ ಪ್ರವೇಶಿಸಿ ಪರೇಖನ್ನು ಬಯ್ದರು. ಆತ ಮನೆ ಬಿಟ್ಟು ಹೋದ.

ಮಾರನೆಯ ದಿನವೇ ನಾನು ಇಲ್ಲಿನ ಆಸ್ಪತ್ರೆಗಳಲ್ಲಿ ಉದ್ಯೋಗಕ್ಕಾಗಿ ಪ್ರಯತ್ನಿಸಿದೆ. ನನ್ನ ಪುಣ್ಯದಿಂದ ಒಂದು ಕಡೆ 'ಇಂಟರ್ನಿ'ಯಾಗಿ ನನ್ನನ್ನು ತೆಗೆದುಕೊಂಡರು. (ಅಲ್ಲಿಯೇ ಈಗ ಕೆಲಸ ಮಾಡುತ್ತಿದ್ದೇನೆ.)

ಬೇರೊಂದು ಮನೆಯಲ್ಲಿ ಒಂದು ಕೋಣೆ ದೊರಕಿಸಿಕೊಂಡು, ಆ ಎರಡು ಕೊಠಡಿಗಳನ್ನು ತೆರವು ಮಾಡಿದೆ. ನಾನು ಹೊರಟಾಗ ಅಲ್ಲಿನ ಆಂಗ್ಲ ಮಹಿಳೆ, "ಇಷ್ಟೊಂದು ಸುಂದರಿಯಾದ ನಿನ್ನನ್ನ ಬಿಟ್ಟು ಹೋದನಲ್ಲ! ಅವನಿಗೆ ಹುಚ್ಚು ಹಿಡಿದಿರಬೇಕು. ನೀನು ಧೈರ್ಯಸ್ಥೆ," ಎಂದಳು.

ಒಂಟಿಯಾಗಿ ಇರತೊಡಗಿದ ನಾನು, "ನನ್ನ ವೈವಾಹಿಕ ಜೀವನದ ಇತಿಶ್ರೀ ಆದಂತಾಯಿತು," ಎಂದುಕೊಂಡೆ.

ಆದರೆ ಇದು ಅಷ್ಟಗ್ರಹಗಳು ಒಂದಾಗಿ ಕಲೆತ ವರ್ಷ ತಾನೆ? ನನ್ನ ದುರ್ದೈವ ನನ್ನನ್ನಿನ್ನೂ ಕಾಡುತ್ತಿದೆ.

ಒಂದು ವಾರದ ಹಿಂದೆ ಪರೇಖ್ ನನ್ನ ಭೇಟಿಗೆ ಬಂದ. ಆತನನ್ನು ಒಳಕ್ಕೆ ಬಿಡಬಾರದೆಂದು ಬಾಗಿಲಿಗೆ ಅಡ್ಡವಾಗಿ ನಿಂತವಳು, ಮುಖದ ಮೇಲಿನ ದೈನ್ಯ ಭಾವವನ್ನೂ ಅವನ ಸೊರಗಿದ ದೇಹವನ್ನೂ ಕಂಡು, ಸುಮ್ಮನಾದೆ. ಏನು ಹೇಳುವುದಕ್ಕೆ ಬಂದಿದಾನೋ ನೋಡೋಣ—ಎನ್ನಿಸಿತು. ಆತ ಕೇಳಿದ್ದು ಕ್ಷಮೆ. 'ಆದದ್ದು ಆಗಿಹೋಯ್ತು. ಇನ್ನು ಜತೆಯಾಗಿರೋಣ'—ಅಂತ ಪ್ರಾರ್ಥನೆ. 'ಸಾಧ್ಯವಿಲ್ಲ' ಅಂತ ನಾನು ಎಷ್ಟು ಪಟ್ಟುಹಿಡಿದರೂ ಕೇಳಲಿಲ್ಲ. 'ಯೋಚಿಸೋದಕ್ಕೆ ಅವಕಾಶವನ್ನಾದರೂ ಕೊಡು'—ಅಂದೆ. 'ಇನ್ನು ಐದು ನಿಮಿಷ ಸಾಕೆ?' ಎಂದು ಕೇಳಿ, ರೇಡಿಯೋ ಹಾಕಿದ. ಮುಂದೇನಾಗುವುದೆಂದು ನನಗೆ ಗೊತ್ತಿತ್ತು. ಕಲ್ಲಾಗಿ ಕುಳಿತೆ. ಮೈಮುಟ್ಟಿದ. ಕರಗಿಹೋದೆ.

ಹೇಳಿ ಡಾ. ರಾಮು, ಪುರುಷ ಸ್ಪರ್ಶಕ್ಕೆ ಇಷ್ಟೊಂದು ಶಕ್ತಿ ಉಂಟೆ? ಬಲವಾದ ತೋಳುಗಳ ಆಸರೆ ಇಲ್ಲದೆ ಸ್ತ್ರೀಯರು ಬದುಕುವುದು ಸಾಧ್ಯವೇ ಇಲ್ಲವೆ?

ದೇಹ ಆತನಿಗೆ ಮಣಿಯಿತು. ಮನಸ್ಸಲ್ಲ. ಸದ್ಯಃ ನನ್ನ ಕೊಠಡಿಯಲ್ಲೇ ಆತ ಇದ್ದಾನೆ. ಬೆಳಗಾದೊಡನೆ ಹೊರಬಿದ್ದು ನಮ್ಮ ನಮ್ಮ ದಾರಿ ಹಿಡಿಯುತ್ತೇವೆ. ಸಂಜೆಗೆ ಮತ್ತೆ ಕೂಡುತ್ತೇವೆ. ನನ್ನ ದೇಹ ಸೋತು ನಿದ್ದೆಹೋಗುತ್ತದೆ. ಮನಸ್ಸು ಸ್ತಬ್ಧವಾಗಿದ್ದು ಮಾರನೆಯ ಹಗಲೆಲ್ಲ ಗೋಳಾಡುತ್ತದೆ.

ನಾನು ಯಾತಕ್ಕಾಗಿ ಪರೇಖನನ್ನು ಮದುವೆಯಾದೆ? ಯಾಕೆ ಈ ದೇಶಕ್ಕೆ ಬಂದೆ? ಸುಖ ಬೇಕು; ಎಲ್ಲರಿಗೂ ಬೇಕು. ಆದರೆ ನಾನು ಕಲ್ಪಿಸಿಕೊಂಡಿದ್ದ, ನಾನು ಅರಸಿದ್ದ ಸುಖ ಇದಲ್ಲ.

ನನಗನಿಸುತ್ತದೆ: ಆ ದಿನ ನಿಮಗೆ ಕಾಗದ ಬರೆಯುವುದರ ಬದಲು ನೇರವಾಗಿ ಭಾಗ್ಯನಗರಕ್ಕೇ ನಾನು ಬರಬೇಕಾಗಿತ್ತು. ನಿಮ್ಮನ್ನು ಕಾಣಬೇಕಾಗಿತ್ತು. ಆಗ ಪ್ರಾಯಶಃ ನನ್ನ ಜೀವನ ಬೇರೆಯೇ ದಾರಿ ಹಿಡಿಯುವುದು ಸಾಧ್ಯವಿರುತಿತ್ತು.

ಇಷ್ಟೆಲ್ಲ ಆದಮೇಲೂ ದೇಶಕ್ಕೆ ಮರಳಬೇಕೆಂದು, ನಿಮ್ಮನ್ನು ಕಾಣಬೇಕೆಂದು, ಬಯಕೆಯಾಗುತ್ತಿದೆ. ನೀವಂತೂ ಗಂಡಾಂತರ ಪರಿಸ್ಥಿತಿ ಇರುವ ತನಕ

ಭಾರತ ಬಿಟ್ಟು ಇಲ್ಲಿಗೆ ಬರಲಾರಿರಿ. ಬಂದರೂ ಯಾಕೆ ಕಾಣುತ್ತೀರಿ ಈ ಅಭಾಗಿನಿಯನ್ನು?

ನನ್ನನ್ನು ಹುಚ್ಚಿ ಎನ್ನುವಿರಾ? ಕುಲಟೆ ಎಂದು ಜರೆಯುವಿರಾ? ನಿನ್ನ ಚೆಲ್ಲಾಟಕ್ಕೆ ತಕ್ಕ ಶಾಸ್ತಿಯಾಯಿತು. ಎಂದು ತೀರ್ಪು ಕೊಡುವಿರಾ?

ಮನಸ್ಸಾಕ್ಷಿ ನುಡಿಯುತ್ತಿದೆ: 'ಪರೇಖನ–ನಿನ್ನ ಸಂಬಂಧ ಬಹಳ ದಿನವಿರದು' –ಎಂದು. ಹಾಗಾದರೆ ಆತನಿಂದ ಬೇರ್ಪಡಲು ನಾನು ಯತ್ನಿಸಬೇಕೆ? ಅಥವಾ ಈ ಜಾರುಗುಂಡಿಯಲ್ಲಿ ಕೆಳಕ್ಕಿಳಿದು ನಾಶವಾಗಬೇಕೆ?

ಕೆಳಗೆ ನನ್ನ ವಿಳಾಸವಿದೆ. ಮಾರೋಲೆ ಬರೆಯುವಿರಾ? ದಾರಿ ನೋಡಲೆ? ನಿರಾಸೆಗೊಳಿಸಬೇಡಿ.

ಇತಿ,

ಒಲವಿನೊಂದಿಗೆ,

ನಿಮ್ಮ,

ಲೀಲಾ

–ದೀರ್ಘ ಪತ್ರದ ಅಂತ್ಯದಲ್ಲಿ ಎಡಮೂಲೆಯಲ್ಲಿ ವಿಳಾಸ.

ಓದಿ ಮುಗಿಸಿದ ಜಯರಾಮು ಕೆಲ ನಿಮಿಷಗಳ ಕಾಲ ಕಣ್ಣು ಮುಚ್ಚಿ ಕುಳಿತ.

ಕೆಟ್ಟ ಕನಸಿನಂತಿತ್ತು ಆ ಕಾಗದ. ಅವನಿಗದು ವ್ಯಥೆಯನ್ನುಂಟುಮಾಡಿತ್ತು.

–ನಿಜವೆ? ಆದಿನ ಕಾಗದ ಬರೆಯುವುದರ ಬದಲು ಆಕೆಯೇ ಭಾಗ್ಯನಗರಕ್ಕೆ ಬಂದಿದ್ದರೆ ಅವಳ ಬದುಕು ಬೇರೆಯೇ ದಾರಿ ಹಿಡಿಯುತಿತ್ತೆ? ತನ್ನ ಬದುಕು ಕೂಡಾ?

ಜಯರಾಮುಗೆ ನಗುಬಂತು. ಇದೀಗ ಮೂರ್ಖತನದ ಪರಮಾವಧಿ. ಗತಕಾಲದ ಕತೆಗಳನ್ನು 'ರೆ' ಪ್ರಪಂಚದ ಅಚ್ಚುಗಳಲ್ಲಿ ಮತ್ತೆ ಎರಕ ಹೊಯ್ಯಲೆತ್ನಿಸುವುದು ಹುಚ್ಚುತನ.

ಕಲ್ಪನಾ ವಿಲಾಸದ ರೆಕ್ಕೆಗೆ ಜೋತು ಕನಸಿನ ರಾಜ್ಯವನ್ನು ಹುಡುಕುತ್ತ ಹಾರಿಹೋದಳಲ್ಲ ಹುಡುಗಿ? ಏನಾಯಿತು? ಆಕೆ ರೆಕ್ಕೆ ಮುರಿದು ನೀರಿಗೆ ಬಿದ್ದಳು. ನಡು ಗಡ್ಡೆಯಲ್ಲೀಗ ಅವಳು ಸೆರೆಯಾದಳು. ಏಕಾಕಿನಿ.

ನಿಟ್ಟುಸಿರು ಬಿಟ್ಟು ಜಯರಾಮುವೆಂದುಕೊಂಡ:

ಪ್ರಬುದ್ಧರಾದವರು ಕೈಗೊಳ್ಳುವ ತೀರ್ಮಾನಗಳೇನೇ ಇರಲಿ, ಅವರ ಕೃತಿಗಳಿಗೆ ಅವರು ಪೂರ್ತಿ ಹೊಣೆಗಾರರು. ಚಂದ್ರ ಬೇಕಾಗಿತ್ತು, ಸಿಗಲಿಲ್ಲ–ಎಂದು ಅಳಲು ನಾವೇನು ಮಕ್ಕಳೆ?

......ಸಂಜೆ ಜಯರಾಮು ಏರ್ ಮೇಯಿಲ್ ಲಕೋಟೆಯೊಂದನ್ನು ಕೊಂಡು, ಆಸ್ಪತ್ರೆಯ ಕೆಲಸ ಮುಗಿಸಿ ಒಬ್ಬನೇ ಒಂದಿಷ್ಟು ದೂರ ನಡೆದು, ವಿದ್ಯಾರ್ಥಿನಿಲಯಕ್ಕೆ ಮರಳಿದ. ಕಪಾಟದಿಂದ ತೆಳು ಕಾಗದದ ಒಂದು ಹಾಳೆಯನ್ನು ಹುಡುಕಿ ತೆಗೆದು, ಆದಿನ ಬಂದ ಪತ್ರಕ್ಕೆ ಉತ್ತರ ಬರೆಯತೊಡಗಿದ:

ಭಾಗ್ಯನಗರ,
೧೮ ನವೆಂಬರ್ ೧೯೬೨

ಪ್ರಿಯ ಡಾ. ಲೀಲಾ ಪರೇಖ್,

ತಾ. ೧೫ರ ನಿಮ್ಮ ಕಾಗದ.

ಅಪಾಯದ ಮೋಡಗಳು ದೇಶವನ್ನು ದಟ್ಟವಾಗಿ ಕವಿದಿರುವ ಘಳಿಗೆಯಲ್ಲಿ ಇದೊಂದು ಚುಟುಕು ಉತ್ತರ.

ಡಾ. ಪರೇಖ್ ಮತ್ತು ನೀವು ಒಟ್ಟಿಗೆ ವಾಸಮಾಡುತ್ತಿದ್ದೀರೆಂದು ತಿಳಿದು ಸಂತೋಷವಾಯಿತು. ಅಲೆಯುವ ಮನ ಸೈತಾನನ ಕರ್ಮಾಗಾರ.

......ಹಿಂದೆ ನೀವು ಒಂಟಿಯಾಗಿದ್ದ ದಿನಗಳು ಬದುಕಿನ ಪೂರ್ವಾರ್ಧ. ವಿವಾಹಾನಂತರದ್ದು ಉತ್ತರಾರ್ಧ. ಸ್ವಾತಂತ್ರ್ಯದ ಸುಖ ಬೇರೆ. ಬಂಧನದ ಸುಖ ಬೇರೆ. ಹೊಸತನ್ನು ಸ್ವೀಕರಿಸುವಾಗ ಹಳೆಯ ಕೆಲವನ್ನು ನಾವು ಬಿಡಲೇ ಬೇಕಾಗುತ್ತದಲ್ಲ? ಮದುವೆಯ ವಿಷಯದಲ್ಲಿ ನಾನು ಅನುಭವಿಯಲ್ಲ. ಆದರೂ ನನಗನ್ನಿಸುವುದು ಹೀಗೆ: ವಿಭಿನ್ನ ಪರಿಸರಗಳಲ್ಲಿ ಬೆಳೆದ ಎರಡು ಜೀವಿಗಳು 'ದೇಹಗಳೆರಡು ಆತ್ಮವೊಂದು' ಎನ್ನುವಂತಾಗಬೇಕಾದರೆ ಬಹಳ ಕಾಲ ಬೇಕು. ಮೊದಲ ಒಂದೆರಡು ಪ್ರಯೋಗಗಳ ಫಲಿತಾಂಶ ಕಂಡು ಹತಾಶರಾಗುವುದು ದೌರ್ಬಲ್ಯದ ಲಕ್ಷಣ.

ಎಲ್ಲಿಗೆ ಬರೆಯಬೇಕೆಂಬುದು ತಿಳಿಯದೆ, ನವ ದಂಪತಿಗಳಿಗೆ ಶುಭಾಶಯಗಳನ್ನು ನಾನು ಕಳುಹಿಸಿರಲಿಲ್ಲ. ಈಗ ಆ ಅವಕಾಶ ದೊರೆತಿದೆ. ಡಾ. ಪರೇಖ್ ಹಾಗೂ ನಿಮ್ಮ ಬದುಕು ಬಂಗಾರವಾಗಲಿ–ಎಂದು ಹೃತ್ಪೂರ್ವಕವಾಗಿ ನಾನು ಹಾರೈಸುವೆ.

ನನ್ನ ಜೀವನ ನಿಶ್ಚಿತ ರೂಪವನ್ನು ತಳೆಯತೊಡಗಿದೆ. ಸಶಸ್ತ್ರ ವೈದ್ಯಕೀಯ ದಳವನ್ನು ಸೇರಲು ನಿರ್ಧರಿಸಿದ್ದೇನೆ. ಇನ್ನು ಕೆಲವೇ ದಿನಗಳಲ್ಲಿ ಇಂಟರ್‌ವ್ಯೂ ನಡೆಯಬಹುದು. ಆ ಮೇಲೆ ಒಂದು ವಾರದೊಳಗೆ ಹೊರಟುಬಿಡುವೆ. ಹೀಗೆ, ನಾಲ್ಕು ಜನರಿಗೆ ಉಪಯುಕ್ತವಾಗುವ ಬಾಳ್ವೆ ನಡೆಸಬೇಕೆಂಬ ನನ್ನ ಕನಸು ಸದ್ಯದಲ್ಲೇ ಮೂರ್ತಸ್ವರೂಪ ತಳೆಯಲಿದೆ.

ಡಾ. ಪರೇಖರಿಗೂ ನಿಮಗೂ ನನ್ನ ಒಲವು ತುಂಬಿದ ವಂದನೆಗಳು.

ಇತಿ, ವಿಶ್ವಾಸದ,

–ರಾಮು

–ಬರೆದು ಮುಗಿಸಿದ ಬಳಿಕ ಜಯರಾಮು ಆ ಉತ್ತರವನ್ನೋದಿದ. ಎರಡು ಸಾರೆ. ಸಮಾಧಾನವೆನಿಸಲಿಲ್ಲ.

'ಇದಕ್ಕಿಂತ ಹೆಚ್ಚು ತೃಪ್ತಿಕರವಾಗಿ ಬರೆಯಲು ನಾನು ಅಸಮರ್ಥ'–ಎಂದುಕೊಂಡು, ಕೊಂಡು ತಂದಿದ್ದ ಲಕೋಟೆಯೊಳಗೆ ಕಾಗದವನ್ನು ಸೇರಿಸಿದ.

೧೭

ಜಯಶ್ರೀಯ ಫೋನ್ ಕರೆ ಬಂದ ಕ್ಷಣದಿಂದ ತ್ಯಾಗರಾಜನ ಮನಸ್ಸು ಅಸ್ತವ್ಯಸ್ತವಾಯಿತು. ಸುಮಾರು ಒಂದೂವರೆ ತಿಂಗಳಾಗಿತ್ತು ಪ್ಯಾರಡೈಸಿಗೆ ಆಕೆಯನ್ನು ಆತ ಕರೆದುಕೊಂಡು ಹೋಗಿ. ಇನ್ನು ಮುಂದುವರಿಯುವುದೇ ಸರಿ, ಎಂದುಕೊಂಡಿದ್ದ. ಎರಡು ವಾರಗಳ ಬಳಿಕ ಓದಲೆಂದು ಆಕೆ ಕೊಟ್ಟ 'ಲೊಲಿಟಾ', ಅವನನ್ನು ವಿಸ್ಮಯಕ್ಕೆ ಗುರಿ ಮಾಡಿತು. ಅದಾದ ಮೇಲಂತೂ ಸಂದೇಹಕ್ಕೆ ಎಡೆ ಇರಲಿಲ್ಲ.

[ಇದು ಸೂರ್ಯರಶ್ಮಿ ಮುಟ್ಟಿದೊಡನೆಯೇ ಕರಗುವ ಹಿಮಗಡ್ಡೆ.]

ಮಾತಿನ ಮೋಡಿ, ಯಕ್ಷಿಣೀ ಸ್ಪರ್ಶ–ಇವೆರಡು ಸಾಲವೆ ವಶೀಕರಣಕ್ಕೆ?

ಆದರೂ ತ್ಯಾಗರಾಜನ್ ಆತುರಪಡಲಿಲ್ಲ. ದುಡುಕಿ ಇಡುವ ಒಂದು ತಪ್ಪು ಹೆಜ್ಜೆಯಿಂದ ಹತ್ತಾರು ವರ್ಷಗಳ ಕನಸು ನುಚ್ಚುನೂರಾಗಬಹುದಲ್ಲ?

ಕ್ರಮಕ್ರಮವಾಗಿಯಾದರೂ ಹೆಜ್ಜೆಗಳನ್ನಿಡೋಣವೆಂದರೆ ಚೀಣೀ ದಾಳಿ ವಿಚಿತ್ರ ಪರಿಸ್ಥಿತಿಯೊಂದಕ್ಕೆ ಎಡೆ ಮಾಡಿಕೊಟ್ಟು, ತನ್ನ ಯೋಜನೆಯನ್ನು ತ್ಯಾಗರಾಜನ್ ತಾತ್ಕಾಲಿಕವಾಗಿ ಬದಿಗಿಡುವಂತೆ ಮಾಡಿತು. ಇದ್ದಕ್ಕಿದ್ದಂತೆ ಜಯಶ್ರೀ ಸಾರ್ವಜನಿಕ ಚಟುವಟಿಕೆಗಳಲ್ಲಿ ಮಗ್ನಳಾದ ರೀತಿ ಆಶ್ಚರ್ಯಕರವಾಗಿತ್ತು. ಬೇರೆಯವರಾದರೆ 'ಎಷ್ಟೆಂದರೂ ತಂದೆಯ ಮಗಳು' ಎನ್ನುವಂತಹ ಸನ್ನಿವೇಶ. ಆದರೆ ತ್ಯಾಗರಾಜನ್ ಅರ್ಥಮಾಡಿಕೊಂಡಿದ್ದ: 'ಇಂತಹ ಓಡಾಟ ಕುಣಿದಾಟಗಳಿಂದ ಅವಳ ಅತೃಪ್ತ ಕಾಮನೆಗಳು ವಿಕೃತ ಸುಖವನ್ನೂ ಸಮಾಧಾನವನ್ನೂ ಪಡೆಯುತ್ತಿವೆ.' ಆದರೆ ಇದು ಎಷ್ಟರ ತನಕ? ನೈಸರ್ಗಿಕ ಭೋಗರತೆವನ್ನು ಕೃತ್ರಿಮ ಗದ್ದಲ ಎಷ್ಟೆಂದು ಮರೆಸೀತು?

[–'ಇವತ್ತಲ್ಲ ನಾಳೆ ಯುವತಿಯರಿಗೆ ಸಹಜವಾದ ರೀತಿಯಲ್ಲಿ ಅವಳು ವರ್ತಿಸಲೇಬೇಕು.']

ಈ ದಿನದ ಫೋನ್ ಕರೆ. ಆಕೆಯ ಎದೆಗುಂಡಿಗೆಯ ಡವ ಡವ ಸಪ್ಪಳ ಕೇಳಿಸಿತ್ತಲ್ಲವೆ ತನಗೆ? ಮಾತಿನ ಧ್ವನಿ? ['ಲೊಲಿಟಾ ಓದಿ ಆಯ್ತೆ?'] ಅದೊಂದು ಬಗೆಯ ಸಂಕೇತ–ಸಂಜ್ಞೆ. ['ನಿಮ್ಮನ್ನ ಏನೋ ಸಲಹೆ ಕೇಳಬೇಕು'] ನಿಜವಾದು ದನ್ನು ಮುಚ್ಚಿಡುವ ಅರ್ಥವಿಲ್ಲದ ಪದಗಳು. ಈ ಕಪಟ ನಾಟಕ ಪ್ರಾಯಶಃ ಎದುರಲ್ಲಿ ಇದ್ದಿರಬಹುದಾದ ವ್ಯಕ್ತಿಗಳಿಗೋಸ್ಕರ.

ಅಂತೂ ಇಷ್ಟು ದಿನಗಳಾದ ಮೇಲೆ ಅನುಕೂಲ ಪರಿಸ್ಥಿತಿ ಒದಗಿಬಂದಿತಲ್ಲ?

–ಒಮ್ಮೊಮ್ಮೆ ತನ್ನ ತಾಳ್ಮೆ ಕಂಡು ತ್ಯಾಗರಾಜನಿಗೇ ಸೋಜಿಗವೆನಿಸು ತಿತ್ತು. ಅವನ ಪರಿಚಿತ ಹೆಣ್ಣುಗಳಲ್ಲಿ ಒಬ್ಬಾಕೆ ವಿದ್ಯಾರ್ಥಿನಿ. ಅವಳಿಗೆ ಪ್ರತಿಫಲದ ಆಸೆ ತೋರಿದ್ದರೆ ಜಯಶ್ರೀಯನ್ನು ನಿಸ್ಸಂಶಯವಾಗಿಯೂ ಅಡ್ಡ ದಾರಿಗೆ ಎಳೆದು ತರುತ್ತಿದ್ದಳು. ಆದರೆ ತ್ಯಾಗರಾಜನಿಗೆ ಆ ಸ್ಥಿತಿಯಲ್ಲಿ ಜಯಶ್ರೀ ಬೇಕಾಗಿರಲಿಲ್ಲ. ಆತ ಬಯಸುತ್ತಿದ್ದುದು ಅವಳ ಹೃದಯವನ್ನು, ಶ್ರೀಸದನವನ್ನು.

ಜಯರಾಮು ಮನೆ ಬಿಟ್ಟು ಹೋದಮೇಲೆ ರಂಗ ಸಿದ್ಧವಾಗಿತ್ತು. ತ್ಯಾಗ ರಾಜನ ಪ್ರವೇಶಕ್ಕಾಗಿ ತೆರೆ ಸರಿದಿತ್ತು. ಮುಂದಕ್ಕೆ ಅಡಿ ಇಡೆ, ಇಂದ್ರಪದವಿ. ಪ್ರೇಕ್ಷಕರ ಕರತಾಡನ. ['ಅದೃಷ್ಟವಂತ !'] ಹುರ್ರಾ, ಹುರ್ರಾ. ಜಾರಿ ಬಿದ್ದೆನೋ, ಬಿದ್ದವನನ್ನು ತುಳಿಯುವ ಅಪಹಾಸ್ಯದ ನಗೆ......

–ನ್ಯಾಯಾಸ್ಥಾನಕ್ಕೆ ಹೊರಡಲು ತ್ಯಾಗರಾಜನ್ ಸಿದ್ಧನಾದ. ಅಭ್ಯಸಿಸು ತ್ತಿದ್ದ ಕೇಸ್‌ಫೈಲನ್ನು ಮುಚ್ಚಿ ಬ್ರೀಫ್‌ಕೇಸಿನೊಳಗಿರಿಸಿದ.

ಕಾರನ್ನೇರಿದಾಗ ಅವನಿಗನ್ನಿಸಿತು: ಇದನ್ನಿನ್ನು ತಾನು ಬದಲಾಯಿಸ ಬೇಕು; ಹೊಸತೊಂದನ್ನು ಕೊಳ್ಳಬೇಕು.

ಅವನಿಗೆ ನಗು ಬಂತು; ಕಾರೊಂದೇ ಯಾಕೆ? ಇನ್ನು ಎಲ್ಲವೂ ಹೊಸದೇ.

'ಸಾಹುಕಾರ ಶ್ರೀಕಂಠಯ್ಯನವರ ಸಕಲ ಸಂಪತ್ತಿಗೆ ಹಕ್ಕುದಾರಳಾದ ಪುತ್ರಿ ಶ್ರೀಮತಿ ಜಯಶ್ರೀಯ ಪತಿ ಶ್ರೀಮಾನ್......'

ಶ್ರೀಸದನದಲ್ಲೇ ಬಂದು ಇರು–ಎನ್ನಬಹುದು ಶ್ರೀಕಂಠಯ್ಯ. ಒಪ್ಪಿ ಬಿಡಬೇಕು. ಜಸ್ಟಿಸ್ [ಆ ಮೇಲೆ ಚೀಫ್ ಜಸ್ಟಿಸ್] ಆಗುವೆನೋ ಅಥವಾ ರಾಜಕೀಯಕ್ಕೆ ಧುಮುಕುವೆನೋ ಯಾರಿಗೆ ಗೊತ್ತು? ಯುದ್ಧಕಾಲದಲ್ಲಿ ಲಂಡನ್ನಿ

ನಲ್ಲಿ ಜೀವನ ನಿರ್ವಹಣಕ್ಕಾಗಿ ಕ್ಯಾಬ್ ಡ್ರೈವರ್ ಆಗಿದ್ದ ರಾಜನ್ ಭಾರತದ ಶ್ರೇಷ್ಠ ಪಾರ್ಲಿಮೆಂಟೇರಿಯನ್ ! ಪ್ರಧಾನಮಂತ್ರಿ ಪದವಿ? ರಾಷ್ಟ್ರಾಧ್ಯಕ್ಷ ಸ್ಥಾನ?

ಗಗನ ಹಾರ ಬಲ್ಲೆನೆ ತಾನು?

ಎಷ್ಟು ಹಾರ್‍ನ್ ಮಾಡಿದರೂ ಬದಿಗೆ ಸರಿಯಲು ನಿರಾಕರಿಸಿದ ಸೈಕಲ್ ಸವಾರನೊಬ್ಬನ ಪಕ್ಕದಿಂದ ಸುಂಯ್‌ಗುಟ್ಟಿ ದಾಟಿ, ತ್ಯಾಗರಾಜನೆಂದುಕೊಂಡ:

ಮೊದಲು ಇದೊಂದು ಜಗಲಿಯನ್ನು ತಾನು ಹಾರಬೇಕು.

......ನ್ಯಾಯಾಸ್ಥಾನದಲ್ಲಿ 'ಹಲ್ಲೋ', 'ಹಲ್ಲೋ.'

ವಕೀಲ ವೃತ್ತಿಯನ್ನು ಕೈಕೊಂಡಿದ್ದ ಮಿಸ್ ಜಾಹ್ನವಿ [ಮೂವತ್ತೈದರ ಕುಮಾರಿ] ಕೇಳಿದಳು:

"ಬಹಳ ಸುಪ್ರಸನ್ನರಾಗಿದೀರಲ್ಲ! ಏನು ಸಮಾಚಾರ?"

"ನನ್ನ ಎದುರುವಕೀಲರು ಕಣ್ಣಿಗೆ ಬೀಳೋದಕ್ಕೆ ಮುಂಚೆಯೇ ತಮ್ಮ ಮುಖದರ್ಶನವಾಯ್ತೂಂತ ಇಷ್ಟೊಂದು ಹರ್ಷ."

ಜಾಹ್ನವಿ ನಕ್ಕಳು. ಆದರೆ, ತ್ಯಾಗರಾಜನ್ ಹಾಗೆ ಉತ್ತರಿಸಿದುದು ಆಕೆಯ ಹಿಂದಿನಿಂದ ಬರತೊಡಗಿದ್ದ ಪ್ರತಿವಾದಿಯ ವಕೀಲನಿಗೋಸ್ಕರ, ಆತನಿಗೆ ಕೇಳಿಸಲೆಂದು.

ಅವನು,

"ಮಿಸ್ಟರ್ ತ್ಯಾಗರಾಜನ್. ಒಂದ್ನಿಮಿಷ."

–ಎಂದ.

ಜಾಹ್ನವಿ ಕುಶಲ ಸಂಭಾಷಣೆಗೆ ಬೇರೆಯವರನ್ನು ಹುಡುಕುತ್ತ ನಡೆದಳು.

ಪ್ರತಿವಾದಿಯ ವಕೀಲ ಮಾತನಾಡಿಸಿದಾಗ ತ್ಯಾಗರಾಜನ ಪಂಚೇಂದ್ರಿಯ ಗಳೂ ಜಾಗೃತಗೊಂಡುವು.

"ಏನು?"

"ಒಂದು ಅಡ್ಜರ್ನ್‌ಮೆಂಟ್ ಕೇಳೋಣಾಂತಿದೀನಿ. ಒಪ್ತೀರಾ?"

ಕೋರಿಕೆಯನ್ನು ಆಲಿಸುತ್ತಿದ್ದಾಗ ತ್ಯಾಗರಾಜನ ಹುಬ್ಬುಗಳು ಕುಣಿದುವು.

"ಅಷ್ಟೇ ತಾನೆ? ತಗೊಳ್ಳಿ."

–ಎಂದ ಆತ.

ಈತ ಇಷ್ಟು ಸುಲಭವಾಗಿ ಒಪ್ಪಿದನಲ್ಲ. ಎಂದು ಎದುರು ವಕೀಲನಿಗೆ ಆಶ್ಚರ್ಯ.

"ಥ್ಯಾಂಕ್ ಯೂ. ಥ್ಯಾಂಕ್ ಯು ವೆರಿ ಮಚ್,"

–ಎಂದು ಆತ ಎಲ್ಲ ಹಲ್ಲುಗಳನ್ನೂ (ಒಂದು ಸ್ವರ್ಣದಂತ) ತೋರಿಸಿ ನಕ್ಕ.

ಮೊಕದ್ದಮೆಯನ್ನು ಮುಂದೆ ಹಾಕುವುದೊಂದೇ ಏನು? 'ದಯವಿಟ್ಟು ಇದನ್ನ ಗೆಲ್ಲೋಕೆ ಅವಕಾಶ ಕೊಡಿ' ಅಂತ ಆತ ಕೇಳಿದ್ದರೂ, 'ಬಡವ, ಬದುಕಿಕೋ' ಎಂದು ನುಡಿದು ಒಪ್ಪಲು ತ್ಯಾಗರಾಜನ್ ಆ ದಿನ ಸಿದ್ಧನಿದ್ದ.

ಎದುರುವಕೀಲ ನ್ಯಾಯಾಧೀಶರೆದುರು ವಿಚಾರಣೆಯನ್ನು ಮುಂದಕ್ಕೆ ಹಾಕಬೇಕೆಂಬ ಪ್ರಾರ್ಥನೆ ಸಲ್ಲಿಸಿದಾಗ, ನ್ಯಾಯಮೂರ್ತಿಗಳು ತ್ಯಾಗರಾಜನ ಕಡೆ ನೋಡಿದರು, ಪ್ರತಿಭಟನೆಯನ್ನು ನಿರೀಕ್ಷಿಸಿ.

"ಆಕ್ಷೇಪವಿಲ್ಲ."

–ಎಂದು ನುಡಿದು ತ್ಯಾಗರಾಜನ್, ನ್ಯಾಯಾಧೀಶರನ್ನು ಅಚ್ಚರಿಗೊಳಿಸಿದ.

ವಾದಿ ಪ್ರತಿವಾದಿಗಳ ಪರವಾಗಿ ಅವರ ವಕೀಲರೇ ನಡೆಸುತ್ತಿದ್ದ ಮೊಕದ್ದಮೆ. ಎದುರು ವಕೀಲ ಇನ್ನೊಂದು ಖಟ್ಲೆಯಲ್ಲಿ ವಾದಿಸುವುದಕೋಸ್ಕರ ಪಕ್ಕದಲ್ಲಿದ್ದ ಸೆಶನ್ಸ್ ನ್ಯಾಯಾಸ್ಥಾನಕ್ಕೆ ಧಾವಿಸಿದ.

ತ್ಯಾಗರಾಜನ್ ಹೊತ್ತು ಕಳೆಯಲೆಂದು ಕೋರ್ಟಿನಲ್ಲಿ ಸ್ವಲ್ಪ ಸಮಯ ಕುಳಿತ್ತಿದ್ದು, ಬಳಿಕ ಬಾರ್ ಅಸೋಸಿಯೇಶನಿಗೆ ನಡೆದ. ಸಿಗಾರ್ ತರಿಸಿ ಸೇದಿದ. ಚಹಾ ಬೇಕೆಂದು ಕ್ಯಾಂಟೀನಿಗೆ ಹೇಳಿ ಕಳುಹಿ ಹತ್ತಿರ ಇದ್ದವರಿಗೆಲ್ಲ ಕುಡಿಸಿದ.

"ನಮ್ಮ ಬಾರ್‌ನಲ್ಲಿರೋದು ಬರೇ ಟೀ."

–ಹಿಂದೆಯೂ ಅನೇಕ ಸಾರೆ ನುಡಿದಿದ್ದ ಹಾಸ್ಯೋಕ್ತಿ. ಆದರೆ ಅದು, ಎಷ್ಟು ಚಲಾಯಿಸಿದರೂ ಸವೆಯದ ನಾಣ್ಯ.

ಹರಟೆ. ಅದಕ್ಕೆ ವಸ್ತು ಚೀಣೀ ದಾಳಿ; ಭಾರತೀಯ ಪಡೆಗಳ ಪ್ರತಿಭಟನಾ ವೈಖರಿ.

ಮಾತು ಬೇಸರವಾದ ಮೇಲೆ ತ್ಯಾಗರಾಜನ್ ಬಾರ್ ಅಸೋಸಿಯೇಶನ್ನಿನ ಗ್ರಂಥ ಭಂಡಾರವನ್ನು ಪ್ರವೇಶಿಸಿದ. ಲಾ ಜರ್ನಲಿನ ಹಳೆಯದೊಂದು ಸಂಪುಟವನ್ನು ಕಪಾಟದಿಂದ ಹೊರತೆಗೆದು, ವಾರಸು ಹಕ್ಕುಗಳಿಗೆ ಸಂಬಂಧಿಸಿದ ಕೆಲ ತೀರ್ಪುಗಳನ್ನು ಓದತೊಡಗಿದ.

ಒಂದು ಘಂಟೆಯ ಹೊತ್ತಿಗೆ ಆಕಳಿಕೆ ಬಂತು. ಲಂಚ್ ಮುಗಿಸಿ ಮನೆಗೆ ಹೋಗಿ ಸ್ವಲ್ಪ ಹೊತ್ತು ವಿಶ್ರಮಿಸುವುದೊಳಿತು–ಎನಿಸಿತು.

ತಿಂಡಿ ತೀರ್ಥಗಳಿಗಾಗಿ ಆತ ಮೆಲಾನೀ'ಸ್‌ಗೆ ಹೋದ......

......ನಿದ್ದೆಹೋಗಿದ್ದ ಪೀಟರ್ ಗಡಬಡಿಸಿ ಎದ್ದು ಕಣ್ಣುಜ್ಜಿಕೊಂಡು ತನ್ನ ಸಾಹೇಬರಿಗಾಗಿ ಬಾಗಿಲು ತೆರೆದ.

"ಹಗಲು ಹೊತ್ತು ಮಲಗ್ತೀಯೇನೊ, ಸುವ್ವರ್ !"

–ಎಂದು ಚಾಕರನನ್ನು ಬಯ್ದು, ಉಡುಪು ಬದಲಿಸಿ, ಮಲಗುವ ಕೋಣೆಯನ್ನು ತ್ಯಾಗರಾಜನ್ ಹೊಕ್ಕ.

ಎಚ್ಚರವಾದಾಗ ಘಂಟೆ ನಾಲ್ಕಾಗಿತ್ತು. ಪೀಟರ್ ತಂದುಕೊಟ್ಟ ಬಿಸಿ ಬಿಸಿಯಾದ ಟೀ [ಟು ಲೀವ್ಸ್ ಅಂಡ್ ಎ ಬಡ್] ಚೇತೋಹಾರಿಯಾಗಿತ್ತು.

['ಐದು–ಐದೂವರೆಗೆ' ಎಂದಿದ್ದಳು ಜಯಶ್ರೀ. ಬಹಳ ಮುಂಚಿತವಾಗಿ ಹೋಗಿ ನಗೆಗೀಡಾಗಬಾರದು.]

ತ್ಯಾಗರಾಜನ್ ಮುಖಕ್ಷೌರ ಮಾಡಿಕೊಂಡ. ಆ ದಿನ ಅದು ಎರಡನೆಯ ಸಲದ್ದು. ಕಪ್ಪು ಬಣ್ಣಕ್ಕೆ ವಿದಾಯ ಹೇಳಿದ್ದ ತಲೆಗೂದಲಿಗೆ, ಕರಿದುಗೊಳಿಸುವ ದ್ರಾವಕವನ್ನು ಸುರಿದು ತಿಕ್ಕಿದ. ಮುಖಕ್ಕೆ ಕ್ರೀಮ್. ನವುರಾಗಿ ಒಂದು ಪದರ ಪೌಡರ್. ['ಹದಿನೈದು ವರ್ಷಗಳನ್ನ ನಿವಾಳಿಸಿ ತೆಗೆದೆನಲ್ಲ? ನಾನೀಗ ಯುವಕ.'] ಕಪ್ಪು ಬಣ್ಣದ ಡೆಕರಾನ್ ಪ್ಯಾಂಟು, ಅಚ್ಚ ಬಿಳುಪಿನ ಟೆರಲಿನ್ ಶರ್ಟು, ಬಿಳಿಯ ಚುಕ್ಕೆಗಳಿದ್ದ ಕಪ್ಪು ಟೈ [ಮನುಷ್ಯನ ಎರಡು ಬಣ್ಣಗಳು......].

"ಪೀಟರ್......"

"ಯೆಸ್ ಸರ್ ?"

"ನಾನು ಹೊರಗೆ ಹೋಗ್ತೀನಿ. ಬರೋದು ತಡವಾಗಬಹುದು."

"ಯೆಸ್ಸರ್......"

"ಯಾರಾದರೂ ಫೋನ್ ಮಾಡಿದರೆ ಇವತ್ತು ಬೇಡ ಅನ್ನು."

'ಯಾರಾದರೂ' ಎಂಬ ಪದದ ಅರ್ಥ ಪೀಟರ್ ಬಲ್ಲ.

"ಯೆಸ್ಸರ್."

"ಎಚ್ಚರವಾಗಿರು, ಮಲಕೋಬೇಡ."

ಪೀಟರನ ತಲೆ ಆಡುವ ಬಾಲವಾಯಿತು. ಬಂಟ ಹಲ್ಲು ಕಿಸಿದು ತನ್ನ ನಿಷ್ಠೆಯನ್ನು ಸೂಚಿಸಿದ.

ತ್ಯಾಗರಾಜನ್ ಶೂಗಳ ಲೇಸು ಬಿಗಿದಾಗ ಐದು ಘಂಟೆಗಿನ್ನೂ ಐದು ನಿಮಿಷಗಳಿದ್ದುವು. ಆತ ಶಿಳ್ಳು ಹಾಕುತ್ತ ಗರಾಜಿಗೆ ನಡೆದ.

—ಅಷ್ಟೊಂದು ಸಿದ್ಧತೆಯೊಡನೆ ತಾನು ಹೊರಬಿದ್ದುದು ಬದುಕಿನಲ್ಲಿ ಅದೆಷ್ಟ ನೆಯ ಬಾರಿಯೊ? ಆದರೆ ಈ ಸರ್ತಿಯದು ಬೇರೆ ಬಗೆಯ ಅಭಿಯೋಗ. ಈ ಹುಡುಗಿ ಬರಿಯ ಭೋಗಕ್ಕಲ್ಲ—ಉಪಯೋಗಕ್ಕೆ. ಈಕೆ ಹಾಸಿಗೆಯಲ್ಲ, ಏಣಿ.

ಬೀದಿಗಿಳಿದಾಗ ತ್ಯಾಗರಾಜನ್, ಕಾರಿನ ಹಿನ್ನೋಟ ದರ್ಶಕವನ್ನು ಸರಿಪಡಿ ಸುತ್ತ, ಅದರಲ್ಲಿ ತನ್ನ ಪ್ರತಿಬಿಂಬವನ್ನೂ ನೋಡಿಕೊಂಡ......

......ಕಾಲೇಜಿನಲ್ಲಿ ತರಗತಿಗಳು ಮುಗಿದೊಡನೆ ಜಯಶ್ರೀ ಹೊರಬಂದಳು. ಒಂದೆರಡು ಪುಸ್ತಕಗಳನ್ನಷ್ಟೇ ಆದಿನ ಅವಳು ತಂದಿದ್ದಳು.

'ನಾನು ಬರೋದು ತಡವಾಗುತ್ತೆ. ಸಾಯಂಕಾಲ ಕಾರು ಬೇಡ. ಬ್ಯಾರಿಸ್ಟರ್ ಸಾಹೇಬರು ಕರಕೊಂಡು ಬರ್‍ತಾರಂತೆ—ಅಂತ ಮನೇಲಿ ತಿಳಿಸು.'

—ಎಂದು ಚಿಕ್ಕಣ್ಣನಿಗೆ ಬೆಳಗ್ಗೆಯೇ ಆಕೆ ಹೇಳಿದ್ದಳು.

ಹೊರಟು ನಿಂತ ನಳಿನಿ ಕೇಳಿದಳು:

"ಎಲ್ಲಿ ನಿನ್ನ ರಥ? ಕಾಣಿಸ್ತಿಲ್ಲ......ಬರ್ತೀಯೇನು ನನ್ನ ಜತೆ?"

"ಇಲ್ಲಮ್ಮ. ನೀನು ಹೋಗು."

ನಳಿನಿ ಹೋದಮೇಲೆ ಜಯಶ್ರೀಗನಿಸಿತು: ಗೆಳತಿಯ ಜತೆ ಹೋಗಿಬಿಡ ಬಹುದಾಗಿತ್ತು. 'ಅರ್ಜೆಂಟಾಗಿ ಬರಬೇಕಾಯ್ತು, ಸಾರಿ'—ಅಂತ ಆ ಮೇಲೆ ತ್ಯಾಗ ರಾಜನ್‌ಗೆ ತಿಳಿಸಬಹುದಿತ್ತು. ಆತನನ್ನು ತಾನು ಬರಹೇಳಿರುವುದಾದರೂ ಯಾಕೆ? ಆತ 'ಏನು ಸಲಹೆ ಬೇಕು?' ಎಂದರೆ ಏನೆಂದು ಉತ್ತರ ಕೊಡಲಿ?......

'ಮಿಸ್ಟರ್ ಹಂಬರ್ಟರ ದಾರಿ ನೋಡ್ತಿದೀನಿ' ಅಂತ ನಳಿನಿಗೆ ಹೇಳುವ ಧೈರ್ಯವಿತ್ತೆ, ತನಗೆ?

—ಜಯಶ್ರೀಯ ಮುಖ ಕೆಂಪೇರಿತು. ತನಗೆ ತಲೆಕೆಟ್ಟಿಲ್ಲವಷ್ಟೆ? ಆತ ತಮ್ಮ ಕುಟುಂಬದ ಲಾಯರ್; ತಂದೆಯ ಸ್ನೇಹಿತ. ಮಾವಯ್ಯ ಅಂತ ಆತನಲ್ಲಿ ತನಗೆ ಸಲಿಗೆ. ಅವರ ಒಡನಾಟದಿಂದ ತನಗೆ ದೊರೆಯುವುದಾದರೂ ಏನು?

ಅನುಭವ.

ಯಾತರದು? ಯಾವ ಬಗೆಯದು?

ಮತ್ತೆ ಮತ್ತೆ ಜಯಶ್ರೀ ಅಂದುಕೊಂಡಳು: ತ್ಯಾಗರಾಜರನ್ನು ತಾನು ಕರೆಯಬಾರದಿತ್ತು, ಕರೆಯಬಾರದಿತ್ತು. ಐದೂವರೆಯ ಅನಂತರ ಒಂದು ನಿಮಿ ಷವೂ ತಾನಿಲ್ಲಿ ಇರಬಾರದು. ಅಷ್ಟರೊಳಗೆ ಆತ ಬರಲಾಗದೆ ಹೋದರೆ ಎಷ್ಟು

ಚೆನ್ನು ! 'ಅವರು ಬರದ ಹಾಗೆ ಮಾಡು ದೇವರೇ...' ಈ ಸಲ ಪಾರಾದೆನೆಂದರೆ ಇನ್ನೆಂದೂ ಇಂತಹ ಸಾಹಸಕ್ಕೆ ಕೈಹಾಕುವುದಿಲ್ಲ......

ಅನೇಕ ಕಾರುಗಳು ಕಾಲೇಜಿನ ಗೇಟಿನ ಮುಂದಿನಿಂದ ಹಾದುಹೋದುವು. ಆವರಣದಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಕಡಮೆಯಾಯಿತು.

[ಐದೂ ಇಪ್ಪತ್ತು. ಇನ್ನು ಹತ್ತು ನಿಮಿಷ ದಾಟಿದರಾಯಿತು. ಇಲ್ಲಿಂದ ತಪ್ಪಿಸಿಕೊಳ್ಳುವೆ.]

ಅಕೋ. ಅದಲ್ಲ. ಅದೇ.

ಕವಲು ದಾರಿಗಳ ವೃತ್ತಕ್ಕೆ ಪ್ರದಕ್ಷಿಣೆ ಹಾಕಿ ಬರುತ್ತಲಿದ್ದ ತ್ಯಾಗರಾಜನ ವಾಹನ ಕಂಡು ಜಯಶ್ರೀಯ ಕಾಲುಗಳು ಬಲಹೀನವಾದುವು. ಭೂಮಿ ಬಾಯಿ ತೆರೆದು ತನ್ನನ್ನು ಒಳಕ್ಕೆಳೆದುಕೊಳ್ಳಬಾರದೆ—ಎನಿಸಿತು.

ಆದರೆ ಮುಖ ಒಳಗಿನ ಗೊಂದಲದ ಮೇಲೆ ಮಂದಹಾಸದ ಮುಸುಕೆಳೆಯಿತು.

"ಹಲೋ ಜಯಾ !"

"ಹಲೋ !"

ಕಾಲೇಜಿನ ಹೊರಜಗಲಿಯಲ್ಲೂ ಮರಗಳ ಕೆಳಗೂ ಇದ್ದ ಹುಡುಗಿಯರ ಮೇಲೆಯೊಮ್ಮೆ ಕ್ಷಿಪ್ರನೋಟ ಬೀರಿ, ಜಯಶ್ರೀಗಾಗಿ ತನ್ನ ಮಗ್ಗುಲ ಬಾಗಿಲನ್ನು ತ್ಯಾಗರಾಜನ್ ತೆರೆದ.

ಖಾದಿ ರೇಶಿಮೆಯ ನಸುಗೆಂಪಿನ ಸೀರೆ [ಕೆಂಪು?]; ಬಿಳಿಯ ಬಿಗಿ ಕುಪ್ಪಸ. ವೇಳೆಯ ಆಘಾತವನ್ನು ಸಹಿಸಿ ಉಳಿದಿದ್ದ ಕೇಶಾಲಂಕಾರ. ಕತ್ತು ಕಾಣಿಸುವಂತೆ ಎತ್ತರಕ್ಕೆ ಕಟ್ಟಿದ್ದ ತುರುಬು. ಕತ್ತಿನ ಹಿಂಬದಿಯಲ್ಲಿ ಎರಡು ಕೂದಲ ಸುಳಿಗಳು. ಕೊರಳನ್ನು ಬಿಗಿಯಾಗಿ ಬಳಸಿದ್ದ ಬಂಗಾರದ ಎರಡೆಳೆಗಳ ಸರ. ಬೋಳು ಕಿವಿಗಳು, ಬೋಳು ಕೈಗಳು. [ಎಡಗೈಯಲ್ಲಿದ್ದ ವಾಚೊಂದು ಅಪವಾದ.]

ಬೀದಿಯಲ್ಲಿ ವೃತ್ತದ ಪ್ರದಕ್ಷಿಣೆಯನ್ನು ಪೂರ್ತಿಗೊಳಿಸಿ ದಾರಿಹಿಡಿಯುತ್ತ ತ್ಯಾಗರಾಜನೆಂದ:

"ಖಾದಿ ರೇಶಿಮೆ ನಿನಗೆ ಚೆನ್ನಾಗಿ ಒಪ್ಪುತ್ತೆ, ಜಯಾ."

ಆಕೆ ಸಣ್ಣನೆ ನಕ್ಕು ಅಂದಳು:

"ಹಾದೆ? ಮೊನ್ನೆಯಷ್ಟೇ ಕೊಂಡದ್ದು. ಎಮರ್ಜೆನ್ಸಿಗೆ ಸರಿಯಾಗಿದೆ, ಅಲ್ವ ?"

"ಓಹೊ !"

–ಇವಳ ಅಣ್ಣನಿಗೂ ಖಾದಿಯ ಹುಚ್ಚು. ಆದರೆ ಅಣ್ಣನ ನಕ್ಷತ್ರ ಬೇರೆ, ತಂಗಿಯ ನಕ್ಷತ್ರ ಬೇರೆ, ಸದ್ಯಃ !

"ಎಲ್ಲಿಗೆ ಹೋಗೋಣ ?"

ಜಯಶ್ರೀಗೆ ಅನಿಸಿತು: 'ಮನೆಗೆ'–ಅಂದುಬಿಡಲೆ? ಮನೆ ತಲಪಿದೊಡನೆ 'ಥ್ಯಾಂಕ್ಸ್' ಎಂದು ನುಡಿದು ಒಳಕ್ಕೆ ಓಡಿದರಾಯಿತು.

ತ್ಯಾಗರಾಜನೇ ಕೇಳಿದ:

"ಪಾರ್ಕ್? ಕಾಫಿ? ಐಸ್‌ಕ್ರೀಮ್?"

"ನನ್ನ ಆಕ್ಷೇಪವಿಲ್ಲ. ಐಸ್‌ಕ್ರೀಮ್ ಮಾತ್ರ ಬೇಡ,"

–ಎಂದಳು ಜಯಶ್ರೀ.

Ice cream – I scream – ಅವಳಿಗೆ ನಗು ಬಂತು.

"ಏನು ?"

"ಏನಿಲ್ಲ. I scream ಅಂತಲೂ ಆಗುತ್ತೆ, ಅಲ್ವೆ ?"

"ಹಹ್ಹ !"

ಆ ಪಾರ್ಕ್ ವಿಹಾರಕ್ಕೆ ಹೆಸರಾದ ಸ್ಥಳ. ದಾರಿಯಲ್ಲಿ ಕಾರುಗಳಿದ್ದುವು. ಬೂಲ್‌ವಾಗಳಲ್ಲಿ ನಡೆಯುತ್ತಿದ್ದ ಗಂಡು–ಹೆಣ್ಣು ಜೋಡಿಗಳು. ಹುಲ್ಲಿನ ಮೇಲೆ ಕೆಲವೆಡೆ ಮಕ್ಕಳು. ಭಾಗ್ಯನಗರದ ಜನಸಾಗರದ ಕೆಲ ಮೀನುಗಳು. ಅಪರಿಚಿತ ಮುಖಗಳು.

"ನಮ್ಮನ್ನ ಈಗ ನೋಡ್ತೋರು ಏನಂದ್ಕೋತಾರೆ ಗೊತ್ತೆ ಜಯಾ ?"

ತಣ್ಣನೆಯ ಗಾಳಿ ಕಾರಿಗಿದಿರಾಗಿ ಬೀಸುತ್ತಿದ್ದ ಆಹ್ಲಾದಕರ ವಾತಾವರಣ ದಲ್ಲಿ ಜಯಶ್ರೀಯ ಮನಸ್ಸು ಚೇತರಿಸಿಕೊಳ್ಳತೊಡಗಿತ್ತು.

ಅವಳು ನಗುತ್ತ ಅಂದಳು:

"ಏನಂದ್ಕೋತಾರೆ ?–ತಂದೆ, ಮಗಳು ಅಂತಲೆ ?"

"You – silly!"

"ಅಣ್ಣ ತಂಗಿ ಅಂತಲೆ ?"

"ಒಂದು ಗಂಡು–ಒಂದು ಹೆಣ್ಣು ಇವರ ನಡುವೆ ಬೇರೆ ಸಂಬಂಧವೇ ಇಲ್ಲ ವೇನು ? ಆ ಜೋಡಿ ನೋಡು. ಅಲ್ಲಿ– ನೀಲಿ ಸೀರೆ. *ಒಬ್ಬರನ್ನೊಬ್ಬರು ನೋಡಿ ಕೊಂಡರಲ್ಲ–"

"ನವ ದಂಪತಿಗಳು, ಅಥವಾ–"

"–ಪ್ರಣಯಿಗಳು !"

ಉದ್ಯಾನದ ರೆಸ್ಟುರಾದ ಬಳಿ ಹೂಗಿಡಗಳನ್ನು ಸವರಿಕೊಂಡು ತ್ಯಾಗರಾಜನ ಕಾರು ನಿಂತಿತು.

ಕೇಕುಗಳು. ಉಪ್ಪು ಸವರಿದ ಗೋಡಂಬಿ. ಕಾಫಿ......

ಜಯಶ್ರೀ ಕೇಳಿದಳು:

"ಇತ್ತೀಚೆಗೆ ನಮ್ಮಣ್ಣ ಸಿಕ್ಕಿದ್ನಾ ?"

['ಇದೆಲ್ಲಿಯೋ ಅಲೆಯಲು ಹೊರಟಿದೆಯಲ್ಲ ಈ ಹುಡುಗಿಯ ಮನಸ್ಸು.']

"ಮೊನ್ನೆ ಮೆಡಿಕಲ್ ಕಾಲೇಜಿನವರ ವಿವಿಧ ವಿನೋದಾವಳಿಯಾದ ಮಾರನೆಯ ದಿವಸ ಒಮ್ಮೆ ಸಿಕ್ಕಿದ್ದ."

"ಏನೆಂದ ?"

"ತಂಗಿಯ ನೆನಪೇ ಅವನಿಗಿದ್ದ ಹಾಗೆ ತೋರಲಿಲ್ಲ. ಈಗ ನೀನು ಬಹಳ busy ಆಗಿರ್ತಿ ಅಂತ ಹೇಳ್ದೆ. ಪ್ರಶಂಸೆಯ ಒಂದು ಮಾತೂ ಇಲ್ಲ. ತಾತ್ಸಾರ ಭಾವನೆ. ನನಗೆ ಬಹಳ ನೋವಾಯ್ತು."

"ಹಾಗೇನು ? I care two hoots."

ತ್ಯಾಗರಾಜನ ನಿರೀಕ್ಷೆಯನ್ನು ಮೀರಿತ್ತು ಜಯಶ್ರೀಯ ಪ್ರತಿಕ್ರಿಯೆ.

"ಅವನ ವಿಷಯದಲ್ಲಿ ನನಗೆ ಅಯ್ಯೋ ಪಾಪ–ಅನಿಸುತ್ತೆ."

"ಯಾಕೆ ಅನಿಸ್ಬೇಕು ? ಅವನಾಗಿ ಮಾಡ್ಕೊಂಡದ್ದು ತಾನೆ ?"

ಕೆಲ ನಿಮಿಷ ಸುಮ್ಮನಿದ್ದು [ಬಿಲ್‌ನೊಡನೆ ಹುಡುಗ ಬಂದು ಹೋದ ಮೇಲೆ] ತ್ಯಾಗರಾಜನೆಂದ:

"ಜಯಾ. ನಿನ್ನ ಜವಾಬ್ದಾರಿ ಈಗ ಜಾಸ್ತಿಯಾಗಿದೆ, ಗೊತ್ತೆ ? ಅಪಾರ ಆಸ್ತಿಗೆ ನೀನೀಗ ಹಕ್ಕುದಾರಳು. ಬಳುಕುವ ಬಳ್ಳಿಗೆ ಮರದ ಬಲಿಷ್ಠ ಕಾಂಡ ಬೇಕು, ಆಸರೆಗೆ."

ರೆಸ್ಟುರಾದ ಹುಡುಗ ಚಿಲ್ಲರೆ ತಂದು, ಭಕ್ಷೀಸ್ ಪಡೆದು, ಸಲಾಂ ಕೊಟ್ಟ ಮೇಲೆ, ಹೊರಡುತ್ತ ತ್ಯಾಗರಾಜನ್ ಕೇಳಿದ.

"ಈಗೆಲ್ಲಿಗೆ ಹೋಗೋಣ ?"

"ಎಲ್ಲಿಗಾದರೂ ಸರಿ."

"ನನ್ನ ಮನೆಗೆ?"

[–ಚೇಳು ಬಂತೆ? ಹಾವೆ?]

"ಇವತ್ತು ಬೇಡಿ. ಹೀಗೆ ಉದ್ದಕ್ಕೂ ಹೋಗ್ತಿರೋಣ. ಕತ್ತಲಾಗೋ ವರೆಗೆ. ವೇಗವಾಗಿ ಹೋಗ್ತಾ ಇದ್ದರೆ ಹಿತವಾಗಿರುತ್ತೆ."

ತ್ಯಾಗರಾಜನ್ ಗೇರುಗಳನ್ನು ಬದಲಾಯಿಸಿದ. ಅವನ ಎಡಗೈ ಜಯಶ್ರೀಯ ಸೀರೆಯನ್ನು, ಮೊಣಕಾಲನ್ನು ಸೋಂಕಿತು. [ಬಲಕ್ಕೆ ಸರಿದಿರುವಳಲ್ಲ ಈಕೆ? ಕೈಯ ಸ್ಪರ್ಶವಾಯಿತೆಂದು ಮತ್ತೆ ಎಡಕ್ಕೆ ಸರಿಯಲಿಲ್ಲವಲ್ಲ?]

ಪಾರ್ಕಿನಿಂದ ನಾಲ್ಕು ಮೈಲುಗಳಾಚೆ ಪ್ರಾಯೋಗಿಕ ಕೃಷಿಕೇಂದ್ರ. ತೋಟಗಳು. ನಿರ್ಜನ ದಾರಿ.

ನಾಲ್ಕು ಚಕ್ರಗಳು ಹೆಚ್ಚು ಹೆಚ್ಚು ವೇಗವಾಗಿ ಉರುಳಿದುವು.

ಒಣಗಿದ್ದ ತುಟಿಗಳನ್ನು ನಾಲಿಗೆಯಿಂದ ತೇವಗೊಳಿಸಿ ತ್ಯಾಗರಾಜನೆಂದ:

"ನೀನು ಕೊಟ್ಟ ಪುಸ್ತಕ ನನಗೆ ಇಷ್ಟವಾಯ್ತು. ಅದೀಗ ನಿಜವಾದ ಸಾಹಿತ್ಯ. ಪ್ರಬುದ್ಧ ಬರೆವಣಿಗೆ. ನೀನು ಅದನ್ನು ಮೆಚ್ಚಿಕೊಂಡಿದೀಯಾ ಅಂತ ನನಗೆ ಸಂತೋಷ."

ಜಯಶ್ರೀಯ ಗಂಟಲೊಣಗಿತ್ತು. ನೇರವಾಗಿ ರಸ್ತೆಯತ್ತ ನೋಡಿ ಅವಳೆಂದಳು:

"ಒಳ್ಳೆಯ ಪುಸ್ತಕ."

[–ಇನ್ನೊಮ್ಮೆ ಗೇರ್ ಬದಲಾಯಿಸುವಾಗ ಈತನ ಕೈ ತನ್ನ ಮೊಣಕಾಲನ್ನು ಪುನಃ ಮುಟ್ಟಬಹುದು. ಮುಂದೆ? ಮುಂದೆ?]

ಮುಚ್ಚಂಜೆಯಾಗಿತ್ತು. ಪೆಟ್ರೋಲ್ ಸೂಚಿ, ಮುಕ್ಕಾಲು ಪಾಲು ದಾರಿ ಕ್ರಮಿಸಿ ಎಡಮೂಲೆಗೆ ಬಂದಿತ್ತು.

ತ್ಯಾಗರಾಜನ್ ನಕ್ಕು ಅಂದ:

"ಇನ್ನೂ ಮೂವತ್ತು ಮೈಲಿ ಹೀಗೆಯೇ ಓಡಿದ್ರೆ ಪೆಟ್ರೋಲ್ ಮುಗಿದು ಕಾರು ನಿಂತುಹೋಗುತ್ತೆ. ಆಗ ಏನ್ಮಾಡ್ತೀಯಾ?"

"ಉಸಿರು ಕಟ್ತಿದೆ! ಕಾರು ನಿಲ್ಸಿ!"

ತ್ಯಾಗರಾಜನ್ ವೇಗವನ್ನು ಕಡಮೆಗೊಳಿಸಿದ. ಗೇರ್ ಬದಲಾಯಿಸಿದ. [ಬಲಗಾಲು ಮತ್ತಷ್ಟು ಬಲಕ್ಕೆ ಸರಿದಿತ್ತು.] ರಸ್ತೆಯ ಪಕ್ಕದಲ್ಲಿ ಕಾರು ನಿಲ್ಲಿಸಿದ.

ಜಯಶ್ರೀಯ ಮುಖ ಬಿಳಿಚಿಕೊಂಡಿತ್ತು.

"ಏನಾಯ್ತು ಜಯಾ?"

ಅವನ ಎಡತೋಳು ಆಕೆಯ ಭುಜವನ್ನು ಬಳಸಿ ಕುಲುಕಿತು.

ಮತ್ತೊಮ್ಮೆ ಆತ ಕೇಳಿದ:

"ಏನಾಯ್ತು ಜಯಾ?"

"ಏ–ನಿ–ಲ್ಲ......"

[–ಇಷ್ಟೇ ಅಲ್ಲವೆ? ಇನ್ನೇನು ಅನುಭವ ಸಾಧ್ಯ? ಕಣ್ಣುಗಳನ್ನು ಮುಚ್ಚಿಕೊಂಡರೆ ಚೆನ್ನು.]

ಏನು ಅಸ್ವಾಸ್ಥ್ಯವೊ? ಯಾಕೆ ಹೀಗೆ?–ಎಂದು ತ್ಯಾಗರಾಜ ಒಂದು ಕ್ಷಣ ಗಾಬರಿಯಾದ. ಮನಸ್ಸಿಲ್ಲದ ಮನಸ್ಸಿನಿಂದ ಆತ ಕೇಳಿದ:

"ವಾಪಾಸು ಹೋಗೋಣವೆ?"

['ಅಷ್ಟೆ. ಇನ್ನೇನಿದೆ?']

"ಹೂಂ. ಮನೆಗೆ ಹೋಗೋಣ."

ಬಂದ ದಾರಿಗೆ ಸುಂಕವಿರಲಿಲ್ಲ.

ನಗರದ ಒಳ ವಲಯವನ್ನು ಸಮೀಪಿಸಿದ ಹಾಗೆ ಜಯಶ್ರೀ ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡಂತೆ ಕಂಡಿತು. ಬೀದಿ ದೀಪಗಳು ಎಂದಿನಂತೆ ಉರಿಯುತ್ತಿದ್ದುವು. ಮಿತವ್ಯಯದ ಪ್ರಯತ್ನವೆಂದು ಅಂಗಡಿಗಳ ಮುಂದೆ ಅಲಂಕಾರದ ದೀಪಗಳಷ್ಟೇ ಇರಲಿಲ್ಲ.

ಕಾರು ಪೂರ್ವವಿಸ್ತರಣಕ್ಕೆ ಧಾವಿಸಿತು.

ಶ್ರೀಸದನದಲ್ಲೂ ವಿದ್ಯುಚ್ಛಕ್ತಿಯನ್ನು ಮಿತವಾಗಿ ಬಳಸುತ್ತಿದ್ದರು.

ಜಗ್ಗ ಗೇಟು ತೆರೆದು ಕಾರನ್ನು ಒಳಕ್ಕೆ ಬಿಟ್ಟ.

ಮಗಳು ಬರಲಿಲ್ಲವೆಂದು ವ್ಯಾಕುಲಕ್ಕೊಳಗಾಗಿದ್ದ ಕಮಲಮ್ಮ ಮೆಟ್ಟಲುಗಳ ಮೇಲೆ ನಿಂತಿದ್ದರು. ತ್ಯಾಗರಾಜನ್ ಕೆಳಕ್ಕಿಳಿದು ಜಯಶ್ರೀಯ ಮಗ್ಗುಲಿಗೆ ಬಂದು ಬಾಗಿಲು ತೆರೆದ. ಅವಳು ಬಳಲಿದ್ದಂತೆ ಕಂಡಿತು. ಇಳಿಯಲೆತ್ನಿಸಿದ ಆಕೆಗೆ ತನ್ನ ತೋಳಿನ ನೆರವು ನೀಡಿದ. ಜಯಶ್ರೀ ತ್ಯಾಗರಾಜನ್‌ಗೆ ಆತುಕೊಂಡು ಮೆಲ್ಲನೆ ಮೆಟ್ಟಲುಗಳನ್ನೇರಿದಳು.

ಕಮಲಮ್ಮ ಗಾಬರಿಗೊಂಡು ಕೂಗಿ ನುಡಿದರು:

"ಏನಾಯ್ತಪ್ಪ, ನನ್ನ ಮಗೂಗೆ ಏನಾಯ್ತು?"

"ಬರೀ ಸುಸ್ತು. ಇನ್ನೇನಿಲ್ಲ,"

–ಎಂದ ತ್ಯಾಗರಾಜನ್.

ಜಯಶ್ರೀ ಮಹಡಿಯ ಮೆಟ್ಟಲುಗಳನ್ನು ಹತ್ತಲಾರದವಳಂತೆ ಕಂಡಳು. ತ್ಯಾಗರಾಜನ್ ಸುತ್ತಲೂ ನೋಡಿದ. ಶ್ರೀಕಂಠಯ್ಯನವರ ಕೊಠಡಿಗೆ ಹೊರಗಿನಿಂದ ಅಗಣಿ ಹಾಕಿತ್ತು. ತನ್ನೆರಡೂ ತೋಳುಗಳಲ್ಲಿ ಆಕೆಯನ್ನೆತ್ತಿಕೊಂಡು ಮೇಲಕ್ಕೆ ಅವಳ ಕೊಠಡಿಗೆ ಆತ ನಡೆದ. [ಕುರ್ಚಿಯ ಮೇಲೆ ಮುದುಡಿದ ಸೀರೆ. ಬ್ರಾ.] ಕಮಲಮ್ಮ,

"ಅಯ್ಯೋ! ಏನಾಗ್ಹೋಯ್ತು! ಯಾಕೆ ಹೀಗಾಯ್ತು?"

–ಎನ್ನುತ್ತ ಆತನನ್ನು ಹಿಂಬಾಲಿಸಿದರು.

ಕೋಣೆಯಲ್ಲಿ ಜಯಶ್ರೀಯನ್ನು ಆಕೆಯ ಪಲ್ಲಂಗದ ಮೇಲೆ ಮಲಗಿಸಿ, ತ್ಯಾಗರಾಜ ಕಮಲಮ್ಮನ ಕಡೆ ತಿರುಗಿ ಅಂದ:

"ಒಂದು ಲೋಟ ಹಾಲು ತನ್ನಿ. ಗಾಬರಿಗೆ ಕಾರಣವಿಲ್ಲ."

"ತರ್ತೀನಪ್ಪ, ತರ್ತೀನಿ,"

–ಎಂದು ಕಮಲಮ್ಮ ದಡದಡನೆ ಕೆಳಕ್ಕಿಳಿದು ಹೋದರು.

ಅವರ ಹೆಜ್ಜೆಗಳ ಸದ್ದು ಕ್ಷೀಣಿಸಿದೊಡನೆ ಜಯಶ್ರೀ ಮೆಲ್ಲನೆ ಕಣ್ಣು ತೆರೆದಳು. ಅವಳ ತುಟಿಗಳು ಮಿಸುಕಿ ಮುಗುಳುನಗೆಯನ್ನು ರೂಪಿಸಿದುವು.

ಇದು ಇಂಥದೇ ಕಾಯಿಲೆ ಎಂದು ಅರಿತ ತ್ಯಾಗರಾಜನ್,

"ಉಸಿರಾಟಕ್ಕೆ ತೊಂದರೆ,"

–ಎನ್ನುತ್ತ, ಆಕೆಯ ವಕ್ಷಸ್ಥಳದ ಮೇಲಣ ಸೆರಗನ್ನು ಬದಿಗೆ ಸರಿಸಿ, ಕುಪ್ಪಸದ ಗುಂಡಿಗಳನ್ನು ಬಿಚ್ಚಿದ. [ಹುತ್ತ; ಬುಸುಗುಟ್ಟುವ ಹಾವು.] ಅವನ ಅಂಗೈ ಒಂದು ಕ್ಷಣ ಅಲ್ಲಿ ವಿರಮಿಸಿತು.

ವಿದ್ಯುತ್ತಿನ ಸಂಚಾರವಾದಂತೆ ಅವಳ ದೇಹ ನಿಡಿದುಕೊಂಡಿತು. ಅರೆ ಮುಚ್ಚಿದ ಕಣ್ಣುಗಳು ತ್ಯಾಗರಾಜನ ಮುಖದಲ್ಲೇನನ್ನೋ ಹುಡುಕುತ್ತಿದ್ದುವು. ಅಧರಗಳು ಅರ್ಧ ಬಿರಿದಿದ್ದುವು.

ಹಾಲಿನೊಡನೆ ಕಮಲಮ್ಮ ಬರಲು ಇನ್ನು ಒಂದು ನಿಮಿಷಕ್ಕಿಂತ ಹೆಚ್ಚಿಲ್ಲ.

ತ್ಯಾಗರಾಜನ್ ಉನ್ಮತ್ತನಾದ. ಇವತ್ತಿನ ಪ್ರಕರಣವನ್ನು ಮುಗಿಸುವು ದಕ್ಕೆ ಮುನ್ನ ಸಿಹಿಯಾದ ಒಂದು ಮಾತು ಬರೆಯಬೇಕು.

ಆತ, ಮಲಗಿದ್ದ ಜಯಶ್ರೀಯ ಮುಖದ ಮೇಲ್ಗಡೆಯಿಂದ ಬಾಗಿ, ಆ ತುಟಿಗಳಿಗೆ ಮುತ್ತಿಡಲು ಹೊರಟ.

ಜಯಶ್ರೀ ಕಣ್ಣಗಲಿಸಿ ನೋಡಿದಳು. ವಿಕಾರವಾದುದೇನೋ ಒರಟಾದು ದೇನೋ ತನ್ನ ಮೇಲೆ ಎರಗುತ್ತಿತ್ತು. ಹತ್ತಿರ–ಹತ್ತಿರ......

"ಅಯ್ಯೋ ! ಅಮ್ಮಾ ! ಅಯ್ಯೋ ! ಅಯ್ಯಯ್ಯೋ !"

ಹಾವು ಕಚ್ಚಿತ್ತು.

"ಜಯಾ ! ಜಯಾ ! ನಾನು ಕಣೇ ! ರಾಜನ್–"!

–ತಣ್ಣನೆ ಜಿಗಿದು ನಿಂತ ತ್ಯಾಗರಾಜ, ಸಂತೈಸುವ ರಮಿಸುವ ಪಿಸುದನಿ ಯಲ್ಲಿ ಹಾಗೆ ನುಡಿದ.

ಅದಕ್ಕೆ ಉತ್ತರವಾಗಿ ಜಯಶ್ರೀ ಮತ್ತೊಮ್ಮೆ ಚೀರಿದಳು.

ತ್ಯಾಗರಾಜ ಬಾಗಿಲಿನತ್ತ ಧಾವಿಸಿದ.

ದಾರಿ ಅಡ್ಡ ಕಟ್ಟಿ ನಿಂತಿದ್ದ, ಸೋಮನಾಥ. ಅವನ ಹಿಂದೆ ಜಗ್ಗ- ಕೆಳಗೆ ಕೈಯಲ್ಲಿ ಹಾಲಿನ ಲೋಟವಿದ್ದ ಕಮಲಮ್ಮ. ತಾನೂ ಚೀರಿಕೊಳ್ಳಲು ಸಿದ್ಧಳಾಗಿ ಬಾಯ್ತೆರೆದಿದ್ದ ಲಚ್ಚಿ. ಅಡುಗೆಯ ಭಟ್ಟ.

ತ್ಯಾಗರಾಜನ ಕಣ್ಣುಗಳನ್ನು ಕತ್ತಲು ಕವಿಯಿತು.

ಆಗಲೇ ಸಾಹುಕಾರ ಶ್ರೀಕಂಠಯ್ಯನವರ ಕಾರಿನ ಹೆಡ್‌ಲೈಟುಗಳು ಬಂಗಲೆಯ ದ್ವಾರಮಂಟಪವನ್ನು ಬೆಳಗಿದುವು.

೧೮

ದ್ವಾರಮಂಟಪದಲ್ಲಿ ತ್ಯಾಗರಾಜನ ಕಾರಿತ್ತು. ಅದಕ್ಕಿಂತ ಕೊಂಚ ದೂರದಲ್ಲಿ ಬಂಗಲೆಗೆ ನೇರ ಮುಖಮಾಡಿ ಶ್ರೀಕಂಠಯ್ಯನವರ ಬ್ಯೂಕ್ ನಿಂತಿತು. ಹಗಲಿನ ಓಡಾಟದಿಂದ ದಣಿದಿದ್ದ ಸಾಹುಕಾರರು ಹುಬ್ಬು ಗಂಟಿಕ್ಕಿಕೊಂಡೇ ಕೆಳಕ್ಕಿಳಿದರು.

ಬಂಗಲೆಯ ಒಳಗಿನಿಂದ ಅಸ್ಪಷ್ಟ ಕೂಗಾಟ ಕೇಳಿಸುತಿತ್ತು.

ಒಳಗೆ ಹೋಗಲೋ ಬೇಡವೋ ಎಂದು ಅನುಮಾನಿಸುತ್ತ ಬಾಗಿಲಲ್ಲಿ ನಿಂತಿದ್ದ ಮಾರಣ್ಣ ಸಾಹುಕಾರರಿಗೆ ಇದಿರಾದ. ದಂಗುಬಡೆದವನಂತೆ ಅವನ ಕಣ್ಣುಗಳು ಅಗಲವಾಗಿ ಅರಳಿದ್ದುವು.

ಶ್ರೀಕಂಠಯ್ಯ ಮೆಟ್ಟಲುಗಳನ್ನೇರುತ್ತ ಗದರಿದರು:

"ಏನ್ಮಾಡ್ತಿದೀಯೊ ಇಲ್ಲಿ?"

"ಮ್ಯಾಕೆ–ಚಿಕ್ಕಮ್ಮಣ್ಣಿಗೆ–ಏನೋ ಆಗೈತೆ."

–ತೊದಲು ನುಡಿಗಳು.

ಶ್ರೀಕಂಠಯ್ಯ ಒಳಗೆ ಕಾಲಿರಿಸಿದರು.

ಮಾತುಗಳು ಮೇಲಿಂದ ಕೆಳಕ್ಕೆ ಒಟ್ಟಿಗೆ ತೇಲಿ ಬಂದುವು:

–"ಅಯ್ಯೋ ಪಾಪಿ!" [–ಕಮಲಮ್ಮ]

–"ಒಳ್ಳೇ ಸಂಭಾವಿತ ಕಣಯ್ಯ ನೀನು!" [–ಸೋಮನಾಥ]

–"Misunderstanding ಕಣ್ರೀ! Believe me!" [–ತ್ಯಾಗರಾಜನ್]

–"ಬನ್ರಿ ಹೊರಕ್ಕೆ!" [–ಜಗ್ಗ]

ಸ್ವರಗಳನ್ನು ಗುರುತಿಸಿದ ಶ್ರೀಕಂಠಯ್ಯ ದಿಗ್ಮೂಢರಾದರು. ಬೇಗ ಬೇಗನೆ ಮೆಟ್ಟಲುಗಳನ್ನೇರುತ್ತ ಅವರೆಂದರು:

"ಏನದು ? ಏನದು ?"

ಜಗ್ಗ ದಾರಿಬಿಟ್ಟ:

"ಸಾಹುಕಾರ್ರು ಬಂದ್ರು."

ಕಂಬನಿ ಸುರಿಸುತ್ತ ಕಮಲಮ್ಮ ಅಂದರು:

"ಈ ನೀಚ ಏನ್ಮಾಡ್ದ ನೋಡೀಂದ್ರೆ !......"

ತ್ಯಾಗರಾಜನ್, ಸೋಮನಾಥನ ಹಿಡಿತದಿಂದ ತೋಳನ್ನು ಕೊಡವಿ ಬಿಡಿಸಿ ಕೊಂಡು, ಕಂಪಿಸುವ ಧ್ವನಿಯಲ್ಲಿ ಗಟ್ಟಿಯಾಗಿ ಅಂದ:

"ಸರ್, ಸರ್ ! ನನ್ನನ್ನ ನಂಬಿ, ಸರ್ ! ಇದೆಲ್ಲಾ misunderstanding ಸರ್ !"

"ನಮ್ಮ ಮಗೂ ಮಾನ ಕಳೆದ ಅಂದ್ರೆ......ಅಯ್ಯೋ ದೇವರೆ !"

ಶ್ರೀಕಂಠಯ್ಯ ಬಾಗಿಲಲ್ಲಿ ನಿಂತು ಒಳಕ್ಕೆ ನೋಡಿದರು. ಜಯಶ್ರೀ ಹಾಸಿಗೆಯ ಮೇಲೆ ಮಲಗಿದ್ದಳು, ದಿಂಬಿಗೆ ಮುಖ ಆನಿಸಿ ಬಿಕ್ಕಿ ಬಿಕ್ಕಿ ಅಳುತ್ತ. ಎದೆಯ ಮೇಲೆ ಸೆರಗಿರಲಿಲ್ಲ. ರವಕೆಯ ಗುಂಡಿಗಳನ್ನು ಬಿಚ್ಚಿತ್ತು. ಹೊರಳಾಡಿದುದರ ಫಲವಾಗಿ ಸೀರೆಯ ಅಂಚು ಮೊಣಕಾಲುಗಳ ಮೇಲೆ ಸರಿದಿತ್ತು.

ಅರ್ಥವಾಯಿತೆಂಬಂತೆ ಶ್ರೀಕಂಠಯ್ಯ, "ಆ !–" ಎಂದು ಚೀರಿದರು. ತ್ಯಾಗರಾಜನನ್ನು ದಿಟ್ಟಿಸಿ,

"ಕುಡಿದಿದ್ದೆಯೇನೋ ಕತ್ತೆ !"

–ಎಂದು ಗರ್ಜಿಸಿದರು. ಆತನ ಎರಡು ಕೆನ್ನೆಗಳಿಗೂ ಲಟ್ ಲಟ್ಟೆಂದು ಹೊಡೆದರು.

"ಇಳಿ ಕೆಳಕ್ಕೆ !"

ತ್ಯಾಗರಾಜನ ರಟ್ಟೆಹಿಡಿದು ತಳ್ಳಿಕೊಂಡು ಶ್ರೀಕಂಠಯ್ಯ ಕೆಳಗೆ ಬಂದರು. ಫೋನಿನ ಬಳಿ ನಿಂತರು.

ಕೋಪೋದ್ರೇಕದಿಂದ ಶರೀರವೆಲ್ಲ ನಡುಗುತ್ತಿರಲು, ರಿಸೀವರನ್ನೆತ್ತಿಕೊಂಡು ಅವರೆಂದರು:

"ಬದ್ಮಾಷ್ ! ನಿನ್ನನ್ನ ಪೋಲೀಸರಿಗೆ ಒಪ್ಪಿಸ್ತೀನಿ !"

ತ್ಯಾಗರಾಜನೆಂದ:

"ತಡೀರಿ ! ಒಂದ್ನಿಮಿಷ ! ಪೋಲೀಸ್ ಕಂಪ್ಲೇಂಟ್ ಕೊಡ್ತೀರೇನು ?

ನಿಮ್ಮ ಮಗಳನ್ನ ವೈದ್ಯರಿಂದ ಪರೀಕ್ಷೆ ಮಾಡಿಸಿ 'ಇವಳು ಅತ್ಯಾಚಾರಕ್ಕೆ ಗುರಿಯಾಗಿದಾಳೆ' ಅಂತ ಸರ್ಟಿಫಿಕೇಟು ತಗೋಬೇಕಾಗುತ್ತೆ, ಸರ್! ಒಬ್ಬಳೇ ಮಗಳನ್ನ ಕೋರ್ಟಿನಲ್ಲಿ ಪ್ರದರ್ಶನ ಮಾಡ್ತೀರಾ? ಪತ್ರಿಕೆಗಳಲ್ಲಿ ಫೋಟೋ ಹಾಕಿಸ್ತೀರಾ? ......ನಿಮ್ಮ ಮಗಳಿಗೆ ಹುಚ್ಚು, ಅವಳು ಉನ್ಮಾದಿನಿ ಅಂತ **ನಾನು** ಸಾಬೀತು ಮಾಡ್ತೀನಿ."

ರಿಸೀವರನ್ನು ಕೆಳಕ್ಕೆ ಕುಕ್ಕಿ ಶ್ರೀಕಂಠಯ್ಯ ಮತ್ತಷ್ಟು ಗಟ್ಟಿಯಾಗಿ ಅಂದರು:

"ಹಾದರಕ್ಕೆ ಹುಟ್ಟಿದವನೆ! ಮುಚ್ಕೋ ಬಾಯಿ!"

"ತಾವು ನಾಲಿಗೆ ಬಿಗಿಹಿಡಿದು ಮಾತಾಡೋದು ಕ್ಷೇಮ, ಸರ್!"

"ನನಗೆ ಹೇಳ್ತೀಯೇನೊ ಮನೆಹಾಳ! ಉಸಿರೆತ್ತಿದಿ ಅಂದರೆ ಗುಂಡು ಹಾಕಿ ಕೊಂದೇನು!"

"ಹಹ್ಹ! ನಾನೇನು ನಾಯಿ ಅಂದ್ಕೊಂಡಿರಾ?"

"ಅದಕ್ಕಿಂತಲೂ ಕೀಳು! ನೀಚ!"

ಥಟ್ಟನೆ ಒಂದು ಯೋಚನೆ ಹೊಳೆದು, ಮುಳುಗುವವನಿಗೆ ಹುಲ್ಲುಕಡ್ಡಿ ದೊರೆತಂತಾಗಿ, ತ್ಯಾಗರಾಜನ್ ಧ್ವನಿಬದಲಿಸಿ ಸೌಮ್ಯನಾಗಿ ಅಂದ:

"ಹೇಗೂ ನಿಮ್ಮ ಮಗಳ ಪಾವಿತ್ರ್ಯ ಕೆಡಿಸಿದೀನಿ. ನಿಮ್ಮ ಮನೆತನದ ಗೌರವನಾದರೂ ಉಳಿಸ್ಕೊಡ್ತೀನಿ."

"ಮುಳುಗಿಸಿದಿಯಲ್ಲೊ? ಇನ್ನೇನೊ ಉಳೀತು?"

"ನಾನೇ ಅವಳನ್ನ ಮದುವೆ ಮಾಡ್ಕೋತೀನಿ."

"ಚಂಡಾಲ! ಮದುವೆ ಮಾಡ್ಕೊಳ್ತಿ ಅಲ್ವೆ? ನನ್ನ ಅಳಿಯನಾಗಿ ಈ ಆಸ್ತಿಯನ್ನ ಭೋಗಿಸ್ತಿ, ಅಲ್ವೆ? ಮುದಿ ಪಿಶಾಚಿ! ನಾನು ನಿನ್ನ ಕತ್ತು ಹಿಸುಕಿ ಕೊಲ್ಲೋದರೊಳಗೆ ತೊಲಗಿಲ್ಲಿಂದ!"

ಬಾಗಿಲಿಗೆ ಅಡ್ಡವಾಗಿ ನಿಂತಿದ್ದ ಮಾನವ ಕಂಬಗಳೆಡೆಗೆ ತ್ಯಾಗರಾಜನ್ ನೋಡಿದ.

—ಇವತ್ತಿನದು ಮುಗಿಯಿತು. ಇನ್ನು ನಾಳೆಯ ಯೋಚನೆ. ಈ ವರೆಗಿನದಾಯಿತು. ಸದ್ಯಃ ಬದುಕಿ ಉಳಿದೆ. ಇನ್ನು ಮುಂದಿನ ರಕ್ಷಣೆಯನ್ನು ತಾನು ಮಾಡಿಕೊಳ್ಳಬೇಕು.

ಅದಕ್ಕಾಗಿ ಒಂದು ಅಸ್ತ್ರ ಪ್ರಯೋಗಿಸಿ ತ್ಯಾಗರಾಜನೆಂದ:

"ಮಗಳು ಅನ್ನೋ ವ್ಯಾಮೋಹದಿಂದ ಹೀಗೆಲ್ಲ ನೀವು ಆಡ್ತಿದೀರಿ, ಸರ್. ದೊಡ್ಡದಲ್ಲ. ಈ ಹದಿನೈದು ವರ್ಷಗಳಿಂದ ನಾನು ನಿಮ್ಮ ವಕೀಲನಾಗಿದ್ದೆ. ನಿಮ್ಮ ಬಗ್ಗೆ, ಹೊರಗಿನ ಲೋಕದಿಂದ ನೀವು ಮರೆಮಾಚಿರೋ ನೂರು ಸಂಗತಿಗಳು ನನಗೆ ಗೊತ್ತಿವೆ. ನನ್ನ ವಿಷಯವಾಗಿ ಅಗೌರವದಿಂದ ಎಲ್ಲಾದರೂ ನೀವು ಮಾತ ನಾಡಿದ್ದು ಕೇಳಿಸಿತೋ, ಆಗ ನನ್ನ ಮೌನಕ್ಕೆ ಮುಕ್ತಾಯ. ಮುಂದೆ ನಾನು ಆಡೋ ಮಾತಿಗೆ ನಾನಲ್ಲ ಹೊಣೆಗಾರ."

"ಮುಚ್ಚಯ್ಯ ಬಾಯಿ! ಇಲ್ದೇ ಹೋದರೆ ನಾಲಿಗೆ ಸಿಗಿಸೇನು!"

"ಗುಡ್ ಬೈ."

"ಗೆಟೌಟ್!"

ತ್ಯಾಗರಾಜನ್ ಹೊರಕ್ಕಿಳಿದ. ಅವನ ಕಾಲುಗಳು ಕಂಪಿಸುತ್ತಿದ್ದುವು. ಇಗ್ನಿಶನ್ ಕೀ ತಿರುಗಿಸದೆಯೇ ಸ್ಟಾರ್ಟರನ್ನು ಉಪಯೋಗಿಸಿದ. ಟರರರರ ಸದ್ದಾಯಿತು. ತಪ್ಪನ್ನು ತಿದ್ದಿಕೊಂಡು, ಆಕ್ಸಿಲರೇಟರನ್ನು ಒಮ್ಮೆಲೆ ಒತ್ತಿದ. ಕಾರು ಅಡ್ಡಾದಿಡ್ಡಿಯಾಗಿ ಹೊರಟಿತು. 'ಔಟ್' ಗೇಟನ್ನು ತೆರೆಯಲು ಜಗ್ಗ ಬರಲಿಲ್ಲ. ತ್ಯಾಗರಾಜನ್ ಕಾರು ನಿಲ್ಲಿಸಿ, ಕೆಳಕ್ಕಿಳಿದು, ದಾರಿಮಾಡಿಕೊಂಡು ಹೊರಟುಹೋದ.

ಶ್ರೀಕಂಠಯ್ಯ ಶಿಲಾಮೂರ್ತಿಯಾಗಿ ನಿಂತಲ್ಲೇ ನಿಂತಿದ್ದರು. ಹೊರಟ ಕಾರಿನ ಸದ್ದು ದೂರವಾದಮೇಲೂ ಅವರು ಮಿಸುಕಲಿಲ್ಲ. ಅವರ ಮುಖದ ಸ್ನಾಯುಗಳು ವಿಕಾರವಾಗಿ ಗಂಟಿಕ್ಕಿಕೊಂಡಿದ್ದುವು. ಮೂಗಿನ ಹೊಳ್ಳೆಗಳು ಒಂದೇ ಸಮನೆ ಅದುರುತ್ತಿದ್ದುವು. ಮೀಸೆ ಅಲುಗುತ್ತಿತ್ತು.

ಅವರು ಬಲಗೈಯನ್ನು ಮುಷ್ಟಿಕಟ್ಟಿ ಮೇಲೆತ್ತಿ ಫೋನ್ ಸ್ಟ್ಯಾಂಡನ್ನು ಬಲವಾಗಿ ಗುದ್ದಿದರು.

ಹಾಗೆ ಗುದ್ದಿದವರೇ ಪ್ರಜ್ಞೆ ತಪ್ಪಿ ಕೆಳಕ್ಕೆ ಉರುಳಿದರು.

ದಿಗ್ಭ್ರಾಂತನಾದ ಸೋಮನಾಥನೆಂದ:

"ಅಯ್ಯೋ!"

ಜಗ್ಗ ಕೂಗಿ ನುಡಿದ:

"ಅಮ್ಮಾವ್ರೇ! ಬಿರ್ನೆ ಬನ್ನಿ!"

ಮಗಳನ್ನು ರಮಿಸುತ್ತ ಮೇಲೆ ಕುಳಿತಿದ್ದ ಕಮಲಮ್ಮ ಧಾವಿಸಿ ಬಂದರು:

"ಏನಾಯ್ತಪ್ಪಾ, ನನ್ನ ದೇವರೇ!"

ಜಗ್ಗ ನೆಂದ:

"ಇಡೀರಿ. ಸೋಪಾ ಮ್ಯಾಕೆ ಮನಿಗ್ಸಾನ."

ಮಾರಣ್ಣ ಒಳಹೊಕ್ಕು, ಲಚ್ಚಿಯ ಕಡೆ ನೋಡಿ,

"ಓಡು, ನೀರು ತಕಂಬಾ,"

–ಎಂದ.

ಕಮಲಮ್ಮ "ಅಯ್ಯಯ್ಯೋ !" ಎಂದು ರೋದಿಸುತ್ತಿದ್ದಂತೆ, ಅಲ್ಲಿದ್ದ ಗಂಡಸರೆಲ್ಲ ಶ್ರೀಕಂಠಯ್ಯನವರನ್ನೆತ್ತಿ ಸೋಫಾದ ಮೇಲೆ ಮಲಗಿಸಿದರು.

ನೀರು ಬಂತು. ಅಂಗೈಯಿಂದ ನೀರನ್ನೆತ್ತಿ ಜಗ್ಗ ತನ್ನ ಧಣಿಯ ಮುಖಕ್ಕೆರಚಿದ.

ಪ್ರಜ್ಞೆ ಮರಳುವ ಯಾವ ಲಕ್ಷಣವೂ ಕಾಣಿಸಲಿಲ್ಲ.

ಕಮಲಮ್ಮನ ರೋದನ ಬಲಗೊಂಡಿತು.

ಅಜೀಜನೆಂದ:

"ಸುಮ್ಕೆ ನಿಲ್‌ಬ್ಯಾಡಿ. ಡಾಕಟ್ರು ಗಿರಿಧರರಾಯ್ರಿಗೆ ಫೋನ್ ಮಾಡ್ರಿ."

ಸೋಮನಾಥ ನಂಬರನ್ನು ಹುಡುಕಿದ. ಜಿ. ಜಿ ಐ......ಸಿರಿಲ್, ಸಿರಿಲ್...

"ಡಾಕ್ಟ್ರು, ಡಾಕ್ಟ್ರೆ ! ಡಾಕ್ಟ್ರದಾರಾ ? [ಸ್ತ್ರೀಕಂಠ: 'ಯಾರು ಮಾತಾಡ್ತಿರೋದು ?'] ಶ್ರೀಸದನದಿಂದ. ಸಾಹುಕಾರ ಶ್ರೀಕಂಠಯ್ಯನವರು ಮೂರ್ಛೆ ತಪ್ಪಿದಾರೆ. ಡಾಕ್ಟ್ರಿಲ್ವ ? ['ಹೊರಗೆ ಹೋಗಿದಾರೆ. ಬರೋದು ತಡವಾಗುತ್ತಲ್ಲ !'] ......ಛೆ ! ಡಾಕ್ಟ್ರಿಲ್ಲ......"

ಅಜೀಜ್ ನುಡಿದ:

"ಅಂಗಾದ್ರೆ ದೊಡ್ಡಾಸ್ಪತ್ರೆಗೆ ಕರಕೊಂಡು ಓಗಾನ. ಚಿಕ್ಸಾಯೇಬ್ರು ಅಲ್ಲೇ ಅವರೆ."

ಸೋಮನಾಥ ಒಪ್ಪಿದ.

"ಹ್ಞ. ಕರಕೊಂಡು ಬರ್ತಿದೀವಿ ಅಂತ ಫೋನ್ ಮಾಡಿಬಿಡ್ತೀನಿ."

ನಂಬರ್. ಹಾಸ್ಪಿಟಲ್ಸ್......ಸಿರಿಲ್, ಸಿರಿಲ್......

"ಹಲೋ ! ಹಲೋ ! ಆಸ್ಪತ್ರೇನಾ ?......ಎಮರ್ಜೆನ್ಸಿ ಕೇಸ್...... ಸಾಹುಕಾರ ಶ್ರೀಕಂಠಯ್ಯನವರಿಗೆ ಪ್ರಜ್ಞೆ ತಪ್ಪಿದೆ......ಸೀರಿಯಸ್......ಕಾರ್ನಲ್ಲಿ ಕರಕೊಂಡ್ಬರ್ತಿದೀವಿ......ಹ್ಞ......ಕರಕೊಂಡು ಬರ್ತೀವಿ......"

ಸೋಫಾದ ಬಳಿಗೆ ಓಡುತ್ತ ಸೋಮನಾಥನೆಂದ:

"ಎತ್ಕೋಣ......ಮೆತ್ತಗೆ......ನಮ್ಮ ಜತೆ ನೀವೂ ಬನ್ನಿ ಅಮ್ಮ....."

ಜಗ್ಗ ಸ್ವಿಚ್ ಹಾಕಿ ದ್ವಾರಮಂಟಪವನ್ನು ಬೆಳಗಿದ. ಅಜೀಜ್ ಓಡಿ ಹೋಗಿ ಕಾರನ್ನು ಅಲ್ಲಿಗೆ ತಂದ.

"ಜಗ್ಗ ! ಗೇಟು ತೆರಿ."

"ತೆರೆದೇ ಐತೆ."

ಅಳುತ್ತಲಿದ್ದ ಕಮಲಮ್ಮನಿಗೆ ಸೋಮನಾಥನೆಂದ:

"ಅಮ್ಮ ! ನೀವು ಕೂತ್ಕೊಳ್ಳಿ ಮೊದಲು......"

ಆಕೆಯ ತೊಡೆ ಶ್ರೀಕಂಠಯ್ಯನವರ ತಲೆಗೆ ದಿಂಬು. ಕಾಲುಗಳ ಬಳಿ ಸೋಮನಾಥ.

ಜಗ್ಗನೆಂದ:

"ನಾವಿಲ್ಲೇ ಇರ್‍ತೀವಿ. ಎಲ್ಲಾ ನೋಡ್ಕೋತೀವಿ."

ಕಾರು 'ಔಟ್' ಗೇಟಿನ ಮೂಲಕ ಇರುಳನ್ನು ಸೀಳುತ್ತ ದೊಡ್ಡಾಸ್ಪತ್ರೆಯ ಕಡೆಗೆ ಧಾವಿಸಿತು.

ಜಯಶ್ರೀ ಸೆರಗಿನಿಂದ ಮೈಮುಚ್ಚಿಕೊಂಡು ಬಾಲ್ಕನಿಯಲ್ಲಿ ನಿಂತು ಕಾರು ಹೊರಟುದನ್ನು ನೋಡಿದಳು; ಅದು ಹೋದ ದಾರಿಯನ್ನು ದಿಟ್ಟಿಸಿದಳು......

......ಆಸ್ಪತ್ರೆಯಲ್ಲಿ ಡ್ಯೂಟಿಯ ಮೇಲಿದ್ದ ಡಾಕ್ಟರಿಗೆ ಸೋಮನಾಥನೆಂದ:

"ಇದೇ ಈಗ ಫೋನ್ ಮಾಡಿದ್ದೆ. ಸಾಹುಕಾರ್ ಶ್ರೀಕಂಠಯ್ಯನವರು–"

"ಹೌದು. ಎಲ್ಲಿ ಪೇಷಂಟು ?"

"ಕಾರ್‍ನಲ್ಲಿದಾರೆ."

ಡಾಕ್ಟರ್ ಸ್ಟ್ರೆಚರ್ ತರಹೇಳಿದರು. ಅದರೊಡನೆ ತಾವೂ ಕಾರಿನ ಬಳಿ ಬಂದರು.

"ಎಮರ್ಜೆನ್ಸಿ ವಾರ್ಡಿಗೆ ತಗೊಂಡು ಹೋಗಿ. ಮೆತ್ತಗೆ."

ಸೋಮನಾಥ, ಕಮಲಮ್ಮ, ಅಜೀಜ್ ಡಾಕ್ಟರನ್ನು ಹಿಂಬಾಲಿಸಿದರು.

ಒಳಗೆ ನುಗ್ಗುತ್ತಿದ್ದ ಡ್ರೈವರನ ಕಡೆ ನೋಡಿ ಡಾಕ್ಟರೆಂದರು:

"ನೀನು ಹೊರಗೇ ಇರಪ್ಪ."

ಸೋಮನಾಥ ಡಾಕ್ಟರ ಹಿಂದೆಯೇ ನಡೆಯುತ್ತ ಅಂದ:

"ಶ್ರೀಕಂಠಯ್ಯನವರು ಡಾಕ್ಟರ್ ಜಯರಾಮೂರ ತಂದೆ, ಡಾಕ್ಟ್ರೆ."

"ಸರ್ಜನ್ ಜಯರಾಮು?"

"ಹೌದು."

"ಅವರಿಗಿದು ಗೊತ್ತಿಲ್ವೆ?"

"ಇಲ್ಲ."

"ಹಾಸ್ಟೆಲ್ನಲ್ಲಿದಾರಲ್ಲ–ಕಾರು ಕಳಿಸ್ಕೊಂಡಿ, ಕರೆಸ್ಕೊಳ್ಳಿ."

"ಕಳಿಸ್ತೀನಿ ಡಾಕ್ಟ್ರೆ. ಹಾಗೇ ದೊಡ್ಡ ಡಾಕ್ಟ್ರನ್ನ–"

ಬೇರೆ ಯಾರಾದರೂ ಆಗಿದ್ದಿದ್ದರೆ ದೊಡ್ಡ ಡಾಕ್ಟರ ಪ್ರಸ್ತಾಪವೆತ್ತಿದುದಕ್ಕೆ ಡ್ಯೂಟಿ ಡಾಕ್ಟರು ಕೊಡುವ ಉತ್ತರ ಬೇರೆಯೇ ಇರುತಿತ್ತು. ಈಗ ಅವರು ಸಿಟ್ಟಾಗಲಿಲ್ಲ.

"ನಾನು ಅವರಿಗೆ ಫೋನ್ ಮಾಡಿ ತಿಳಿಸ್ತೀನಿ,"

–ಎಂದರು.

ಸೋಮನಾಥನಿಗೆ ಜಯರಾಮುವಿನ ಮುಖಪರಿಚಯವಿರಲಿಲ್ಲ. ಈ ಘಳಿಗೆಯಲ್ಲಿ ಆತ ಬರುವುದು ಒಳಿತು–ಎನಿಸಿತು. ಹೊರಕ್ಕೆ ಓಡಿ ಅಜೀಜನಿಗೆ ಅವನೆಂದ:

"ಸಾಹುಕಾರ್‌ರ ಮಗನನ್ನ ಕರಕೊಂಡು ಬಾರಪ್ಪಾ. ಹಾಸ್ಟೆಲ್ನಲ್ಲಿ ಇದಾರಂತೆ. ನೋಡು ದೂರದಲ್ಲಿ ಕಾಣ್ಸೋದೇ ಬಿಲ್ಡಿಂಗು."

"ಕರಕಂಬರ್ತೀನಿ,"

–ಎಂದ ಅಜೀಜ್.

ಶ್ರೀಕಂಠಯ್ಯನವರನ್ನು ಹಾಸಿಗೆಯ ಮೇಲೆ ಮಲಗಿಸಿದ ಡಾಕ್ಟರು,

"ಹೆದರಬೇಡೀಮ್ಮಾ. ಗುಣವಾಗುತ್ತೆ,"

–ಎಂದರು, ಮುಳುಮುಳು ಅಳುತ್ತಿದ್ದ ಕಮಲಮ್ಮನನ್ನು ಸಂತೈಸುತ್ತ, ನರ್ಸೊಬ್ಬಳ ಸಹಾಯ ಪಡೆದು ರೋಗಿಯನ್ನು ಪರೀಕ್ಷಿಸಿದರು.

ಮತ್ತೊಮ್ಮೆ ವಿಫಲ ಶೈತ್ಯೋಪಚಾರ ನಡೆಯಿತು.

ಡ್ಯೂಟಿ ಡಾಕ್ಟರು ತಾವೊಬ್ಬರೇ ಹೊಣೆಗಾರನಾಗುವುದು ಬೇಡವೆಂದು, ಡೀನರಿಗೆ ಫೋನ್ ಮಾಡಿದರು.

"ಬಂದ್ಬಿಟ್ಟೆ,"

—ಎಂದರು ಡೀನ್.

ಜಯರಾಮು ಊಟಕ್ಕೆ ಕುಳಿತಿದ್ದ. ಅವನನ್ನು ಕಂಡುಹಿಡಿದು ಸಂದೇಶ ತಲಪಿಸಲು ಅಜೀಜನಿಗೆ ಐದು ನಿಮಿಷ ಹಿಡಿಯಿತು.

ತಂದೆಯನ್ನು ಪ್ರಜ್ಞಾಹೀನ ಸ್ಥಿತಿಯಲ್ಲಿ ಆಸ್ಪತ್ರೆಗೆ ತರಲಾಗಿದೆ ಎಂದು ತಿಳಿದೊಡನೆ, ಕೈಯಲ್ಲಿದ್ದ ತುತ್ತನ್ನು ತಟ್ಟೆಗೆ ಹಾಕಿ ಜಯರಾಮು ಎದ್ದು ನಿಂತ. ಒಂದು ಕ್ಷಣ ಏನು ಮಾಡಬೇಕೆಂಬುದೇ ಅವನಿಗೆ ತೋಚಲಿಲ್ಲ.

ಹಾಸ್ಟೆಲಿನ ಜವಾನನೆಂದ:

"ನಿಮ್ಮನ್ನ ಕರಕೊಂಡು ಹೋಗೋಕೆ ಕಾರು ಬಂದಿದೆ, ಡಾಕ್ಟ್ರೆ."

ಜಯರಾಮು ಅವಸರವಾಗಿ ಕೈತೊಳೆದು ಬಾಯಿ ಮುಕ್ಕಳಿಸಿ ಉಟ್ಟ ಬಟ್ಟೆಯಲ್ಲೇ ವಿದ್ಯಾರ್ಥಿನಿಲಯದ ಹೆಬ್ಬಾಗಿಲಿನತ್ತ ಧಾವಿಸಿದ.

ಅಜೀಜ್ ಅವನಿಗಾಗಿ ಕಾರಿನ ಬಾಗಿಲು ತೆರೆದು ನಿಂತಿದ್ದ.

ದಾರಿಯಲ್ಲಿ ಜಯರಾಮು ಕೇಳಿದ:

"ಎಷ್ಟು ಹೊತ್ತಾಯ್ತು ಅಜೀಜ್?"

"ಹತ್ತಿಪ್ಪತ್ತ್ನಿಮಿಷ ಬುದ್ಧಿ."

"ಹ್ಯಾಗಾಯ್ತು?"

"ಸಾಹುಕಾರ್ರು ಆಗ್ತಾನೆ ಬಂದಿಳಿದ್ರು. ಬ್ಯಾರಿಷ್ಟರ್ ಬದ್ಮಾಷ್ ಅದೇನೋ ಮಾಡಿದ್ದ. ಒಳಗೆ ಗಲಾಟೆಯಾಗ್ತಿತ್ತು. ಸಾವುಕಾರ್ರು ಬಂದ್ಮ್ಯಾಕೆ ಕೂಗಾಟ ಜಾಸ್ತಿಯಾಯ್ತು. ಆ ಬ್ಯಾರಿಷ್ಟರಿಗೆ 'ಗೆಟೌಟ್' ಅಂದ್ರು ಯಜಮಾನ್ರು. ಅಸ್ಟು ಯೋಳಿದ್ದೇ, ಬಿದ್ಬಿಟ್ರು."

ಕಾಹಿಲೆ ಇಂಥದೇ ಇರಬಹುದೆಂದು ಊಹಿಸಿದ ಜಯರಾಮುವಿನ ಮುಖ ಮ್ಲಾನವಾಯಿತು.

......ಜಯರಾಮುವನ್ನು ನೋಡಿದೊಡನೆಯೇ ಕಮಲಮ್ಮನ ಅಳು ಮತ್ತೊಮ್ಮೆ ಉಕ್ಕಿಬಂತು. ಗಂಡನ ಬಗೆಗೆ ಕಹಿ ಭಾವನೆಯ ಹೊರತಾಗಿ ಬೇರೇನೂ ಇರದಿದ್ದ ತನ್ನ ತಾಯಿ ಶೋಕಾರ್ತಳಾಗಿದ್ದ ದೃಶ್ಯ, ಜಯರಾಮುವಿನ ಹೃದಯವನ್ನು ಹಿಂಡಿತು.

ಆತನೆಂದ:

"ಅಳಬೇಡವಮ್ಮ, ನಾನು ಬಂದಿದೀನಿ. ಎಲ್ಲಾ ನೋಡ್ಕೋತೀನಿ.

[ನರ್ಸೊಬ್ಬಳ ಕಡೆ ತಿರುಗಿ] ಸಿಸ್ಟರ್, ಇವರನ್ನ ಸ್ವಲ್ಪ ಹೊರಗೆ ಕರಕೊಂಡು ಹೋಗಿ ಬೆಂಚ್ ಮೇಲೆ ಕೂಡಿಸ್ತೀರಾ? ಸ್ವಲ್ಪ ಅವರ ಜತೇಲಿ ಇದ್ಬಿಡಿ, ಪ್ಲೀಸ್."

ನರ್ಸ್, ಕಮಲಮ್ಮನ ಬೆನ್ನಿಗೆ ತನ್ನ ತೋಳಿನ ಬಲ ನೀಡಿ ಅವರನ್ನು ಹೊರಕ್ಕೆ ಕರೆದೊಯ್ದಳು.

ಜಯರಾಮು ಡ್ಯೂಟಿಯಮೇಲಿದ್ದವರನ್ನು ಕೇಳಿದ:

"ನೋಡಿದಿರಾ, ಡಾಕ್ಟ್ರೆ?"

ಆ ಡಾಕ್ಟರೆಂದರು:

"ಹ್ಞ. He is in a state of coma."

"Cerebral thrombosis ಅನಿಸುತ್ತೆ."

ಹಿಂದೆಮುಂದೆ ನೋಡದೆ ಡ್ಯೂಟಿ ಡಾಕ್ಟರೆಂದರು:

"ನಾನೂ ಹಾಗಂತಲೇ ಅಂದ್ಕೊಂಡಿದೀನಿ."

"ತಲೆ ಭುಜ ಸ್ವಲ್ಪ ಎತ್ತರಿಸಿ ಇಡೋಣ. ಒಂದು ಪಕ್ಕಕ್ಕೆ ಹೊರಳಿಸೋಣ. ನಾಲಿಗೆ ಕುಸಿದ್ಹೋಗ್ಬಹುದು."

"Yes, yes. ಸಿಸ್ಟರ್, ಇಲ್ಬನ್ನಿ......"

"ಪ್ರಿಕ್ ಕೊಡಬೇಕಾಗುತ್ತಲ್ವೆ?"

"ಹ್ಞ. [ಶ್ರೀಕಂಠಯ್ಯನನ್ನು ಸರಿಯಾಗಿ ಮಲಗಿಸಲು ನೆರವಾಗುತ್ತಿದ್ದ ನರ್ಸ್‌ಗೆ] ಸಿರಿಂಜ್ ರೆಡಿಮಾಡಿ ಸಿಸ್ಟರ್."

ಹೊರಗಿದ್ದ ನರ್ಸ್ ಒಳಕ್ಕೆ ಧಾವಿಸಿ ಅಂದಳು:

"ಡೀನ್ ಬಂದ್ರು."

"ನಾನೇ ಅವರಿಗೆ ಫೋನ್ ಮಾಡ್ದೆ,"

–ಅಂದರು ಡ್ಯೂಟಿ ಡಾಕ್ಟರು, ಜಯರಾಮುವಿನೊಡನೆ.

ಎದ್ದು ನಿಂತ ಕಮಲಮ್ಮನನ್ನೊಮ್ಮೆ ದಿಟ್ಟಿಸಿ ಡೀನ್ ವಾರ್ಡನ್ನು ಹೊಕ್ಕು ನೇರವಾಗಿ ಶ್ರೀಕಂಠಯ್ಯನನ್ನು ಮಲಗಿಸಿದ್ದ ಮಂಚದೆಡೆಗೆ ಬಂದರು.

ರೋಗಿಯ ಕಣ್ಣೆವೆಗಳನ್ನು ಅವರು ತೆರೆದು ನೋಡಿದರು.

"ಹ್ಯಾಗಾಯ್ತು?"

–ಎಂದು ಕೇಳಿದರು.

ಜಯರಾಮು ಚುಟುಕಾಗಿ ಉತ್ತರವೀಯಲು, ಆತನೆಡೆ ತಿರುಗಿ,

"Cerebral thrombosis, ಅಲ್ವೆ?"

–ಎಂದು ಕೇಳಿದರು.

ಹೌದೆಂದು ಜಯರಾಮು ಗೋಣು ಆಡಿಸಿದ.

"ಯೆಸ್ ಸರ್,"

–ಎಂದು ಡ್ಯೂಟಿ ಡಾಕ್ಟರು ನುಡಿದರು.

ಆತನ ಕಡೆ ತಿರುಗಿ ಡೀನ್ ಅಂದರು:

"ಕೋರಮಿನ್ ಕೊಡಿ. ಇನ್ನೊಂದು ಮೂರು ನಾಲ್ಕು ಘಂಟೆ ಒಳಗಡೆ ಪ್ರಜ್ಞೆ ಬರಬಹುದು. [ಜಯರಾಮುವಿನತ್ತ ಹೊರಳಿ] ಅಶ್ವ ಪ್ರಕೃತಿಯ ಮನುಷ್ಯ. ಸಾವನ್ನ ಸೋಲಿಸ್ತಾರೆ."

ಜಯರಾಮು ನಿರ್ವಿಕಾರ ಮುಖಮುದ್ರೆಯಿಂದ ಡೀನರ ಮಾತುಗಳನ್ನು ಆಲಿಸಿದ.

ಡೀನರು ಡ್ಯೂಟಿ ಡಾಕ್ಟರಿಗೆ,

"ಹುಷಾರಾಗಿ ನೋಡ್ಕೊಳ್ಳಿ. ಬೆಳಗ್ಗೆ ನನಗೊಂದು ರಿಂಗ್ ಕೊಡಿ,"

–ಎಂದು ನುಡಿದು, ಜಯರಾಮುವನ್ನು ನೋಡಿ,

"ಬರಲಾ? ಹೊರಗಿರೋರು ನಿಮ್ಮ ತಾಯಿ ತಾನೆ? Poor thing! Be with her,"

–ಎನ್ನುತ್ತ ಹೊರಟರು.

ಕಮಲಮ್ಮನನ್ನು ನೋಡಿ,

"ಏನೂ ಅಪಾಯವಿಲ್ಲ. ಹುಷಾರಾಗ್ತಾರೆ. ಧೈರ್ಯವಾಗಿರಿ,"

–ಎಂದರು.

ಕಾರಿನ ತನಕವೂ ಹೋಗಿ ಜಯರಾಮು ಅವರನ್ನು ಬೀಳ್ಕೊಟ್ಟ.

ಸೋಮನಾಥ ಜಯರಾಮುವಿನೊಡನೆ ಅಂದ:

"ಛೀಫ್ ಮಿನಿಸ್ಟರಿಗೆ ಫೋನ್ ಮಾಡ್ಬೇಕು; ಪ್ರೆಸ್‌ನೋಟ್ ಕಳಿಸ್ಬೇಕು."

"ಏನು ಬೇಕಾದರೂ ಮಾಡಿ. ನನಗೆ ಅದೊಂದೂ ಗೊತ್ತಿಲ್ಲ,"

–ಎಂದು ನುಡಿದು ಜಯರಾಮು ತನ್ನ ತಾಯಿಯ ಕಡೆ ನಡೆದ.

ಸೋಮನಾಥ ಒಬ್ಬನೇ ಉಳಿದು, ತನ್ನ ಕರ್ತವ್ಯವನ್ನು ಕುರಿತು ಚಿಂತಿಸಿದ. [ಹಸಿವು ಬೇರೆ ತೊಂದರೆ ಕೊಡುತಿತ್ತು.] ನಿರ್ಧಾರಗಳನ್ನು ಕೈಕೊಂಡು, ಆಸ್ಪತ್ರೆಯ ಫೋನಿನ ಬಳಿ ಸಾರಿದ.

ಸಾಧಾರಣವಾಗಿ ಆ ಫೋನನ್ನು ಬಳಸಲು ಸಾರ್ವಜನಿಕರಿಗೆ ಸಮ್ಮತಿ ಇಲ್ಲ. ಆದರೆ, 'ಛೀಫ್ ಮಿನಿಸ್ಟರಿಗೆ' ಎಂದೊಡನೆ, ಕಾವಲು ಕುಳಿತಿದ್ದ ಚಿಲ್ಲರೆ ಉದ್ಯೋಗಿ ಅಡ್ಡಿ ಬರಲಿಲ್ಲ.

ಸುದ್ದಿ ತಿಳಿದ ಮುಖ್ಯಮಂತ್ರಿ ಡೀನರ ಮನೆಗೆ ಫೋನ್ ಮಾಡಿದರು. 'ಅಪಾಯವಿಲ್ಲ' ಎಂಬ ಆಶ್ವಾಸನೆ ದೊರೆತಾಗ, 'ಬೆಳಗ್ಗೆ ಬಂದು ನೋಡ್ತೀನಿ' —ಎಂದರು.

ಶ್ರೀಕಂಠಯ್ಯನವರ ಆತ್ಮೀಯರೂ ಸೋಮನಾಥನ ಪರಿಚಿತರೂ ಆದ ಮಂತ್ರಿಗಳಿಬ್ಬರು,

"ಈಗಲೇ ಬಂದು ನೋಡ್ತೀವಿ."

—ಎಂದರು.

ಪತ್ರಿಕೆಗಳಿಗೆ ಏನೆಂದು ತಿಳಿಸಬೇಕು?—ಎಂದು ಕೇಳಲು ಡ್ಯೂಟಿ ಡಾಕ್ಟರ ಲ್ಲಿಗೆ ಸೋಮನಾಥ ಹೋದ.

"ಹಾರ್ಟ್ ಅಟ್ಯಾಕ್ ಅಂತ ಹೇಳ್ಲೆ, ಡಾಕ್ಟ್ರೆ?"

"ಹಾರ್ಟಲ್ಲಪ್ಪ. ಇದು ಸೆರೆಬ್ರಲ್ ಥ್ರಂಬೊಸಿಸ್."

"ಅಂದರೆ?"

"ಸೆರೆಬ್ರಲ್. ಮೆದುಳಿಗೆ ಸಂಬಂಧಿಸಿದ್ದು. ಇಂಗ್ಲಿಷಿನಲ್ಲೇ ತಿಳಿಸ್ಬಿಡಿ."

"ನಿಮ್ಮ ಹೆಸರು ಡಾಕ್ಟ್ರೆ?"

ಡ್ಯೂಟಿ ಡಾಕ್ಟರು, ವೃತ್ತಿಯ ಕೋಟು ಮರೆಮಾಡಿದ್ದ ಒಳ ಅಂಗಿಯಿಂದ ತಮ್ಮ ವಿಸಿಟಿಂಗ್ ಕಾರ್ಡನ್ನು ತೆಗೆದು ಸೋಮನಾಥನಿಗೆ ಕೊಟ್ಟರು.

ಬಳಿಕ ಹತ್ತು ನಿಮಿಷಗಳ ಕಾಲ ಎಲ್ಲ ದಿನಪತ್ರಿಕೆಗಳಿಗೂ 'ನ್ಯೂಸ್' ತಿಳಿಸುವ ಕೆಲಸ.

'ಇದ್ದಕ್ಕಿದ್ದಂತೆ ಪ್ರಜ್ಞಾಶೂನ್ಯರಾದರು'.

ಸೋಮನಾಥನ ಮನಸ್ಸು ನಕ್ಕಿತು:

'ಸಾಹುಕಾರರು ಪ್ರಜ್ಞೆ ತಪ್ಪಿ ಬಿದ್ದುದಕ್ಕೆ ಮುನ್ನ ಶ್ರೀಸದನದಲ್ಲಿ ಏನಾ ಯ್ತೂಂತ ಪತ್ರಿಕೆಗಳಿಗೆ ತಿಳಿಸಿದೆ ಎಂದರೆ ನಾಳೆ ಮೋಜೇ ಮೋಜು.'

ಅಂತಹ 'ಅಯೋಗ್ಯ ವಿಚಾರ'ಗಳನ್ನು ಬದಿಗೆ ತಳ್ಳಿ ಸೋಮನಾಥ ಶ್ರೀಸದನಕ್ಕೆ ಫೋನ್ ಮಾಡಿದ.

[ಜಗ್ಗ: 'ಯಾರೂ ಇಲ್ರಾ. ಆಸ್ಪತ್ರೆಗೆ ಓಗವ್ರೆ. ಸಾವುಕಾರ್ರಿಗೆ-']

ಅವನ ಮಾತು ತಡೆದು ಇವನೆಂದ:

"ನಾನು ಕಣಯ್ಯ, ಸೋಮನಾಥ. ಜಯಮ್ಮಾವರನ್ನ ಕರಿ."

[ಜಗ್ಗ: 'ಕರೀಬೇಕರಾ?' ಅನುಮಾನ ಅವನಿಗೆ.]

"ಹ್ಞೂ ಕಣಪ್ಪ."

ಜಯಶ್ರೀ ಬಂದಾಗ ಸೋಮನಾಥ ನುಡಿದ:

"ಡೀನ್ ಬಂದು ನೋಡಿದ್ರು. ಅಪಾಯ ಇಲ್ವಂತೆ. ಪ್ರಜ್ಞೆ ಬರೋಕೆ ಇನ್ನೂ ನಾಲ್ಕು ಘಂಟೆ ಹಿಡೀಬಹುದು......ಅಮ್ಮನೂ ನಾನೂ ಇಲ್ಲೇ ಇರ್ತೇವೆ. ನಿಮ್ಮ ಅಣ್ಣನೂ ಇದಾರೆ. ನೀವು ಊಟಮಾಡಿ ಮಲಕೊಂಡ್ಬಿಡಿ. ಬೆಳಗ್ಗೆ ಆರು ಘಂಟೆಗೆ ಫೋನ್ ಮಾಡ್ತೀನಿ."

'ಹ್ಞೂ' 'ಹ್ಞೂ' ಎಂಬ ಕ್ಷೀಣ ಸ್ವರವಲ್ಲದೆ ಒಂದು ಪದವನ್ನೂ ಜಯಶ್ರೀ ಆಡಲಿಲ್ಲ.

ಅವಳ ಅಂಗರಕ್ಷಕನಂತೆ ಹತ್ತಿರವೇ ನಿಂತು, ಸೋಮನಾಥ ನುಡಿದುದನ್ನು ಕೇಳಿಸಿಕೊಂಡ ಜಗ್ಗ, ಮನೆಯಲ್ಲಿದ್ದ ಇತರರಿಗೆ ಆ ಸುದ್ದಿಯನ್ನು ತಲಪಿಸಿದ.

ಆ ರಾತ್ರೆ ಶ್ರೀಸದನದ ಎಲ್ಲ ದೀಪಗಳೂ ಢಾಳಾಗಿ ಉರಿದುವು.

ತೂಕಡಿಸುತ್ತ ಕುಳಿತ ಜಗ್ಗ ನಡುರಾತ್ರೆಯಲ್ಲಿ ಒಮ್ಮೆ ಯೋಚಿಸಿದ:

'ಈ ಉಡುಗೀನ ಕಟ್ಹಾಕಿ, ತಿಜೋರಿ ಗಿಜೋರಿ ಎಲ್ಲಾ ದೋಚಿ ದೇವಕ್ಕನ್ನೂ ಕರಕ್ಕೊಂಡು ಇಲ್ಲಿಂದ ನಾನು ಓಡಿ ಹೋದರೊ?'

ಹಾಗೆ ಯೋಚಿಸಿದೊಡನೆಯೇ,

'ಪಾಪಿ ಮುಂಡೇಗಂಡ, ಜೈಲ್ನಲ್ಲಿ ಸಾಯೋಕೆ ಒಂಟಿದೀಯೇನ್ಲಾ?'

—ಎಂದು ತನ್ನನ್ನು ತಾನೇ ಶಪಿಸಿದ.

ತ್ಯಾಗರಾಜನ ಕಾರು ಬಂದ ಕ್ಷಣದಿಂದ ನಡೆದುದನ್ನೆಲ್ಲ ನಿಧಾನವಾಗಿ ಮತ್ತೊಮ್ಮೆ ಆತ ಮೆಲುಕು ಹಾಕಿದ. ಮೆಲುಕು ಹಾಕುತ್ತ ತೂಕಡಿಸಿದ.

......ಆಸ್ಪತ್ರೆಯಲ್ಲಿ ಜಯರಾಮು, ಸೋಮನಾಥನನ್ನೂ ಅಜ್ಜೀಜನನ್ನೂ,

"ಉಂಡು ಬನ್ನಿ,"

—ಎಂದು ಕಳುಹಿಕೊಟ್ಟ.

ಅವರು ತಿಂಡಿ ತಿನ್ನಲು ಹೋದರು.

ಕಮಲಮ್ಮ ಬಿಕ್ಕುತ್ತ ಬಿಕ್ಕುತ್ತ ಆ ಸಂಜೆ ನಡೆದುದನ್ನು ಮಗನಿಗೆ ತಿಳಿಸಿದರು.

"ಆತ ಜಯನ ಜತೆ ಇದ್ದಿದ್ದು ಒಂದೆರಡೇ ನಿಮಿಷ. ಅಷ್ಟರಲ್ಲೇ ಜಯೂ ಕೂಗ್ಕೊಂಡ್ಳು. ನಾನು ಓಡ್ಬಂದೆ. ಹೆಚ್ಚಿಂದೇನೂ ಆಗಿರ್ಲಿಲ್ಲ."

ಜಯರಾಮು ನಿಟ್ಟುಸಿರುಬಿಟ್ಟು,

"ಬೇಜಾರು ಮಾಡ್ಕೊಬೇಡವಮ್ಮ; ಎಲ್ಲಾ ಸರಿಹೋಗುತ್ತೆ,"

—ಎಂದು ತಾಯಿಯನ್ನು ಸಮಾಧಾನಪಡಿಸಿದ.

ಸಚಿವರಿಬ್ಬರು ಆಸ್ಪತ್ರೆಗೆ ಬಂದುಹೋದರು.

ಮಧ್ಯರಾತ್ರಿಯ ಸುಮಾರಿಗೆ ಶ್ರೀಕಂಠಯ್ಯನವರಿಗೆ ಪ್ರಜ್ಞೆ ಬಂತು. ಅವರು ಕಣ್ಣುಗಳನ್ನು ತೆರೆದಂತೆ, ಕಮಲಮ್ಮ ದೇವರನ್ನು ಭಕ್ತಿಯಿಂದ ಸ್ಮರಿಸುತ್ತ ಕೈ ಜೋಡಿಸಿದರು.

ಏನನ್ನೋ ಹೇಳಬಯಸಿ ಶ್ರೀಕಂಠಯ್ಯ ನಾಲಿಗೆ ಹೊರಳಿಸಲೆತ್ನಿಸಿದರು.

ಮಾತು ಹೊರಡಲಿಲ್ಲ.

ಅವರ ಎಡ ಪಾರ್ಶ್ವ ನಿಶ್ಚೇಷ್ಟಿತವಾಗಿತ್ತು.

೧೯

ಬೆಳಕು ಹರಿಯಿತು. ಶ್ರೀಕಂಠಯ್ಯನನ್ನು ಸ್ಪೆಶಲ್ ವಾರ್ಡಿಗೆ ಸಾಗಿಸಿದರು. ರಾತ್ರೆ ಅವರಿಗೆ ಪ್ರಜ್ಞೆ ಬಂದುದು ತಿಳಿದೊಡನೆ ಜಯರಾಮು ತಾಯಿಗೆ ಹೇಳಿದ್ದ:

"ನಾನಿನ್ನು ಹೊರಗೇ ಇರ್ತೀನಮ್ಮ. ಈ ಕಾಹಿಲೆಯಲ್ಲಿ ಮನಸ್ಸಿನ ಉದ್ರೇಕ ಅಪಾಯಕರ. ನನ್ನನ್ನು ನೋಡಿದರೆ ಅಪ್ಪಯ್ಯ ಕೆರಳಬಹುದು."

ಜಯರಾಮು ಹಾಸ್ಟೆಲಿಗೆ ಹೋಗಿ ಬಂದ. ರಜಾ ಬೇಕೆಂದು ಕಾಲೇಜಿನ ಕಚೇರಿಗೆ ಕಾಗದ ಕಳುಹಿದ.

ಕಾರಿನೊಳಗೆ ಮಲಗಿದ್ದ ಅಜೀಜನೂ ಆಸ್ಪತ್ರೆಯ ಜಗಲಿಯಲ್ಲಿ ಬೆಂಚಿನ ಮೇಲೆ ನಿದ್ದೆಹೋಗಿದ್ದ ಸೋಮನಾಥನೂ ಎದ್ದರು.

ಶ್ರೀಕಂಠಯ್ಯನವರ ದೇಹಸ್ಥಿತಿಯಲ್ಲಿ ಯಾವ ಸುಧಾರಣೆಯೂ ಕಾಣಲಿಲ್ಲ. ಅವರು ಮೂಕರು; ದೇಹದ ಎಡ ಪಾರ್ಶ್ವವನ್ನು ಚಲಿಸಲಾಗದ ಅಸಹಾಯರು. ಕಣ್ಣುಗಳಿಂದ ಮಾತ್ರ ಕಂಬನಿ ಸುರಿಯುತಿತ್ತು.

ಕಮಲಮ್ಮ ಅವರ ಹತ್ತಿರ ನಿಂತು ಪದೇ ಪದೇ ಅಂದರು:

"ಅಳಬೇಡಿ; ಅಳಬೇಡಿ ! ಗುಣವಾಗುತ್ತೆ ಅಂದಿದಾರೆ ಡಾಕ್ಟ್ರು."

ಡ್ಯೂಟಿ ಡಾಕ್ಟರು ಡೀನರಿಗೆ ಫೋನ್ ಮಾಡಿ ರೋಗಿಯ ಬಗೆಗೆ ವರದಿ ಸಲ್ಲಿಸಿ, ತಾವು ಮನೆಗೆ ಹೊರಡಲು ಸಿದ್ಧರಾದರು.

ಸೋಮನಾಥ ಸಾಹುಕಾರರನ್ನು ನೋಡಲು ಹೋದ; ಅಜೀಜನೂ ಅವನ ಹಿಂದೆ ನಡೆದ. ವಂದಿಸುತ್ತ ನಿಂತ ಆ ಇಬ್ಬರನ್ನೂ ಶ್ರೀಕಂಠಯ್ಯನವರ ಕಣ್ಣುಗಳು ಒಂದೇ ಸಮನೆ ದಿಟ್ಟಿಸಿದುವು.

['ಇದು ಮನೆ......ಇವನು ಆ ಹೊಸ ಹುಡುಗ......ಏನೋ ಹೆಸರು ......ಅವನು ಡ್ರೈವರ್......']

ಕಮಲಮ್ಮ ಉಸಿರು ಬಿಗಿಹಿಡಿದು ಪತಿಯನ್ನ ನೋಡಿದರು: ಈ ಇಬ್ಬರನ್ನು ಗಂಡ ಗುರುತಿಸುವರೊ, ಇಲ್ಲವೊ?

ಶ್ರೀಕಂಠಯ್ಯನವರ ತುಟಿಗಳು ಮೌನವಾಗಿ ಚಲಿಸಿದುವು. ಆ ಇಬ್ಬರ ನೆನಪು ಅವರಿಗಾದಂತೆ ಕಮಲಮ್ಮನಿಗೆ ಕಂಡಿತು. ಅಷ್ಟಕ್ಕೇ ಅವರು ಸಮಾಧಾನ ಪಟ್ಟರು.

ಎರಡು ದಿನಪತ್ರಿಕೆಗಳಲ್ಲಿ ಮೊದಲ ಪುಟದ ಕೆಳ ಭಾಗದಲ್ಲಿ ಶ್ರೀಕಂಠಯ್ಯನವರ ಅಸ್ವಾಸ್ಥ್ಯದ ಸುದ್ದಿ, ಸಾಕಷ್ಟು ದಪ್ಪಕ್ಷರಗಳಲ್ಲಿ ಪ್ರಕಟವಾಗಿತ್ತು. ಒಂದು ಪತ್ರಿಕೆ ಆ ವಾರ್ತೆಯನ್ನು ಕೊನೆಯ ಪುಟದ ಕೊನೆಯ ಕಾಲಮಿನೊಳಗಡೆಗೆ ತಳ್ಳಿತ್ತು. ಇನ್ನೊಂದು—ಶ್ರೀಕಂಠಯ್ಯ ಪಾಲುದಾರರಾಗಿದ್ದುದು—ಹೆಚ್ಚಿನ ಪ್ರಾಶಸ್ತ್ಯವಿತ್ತು ಪ್ರಕಟಿಸಿತ್ತು.

ಭಾಗ್ಯನಗರದಲ್ಲಿ ಲಕ್ಷಾಂತರ ಜನ ಆ ವಾರ್ತೆಯನ್ನೋದಿದರು. ನೂರಾರು ಜನ ಆಸ್ಪತ್ರೆಗೂ ಪತ್ರಿಕಾಲಯಗಳಿಗೂ 'ಈಗ ಹೇಗಿದೆ?' ಎಂದು ಕೇಳಲು ಫೋನ್ ಮಾಡಿದರು. ವರದಿಗಾರರೂ ಸಂದರ್ಶಕರೂ ಆಸ್ಪತ್ರೆಗೆ ಬರತೊಡಗಿದರು.

ಡೀನರ ಕಾರು ಬಂದಾಗ ಆಸ್ಪತ್ರೆಯ ಗಡಿಯಾರ ೭-೪೫ ತೋರಿಸುತ್ತಿತ್ತು. ಅದರ ತಪ್ಪಿರಲಿಲ್ಲ. ಡೀನರೇ ಹೊತ್ತಿಗೆ ಮುಂಚೆ ಬಂದಿದ್ದರು. ಅಷ್ಟೇ ಅಲ್ಲ. ಡೀನರ ಆಗಮನವಾದ ಒಂದೆರಡು ನಿಮಿಷಗಳಲ್ಲಿ ಫಿಸಿಶಿಯನರೂ ಬಂದು ತಲಪಿದರು. [ಬೆಳಗ್ಗೆ ಪತ್ರಿಕೆಯಲ್ಲಿ ಶ್ರೀಕಂಠಯ್ಯನವರ ಅಸ್ವಾಸ್ಥ್ಯದ ವಾರ್ತೆಯನ್ನು ಓದಿ ಹುಬ್ಬು ಮೇಲೇರಿಸಿದ್ದ ಫಿಸಿಶಿಯನ್ನರಿಗೆ ಡೀನರ ಕರೆ ಬಂದಿತ್ತು: 'ಆಸ್ಪತ್ರೆಗೆ ಸ್ವಲ್ಪ ಬೇಗ್ನೆ ಬನ್ನಿ'.]

ಇವರಿಬ್ಬರೂ ಶ್ರೀಕಂಠಯ್ಯನವರನ್ನು ಜತೆಯಾಗಿ ಪರೀಕ್ಷಿಸಿದರು. ತಮ್ಮ ತಮ್ಮೊಳಗೆ ಸಮಾಲೋಚನೆ ನಡೆಸಿದರು. ಓಡಾಡುತ್ತ ಬಂದು ವಂದಿಸಿದ ಸ್ಪೆಷಲ್ ವಾರ್ಡುಗಳ ಡಾಕ್ಟರಿಗೆ, ಆ ಕೊಠಡಿಯ ನರ್ಸ್‌ಗೆ, ಶುಶ್ರೂಷೆ ಹಾಗೂ ಚಿಕಿತ್ಸೆಯನ್ನು ಕುರಿತು ಡೀನರು ನಿರ್ದೇಶಗಳನ್ನಿತ್ತರು.

ಹೊರಗೆ ಜಯರಾಮುವಿನೊಡನೆ ಅವರೆಂದರು:

"ನೋಡೋಣ. ಇನ್ನೂ ವೇಳೆಯಿದೆ. ಮುಂದಿನ ಇಪ್ಪತ್ತನಾಲ್ಕು ಘಂಟೆಗಳಲ್ಲಿ ಸುಧಾರಣೆ ಕಂಡೀತು. ನೀವು ಇಲ್ಲೇ ಇರ್ತೀರಿ, ತಾನೆ?"

"ಇರ್ತೀನಿ. ಆದರೆ ಒಳಗೆ ಹೋಗೋದಿಲ್ಲ."

"ಅದೊಳ್ಳೇದು. ಉದ್ರೇಕಕ್ಕೆ ಯಾವ ಆಸ್ಪದವೂ ಇರಕೂಡದು. ಆಹಾರ ಬೇಡ. ನಿಮಗೆ ಗೊತ್ತಲ್ಲ......"

ಆದರೆ ಸಂದರ್ಶಕರನ್ನು ತಡೆಯುವವರು ಯಾರು?

ಹೊರಗೆ ನೆರೆಯತೊಡಗಿದ್ದ ಗುಂಪಿನ ಬಳಿ ಸಾರಿ, ಡೀನ್ ಅಂದರು:

"ನೀವೆಲ್ಲ ಹೊರಟು ಹೋಗ್ಬೇಕು. ಅವರಿಗೆ ಪೂರ್ಣ ವಿಶ್ರಾಂತಿ ಬೇಕಾಗಿದೆ. ಇನ್ನು ಎರಡು ವಾರ ಯಾರೂ ಈ ಕಡೆ ಬರಬೇಡಿ."

ಆ ಕೊಠಡಿಯ ರಕ್ಷಣೆಗೆಂದೇ ಒಬ್ಬ ಜವಾನನನ್ನು ಡೀನ್ ಗೊತ್ತುಮಾಡಿದರು.

ಸಂದರ್ಶಕರನ್ನು ಒಳಕ್ಕೆ ಬಿಡಬಾರದೆಂದು ವಿಧಿಸಿದ ಕಟ್ಟಪ್ಪಣೆಯನ್ನು ಕಿಷ್ಕಿಂಧೆಯ ಮುಖ್ಯಮಂತ್ರಿಗೋಸ್ಕರ ಡೀನರು ಸಡಿಲಿಸಬೇಕಾಯಿತು.

ನೋಡುವುದರ ಹೊರತಾಗಿ ಇನ್ನೇನನ್ನೂ ಮಾಡಲಾರದ ಶ್ರೀಕಂಠಯ್ಯನವರನ್ನು ಕಂಡು ಮುಖ್ಯಮಂತ್ರಿಗೆ ದುಃಖವೆನಿಸಿತು.

"ಗುಣವಾಗುತ್ತೆ, ಕಮಲಮ್ನೋರೆ."

—ಎಂದು ಔಪಚಾರಿಕವಾಗಿ ಶ್ರೀಕಂಠಯ್ಯನವರ ಪತ್ನಿಯನ್ನು ಅವರು ಸಂತೈಸಿದರು.

ಹೊರಗೆ,

'ಹ್ಯಾಗಿದ್ದವನು ಹ್ಯಾಗಾಗಿಹೋದ,'

—ಎಂದು ತಮ್ಮಷ್ಟಕ್ಕೆ ಗೊಣಗಿ, ನಿಟ್ಟುಸಿರುಬಿಟ್ಟು,

"ಗುಣವಾಗೋ ಚಾನ್ಸ್ ಇದೆಯೆ?"

—ಎಂದು ಡೀನರನ್ನು ಕೇಳಿದರು.

"ಇದೆ ಅನಿಸುತ್ತೆ."

"ಶ್ರೀಕಂಠಯ್ಯ ಹೋದರೆ ನನ್ನ ಬಲಗೈ ಮುರಿದ ಹಾಗೆ. ಹುಷಾರಾಗಿ ನೋಡ್ಕೊಳ್ಳಿ, ಡಾಕ್ಟ್ರೆ. ನಿಮಗೆ ಹೇಳಬೇಕಾದ್ದಿಲ್ಲ—ಆದರೂ......"

"ನಮ್ಮಿಂದ ಸಾಧ್ಯವಿರೋದನ್ನೆಲ್ಲಾ ಮಾಡ್ತೀವಿ, ಸರ್."

"ಅದ್ನಿಜ. ದೈವೇಚ್ಛೆ ಮುಂದೆ ಮನುಷ್ಯನದೇನು ನಡಿಯುತ್ತೆ?"

ಅಷ್ಟು ಹೇಳಿ ಮುಖ್ಯ ಸಚಿವರು ಮತ್ತೊಮ್ಮೆ ನಿಟ್ಟುಸಿರುಬಿಟ್ಟು, ವಂದಿಸಿದವರಿಗೆಲ್ಲ ಪ್ರತಿವಂದನೆ ಮಾಡುತ್ತ, ತಮ್ಮ ವಾಹನದ ಕಡೆಗೆ ನಡೆದರು.

[ಆ ಮಧ್ಯಾಹ್ನ ಬಾರ್ ಅಸೋಸಿಯೇಶನಿನ ಹರಟೆಮೇಜಿನ ಬಳಿ ವಕೀಲರೊಬ್ಬರು ತ್ಯಾಗರಾಜನನ್ನು ಕೇಳಿದರು:

"ನಿಮ್ಮ ಕಕ್ಷಿದಾರರು ಆಸ್ಪತ್ರೇಲಿರುವಾಗಲೂ ನೀವು ನಿಶ್ಚಿಂತೆಯಾಗಿ ಸಿಗಾರ್ ಸೇದ್ತಿದೀರಲ್ಲ! ಆಶ್ಚರ್ಯವಪ್ಪ!"

ತ್ಯಾಗರಾಜನ್ ಸಿಗಾರನ್ನು ಕಚ್ಚಿ, ಸಣ್ಣದೊಂದು ಚೂರನ್ನು ಫುಕ್ಕೆಂದು ಉಗುಳಿ ಅಂದ:

"ನಿಮಗೊಂದು ರಹಸ್ಯ ತಿಳಿಸ್ತೀನಿ. ಆ ಆಸಾಮಿ ಲಾಯರನ್ನ ಬದಲಾಯಿಸ್ತೀನಿ ಅಂದ್ರು, ನಿನ್ನೆ. ಹಾಗೆ ಅಂದ ತಕ್ಷಣವೇ ಪ್ರಜ್ಞೆ ತಪ್ಪಿ ಬಿದ್ಬಿಟ್ರು!"

"ಓ ದೇವರೇ! ಈ ಸಂಗತೀನ ಟೈಪ್ ಮಾಡಿಸಿ ಕಟ್ಟುಹಾಕಿಸಿ ನಿಮ್ಮ ನೇಮ್ ಪ್ಲೇಟಿನ ಕೆಳಗೆ ತೂಗ ಹಾಕ್ಬೇಕು."

"ಫೀಸೆಷ್ಟು?"

"ಯಾವುದಕ್ಕೆ?"

"ನಿಮ್ಮ ಸಲಹೆಗೆ."

"ಹಹ್ಹ!"]

ಸೋಮನಾಥ ಶ್ರೀಸದನಕ್ಕೆ ಹೋಗಿ ತನ್ನ ಕಚೇರಿಯ ಸಿಬ್ಬಂದಿಗೆ ದಿನದ ಕೆಲಸವನ್ನು ಗೊತ್ತುಮಾಡಿ, ಬಂಗಲೆಯ ಸೇವಕರನ್ನು ವಿಚಾರಿಸಿಕೊಂಡು, ಜಯಶ್ರೀಯೊಡನೆ ಒಂದೆರಡು ಮಾತನ್ನಾಡಿ ಮರಳಿದ.

ಶಾಂತಮಲ್ಲಪ್ಪ ಆಸ್ಪತ್ರೆಗೆ ಬಂದ. ಸಾಹುಕಾರರನ್ನು ಕಾಣಲು ಸಮ್ಮತಿ ದೊರೆಯದೆ, ಕಂಬನಿಯೊರೆಸಿಕೊಳ್ಳುತ್ತ ದೂರದಲ್ಲಿ ನಿಂತ.

ಅವನದೊಂದೇ ದೂರು:

"ನನಗೆ ತಿಳೀದೇ ಹೋಯ್ತಲ್ಲ! ರಾತ್ರಿ ಯಾರೂ ಹೇಳ್ಲೇ ಇಲ್ವಲ್ಲ!"

ಆ ದುಸ್ಥಿತಿಯಲ್ಲಿ ಮುಖ್ಯ ಮನುಷ್ಯನಂತೆ ಸೋಮನಾಥ ಓಡಾಡುತ್ತಿರುವುದು ಶಾಂತಮಲ್ಲಪ್ಪನಿಗೆ ಅಸಹನೀಯವಾಗಿ ಕಂಡಿತು.

ಸಾಹುಕಾರರಿಗಂತೂ ಉಪವಾಸ. ಆಹಾರ ಕೊಡದಿರುವುದು ಚಿಕಿತ್ಸೆಯ ಪ್ರಧಾನ ಅಂಶ. ಆದರೆ ಕಮಲಮ್ಮ, 'ನಾನೂ ಕಣ್ಣಿಗೆ ಪಟ್ಟಿ ಕಟ್ಟಿಕೊಳ್ಳುತ್ತೇನೆ' ಎನ್ನಬೇಕೆ? ಭಟ್ಟ ತಂದ ಊಟವನ್ನಂತೂ ಅವರು ಮುಟ್ಟಲಿಲ್ಲ.

ಕಾಲೇಜಿಗೆ ಬುತ್ತಿ ಒಯ್ಯುವ 'ಡಬ್ಬ'.

ಸ್ನಾನ ಪೂಜೆಗಳಿಲ್ಲದೆ ಉಣ್ಣುವುದುಂಟೆ ಅವರು?

"ಮಗೂಗೆ ಬಡಿಸು; ಊಟಮಾಡ್ಲಿ."

"ಜಯಮ್ಮನವರ ಊಟವಾಯ್ತು."

"ಎಷ್ಟು ಹೆದರ್‍ಕೊಂಡಿದೆಯೇನೊ ಪಾಪ! ಲಚ್ಚಿ ಅವಳ ಜತೆ ಇದಾಳಾ?"

"ಇದಾಳೆ."

ಭಟ್ಟನೂ ಸಾಹುಕಾರರನ್ನು ನೋಡಬೇಕೆಂಬ ತನ್ನ ಆಸೆಯನ್ನು ಈಡೇರಿಸಿ ಕೊಳ್ಳಲಾರದೆ ಹಿಂತಿರುಗಿದ.

ಕಾಲೇಜಿನ ಕ್ಯಾಂಟೀನಿನಿಂದ ತರಿಸಿದ ಒಂದು ಕಪ್ ಕಾಫಿಯಿಂದ ಎರಡು ಗುಟುಕು ತಾಯಿಗೆ ಕುಡಿಸಬೇಕಾದರೆ ಜಯರಾಮುಗೆ ಸಾಕೋ ಸಾಕಾಯಿತು.

......ಮಾರನೆಯ ಬೆಳಗ್ಗೆ, 'ಸಾಹುಕಾರ ಶ್ರೀಕಂಠಯ್ಯನವರಿಗೆ ಪ್ರಜ್ಞೆ ಮರಳಿದರೂ ಮಾತು ನಿಂತುಹೋಗಿದೆ' ಎಂಬಿತ್ಯಾದಿ ವಾರ್ತೆಯನ್ನು ಭಾಗ್ಯನಗರದ ನಾಗರಿಕರು ಓದುತ್ತಿದ್ದ ವೇಳೆಗೆ ಸರಿಯಾಗಿ, ಆಸ್ಪತ್ರೆಯ ಮಂಚದ ಮೇಲಿದ್ದ ಶ್ರೀಕಂಠಯ್ಯನವರ ನಾಲಿಗೆ ಮಿಸುಕಿ, ಸ್ವರ ಹೊರಟಿತು.

"ಕಮಲ......"

ಕಮಲಮ್ಮನ ಪಾಲಿಗೆ ಅದೊಂದು ಅಮೃತ ಘಳಿಗೆ. ತಮ್ಮ ಗಂಡ ಹೆಸರು ಹಿಡಿದು ತಮ್ಮನ್ನು ಕರೆದು ಅದೆಷ್ಟೋ ಯುಗಗಳು ಸಂದಿದ್ದುವಲ್ಲ?

ಅವರ ಕಪೋಲಗಳ ಮೇಲಿಂದ ಆನಂದಾಶ್ರುಗಳು ಒಂದೇ ಸಮನೆ ಹರಿದುವು.

"ಅಳಬೇಡ."

ಸಾಹುಕಾರರ ಬಲಗೈಯ ಬೆರಳುಗಳು ಪತ್ನಿಯ ಕೈ ಮುಟ್ಟಿ ಮೆಲ್ಲನೆ ತಟ್ಟಿದುವು. [ಎಡಗೈಯಿನ್ನೂ ನಿಶ್ಚೇಷ್ಟಿತವಾಗಿದ್ದುದನ್ನು ಕಮಲಮ್ಮ ಗಮನಿಸಿದರು.]

–ತಾವು ಅಳಬಾರದು; ಗಂಡನ ಭಾವೋದ್ರೇಕಕ್ಕೆ ಕಾರಣರಾಗಬಾರದು...

ಕಣ್ಣುಗಳನ್ನು ಒರೆಸಿಕೊಳ್ಳುತ್ತ,

"ಇಲ್ಲ, ಅಳೋದಿಲ್ಲ!"

–ಎಂದರು ಕಮಲಮ್ಮ.

ಶ್ರೀಕಂಠಯ್ಯನವರಿಗೆ ಉಡುಗಿದ್ದ ವಾಕ್‌ಶಕ್ತಿ ಮರಳಿ ಬಂತೆಂಬ ಒಳ್ಳೆಯ ಸುದ್ದಿ, ಆಸ್ಪತ್ರೆಯ ಜಗಲಿಯುದ್ದಕ್ಕೂ ಓಡಾಡಿತು.

ಎಂಟು ಗಂಟೆಗೆ ಸರಿಯಾಗಿ ಡೀನರು ಆಸ್ಪತ್ರೆ ತಲಪಿ, ಕೋಟು ತೊಟ್ಟು, ತಮ್ಮನ್ನು ಎದುರ್ಗೊಂಡ ಜಯರಾಮುವಿಂದ ಸಂತೋಷದ ಸುದ್ದಿ ತಿಳಿದು, ಶ್ರೀಕಂಠಯ್ಯನವರನ್ನು ಮಲಗಿಸಿದ್ದ ಕೊಠಡಿಗೆ ತಾವೊಬ್ಬರೇ ಬಂದು,

"ನಮಸ್ಕಾರ,"

–ಎಂದರು ನಗುತ್ತ.

ಶ್ರೀಕಂಠಯ್ಯನವರ ಮುಖ ಅರಳಿತು. ಪ್ರತಿವಂದನೆ ಕ್ಷೀಣ ಧ್ವನಿಯಲ್ಲಿ ಹೊರಟಿತು.

"ಹ್ಯಾಗಿದೀರಿ ಈಗ?"

"ಎಡ ಭಾಗ–"

–ಎಂದಷ್ಟೇ ನುಡಿದು, ಬಳಲಿಕೆಯಿಂದ ಮುಂದುವರಿಸಲಾಗದೆ, ಶ್ರೀಕಂಠಯ್ಯ ಸುಮ್ಮನಾದರು.

"ಗೊತ್ತು. ಎಲ್ಲಾ ಸರಿಹೋಗುತ್ತೆ. ಇನ್ನು ಒಂದು ವಾರ ಮಲಕೊಂಡ್ಬಿಡಿ. ಆ ಮೇಲೆ ಎರಡು ವಾರ ಓಡಾಡ್ಬೇಡಿ."

ಹೊರಗೆ ಡೀನರು ಜಯರಾಮುಗೆ ಹೇಳಿದರು:

"ಮೊನ್ನೆನೇ ಅಂದ್ನೆಲ್ಲಪ್ಪ......ಇವರದು ಅಶ್ವಪ್ರಕೃತಿ. ಇನ್ನು ಐದಾರು ದಿವಸಗಳಲ್ಲಿ ಎದ್ದು ಕೂತುಕೊಳ್ಳೋ ಹಾಗಾಗುತ್ತೆ. ಜೀವನದಲ್ಲಿ ಈ ವರೆಗೆ ಒಂದು ಸಲವಾದರೂ ಇಂಥ ದೈನ್ಯಾವಸ್ಥೆ ಇವರಿಗೆ ಒದಗಿದ್ದರೆ ಹೇಳಿ! ಅಸಾಧಾರಣ ಮನುಷ್ಯ."

"ಅವರ ಸ್ಥಿತಿಗಿಂತ ತಾಯಿಯ ವ್ಯಥೆ ನೋಡಿ ನನಗೆ ಬೇಸರವಾಯ್ತು,ಸರ್."

"ಹ್ಞ. ತಾಯಿ ಅಂದರೆ ತಾಯಿ. ಸಹಜ. ಹುಂ. ಇವತ್ತೂ ರಜಾನೊ?"

"ಇಲ್ಲ. ಬರ್ತಿದೀನಿ."

"ಇಂಟರ್‌ವ್ಯೂ ಡೇಟೇನಾದರೂ ಗೊತ್ತಾಯ್ತೆ?"

"ಇನ್ನೂ ಇಲ್ಲ."

"ಇಂಟರ್‌ವ್ಯೂಗೆ ನೀವು ಪೂನಾಕ್ಕೆ ಹೋಗೋ ಅಗತ್ಯವಿಲ್ಲ, ಅನಿಸುತ್ತೆ. ಒಟ್ಟು ಆರೇಳು ಅರ್ಜಿಗಳಿವೆಯಂತಲ್ಲ? ಬೋರ್ಡಿನವರೇ ಇಲ್ಲಿಗೆ ಬರೋದೂ ಸಂಭವನೀಯ."

"ಎಲ್ಲಾ ಒಂದೇ."

"ಹುಂ. ನಿಮ್ಮ ನಿರ್ಧಾರದಲ್ಲಿ ಏನೂ ಬದಲಾವಣೆ ಇಲ್ಲ !"

"ಇಲ್ಲ, ಸರ್."

"ಗುಡ್."

ಡೀನರು ತಮ್ಮ ಕೊಠಡಿಗೆ ಹೋದರು. ಅವರ ಭೇಟಿಗೆ ಬಂದ ರೋಗಿಗಳ ಗುಂಪೊಂದು ಹೊರಗಿತ್ತು. 'ತೋರಿಸಿಕೊಳ್ಳಲು' ಬಂದವರನ್ನು ಕಾಣುವುದಕ್ಕೆ ಮುಂಚೆ ಡೀನರು ಮುಖ್ಯ ಸಚಿವರ ನಿವಾಸಕ್ಕೆ ಫೋನ್ ಮಾಡಿ, ಶ್ರೀಕಂಠಯ್ಯ ನವರು ಗುಣಮುಖರಾಗುತ್ತಿದ್ದಾರೆ—ಎಂದು ತಿಳಿಸಿದರು.

......ಆ ಸಂಜೆ ಕಮಲಮ್ಮ ಪತಿಗೆ ಅಂದರು:

"ಜಯಾ ವಿಷಯದಲ್ಲಿ ಚಿಂತೆ ಬೇಡ ಅಂದ್ರೆ. ಅವಳು ಹುಷಾರಾಗಿದಾಳೆ. ಆ ದುಷ್ಟ ಹೆಚ್ಚೇನೂ ಮಾಡಿಲ್ಲ. ಒಂದ್ನಿಮಿಷದಲ್ಲಿ ನಾನು ಬಂದ್ಬಿಟ್ನೆಲ್ಲ......"

ಶ್ರೀಕಂಠಯ್ಯ ಪತ್ನಿ ಆಡಿದುದನ್ನು ಆಲಿಸಿದರೇ ಹೊರತು ಏನನ್ನೂ ಹೇಳಲಿಲ್ಲ......

......ಮಾರನೆಯ ದಿನ ಜಯಶ್ರೀ ತಂದೆಯನ್ನು ಕಾಣಲು ಬಂದಳು. ಅವಳನ್ನು ಕಂಡು ಶ್ರೀಕಂಠಯ್ಯನವರಿಗೆ ಸಮಾಧಾನವಾಯಿತು. ಫ್ಲಾಸ್ಕಿನಲ್ಲಿ ತಾನು ತಂದಿದ್ದ ಹಾಲನ್ನು ಜಯಶ್ರೀ ತಂದೆಗೆ ಕುಡಿಸಿದಳು.

ಇಷ್ಟು ಮೆತ್ತಗಿದ್ದ ತಂದೆಯನ್ನು ಹಿಂದೆಂದೂ ಕಂಡ ನೆನಪಿರಲಿಲ್ಲ ಜಯಶ್ರೀಗೆ.

ಶ್ರೀಕಂಠಯ್ಯ ಮಗಳನ್ನು ಹತ್ತಿರಕ್ಕೆ ಕರೆದು ಕೇಳಿದರು:

"ಕಾಲೇಜಿಲ್ವಾ ?"

"ಲೀವ್ ಲೆಟರ್ ಕಳಿಸಿದೀನಿ."

"ಒಳ್ಳೇದು......ನಾನು ವಾಪಾಸಾಗೋ ವರೆಗೂ ಹೋಗ್ಬೇಡ...... ಪ್ರಿನ್ಸಿಪಾಲ್‌ಗೆ ನಾನು......ಹೇಳ್ತೀನಿ."

"ಹೂಂ ಅಪ್ಪಯ್ಯ."

......ಕಮಲಮ್ಮ ಮಗಳ ಜತೆ ಮನೆಗೆ ಹೋಗಿ, ಸ್ನಾನ ಪೂಜೆಗಳನ್ನು ಮುಗಿಸಿ, ಒಂದು ತುತ್ತು ಉಂಡು, ಆಸ್ಪತ್ರೆಗೆ ಮರಳಿದರು.

ಶಾಂತಮಲ್ಲಪ್ಪ ಸಾಹುಕಾರರ ದರ್ಶನಕ್ಕೆ ಬಂದು ಅವರ ಪಾದಗಳನ್ನು ಕಣ್ಣೀರಿನಿಂದ ತೋಯಿಸಿದ.

ನಗರದೊಳಗಿನ ಆಫೀಸಿನ ಮ್ಯಾನೇಜರು ಬಂದು ವಂದನೆ ಸಲ್ಲಿಸಿದ.

ಜಗ್ಗನೂ ದೂರದಲ್ಲಿ ನಿಂತು ಬಾಗಿ ನಮಿಸಿದ.

ಸೋಮನಾಥನನ್ನು ಶ್ರೀಕಂಠಯ್ಯ ಕೇಳಿದರು:

"ಆಫೀಸು ಕೆಲಸ ನಡೀತಿದೆಯೊ?"

ಅತ್ಯಂತ ವಿನಯದಿಂದ ಸೋಮನಾಥನೆಂದ:

"ಬೇಡ್ಕೊಳ್ತೀನಿ, ಸಾರ್.... ತಾವು ಆ ಯೋಚನೆ ಮಾಡ್ಬಾರ್ದು. ಡಾಕ್ಟರು ಹೇಳಿದಾರೆ: ಯಾವ ಯೋಚನೇನೂ ಮಾಡಬಾರ್ದು. ಎಲ್ಲಾ ಕೆಲಸ ನಾನು ನೋಡ್ಕೊಳ್ತೀನಿ, ಸಾರ್."

ಸಾಹುಕಾರರು ಮುಗುಳುನಕ್ಕು ಅಂದರು:

"ಆಗಲಪ್ಪ."

ಕಮಲಮ್ಮ ಇಲ್ಲದ ವೇಳೆ ನೋಡಿ ಅಜೀಜ್ ಶ್ರೀಕಂಠಯ್ಯನ ಹತ್ತಿರಕ್ಕೆ ಬಂದು ಪಿಸುದನಿಯಲ್ಲಿ ಅಂದ:

"ಆಯಮ್ಮ ಸಾವುಕಾರ್ರನ್ನ ನೋಡ್ಬೇಕು ಅಂತಾರೆ ಬುದ್ಧಿ. ನಿನ್ನೆ ಒಬ್ಬ ಹುಡುಗ ಬಂದು ನನ್ತಾವ ಯೇಳಿ ಓದ."

ಆ ಅಸಹಾಯ ಸ್ಥಿತಿಯಲ್ಲಿ ತಮ್ಮನ್ನು ನೋಡಬೇಕೆ ಆಕೆ?

"ಈಗ ಬೇಡ ಅನ್ನು......ಇನ್ನೊಂದು ವಾರ ಬಿಟ್ಟು ಬರ್ಲಿ."

"ಅಂಗೇ ಆಗ್ಲಿ, ಬುದ್ಧಿ. ಓಗಿ ಯೋಳ್ತೀನಿ."

......ಕಮಲಮ್ಮನ ಮನಸ್ಸನ್ನು ಒಂದು ಆಸೆ ಕೊರೆಯುತಿತ್ತು. ಮಗನ ...ಗೆಗೆ ಗಂಡನೊಡನೆ ತಾವು ಪ್ರಸ್ತಾಪಿಸಬೇಕು; ಆ ಕಾಳರಾತ್ರೆ ಜಯರಾಮು ...ಯು ಮಗ್ಗುಲಲ್ಲೇ ಇದ್ದ—ಎನ್ನಬೇಕು; ಹೊರಗೆ ಜಗಲಿಯಲ್ಲೇ ನಿಂತು ದಿನಕ್ಕೆ ...ರು ಬಾರಿ ಮಾತನಾಡಿ ಹೋಗುವ ಮಗನನ್ನು ತಂದೆಯ ಸಮ್ಮುಖಕ್ಕೆ ಒಳಕ್ಕೆ ಕರೆಯಬೇಕು......

ಕೈಹಿಡಿದವಳನ್ನು ಇದೆಷ್ಟೋ ವರ್ಷಗಳ ಬಳಿಕ 'ಕಮಲ' ಎಂದು ಸಂಬೋಧಿಸಿದ ಮನುಷ್ಯ ತಮ್ಮದೇ ಸಂತಾನದ ವಿಷಯದಲ್ಲಿ ಮಿದುವಾಗಲಾರರೆ?

ಹತ್ತು ಸಾರೆ ಬಾಯಿ ತೆರೆದು ಹತ್ತು ಸಾರೆ ಮುಚ್ಚಿ ಕೊನೆಗೊಮ್ಮೆ ಕಮಲಮ್ಮ ಅದುರುತಿದ್ದ ಧ್ವನಿಯಲ್ಲಿ ಅಂದರು:

"ನಮ್ಮ ಜಯೂ ಇಲ್ಲೇ ಕೆಲಸ ಮಾಡ್ತಾನೆ."

ಶ್ರೀಕಂಠಯ್ಯ ನೆಟ್ಟ ನೋಟದಿಂದ ಬಹಳ ಹೊತ್ತು ಮಡದಿಯನ್ನು ನೋಡಿದರು. ಶೀತಲ ದೃಷ್ಟಿ. ತುಟಿಗಳು ಚಲಿಸಲಿಲ್ಲ. ಒಂದು ಮಾತನ್ನೂ ಅವರು ಆಡಲಿಲ್ಲ.

ಕಮಲಮ್ಮನ ಹೃದಯ ರೋದಿಸಿತು: ತಾನು ತಪ್ಪು ಮಾಡಿದೆ. ಜಯೂ ವಿಷಯ ಎತ್ತಬಾರದಾಗಿತ್ತು. ಉದ್ರೇಕಕ್ಕೆ ಅವಕಾಶ ಕೊಡಬಾರದು ಎಂದಿದ್ದರಲ್ಲ ಡಾಕ್ಟರು? ತಾನು ತಪ್ಪು ಮಾಡಿದೆ......

ವಿಷಯಾಂತರಗೊಳಿಸಲೆಂದು ಅಲ್ಲಿಗೆ ಬಂದ ನರ್ಸನ್ನು ಕುರಿತು ಕಮಲಮ್ಮ ಕೇಳಿದರು:

"ಇವತ್ತು ರಾತ್ರೆ ಆಹಾರ ಏನು ಕೊಡ್ಬೇಕಮ್ಮ?"

"ಬರೇ ಹಾಲು. ಇನ್ನೇನೂ ಬೇಡಿ."

......ತಂದೆಯೊಡನೆ ಬರಿಯ ಮಾತುಕತೆಯಲ್ಲ; ಜಯರಾಮು ತಿಳಿ...ವಂತಹ ಮಹತ್ವದ ವಿಷಯವೇ ಒಂದಿತ್ತು.

ಸಶಸ್ತ್ರ ವೈದ್ಯಕೀಯ ದಳದಲ್ಲಿ ಲೆಫ್ಟಿನೆಂಟ್–ಜನರಲ್ ಹಂತಕ್ಕೇ... ನಿಷ್ಣಾತ ಡಾಕ್ಟರ ನೇತೃತ್ವದಲ್ಲಿ ಪರೀಕ್ಷಕರ ಮಂಡಲ, ಶ್ರೀಕಂಠಯ್ಯ ಅಸ್ವಸ್ಥ... ಮಲಗಿದ್ದ ನಾಲ್ಕನೆಯ ದಿನ ಭಾಗ್ಯನಗರಕ್ಕೆ ಬಂತು.

ಕರೆಯನ್ನು ಮನ್ನಿಸಿ ಜಯರಾಮು ಮಂಡಲದ ಭೇಟಿಗೆ ಹೋದ.

ಸ್ನಾತಕೋತ್ತರ ಪದವಿಯಿದ್ದ, ಗಂಭೀರ ಮುಖಭಾವದ, ಜೀವಂತ...ಗಳ ಯುವಕ ಸರ್ಜನ್ ಜಯರಾಮು ಎಲ್ಲ ಪರೀಕ್ಷಕರ ಮೆಚ್ಚುಗೆಗೆ ಪಾತ್ರನಾ...

ಲೆಫ್ಟಿನೆಂಟ್ ಜನರಲ್, ಕೆದಕುವ ಪ್ರಶ್ನೆಗಳನ್ನು ಕೇಳಿದರು:

"ಈಗಿರುವ ಉದ್ಯೋಗ ನಿಮಗೆ ಇಷ್ಟವಿಲ್ಲವೆ?"

ಪ್ರತಿಯೊಂದು ಪದವನ್ನೂ ತೂಗಿ ತೂಗಿ ಜಯರಾಮು ಉತ್ತರವಿತ್ತ.

"ಇಲ್ಲ ಎನ್ನಲಾರೆ. ನಮ್ಮ ಕಾಲೇಜಿನ ಡೀನ್ ಒಂದು ಹಿರಿಯ ಆತ್ಮ. ಅವರ ಕೆಳಗೆ ದುಡಿಯೋದೊಂದು ಸೌಭಾಗ್ಯ."

"ಮತ್ತೆ?"

"ವಿದ್ಯಾರ್ಥಿಗಳಿಗೆ ಪಾಠ ಹೇಳೋದೊಂದರಿಂದಲೇ ನನಗೆ ಸಮಾಧಾನವೆನಿಸೋದಿಲ್ಲ."

"ಚೀಣೀಯರನ್ನು ಓಡಿಸುವ ಹಂಬಲದಿಂದ ಪ್ರೇರಿತರಾಗಿದ್ದೀರಿ ಎನ್ನಲೆ?"

"ಸ್ವಲ್ಪಮಟ್ಟಿಗೆ ಹಾಗೆನ್ನಬಹುದು. ಆದರೆ ತಾತ್ಕಾಲಿಕವೆಂದಲ್ಲ, ಸದಾ ಕಾಲ ಮಿಲಿಟರಿಯಲ್ಲಿದ್ದುಕೊಂಡು ಸೇವೆ ಸಲ್ಲಿಸಬೇಕೂಂತ ನನ್ನ ಅಪೇಕ್ಷೆ."

"ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋಲಿಸಿದರೆ ನಮ್ಮ ದಳದ ವೈದ್ಯರಿಗೆ ದೊರೆಯುವ ವೇತನ ಕಡಿಮೆ ಅನ್ನಿಸೋದಿಲ್ವೆ?"

"ಅಭಿಪ್ರಾಯದ ಮಾತು. ನನ್ನ ಜೀವನದಲ್ಲಿ ಹಣಕ್ಕೆ ಈ ವರೆಗೂ ನಾನು ಮಹತ್ವ ಕೊಟ್ಟಿಲ್ಲ."

"ಕೊನೇ ಪ್ರಶ್ನೆ. ನಿಮಗೆ ಹೆಚ್ಚಿನ ತರಬೇತಿಯ ಅಗತ್ಯವಿಲ್ಲ. ಆದರೂ ನಿಯಮಗಳನ್ನು ನಾವು ಪಾಲಿಸಬೇಕು. ತರಬೇತಿಗೆ ತೇಜಪುರದ ಮಿಲಿಟರಿ ಆಸ್ಪತ್ರೆಗೇ ನೇರ ಬರುವ ಹಾಗೆ ಕರೆ ಬಂದರೆ ಏನು ಮಾಡುವಿರಿ?"

"ಅದು ನನ್ನ ಅದೃಷ್ಟ ಅಂತ ಭಾವಿಸಿ ಆ ಆಜ್ಞೆಯನ್ನು ಪಾಲಿಸುತ್ತೇನೆ."

"ಇನ್ನು ಎಂಟು ಹತ್ತು ದಿನಗಳಲ್ಲಿ ನಿಮಗೆ ನೇಮಕದ ಪತ್ರ ಬರ್ತದೆ. ಹೊರಡುವ ಸಿದ್ಧತೆ ಮಾಡಿಕೊಳ್ಳಿ."

"ಆಗಲಿ. ನಾನು ನಿಮಗೆಲ್ಲ ಕೃತಜ್ಞ."

"ಥ್ಯಾಂಕ್ ಯು, ಡಾಕ್ಟರ್."

"ಥ್ಯಾಂಕ್ ಯು ಆಲ್."

ನೆಟ್ಟಗೆ ನಿಂತು, ಶಿಸ್ತಿನಿಂದ ಕೈಯೆತ್ತಿ ವಂದಿಸಿ, ಜಯರಾಮು ಹೊರಬಂದ.

ಬಾಹ್ಯ ಜಗತ್ತು ಸಂತೋಷದಿಂದ ಕುಲುಕುಲು ನಗುತ್ತಿದ್ದಂತೆ ಅವನಿಗೆ ಭಾಸವಾಯಿತು. ಇದು ಭ್ರಮೆ, ತನ್ನೊಳಗಿನ ಸಂತಸದ ಪ್ರತಿಛಾಯೆಯನ್ನು ಎಲ್ಲೆಲ್ಲೂ ಕಾಣುವ ತವಕ ತನಗೆ—ಎಂದು ಆತ ತಿಳಿಯದವನಲ್ಲ. ಆದರೂ ಆ ಭ್ರಮೆ ಸುಂದರವಾಗಿತ್ತು. ಅದು ನಿಜವಲ್ಲ ಎನ್ನಲು ಆತನಿಗೆ ಮನಸಾಗಲಿಲ್ಲ.

ಜಯರಾಮು ಡೀನರನ್ನು ಹುಡುಕಿಕೊಂಡು ಕಾಲೇಜಿಗೆ ಬಂದ. ಸಂಜೆ ಅಷ್ಟು ಹೊತ್ತಿಗೆ ಆಸ್ಪತ್ರೆಯ ರೌಂಡಿಗೆ ಹೋಗುವುದಕ್ಕೆ ಮುನ್ನ ಆಫೀಸಿನಲ್ಲಿ ದಿನದ ಎರಡನೆಯ ಟಪಾಲುಗಳನ್ನು ಅವರು ಪರಾಂಬರಿಸುವುದು ಪದ್ಧತಿ. ಈ ದಿನವೂ ಅವರು ಅಲ್ಲಿದ್ದರು.

"ಬನ್ನಿ ಜಯರಾಮು. ಇಂಟರ್‌ವ್ಯೂ ಮುಗೀತೆ? ಸಕ್‌ಸೆಸ್‌ಫುಲ್ ಅಂತ ಅಲ್ಲಿಯೇ ಹೇಳಿದರೊ ಇಲ್ವೊ?"

"ಎಂಟು ಹತ್ತು ದಿನಗಳಲ್ಲಿ ನೇಮಕಪತ್ರ ಬರುತ್ತೆ—ಅಂದ್ರು, ಸರ್."

"ಮುದುಕನಿಗೂ ಗುಣವಾಗ್ತಿರೋದು ಒಳ್ಳೇದೇ ಆಯ್ತು."

"ತಾಯಿಗೆ ಈಗ ಈ ವಿಷಯ ತಿಳಿಸೋದು ಕಷ್ಟವಾಗದು."

"ಹೊರಡೋದಕ್ಕೆ ಮುಂಚೆಯೊಮ್ಮೆ ನಮ್ಮ ಮನೆಗೆ ಊಟಕ್ಕೆ ಬನ್ನಿ. ಮಹಡೀಲಿರೋ ಪೇಯಿಂಟಿಂಗ್ಸ್ ನೀವು ನೋಡಿಲ್ಲ."

"ಖಂಡಿತ ಬರ್ತೀನಿ, ಸರ್. ಥ್ಯಾಂಕ್ ಯು, ಸರ್."

"ಪೂನಾಕ್ಕೊ? ಡೆಹ್ರಾಡೂನಿಗೊ? ಎಲ್ಲಿಗೆ ಪೋಸ್ಟ್ ಮಾಡ್ತಾರಂತೆ?– ಏನಾದರೂ ಅಂದ್ರೇನು?"

"ತೇಜಪುರಕ್ಕೆ ಬಾ ಅಂದರೆ ಏನು ಮಾಡ್ತೀಯಾ ಅಂತ ಕೇಳಿದ್ರು. ಸಂತೋಷ ದಿಂದ ಬರ್ತೀನಿ–ಅಂದೆ."

"ಹುಂ. ಇತಿಹಾಸ ಬರೆಯೋ ಕಾರ್ಯದಲ್ಲಿ ಪಾಲುಗಾರರಾಗ್ತೀರಿ. Fine! ನಿಮ್ಮನ್ನು ಬೀಳ್ಕೊಡೋಕೆ ಕಾಲೇಜ್ನಲ್ಲಿ ಒಂದು ಸತ್ಕಾರ ಕೂಟ ಏರ್ಪ ಡಿಸಬೇಕು ಅನಿಸುತ್ತೆ."

"ಅಂಥದೆಲ್ಲ ಬೇಡಿ, ಸರ್. ಅಲ್ದೆ, ಹೋಗುವವರು ಬೇರೇನೂ ಇರ್ತಾರೆ."

"ಅವರೆಲ್ಲರನ್ನೂ ಬೀಳ್ಕೊಡೋಣ."

"ಇಂಥ ವಿಶ್ವಾಸಕ್ಕೆಲ್ಲ ನಾನು ಅರ್ಹನೆ?–ಅಂತ ಸಂದೇಹ ಸರ್."

ಕಾಗದ ಪತ್ರಗಳ ಟ್ರೇಯನ್ನು ಎಡಕ್ಕೆ ತಳ್ಳಿ, ಡೀನರೆಂದರು;

"ನಿಮಗೆ ಒಂದು ಮಾತು ಹೇಳ್ತೀನಿ, ಜಯರಾಮು. ಬಾಳ್ವೆಗೆ ಒಂದು ಅರ್ಥವಿದೆ ಅಂತ ಭಾವಿಸುವವರು ತಮ್ಮನ್ನು ತಾವೇ ಸಣ್ಣದು ಮಾಡ್ಕೊಳ್ಳೋ ದನ್ನು ಬಿಟ್ಟುಬಿಡ್ಬೇಕು. ನಿಮ್ಮ ಬೂಟಿನ ಲೇಸ್ ಕಟ್ಟೋ ಯೋಗ್ಯತೆ ಇಲ್ಲಿ ಎಷ್ಟು ಜನಕ್ಕಿದೆ?"

ಜಯರಾಮುವಿನ ಕತ್ತಿನ ಸೆರೆಗಳು ಬಿಗಿದುವು. ಕಟ್ಟೆಯೊಡೆದು ಹರಿಯ ಲೆತ್ನಿಸಿದ ಭಾವನೆಗಳನ್ನು ಆತ ಪ್ರಯಾಸದಿಂದ ಅದುಮಿ ಹಿಡಿದ.

"ದೊಡ್ಡ ಮಾತು ಆಡಿದಿರಿ, ಸರ್."

"ಏಳಿ ಜಯರಾಮು, ವಾರ್ಡ್ಸ್ ನೋಡ್ಕೊಂಡು ಬರೋಣ."

ಜಯರಾಮು ಎದೆಯುಬ್ಬಿಸಿಕೊಂಡು ಡೀನರ ಹಿಂದೆ ನಡೆದ. ಸ್ಪೆಷಲ್ ವಾರ್ಡಿನ ಒಂದು ಕೊಠಡಿಯ ಹೊರತಾಗಿ ಡೀನ್ ಹೋದ ಬೇರೆಡೆಗಳಲ್ಲೆಲ್ಲ ಆತ ಅವರ ಜತೆಗಿದ್ದ.

......ಮಾರನೆಯ ಬೆಳಗ್ಗೆ ಏಳೂವರೆಗೆ ಶ್ರೀಸದನದ ದೊಡ್ಡ ಕಾರು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಲಯದ ಮುಂದೆ ನಿಂತಿತು. ಒಳಗೆ ಹಿಂದಿನ ಸೀಟಿನಲ್ಲಿ ಜಯಶ್ರೀ ಇದ್ದಳು. ಅಜೀಜ್ 'ಚಿಕ್ಕ ಧಣಿ'ಯನ್ನು ಕಾಣಲೆಂದು ಹಾಸ್ಟೆಲಿನ ಒಳಹೋದ. ನಿಲಯದಿಂದ ಹೊರಬೀಳುತ್ತಿದ್ದವರು, ಕೋಣೆಗಳಲ್ಲಿ ಮುಖಕ್ಷೌರ ಮಾಡಿಕೊಳ್ಳುತ್ತ ನಿಂತಿದ್ದವರು, ಉಡುಪು ಧರಿಸಿಕೊಳ್ಳುತ್ತಿದ್ದವರು—ಎಲ್ಲರ ದೃಷ್ಟಿಗಳೂ ಕಾರಿನೊಳಗಿನ ಹುಡುಗಿಯ ಮೇಲೆ ನೆಟ್ಟುವು. ಆ ಬಾಗಿಲು ಕಿಟಿಕಿಗಳ ಕಡೆಗೆ ನೋಡಿಯೂ ನೋಡದವಳಂತೆ ಜಯಶ್ರೀ ಕುಳಿತಳು.

ಜಯರಾಮು ಆಸ್ಪತ್ರೆಗೆಂದು ಹೊರಟು ಬಂದ, ಅಜೀಜನೊಡನೆ.

"ಸುಮ್ನೆ ಬಂದೆ, ಜಯಣ್ಣ. ಬಾ. ಕಾಲೇಜಿಗೆ ತಾನೆ?"

[ನಿಲಯದ ಕಿಟಿಕಿಗಳಿಂದ ನೂರು ಕಣ್ಣುಗಳು ದಿಟ್ಟಿಸುತ್ತಿದ್ದಂತೆ] ಜಯರಾಮು, ಜಯಶ್ರೀಯ ಮಗ್ಗುಲಲ್ಲಿ ಕುಳಿತ.

ತಂಗಿಯೆಂದಳು:

"ನಿನ್ನೆ ನೋಡ್ಬೇಕೂಂತಿದ್ದೆ. ಬರೋದು ಸ್ವಲ್ಪ ತಡವಾಯ್ತು."

"ಚೆನ್ನಾಗಿದೀಯಾ?"

"ಹ್ಞ. ನೀನಂತೂ ಮನೆಗೆ ಬರಬಾರದೂಂತ ಶಪಥ ಮಾಡಿದೀಯಲ್ಲ."

"ಇನ್ನೊಂದು ಎಂಟು ಹತ್ತು ದಿವಸದಲ್ಲಿ ಬರ್ತೀನಿ."

"ಹೌದೆ ಜಯಣ್ಣ?"

"ಹೊರಡ್ತೀನಿ ಅಂತ ಹೇಳೋದಕ್ಕೆ."

ತಂಗಿ ಅಣ್ಣನ ಮುಖ ನೋಡಿದಳು, ತನ್ನ ಪ್ರಶ್ನೆಗಳಿಗೆ ಅಲ್ಲಿ ಉತ್ತರವಿರುವುದೆಂದು.

ಜಯರಾಮು ಅಂದ:

"ನಿನ್ನೆ ಇಂಟರ್‌ವ್ಯೂ ಆಯ್ತು. ನೇಮಕಪತ್ರ ಕಳಿಸ್ತೀವಿ ಅಂದಿದಾರೆ. ನಾನಿನ್ನು ಮಿಲಿಟರಿ ಸರ್ಜನ್."

"ಅಯ್ಯೋ! ಯುದ್ಧಕ್ಕೆ ಹೋಗ್ತೀಯಾ?"

"ಇಷ್ಟೇ ಏನೆ ನಿನ್ನ ದೇಶಪ್ರೇಮ!"

"ಅಮ್ಮ ಖಂಡಿತ ಕೊರಗ್ತಾಳೆ."

"ನೀನೀಗ ದೊಡ್ಡವಳಾದಿಯಲ್ಲ, ಜಯ? ['ಏನರ್ಥ ಈ ಮಾತಿಗೆ?'] ಅಮ್ಮನ್ನ ಇನ್ನು ನೀನು ನೋಡ್ಕೋಬೇಕು."

"ಏನು ನೋಡ್ಕೊಳ್ತೀನೊ ನಾನು?"

[–'ಸಿದ್ಧವಾಗಿದೆಯಲ್ಲ ಅಳು!']

"Cheer up!"

"ಅಂತೂ ನೀನು ಹೊರಟುಹೋಗ್ತೀಯಾ."

ಆಸ್ಪತ್ರೆಯ ಎದುರು ಕಾರು ನಿಂತಾಗ, ಜಯರಾಮು ತಂಗಿಗೆ ಅಂದ:

"ಜಯಾ, ನನಗೋಸ್ಕರ ಒಂದು ಉಪಕಾರ ಮಾಡ್ತೀಯಾ? ನನಗೆ ದೊಡ್ಡ ಕೆಲಸ ಸಿಕ್ಕಿದೆ ಅಂತ ಅಮ್ಮನಿಗೆ ಹೇಳು."

"ನೀನೇ ಯಾಕೆ ಹೇಳೊಲ್ಲ?"

"ಅಳು ಕಂಡರೆ ಭಯ ನನಗೆ, ಅದಕ್ಕೆ. ಪ್ಲೀಸ್. ಮೊದಲು ನೀನು ಸುದ್ದಿ ತಿಳಿಸು."

"ಅಪ್ಪಯ್ಯನಿಗೆ?"

"ಕೂಡದು. ಅವರಿಗೆ ಹೇಳೋದು ಪೂರ್ತಿ ಗುಣವಾದ್ಮೇಲೆ."

ಡೀನರ ಕಾರು ಬಂದಿರಲಿಲ್ಲ. ಇನ್ನೂ ಎಂಟುಹೊಡೆಯತೊಡಗಿರಲಿಲ್ಲ ಆಸ್ಪತ್ರೆಯ ಘಂಟೆ.

ಜಯರಾಮು ಕೆಳಕ್ಕಿಳಿದು,

"ಆ ಮೇಲೆ ಸಿಗ್ತೀನಿ, ಬಯ್ ಬಯ್,"

–ಎಂದ.

ಹಾಲು ತುಂಬಿದ ಫ್ಲಾಸ್ಕಿನೊಡನೆ ಜಯಶ್ರೀಯೂ ಕಾರಿನಿಂದ ಇಳಿದಳು.

೨೦

ಆಸ್ಪತ್ರೆ ಸೇರಿದ ಐದನೆಯ ದಿನ ಶ್ರೀಕಂಠಯ್ಯನವರ ದೇಹದ ಎಡ ಪಾರ್ಶ್ವದಲ್ಲಿ ಚೈತನ್ಯ ಕಂಡಿತು.

"ಗೆದ್ದೆ !"

—ಎಂದರು ಅವರು ಸಂತೋಷದಿಂದ.

ಕಮಲಮ್ಮನ ಮುಖ ಅರಳಿತು.

ಅಷ್ಟು ದಿನ ನಿಶ್ಚಲವಾಗಿದ್ದ ಸಾಹುಕಾರರ ಅವಯವಗಳನ್ನು ಆಸ್ಪತ್ರೆಯಲ್ಲಿ ನೀವಿದರು. ಹಾಲು ಹಣ್ಣುಗಳ, ಪುಷ್ಟಿಕರ ಆಹಾರದ ಸೇವನೆ ನಶಿಸಿ ಹೋಗಿದ್ದ ಶಕ್ತಿಯನ್ನು ಮೆಲ್ಲಮೆಲ್ಲನೆ ಅವರಿಗೆ ಗಳಿಸಿಕೊಟ್ಟಿತು.

ಮತ್ತೆ ಐದು ದಿನಗಳು ಹಾಗೆ ಕಳೆದ ಮೇಲೆ ಡೀನರೆಂದರು:

"ಇನ್ನೂ ಎರಡು ವಾರ ಪೂರ್ಣ ವಿಶ್ರಾಂತಿ ತಗೋತೀನಿ ಅಂತ ನೀವು ವಚನ ಕೊಡೋದಾದರೆ ಇವತ್ತೇ ಡಿಸ್‌ಚಾರ್ಜ್ ಮಾಡ್ತೀನಿ."

"ನೀವು ಹಾಕಿದ ಗೆರೆ ದಾಟಿಯೇನೆ ಸ್ವಾಮಿ ?"

—ಎಂದರು ಶ್ರೀಕಂಠಯ್ಯ.

ಸಾಹುಕಾರರು ಶ್ರೀಸದನಕ್ಕೆ ತೆರಳಿದರು.

ಶ್ರೀಕಂಠಯ್ಯನವರನ್ನು ಆಸ್ಪತ್ರೆಗೆ ಸೇರಿಸಿದ ರಾತ್ರೆ ಡ್ಯೂಟಿಯ ಮೇಲಿದ್ದ ಡಾಕ್ಟರು, ವಾರ್ಡಿನ ಡಾಕ್ಟರು—ಇವರಿಗೆ ಇಪ್ಪತ್ತೈದು ಇಪ್ಪತ್ತೈದು, ಇಬ್ಬರು ನರ್ಸ್‌ಗಳಿಗೆ ಹತ್ತು ಹತ್ತು, ವಾರ್ಡ್‌ಬಾಯ್‌ಗಳಿಬ್ಬರಿಗೆ ಐದೈದು ರೂಪಾಯಿಗಳನ್ನು ಶಾಂತಮಲ್ಲಪ್ಪ ಸಲ್ಲಿಸಿದ. ಕೊನೆಯ ಇಬ್ಬರ ಹೊರತಾಗಿ [ಇವರಿಗೆ ಒಂದೊಂದು ರೂಪಾಯಿನ ಐದು ನೋಟುಗಳು] ಉಳಿದವರಿಗೆ ಆತ ಹಣ

ತೆತ್ತುದು ಭದ್ರವಾಗಿ ಮುಚ್ಚಿದ್ದ ಲಕೋಟೆಗಳಲ್ಲಿ. ಹಾಗೆಯೇ ಆಸ್ಪತ್ರೆಯ ಆಫೀಸಿಗೂ ತೆರಳಿ ವಾರ್ಡಿನ ಮತ್ತಿತರ ಚಾರ್ಜುಗಳನ್ನೂ ಆತ ಸಂದಾಯ ಮಾಡಿದ.

ಅರಸು ರಾಜಧಾನಿಗೆ ಮರಳಿದಂತಾಯಿತು ಶ್ರೀಸದನಕ್ಕೆ ಶ್ರೀಕಂಠಯ್ಯನವರ ಪುನರಾಗಮನ. ಪದಹತಿಯಿಂದ ಅಬ್ಬರ ಹೂಂಕಾರಗಳಿಂದ ಎಲ್ಲರ ಎದೆ ಝಲ್ಲೆನಿಸುತ್ತಿದ್ದ ಸಾಹುಕಾರರು ತಮ್ಮ ಹಾಸಿಗೆಯ ಮೇಲೆ ಸದ್ದಿಲ್ಲದೆ ಮಲಗಿದರು.

"ನೀನೂ ಕೆಳಗೇ ಬಂದ್ಬಿಡು,"

—ಎಂದರು ಶ್ರೀಕಂಠಯ್ಯ ಮಗಳಿಗೆ.

"ಬಂಗ್ಲೆಗೆ ಗ್ರಾಣ ಇಡದಂಗಾಗಿತ್ತಪ್ಪೋ. ತಿರ್‌ಗಾ ಒಂದೀಟು ಕಳೆಬಂತು,"

—ಎಂದ ಮಾರಣ್ಣ ಜಗ್ಗನಿಗೆ.

ಪೂರ್ಣ ವಿಶ್ರಾಂತಿ ಎಂದರೇನರ್ಥ? ಪರಿಶ್ರಮದ ಕೆಲಸಕ್ಕೇನೂ ಶ್ರೀಕಂಠಯ್ಯ ಕೈಹಾಕಲಿಲ್ಲ. ಒಡೆಯನಿಲ್ಲದಾಗ ನಗರದೊಳಗಿನ ಆಫೀಸಿಗೆ ಕೆಲಸ ಕಡಿಮೆ. ತೀರಾ ಮುಖ್ಯವಾದುದೇನಾದರೂ ಇದ್ದಾಗ ಮ್ಯಾನೇಜರು ಬಂದು ಸಲಹೆ ಪಡೆಯುತ್ತಿದ್ದ. ಶಾಂತಮಲ್ಲಪ್ಪನಂತೂ ಸ್ವಾಮಿನಿಷ್ಠೆಯಿಂದ ತನ್ನ ಕೆಲಸ ನಿರ್ವಹಿಸುತ್ತಿದ್ದ. ರಕ್ಷಣಾನಿಧಿ ಸಂಗ್ರಹದ ಹೊರೆಯನ್ನು ಬೇರೆ ಯಾರಿಗಾದರೂ ದಾಟಿಸಬಾರದೇಕೆ?—ಎಂದು ಒಮ್ಮೆ ಶ್ರೀಕಂಠಯ್ಯನವರಿಗೆ ಅನಿಸಿತು. ಆದರೆ, ಸೋಮನಾಥನ ಮುಖ ನೋಡಿದೊಡನೆ ಆ ಯೋಚನೆ ಮಾಯವಾಯಿತು.

ದೇಹಕ್ಕೆ, ಮುಖ್ಯವಾಗಿ ಎಡ ಪಾರ್ಶ್ವಕ್ಕೆ, ಎಣ್ಣೆಯುಜ್ಜಿಸಿಕೊಂಡು ಶ್ರೀಕಂಠಯ್ಯ ನೀರೆರೆಸಿಕೊಳ್ಳುತ್ತಿದ್ದರು. ಆ ದಣಿವಿನ ಬಳಿಕ ವಿಶ್ರಾಂತಿ, ಊಟ, ಅದಾದ ಮೇಲೆ ನಿದ್ದೆ. ಮತ್ತೆ ನಾಲ್ಕು ಹೆಜ್ಜೆ ಅತ್ತಿತ್ತ ನಡಿಗೆ. ನೋಡಲು ಬಂದ ಒಬ್ಬಿಬ್ಬರೊಡನೆ ಒಂದೆರಡು ಮಾತು. ಪುನಃ ಊಟ—ನಿದ್ದೆ.

ನಿದ್ದೆಗಳ ನಡುವಿನ ಎಚ್ಚರದ ವೇಳೆ ಮಾತ್ರ ಯೋಚನೆಗಳಲ್ಲಿ ಕಳೆಯುತಿತ್ತು.

ಅವರನ್ನು ಸದಾ ಕಾಡುತ್ತಿತ್ತು ಒಂದು ಪ್ರಶ್ನೆ:

ಬದುಕಿ ಉಳಿದೆ, ನಿಜ; ಆದರೆ ಮೊದಲಿನಂತಾಗುವೆನೆ ತಾನು?

ಅವರು ಆಸ್ಪತ್ರೆಯನ್ನು ಬಿಟ್ಟುದಕ್ಕೆ ಎರಡು ದಿನಗಳಿಗೆ ಮುಂಚೆ ಕತ್ತಲಾದ ಮೇಲೆ, ಕಮಲಮ್ಮ ಮನೆಗೆ ತೆರಳಿದ ಬಳಿಕ, ಅಜೀಜ್ 'ಆಕೆ'ಯನ್ನು ಕರೆದುಕೊಂಡು ಬಂದಿದ್ದ. ಪ್ರಯತ್ನಪಟ್ಟು ಎದ್ದು ಕುಳಿತು ಅವರು ಅವಳನ್ನು ಇದಿರ್ಗೊಂಡಿದ್ದರು. ಮಂಚದ ಕೆಳಕ್ಕೆ ಅವರು ಇಳಿಬಿಟ್ಟಿದ್ದುದು ಬಲಗಾಲನ್ನು.

ಅದನ್ನು ಮುಟ್ಟಿ ಆಕೆ ನಮಸ್ಕರಿಸಿ, ದೂರ ಸರಿದು ಮೂಲೆಯಲ್ಲಿ ನಿಂತಿದ್ದಳು. ಜಯಶ್ರೀಯ ವಯಸ್ಸಿನ ಹುಡುಗಿ. ಅಜೀಜ್ ಹೊರಗಿದ್ದ. ಆಕೆ ಯಾರೆಂದು ನರ್ಸ್‌ಗಳು ಕೇಳಲಿಲ್ಲ–ಊಹಿಸಿಕೊಂಡಿದ್ದರು. ಅವರು ತಾವಾಗಿಯೇ ಅಲ್ಲಿಂದ ಕಣ್ಮರೆಯಾಗಿದ್ದರು.

'ಆಕೆ' ಕೇಳಿದ್ದಳು:

"ನನ್ನ ದೇವರು ಯಾವಾಗ ಬರ್ತೀರಿ?"

ಅವರಿಗೆ ನಗು ಬಂದಿತ್ತು.

"ಇನ್ನೂ ಸ್ವಲ್ಪ ದಿವಸ ಆಗುತ್ತೆ. ನಿನಗೆ ದುಡ್ಡೇನಾದರೂ ಬೇಕಾದರೆ ಹೇಳಿ ಕಳಿಸು."

"ನನಗೆ ನೀವು ಬೇಕು. ಇನ್ನೇನೂ ಬೇಡ."

"ಡಾಕ್ಟರು ಬರುವ ಹೊತ್ತು. ಈಗ ಹೋಗು."

ಅವಳು ವಿನೀತಳಾಗಿ ಮತ್ತೊಮ್ಮೆ ಅವರ ಬಲ ಪಾದವನ್ನು ಮುಟ್ಟಿ ವಂದಿಸಿ ಹೊರಟಿದ್ದಳು.

–'ನೀವು ಬೇಕು', ನಿಜವೆ? ಅವಳಿಗೇನು ಸುಖ ತಮ್ಮಿಂದ?......

ತಮ್ಮ ಕಾಹಿಲೆಗೆ ಆ ತ್ಯಾಗರಾಜನ್ ಕಾರಣ. ಬದುಕಿನಲ್ಲಿ ಯಾರಿಗೂ ಈವರೆಗೆ ಮೋಸಹೋಗದ ತಾವು ಇವನೊಬ್ಬನ ನಿಜರೂಪವನ್ನು ತಿಳಿಯದೆ ಹೋದೆವಲ್ಲ? ಹಸುಳೆಯನ್ನು ಆತ ಬಲಿತೆಗೆದುಕೊಳ್ಳಲು ನೋಡಿದನಲ್ಲ? [ಹಸುಳೆ? 'ಆಕೆ'ಯದೇ ವಯಸ್ಸು ತಮ್ಮ ಮಗಳಿಗೂ.] ಜಯಶ್ರೀಯ ಮೂಲಕ ತಮ್ಮ ಸಂಪತ್ತನ್ನೆಲ್ಲ ಎತ್ತಿಹಾಕಬಹುದು ಎಂದಿದ್ದನಲ್ಲ? ಆದರೆ, ಯಾಕೆ ಹಾಗಾಯಿತು? ಇವಳ ಮೈಮುಟ್ಟುವ ಧೈರ್ಯ ಅವನಿಗೆ ಹೇಗೆ ಬಂತು? ಆ ಘಳಿಗೆಯಲ್ಲಿ ಅವನು ಕುಡಿದಿದ್ದನೆ? ಮತ್ತೇರಿತ್ತೆ? ಏರಿತ್ತೆ? ಹಾಗಿಲ್ಲವಲ್ಲ...... ಮತ್ತೆ? ಜಯಶ್ರೀಯೇ ಅವನಿಗೆ ಪ್ರೋತ್ಸಾಹ ಕೊಟ್ಟಿರಬಹುದೆ? ಛೆ! ಛೆ! [ಜಯಶ್ರೀಯ ವಯಸ್ಸೂ 'ಆಕೆ'ಯ ವಯಸ್ಸೂ ಒಂದೇ.] ಏನಿದ್ದರೂ ಅವನೇ ನೀಚ. ಹೇಗೆ ಹೆದರಿಸಿಬಿಟ್ಟ ತಮ್ಮನ್ನು! ಈಗಲೂ ಸುಮ್ಮನಿರಬಾರದು. ಅವನ ಮಾತು–ಚಟುವಟಿಕೆಗಳ ಮೇಲೆ ಗಮನವಿಡಬೇಕು. ಅಪಾಯಕಾರಿ ಎನಿಸಿದನೋ ಹೊಸಕಿಹಾಕಬೇಕು ಆ ಹುಳವನ್ನು!

[ನಿಧಾನವಾಗಿ ಅತ್ತ ಇತ್ತ ನಡೆಯುತ್ತಿದ್ದ ಶ್ರೀಕಂಠಯ್ಯ ಊರಗೋಲನ್ನು ನೆಲಕ್ಕೆ ಕುಟ್ಟಿದರು.]

ಆದರೂ ಜಯಶ್ರೀಯೊಂದು ಸಮಸ್ಯೆಯೇ. ಪ್ರಾಯಕ್ಕೆ ಬಂದ ಹುಡುಗಿ ಯರು ಸಮಸ್ಯೆಯಲ್ಲದ್ದು ಎಲ್ಲಿ? ಇದಕ್ಕೆ ಪರಿಹಾರ?

ಒಂದೆರಡು ಸಂಬಂಧಗಳನ್ನು ಕುರಿತು ಅವರು ವಿವೇಚನೆ ನಡೆಸಿದ್ದರು, ಹಿಂದೆ. ಅವೆರಡೂ ತಾತ ಮುತ್ತಾತಂದಿರ ಕಾಲದಿಂದ ಆಗರ್ಭ ಶ್ರೀಮಂತಿಕೆಯ ಮನೆತನಗಳು. ಇತ್ತೀಚೆಗೆ ಧನಾಢ್ಯ ಎನ್ನಿಸಿಕೊಂಡ ತಮ್ಮ ಬಗ್ಗೆ ಅವರಿಗೆ ಗೌರವವಿಲ್ಲ. [ಮತ್ತೊಮ್ಮೆ ಶ್ರೀಕಂಠಯ್ಯ ಊರುಗೋಲಿನಿಂದ ನೆಲ ಕುಟ್ಟಿದರು.] ತಾವೀಗ ಬಡವನೊಬ್ಬನನ್ನು ಮನೆಯಳಿಯನಾಗಿ ಮಾಡಿಕೊಂಡರೊ? [ಸಾಹುಕಾರರ ಮನಸ್ಸಾಕ್ಷಿ ಸಕ್ಕಿತು: ಆಗಲೇ ಮಾಡಿರುವ ವಿಚಾರವನ್ನು ಸಮರ್ಥಿಸಿಕೊಳ್ಳಲು ಈ ಬಳಸುದಾರಿಯೇ?]

ತಮ್ಮ ಭವಿತವ್ಯವೇನು? ಯಾರು ತಮಗಿನ್ನು ಊರುಗೋಲು?

[ಆಸ್ಪತ್ರೆ ಬಿಟ್ಟುದಕ್ಕೆ ಮುಂಚೆ ಕಮಲಮ್ಮ ಅಂದಿದ್ದರು:

"ಕೇಳಿದಿರಾ?"

"ಏನು?"

"ಜಯರಾಮುಗೆ ಬೇರೆ ಕೆಲಸ ಸಿಗ್ತಂತೆ."

"ಎಂಥದ್ದು?"

"ಮಿಲಿಟರಿ ಸರ್ಜನಂತೆ. ಸದ್ಯದಲ್ಲೇ ಆರ್ಡರು ಬರುತ್ತಂತೆ."

ಮೂರು ದಿನಗಳಿಂದ ಸೆರಗಿನಲ್ಲಿ ಕಟ್ಟಿಕೊಂಡಿದ್ದ ಕೆಂಡವನ್ನು ಆದಷ್ಟು ಮೃದುವಾಗಿ ಕಮಲಮ್ಮ ಕೆಳಕ್ಕೆ ಇರಿಸಿದ್ದರು.]

ಏನು ಮಾಡಿಕೊಂಡುಬಿಟ್ಟ ಹುಡುಗ! ಮೊಂಡುತನಕ್ಕೂ ಒಂದು ಮಿತಿ ಬೇಡವೆ? ಸುಳಿವು ತಿಳಿದಿದ್ದರೆ ಡೀನರಿಗಾದರೂ ಹೇಳಿ ಅದನ್ನು ತಪ್ಪಿಸಬಹುದಾಗಿತ್ತು. ಯುದ್ಧರಂಗದಲ್ಲೇ ಸರ್ಜನಾಗು–ಎಂದರೊ? ಈತನಾಗಬೇಕೆ ಯಜ್ಞ ಪಶು? ಹೋರಾಡುವುದಕ್ಕೆ ಈ ದೇಶದಲ್ಲಿ ಬೇರೆ ಯಾರೂ ಇಲ್ಲವೆ? ತಮ್ಮ ಒಬ್ಬನೇ ಮಗ ಆ ಕೆಲಸ ಮಾಡಬೇಕೆ? ದೇಶಪ್ರೇಮಕ್ಕೆ ಬೆಂಕಿ ಇಟ್ಟಿತು.

ಹುಡುಗಿಯ ಹುಚ್ಚೆಂತೂ ಇದಲ್ಲ. ಯಾವ ಮೋಹಿನಿ ಇದಾಳೆ ಮಿಲಿಟರಿಯಲ್ಲಿ? ಕಣ್‌ಪಟ್ಟಿ ಕಟ್ಟಿ ಓಡುವ ಕುದುರೆ. ಆ ಕಡೆ ಈ ಕಡೆ ನೋಡುವ ಗೋಜೇ ಇಲ್ಲ.

[ತಾವೂ ಅಂತಹ ಒಂದು ಕುದುರೆಯೆ? ತಮಗಿಲ್ಲವೆ ಕಣ್‌ಪಟ್ಟಿ? ತಾವು ಓಡುತ್ತಿರುವುದು ಯಾವುದನ್ನು ಬೆನ್ನಟ್ಟಿ?]

ಪ್ರಜ್ಞೆ ಬಂದಾಗಲೇ ಶ್ರೀಕಂಠಯ್ಯನವರಿಗೆ ಸಂದೇಹ ಮೂಡಿತ್ತು. 'ಜಯರಾಮು ಇಲ್ಲಿರಬೇಕು; ಇಲ್ಲಿಯೇ ಓಡಾಡುತ್ತಿರಬೇಕು.' ಮಾತು ಉಡುಗಿದಾಗ ಬರಿಯ ಕಣ್ಣುಗಳಿಂದಲೇ ಸೂಕ್ಷ್ಮವಾಗಿ ಎಲ್ಲವನ್ನೂ ಅವರು ಈಕ್ಷಿಸಿದ್ದರು. ಕಮಲಮ್ಮ ಹೊರಗಿನಿಂದ ಬಂದಾಗಲೆಲ್ಲ ಮಗನೊಡನೆ ಮಾತನಾಡಿ ಬಂದವಳಂತೆ ಅವರಿಗೆ ಕಾಣಿಸುತ್ತಿತ್ತು. ವಾಕ್‌ಶಕ್ತಿ ಮರಳಿದ ಮೇಲೆ, ತಾವೇ ಒಮ್ಮೆ ಆ ಬಗ್ಗೆ ಕೇಳೋಣವೆನಿಸಿತ್ತು. ಆದರೆ ಹಮ್ಮು ಅಡ್ಡಿಯಾಗಿತ್ತು. ಪತ್ನಿ ತಾನಾಗಿಯೇ ಆ ಪ್ರಸ್ತಾಪ ಮಾಡಿದಾಗಲೂ ಅಷ್ಟೆ. ಒಮ್ಮೆ ಜಗಲಿಯಾಚೆಯಿಂದ ಅವನ ಧ್ವನಿ ತಮಗೆ ಕೇಳಿಸಿತ್ತಲ್ಲ? ಮಲಗಿದ್ದಲ್ಲಿಂದಲೆ ಕಿಟಕಿಯ ಹೊರಗೆ ದೃಷ್ಟಿ ಹರಿಸಿದಾಗ ಡೀನರ ಜತೆ ಆತ ಹೋದಂತೆ ಕಂಡಿತಲ್ಲ?

ಡೀನ್ ಎಂಥ ಮನುಷ್ಯ? ಒಮ್ಮೆಯಾದರೂ ಜಯರಾಮುವಿನ ಮಾತೆತ್ತಿದನೆ?

ನಾವು ಮಾಡುತ್ತೇವೆ, ನಮ್ಮಿಚ್ಛೆಯಂತೆ ನಡೆಯುತ್ತದೆ—ಎನ್ನುವುದೆಲ್ಲ ಬಹುಶಃ ಸುಳ್ಳು.

ಇಷ್ಟೊಂದು ಸಾಧಿಸಿದ ತಮಗೆ ಈ ವಯಸ್ಸಿನಲ್ಲಿ ಹೀಗಾಗಬೇಕಾದರೆ—

ನಡೆಯುವುದನ್ನೂ ಯೋಚನೆಗಳನ್ನೂ ಸಾಕುಮಾಡಿ ಶ್ರೀಕಂಠಯ್ಯ ಸೋಫಾದ ಮೇಲೆ ಮೆಲ್ಲನೆ ಕುಳಿತರು.

['ಇನ್ನು 'ಔಷಧಿ' ಇಲ್ಲ, ಸಿಗರೇಟಿಲ್ಲ. ಅಯ್ಯೋ!']

"ಶಾಂತಮಲ್ಲಪ್ಪ......"

"ಬಂದೇ......"

['ಇವನೊಬ್ಬ ವಿಧೇಯ ಹೆಂಡತಿ. ನನ್ನ ಜತೆ ಹಾಸಿಗೆ ಮೇಲೆ ಮಲಕೊಳ್ಳೋ ಅಂದರೂ ಆಜ್ಞೆ ಪಾಲಿಸುವ ವ್ಯಕ್ತಿ. ಗೂಬೆ.]

"ಚೆಕ್‌ಬುಕ್ ತಾ."

"ತಂದೇ."

ಆತ ಅದನ್ನು ತರುವುದು ತಮ್ಮ ಕೋಣೆಯಿಂದ, ಡ್ರಾಯರ್‌ನೊಳಗಿಂದ.

"ಒಂದು ಲಕ್ಷಕ್ಕೆ ಚೆಕ್ ಬರಿ. ಡೀನ್, ಶಿವರಾಮ್ ಮೆಡಿಕಲ್ ಕಾಲೇಜ್—ಅಂತ."

[—'ಬಾಯಿ ತಪ್ಪಿ ಹೇಳಿದರೇನೋ']

"ಎಷ್ಟಕ್ಕೆ ಬರೀಲಿ?"

"ಒಂದು ಲಕ್ಷಕ್ಕೆ. ಕಿವುಡನಾದಿಯಾ?

ಆತ ಬರೆಯುತ್ತಿದ್ದಂತೆ;

"ಸೋಮನಾಥ್......"

"ಬಂದೆ ಸಾರ್......"

[–'ಈತ ಮೂರ್ಖನೊ? ಕಪಟಿಯೊ? ಊಹೂಂ. ಅದೂ ಅಲ್ಲ. ಇದೂ ಅಲ್ಲ.']

"ರಕ್ಷಣಾನಿಧಿಗೆ ನನ್ನ ವೈಯಕ್ತಿಕ ವಂತಿಗೆ ಅಂತ ಆವತ್ತು ಪೇಪರ್‌ಗಳಲ್ಲಿ ಪ್ರಕಟವಾಗಿತ್ತಲ್ಲ–ಆ ದುಡ್ಡು ನಿಧಿ ಲೆಕ್ಕಕ್ಕೆ ಜಮೆ ಆಗಿದೆಯೇನು?"

"ಇ–ಲ್ಲ......"

"ಅದನ್ನೂ ಬರಿ ಶಾಂತಮಲ್ಲಪ್ಪ."

"ಎಷ್ಟಕ್ಕೆ?"

"ಇಡೀ ದೇಶಕ್ಕೇ ಗೊತ್ತಿದೆ. ನಿನಗೆ ಗೊತ್ತಿಲ್ಲ. ಎಂಥ ಮಂಕುದಿಣ್ಣೆಯೋ ನೀನು! ಒಂದು ಲಕ್ಷಕ್ಕೆ."

ಶ್ರೀಕಂಠಯ್ಯ, ಯಾರಿಗೂ–ಸ್ವತಃ ತಮಗೂ–ಅರ್ಥವಾಗದ ಪದಗಳನ್ನು ಗೊಣಗಿ ಚೆಕ್‌ಗಳಿಗೆ ಸಹಿಹಾಕಿದರು.

"ಕ್ರಾಸ್ ಮಾಡಿದೀ ತಾನೆ?"

"ಹೂಂ."

"ಒಂದನ್ನು ಕಾಲೇಜಿಗೆ ಕಳಿಸ್ಬಿಡು. ಇನ್ನೊಂದನ್ನು ಸೋಮನಾಥ್‌ಗೆ ಕೊಡು–ನ್ಯಾಷನಲ್ ಬ್ಯಾಂಕಿಗೆ ಕಳಿಸ್ಲಿ."

ಶ್ರೀಕಂಠಯ್ಯನವರ ಒಳಗೇನೋ ಕೊರಗು. ಜತೆಗೆ, ಋಣ ತೀರಿತು–ಎಂಬ ಭಾವನೆ. ಅಲ್ಲ, ತ್ಯಾಗ ಮಾಡಿದೆ–ಎಂಬ ತೃಪ್ತಿ......

ಪತಿ ತಮ್ಮ ಕೊಠಡಿಗೆ ಹೋದುದನ್ನು ನೋಡಿ ಕಮಲಮ್ಮ ಅವರ ಹಿಂದೆ ಬಂದರು.

"ಏನು?"

–ಎಂದು ಶ್ರೀಕಂಠಯ್ಯ ಕೇಳಿದರು. ಶಾಂತವಾಗಿ.

"ಮಾರಣ್ಣ ಲಚ್ಚಿಗೆ ಮದುವೆ ಮಾಡ್ಬೇಕೂಂತಿದಾನೆ."

"ಒಳ್ಳೇ ಬುದ್ಧಿ."

"ಹೊಸ ಡ್ರೈವರ್ ಚಿಕ್ಕಣ್ಣ ಇದಾನಲ್ಲ. ಅವನಿಗೆ ಕೊಡ್ತಾನಂತೆ."

"ಅಳಿಯ ಸುಲಭವಾಗಿ ಸಿಕ್ದ."

"ಮದುವೆ ಯಾವಾಗ ಇಟ್ಕೋಬೇಕೂಂತ ಕೇಳೋಕೆ ಬಂದಿದ್ದ."

"ನೋಡು. ಅವನಿಗೆ ಇಷ್ಟು ಹೇಳು: ಮೊದಲು ಸಾಹುಕಾರ್ರ ಮಗಳ ದಾಗಲಿ; ಆ ಮೇಲೆ ಮಾಲಿ ಮಗಳದ್ದು."

ಕಮಲಮ್ಮನ ಮುಖದ ಮೇಲೆ ಮಂದಹಾಸ ಮೂಡಿತು.

[–'ಇವರ ಕಾಹಿಲೆ ಸದಾ ಕಾಲ ಹೀಗಿಯೇ ಇದ್ದರೆ ಮೇಲೋ ಏನೋ']

"ಸಾಹುಕಾರ್ರ ಮಗಳದು ಯಾವಾಗ?"

"ಚಳಿಗಾಲ ಬಂತು. ಯುದ್ಧ ಸ್ವಲ್ಪ ಸಮಯ ನಿಲ್ಲೋ ಸಂಭವ. ನಾನು ಇನ್ನೊಮ್ಮೆ ಪ್ರಜ್ಞೆ ತಪ್ಪೋದಕ್ಕೆ ಮುಂಚೆ–"

"ಅಂಥ ಕೆಟ್ಟ ಮಾತು ಆಡ್ಬೇಡೀಂದ್ರೆ–"

"ಮದುವೆ ಮಾಡಿಯೇ ಬಿಡೋಣ."

"ಗಂಡು?"

"ಚಿಕ್ಕಣ್ಣನ ಹಾಗೆ ಯಾರನ್ನಾದರೂ ಹುಡುಕ್ತೀನಿ. ಹೋಗು ಮಹಾ ರಾಯಿತಿ, ಆಚೆಗೆ ಹೋಗು. ಉದ್ರೇಕವಾಯ್ತೂಂದರೆ ಮೆದುಳಿಗೆ ಆಘಾತ ವಾದೀತು!"

ಈ ಒಗಟು ಮಾತಿನ ಅರ್ಥವೇನೊ? ವರ ಯಾರೊ?–ಎಂದು ಯೋಚಿ ಸುತ್ತ ಕಮಲಮ್ಮ ಅಡುಗೆಮನೆಯತ್ತ ಹೋದರು.

"ತಿಂಡಿ ಕಾಫಿ ಇದ್ದರೆ ಆ ಕಚೇರಿ ಸಿಬ್ಬಂದಿಗೆ ಕೊಡಬಹುದಲ್ಲ,"

–ಎಂದರು ಭಟ್ಟನಿಗೆ.

ಆ ದಿನದಿಂದ ಜಯಶ್ರೀ ಮತ್ತೆ ಕಾಲೇಜಿಗೆ ಹೋಗತೊಡಗಿದಳು. ಅವಿ ಶ್ರಾಂತವಾಗಿ ತಂದೆಯ ಶುಶ್ರೂಷೆ ಮಾಡಿ ಯಮನನ್ನು ಸೋಲಿಸಿದವಳೆಂದು ಅವಳ ಬಗೆಗೆ ಎಲ್ಲರಿಗೆ ಗೌರವ.

ನಡುವೆ ಶ್ರೀಸದನಕ್ಕೆ ಒಂದೆರಡು ಸಾರೆ ಬಂದಿದ್ದ ನಳಿನಿ ಅಂದಿದ್ದಳು:

"ನೀನು ತುಂಬಾ ಬದಲಾಗ್ಬಿಟ್ಟಿದೀಯಾ. ಮುಖದ ಮೇಲೆ ಪ್ರೌಢ ಕಳೆ ಬಂದಿದೆ. ಅಸಾಧಾರಣವಾದ್ದು [ಶ್ರೀಕಂಠಯ್ಯನವರ ಅಸ್ವಾಸ್ಥ್ಯ] ಏನಾದರೂ ನಡೆದರೆ ಹಾಗಾಗುತ್ತೆ."

ತಂದೆ, ಮಗಳ ಚಲನವಲನವನ್ನು [ಮನೆಯೊಳಗಿನದು] ಶ್ರದ್ಧೆಯಿಂದ ಪರೀಕ್ಷಿಸಿದರು. ಮೊದಲೇ ಮಗಳ ವಿಷಯದಲ್ಲಿ ಸ್ವಲ್ಪ ಹೆಚ್ಚು ಆಸಕ್ತಿ ತಾವು ತೋರಿಸಬಾರದಾಗಿತ್ತೆ?–ಎಂದುಕೊಂಡರು......

......ನೇಮಕ ಪತ್ರ ತಲಪಿದೊಡನೆ ಜಯರಾಮು ಡೀನರನ್ನು ಕಾಣಲು ಹೋದ.

ಆ ಹಸನ್ಮುಖಿ, ನಿತ್ಯಕ್ಕಿಂತ ತುಸು ದೊಡ್ಡದಾದ ಮುಗುಳುನಗೆ ಬೀರಿ ಜಯರಾಮುವನ್ನು ಸ್ವಾಗತಿಸಿದರು. ಅವನ ಕೈಯಲ್ಲಿದ್ದ ಲಕೋಟೆಯತ್ತ ದೃಷ್ಟಿ ಹರಿಸಿ,

"ಯಾವಾಗ ಪ್ರಯಾಣ?"

–ಎಂದರು.

"ನಾಳೆ ರಾತ್ರೆ, ಕಲ್ಕತ್ತೆಗೆ. ಅಲ್ಲಿಂದ ತೇಜಪುರಕ್ಕೆ ಪ್ಲೇನ್."

"ಹಾಗಾದರೆ ಇವತ್ತು ರಾತ್ರೆ ನಮ್ಮಲ್ಲಿಗೆ ಹೋಗೋಣ."

–ಎಂದು ನುಡಿದು ಡೀನರು ರಿಸೀವರ್ ಕೈಗೆತ್ತಿಕೊಂಡು ತಮ್ಮ ಪತ್ನಿಗೆ ಒಂದು ಮಾತು ಹೇಳಿದರು.

"ಬೇರೆ ಯಾರಿಗಾದರೂ ನೇಮಕಪತ್ರ ಬಂದಿದೆಯೇನು?"

"ನನಗೆ ಗೊತ್ತಿರೋಮಟ್ಟಿಗೆ ಇಲ್ಲ."

"ನಿಧಾನವಾಗಿ ಬರಬಹುದು. ಇರಲಿ. ನಾಳೆ ಸಂಜೆ ಕಾಲೇಜಿನ ಬೀಳ್ಕೊಡುಗೆ ಕೂಟ."

ಜಯರಾಮು, ಪ್ರತಿಭಟನೆಯಿಂದ ಪ್ರಯೋಜನವಿಲ್ಲವೆಂದು ಸುಮ್ಮನಾದ.

ಡೀನರು ತಮ್ಮೆದುರಲ್ಲಿದ್ದ ಒಂದು ಚೆಕ್ಕನ್ನೆತ್ತಿ ಜಯರಾಮುವಿನ ಮುಂದಿಟ್ಟರು.

"ಈ ಸಹಿ ಗೊತ್ತೊ?"

ಜಯರಾಮು ನಸುನಕ್ಕು ಅಂದ:

"ಒಂದು ಲಕ್ಷ ಬರೋದಕ್ಕೆ cerebral thrombosis ಬೇಕಾಯ್ತು."

"ಹುಂ. ಮುದುಕನನ್ನ ನೋಡ್ಬಿಟ್ಟು ಹೊರಡಿ."

"ನಾಳೆ ಬೆಳಗ್ಗೆ ಹೋಗ್ತೀನಿ, ಸರ್."

–ಎಂದ ಜಯರಾಮು, ಚೆಕ್ಕನ್ನು ಪುನಃ ಅದು ಮೊದಲಿದ್ದ ಸ್ಥಾನಕ್ಕೆ ಸರಿಸಿ.

"ನಿಮ್ಮನ್ನು ರಿಲೀವ್ ಮಾಡಿದೆ ಅಂತ ಲೆಟರ್ ಬೇಕು, ಅಲ್ವೆ?"

"ಹೌದು, ಸರ್."

ಮೇಜಿನ ಮೇಲಿದ್ದ ಕರೆಗಂಟೆಯನ್ನು ಡೀನರು ಮೆಲ್ಲನೆ ಒಮ್ಮೆ ತಟ್ಟಿದರು. ಮಗ್ಗುಲು ಕೋಣೆಯಲ್ಲಿದ್ದ ಸ್ಟೆನೋ ಎದ್ದು ಬಂದ.

......ಟ್ಯಾಕ್ಸಿ ಶ್ರೀಸದನದ ಗೇಟನ್ನು ತಲಪಿದಾಗ ಮಾರಣ್ಣ ಅದೇ ಆಗ ಗಿಡಗಳಿಗೆ ನೀರುಣಿಸುವ ಕೆಲಸವನ್ನು ಮುಗಿಸಿದ್ದ. ಆತ ವಾಹನದ ಕಡೆ ನೋಡ ಲಿಲ್ಲವೆಂದು ಡ್ರೈವರ್ ಹಾರ್ನ್ ಮಾಡಬೇಕಾಯಿತು. ಎಲ್ಲಿ ಹೋದನೋ ಜಗ್ಗ– ಗೇಟು ತೆರೆಯುವುದು ಅವನ ಜವಾಬುದಾರಿ–ಎಂದುಕೊಳ್ಳುತ್ತ ಮಾರಣ್ಣ ಅತ್ತಿತ್ತ ನೋಡಿದ. ಟ್ಯಾಕ್ಸಿಯ ಕಡೆಗೂ ದಿಟ್ಟಿಸಿದ. ಚಿಕ್ಕ ಧಣಿಯನ್ನು ಕಂಡಂತಾಗಿ ಓಡಿಬಂದು ಗೇಟು ತೆರೆದ.

ಅಷ್ಟರಲ್ಲಿ ಜಗ್ಗನೂ ಆ ಸ್ಥಳವನ್ನು ತಲಪಿದ್ದ.

ಟ್ಯಾಕ್ಸಿ ಬಾಡಿಗೆದಾರನ ಸೂಚನೆಯಂತೆ ಬಂಗಲೆಯ ಒಂದು ಪಕ್ಕಕ್ಕೆ ನಿಂತಿತು. ಜಯರಾಮು ಕೆಳಕ್ಕಿಳಿದ. [ಇಂಥದೇ ಟ್ಯಾಕ್ಸಿಯ ಡ್ರೈವರನೂ ತಾನೂ ಟ್ರಂಕನ್ನೂ ಸೂಟ್‌ಕೇಸನ್ನೂ ಹೊತ್ತ ಆ ದಿನ......]

ಚಿಕ್ಕ ಯಜಮಾನರು ಬಂದ ಸುದ್ದಿ ಮನೆಯ ಒಳಗೂ ಹೊರಗೂ ಹಬ್ಬಿತು.

ತಮ್ಮ ಕೊಠಡಿಯಲ್ಲಿ ಆರಾಮ ಕುರ್ಚಿಯಲ್ಲಿ ಶ್ರೀಕಂಠಯ್ಯ ಕುಳಿತಿದ್ದರು. ಜಯರಾಮು ಅಲ್ಲಿಗೆ ಬಂದು ಅವರ ಪಾದಗಳನ್ನು ಮುಟ್ಟಿ ಅಂದ:

"ತೇಜಪುರಕ್ಕೆ ಇವತ್ತು ಹೊರಡ್ತಿದೀನಿ, ಅಪ್ಪಯ್ಯ. ಆಶೀರ್ವಾದ ಕೇಳೋಕೆ ಬಂದೆ."

ಶ್ರೀಕಂಠಯ್ಯ ಅಂದುದಿಷ್ಟೆ:

"ನಿನ್ನ ಅಮ್ಮ ಒಳಗಿದಾಳೆ, ಹೋಗು."

–ನಿರ್ವಿಕಾರವಾಗಿ ಬಂದ ಮಾತು.

ಅವರ ಒಳಗಡೆ ಮಾತ್ರ ಕೋಲಾಹಲವೆದ್ದಿತ್ತು; ಅಲ್ಲಿಗೇ, ಅಲ್ಲಿಗೇ! ಬೇರೆ ಲ್ಲಿಗೂ ಅಲ್ಲ! ಯಜ್ಞ ನಡೆಯುತ್ತಿರುವ ಜಾಗಕ್ಕೇ!

ಮಗನನ್ನು ಕಂಡೊಡನೆಯೇ, ತಾವಿನ್ನು ರೋದಿಸಬಾರದೆಂದು ನಿರ್ಧರಿಸಿ ಕಮಲಮ್ಮ,

"ಇರು. ಊಟ ಮಾಡ್ಕೊಂಡು ಹೋಗುವಿಯಂತೆ,"

—ಎಂದರು.

ಕಾಲೇಜಿಗೆ ಹೊರಡಲು ಸಿದ್ಧಳಾಗುತ್ತಿದ್ದ ಜಯಶ್ರೀಯೂ ಅಂದಳು:

"ಇರಣ್ಣ."

"ಇಲ್ಲವಮ್ಮ. ನಿನ್ನೆ ಆರ್ಡರು ಬಂತು. ಒಂದು ಕೆಲಸವೂ ಆಗಿಲ್ಲ. ಕಾಲೇಜ್ನಲ್ಲಿ ಪಾರ್ಟಿ ಬೇರೆ ಇದೆ. ರಾತ್ರೆ ಎಂಟು ಗಂಟೆಗೆ ಟ್ರೈನು. ಹೋಗ್ಬರ್ತೀನಮ್ಮ. ಹೋಗ್ಬರ್ತೀನಿ ಜಯಾ."

ಭಟ್ಟ ಬಂದು,

"ಉಪ್ಪಿಟ್ಟು ರೆಡಿಯಾಗಿದೆ,"

—ಎಂದ.

"ತಗೊಂಡ್ಬಾ,"

—ಎಂದರು ಕಮಲಮ್ಮ.

ತಂಗಿಯೂ ಅಣ್ಣನೂ ಮೌನವಾಗಿ ಉಪ್ಪಿಟ್ಟು ತಿಂದರು. ಕಾಫಿ ಕುಡಿದರು.

ತಾಯಿ ಕೇಳಿದರು:

"ನಿನಗೆ ರಜಾ ಯಾವಾಗ ಸಿಗುತ್ತೆ?"

"ಈ ಪರಿಸ್ಥಿತೀಲಿ ಹೇಳೋದು ಕಷ್ಟ. ಸಾಧಾರಣವಾಗಿ ವರ್ಷಕ್ಕೊಮ್ಮೆ ಬರ್ತೀನಿ."

"ಕಾಗ್ದ ಬರೀತೀಯಾ?"

"ಬರೀದೆ ಉಂಟೆ ಅಮ್ಮ?"

"ದೂರ ದೇಶ, ಪರಿಚಯ ಇಲ್ಲದ ಜನ. ನಿನ್ನ ರಕ್ಷಣೆ ನೀನು ಮಾಡ್ಕೋಬೇಕು. ಇನ್ನೇನಪ್ಪ ಹೇಳ್ಲಿ?"

"ಆಗಲಮ್ಮ."

ಕಮಲಮ್ಮ ದೇವರ ಕೋಣೆಗೆ ಹೋಗಿ ಬಂದು,

"ಪ್ರಸಾದ. ತಗೋ,"

—ಎಂದು, ಕಲ್ಲುಸಕ್ಕರೆ ದ್ರಾಕ್ಷಿಗಳನ್ನು ಮಗನ ಬಾಯಿಗೆ ತುರುಕಿದರು.

ತಾಯಿಯ ಪಾದಗಳಿಗೆ ಮಗ ನಮಿಸಿದ.

"ನೂರು ವರ್ಷ ಬಾಳು ಜಯೂ. ನನ್ನ ಆಯುಸ್ಸೂ ನಿನಗಿರಲಿ."

ಹೊರಬರುತ್ತ, ತಂದೆಯ ಕೋಣೆಯ ಎದುರು ನಿಂತು ಜಯರಾಮು,

"ಬರ್‍ತೀನಿ,"

–ಅಂದ.

ಶ್ರೀಕಂಠಯ್ಯ ಕುರ್ಚಿ ಬಿಟ್ಟು ಎದ್ದಿದ್ದರು. ಊರುಗೋಲನ್ನು ಕೈಗೆತ್ತಿ ಕೊಂಡು ಉರುಳಾಡಿಸುತ್ತ ಅವರೆಂದರು:

"ನಿನ್ನ ತಂಗೀ ಮದುವೆ ಡಿಸೆಂಬರ್‌ನಲ್ಲಿ ಮಾಡ್ಬೇಕೂಂತಿದೀನಿ. ಸೋಮ ನಾಥ ವರ."

ಅಲ್ಲೆ ಇದ್ದ ಜಯಶ್ರೀಯ ಮುಖ ಕೆಂಪೇರಿತು. ಹಜಾರಕ್ಕೆ ಬಂದಿದ್ದ ಸೋಮನಾಥ ಕಣ್ಣರಳಿಸಿದ. ಕಮಲಮ್ಮ ಬಾಯಿ ತೆರೆದರು.

ಅವರೆಲ್ಲರ ಪ್ರತಿಕ್ರಿಯೆಗಳನ್ನು ಗಮನಿಸಿ ಶ್ರೀಕಂಠಯ್ಯ ಅಂದರು:

"ಮದುವೆ ಹೊತ್ತಿಗೆ ಬರೋದಕ್ಕೆ ನಿನಗೆ ಆಗಲಾರದು. ಅಲ್ವೆ?"

"ಆಗಲಾರದು, ಅಪ್ಪಯ್ಯ. ಮದುವೆ ಖಂಡಿತ ನಡೀಲಿ. ಇದು ಸಂತೋಷದ ಸುದ್ದಿ."

"ಯಾರು ಏನೇ ಮಾಡ್ಲಿ, ತಂದೆಯಾದವನು ತನ್ನ ಕರ್ತವ್ಯ ನೆರವೇರಿಸ ಬೇಕಲ್ಲಪ್ಪ. ರಾತ್ರೆ ಹೊರಡ್ತೀಯೊ?"

"ಹೌದು."

"ಸರಿ."

ಇನ್ನು ಮಾತಿಲ್ಲ–ಎನ್ನುವಂತೆ ಶ್ರೀಕಂಠಯ್ಯ ತಮ್ಮ ಮಲಗುವ ಕೋಣೆಗೆ ಹೊರಟುಬಿಟ್ಟರು.

ಜಯರಾಮು ಸೋಮನಾಥನತ್ತ ಹೊರಳಿ,

"ಶುಭಾಶಯಗಳು ಭಾವ,"

–ಎಂದ.

ಲಜ್ಜೆಯಿಂದಾಗಲೀ ಸಿಟಿನಿಂದಾಗಲೀ ಒಳಗೆ ಓಡದೆ ಅಲ್ಲೇ ಇದ್ದ ತಂಗಿ ಯನ್ನು ಉದ್ದೇಶಿಸಿ,

"ನಿನಗೂ ಜಯಾ,"

–ಎಂದು ನುಡಿದು, ಅವಳ ಕೆನ್ನೆಯನ್ನು ತಟ್ಟಿದ.

ಪತಿ ಮುಂದೊಡ್ಡಿದ್ದ ಒಗಟಿನ ಅರ್ಥ ಕಮಲಮ್ಮನಿಗೆ ಈಗ ಆಯಿತು. ಅದು ಅವರಿಗೆ ಸಮಾಧಾನವನ್ನು ತಂದಿತು.

ಚಿಕ್ಕ ಧಣಿ ಮಿಲಿಟರಿಗೆ ಸೇರುವರೆಂಬ ವಾರ್ತೆ ಬಂಗಲೆಯ ಆಳುಗಳನ್ನು ಚಕಿತರನ್ನಾಗಿ ಮಾಡಿತ್ತು. ಅವರೆಲ್ಲರದೂ ಒಂದೇ ಪ್ರಶ್ನೆ:

ಹೀಗೂ ಉಂಟೆ?

ಟ್ಯಾಕ್ಸಿಯ ಸುತ್ತಲೂ ಅವರು ನೆರೆದರು. ಪ್ರತ್ಯಪ್ರತ್ಯೇಕವಾಗಿ ವಿದಾಯದ ನುಡಿ. ಒಟ್ಟಿಗೆ ವಂದನೆ ಎಲ್ಲರಿಗೂ.

ಕೊನೆಯದಾಗಿ ಮತ್ತೊಮ್ಮೆ:

"ಅಮ್ಮಾ, ಹೋಗ್ಬರ್ತೀನಿ."

ಅಂತೂ ಟ್ಯಾಕ್ಸಿ ಮತ್ತೆ ಬೀದಿಗಿಳಿಯಿತು.

ಮುಖ್ಯವಾದ ಈ ಕೆಲಸವೊಂದು ಮುಗಿಯಿತಲ್ಲ—ಎಂದು ಜಯರಾಮುಗೆ ಸಮಾಧಾನವಾಯಿತು.

......ಮನೆಯಲ್ಲಿ ಎಲ್ಲವೂ ಶಾಂತವಾದ ಮೇಲೆ ಶ್ರೀಕಂಠಯ್ಯ ಹಜಾರಕ್ಕೆ ಬಂದು, ಸೋಮನಾಥನನ್ನು ಕರೆದರು:

"ಒಂದು ಹೇಳಿಕೆ ಡ್ರಾಫ್ಟ್ ಹಾಕು. ನನ್ನದು. ಅಸ್ವಾಸ್ಥ್ಯ ಕಾಲದಲ್ಲಿ ಕಾತರತೋರಿ ವಿಚಾರಿಸಿದವರಿಗೆಲ್ಲ ಕೃತಜ್ಞತೆ ಅರ್ಪಿಸಿ, ದೇವರ ದಯದಿಂದ ಈಗ ಗುಣಮುಖನಾಗಿ ಸಾರ್ವಜನಿಕರ ಸೇವೆಗೆ ಸಿದ್ಧನಾಗಿದ್ದೇನೆ—ಅಂತ."

"ಬರೀತೀನಿ."

"ಇನ್ನೊಂದು. ಡಾಕ್ಟರ್ ಜಯರಾಮು ಬಿ.ಎಸ್‌ಸಿ.,ಎಂ.ಬಿ.,ಬಿ.ಎಸ್., ಎಂ.ಎಸ್., ಸಶಸ್ತ್ರ ವೈದ್ಯಕೀಯ ದಳದಲ್ಲಿ ಕ್ಯಾಪ್ಟನ್ ಆಗಿ ನೇಮಕಗೊಂಡು—ಕ್ಯಾಪ್ಟನೇ ಇರ್ಬೇಕು—ತೇಜಪುರಕ್ಕೆ ಹೊರಟ ವಿಷಯ. ನ್ಯೂಸ್."

"ಸಾಹುಕಾರ ಶ್ರೀಕಂಠಯ್ಯನವರ ಪುತ್ರ ಅಂತ ಬರೀಲೆ?"

"ಇನ್ನೇನು, ಅಳಿಯ ಅಂತ ಬರೀತೀಯಾ? ಶ್ರೀಕಂಠಯ್ಯನವರ ಕುಟುಂಬ ದಲ್ಲಿ ಹುಟ್ಟಿರೋದರಿಂದಲೇ ಇಷ್ಟೊಂದು ದೇಶಪ್ರೇಮದಿಂದ ಅವನು ಯುದ್ಧ ರಂಗಕ್ಕೆ ಹೋಗ್ತಿರೋದು."

"ಆಗಲಿ."

"ಬ್ಯಾರಿಸ್ಟರ್ ಮಂದಣ್ಣ ಅಂತ ಇದಾರೆ. ಅವರಿಗೆ ಫೋನ್ ಮಾಡಿ. ಸಿಕ್ಕಿದರೆ, ನನ್ನ ಭೇಟಿಗೆ ಅರ್ಜೆಂಟಾಗಿ ಒಮ್ಮೆ ಬರಬೇಕಂತೆ ಅಂತ ಹೇಳು."

"ಹೇಳ್ತೀನಿ."

......ಜಯರಾಮು ರೈಲು ನಿಲ್ದಾಣಕ್ಕೆ ಹೊರಟಾಗ ಸಂಜೆ ಏಳೂ ಕಾಲು ಗಂಟೆ. ಟ್ಯಾಕ್ಸಿಯ ಬಾನೆಟಿನ ಮೇಲೆ ಅನೇಕ ಹಾರಗಳಿದ್ದುವು. ['ಆಡಂಬರ, ಬಾಜಾಬಜಂತ್ರಿ ಇಲ್ಲದೆ ಯಾವುದೂ ಸಾಧ್ಯವಿಲ್ಲ–ನಮ್ಮವರಿಂದ'] ಆ ಟ್ಯಾಕ್ಸಿಯ ಹಿಂದೆ ಬೇರೆ ಟ್ಯಾಕ್ಸಿಗಳು, ಕಾರುಗಳು, ಸ್ಕೂಟರ್‌ಗಳು.

ಮಿಲಿಟರಿಯವರಿಗೋಸ್ಕರ ಜೋಡಿಸಿದ್ದ ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟಿನಲ್ಲಿ ಕೆಳಗಿನ ಬರ್ತ್ ಜಯರಾಮುಗಾಗಿ ಕಾದಿತ್ತು.

ಟ್ರಂಕ್–ಸೂಟ್‌ಕೇಸ್.

"ಕಲ್ಕತ್ತದಿಂದ ಸೂಟ್‌ಕೇಸೊಂದೇ ತಗೊಂಡು ಹೋಗ್ತೀನಿ. ಟ್ರಂಕ್ ನಿಧಾನವಾಗಿ ಹಿಂದಿನಿಂದ ಬರುತ್ತೆ."– ಎದುರಿದ್ದವರಿಗೆ ವಿವರಣೆ.

ಪ್ರಯಾಣ ಮಾಡುತ್ತಿದ್ದ ಮಿಲಿಟರಿ ಅಧಿಕಾರಿಗಳು ಮೂವರು ಬಂದು, ಕಂಪಾರ್ಟ್‌ಮೆಂಟ್ ತುಂಬಿತು.

–ಬೊಂಬಾಯಿಯಿಂದ ಭಾಗ್ಯನಗರಕ್ಕೆ ತಾನು ಬಂದ ರೈಲುದಾರಿ ಬೇರೆ. ಈಗ ಹೋಗುವ ದಾರಿ ಬೇರೆ. ಆದಿನ ಲೀಲಾ ಸುಖ್‌ಠಣ್‌ಕರ್ ರೈಲಿನಲ್ಲಿದ್ದಳು. ಈಗ ಇಲ್ಲ. ಅಂದೂ ಅವಸರವಾಗಿ ಹೊರಟಿದ್ದೆ. ಇಂದೂ ಹಾಗೆಯೇ. ಆಗ ಬೀಳ್ಕೊಡಲು ಯಾರೂ ಬಂದಿರಲಿಲ್ಲ. ಈಗ–

ಎಷ್ಟೊಂದು ಜನ!

ಒಂದು ಧ್ವನಿ ಕೇಳಿಸಿತು:

"ಅಕೋ ಡೀನ್ ಬಂದ್ರು......"

ಹತ್ತಿದ್ದ ಜಯರಾಮು ಮತ್ತೆ ಕೆಳಕ್ಕಿಳಿದ.

"ವೃಥಾ ಶ್ರಮ, ಸರ್."

"Not at all, my boy."

ಒಬ್ಬ ವಿದ್ಯಾರ್ಥಿ ದೊಡ್ಡದೊಂದು ಹಾರ ತಂದು ತೊಡಿಸಿದ.

ಇನ್ನೊಬ್ಬ Three Cheers to–ಆರಂಭಿಸಿದ.

"ಜಯೂ! ಜಯಣ್ಣ!"

[ತಂಗಿಯ ಗಂಟಲು?]

ಆಕೆಯೇ!

"ಕಳಿಸ್ಕೊಡೋಕೆ ಬಂದಿಯೇನೆ?"

"ಹೂನಣ್ಣ."

ಆದಿನ ಇದಿರ್ಗೊಳ್ಳಲು ಬಂದಿದ್ದಳಲ್ಲ? ಈಕೆ, ತ್ಯಾಗರಾಜನ್, ['ನೀವು ಸೋತಿರಿ ಮಾವಯ್ಯ !',] ಅಜೀಜ್.

ಈ ಇಬ್ಬರು?

"ಹಲೋ ಸೋಮನಾಥ್ !"

ತಲೆಯ ಮೇಲಿನ ಟೋಪಿಯನ್ನು ಅತ್ತಿತ್ತ ತಿರುಗಿಸುತ್ತ ನಿಂತಿರುವವನು ಅಜೀಜ್.

ಕ್ಲಿಕ್-ಕ್ಲಿಕ್-ಕ್ಯಾಮರಾಗಳು.

ಸೋಮನಾಥನ ಕೈಯಿಂದ ಡಬ್ಬ ಇಸಕೊಂಡು ಜಯಶ್ರೀ ಅಣ್ಣನಿಗೆ ಕೊಟ್ಟಳು.

"ತಗೋ ಜಯೂ. ಅಮ್ಮ ಕೊಟ್ಲು. ಅಮ್ಮನೇ ಮಾಡಿದ್ದು."

ರವೆಲಾಡು-ಕೋಡುಬಳೆ-ಚಕ್ಕುಲಿ.

ಬಾರಿಸುತ್ತಿರುವ ಘಂಟೆ. ["ಎಷ್ಟನೆಯದು?"]

"ಹತ್ತಿ ಡಾಕ್ಟರ್."

ಶಿಳ್ಳು. ['ಗಾಡಿ ಹೊರಡ್ತು.']

"ಬರ್ತೀನಿ, ಹೋಗ್ಬರ್ತೀನಿ......"

ನೂರಾರು ಮುಖಗಳು, ನೂರಾರು ಕೈಗಳು. ಎಲ್ಲವೂ ಒಂದೇ ತೆರ. ಎಲ್ಲವೂ ಒಂದೇ ತೆರ.

ಜಯರಾಮು ಕೈಬೀಸಿದ. ನಿಲ್ದಾಣದ ದೀಪಗಳು ಕಣ್ಮರೆಯಾಗುವ ವರೆಗೂ ಕೈಬೀಸಿದ.

......ಜಯಶ್ರೀ-ಸೋಮನಾಥರಿದ್ದ ಕಾರು ಭಾಗ್ಯನಗರದ ಪೂರ್ವ ವಿಸ್ತರಣವನ್ನು ಪ್ರವೇಶಿಸಿ, ಶ್ರೀಸದನದ ಆವರಣವನ್ನು ಹೊಕ್ಕಿತು. ಬಂಗಲೆಯ ಒಳಗಿನ-ಹೊರಗಿನ ಎಲ್ಲ ದೀಪಗಳೂ ಉರಿಯುತ್ತಿದ್ದುವು.

ಮೇಲ್ಗಡೆ ಬಾಲ್ಕನಿಯಲ್ಲಿ ಸಾಹುಕಾರ ಶ್ರೀಕಂಠಯ್ಯನವರು ನಡೆಗೋಲನ್ನು ನೆಲಕ್ಕೆ ಊರಿ ನೆಟ್ಟಗೆ ನಿಂತು, ತಮ್ಮ ಎದುರಿನ ಲೋಕವ್ಯಾಪಾರಗಳನ್ನೆಲ್ಲ ಎವೆ ಮುಚ್ಚದೆ ದಿಟ್ಟಿಸುತ್ತಿದ್ದರು.

೨೧

ಒಂದೆರಡು ವಾರಗಳು ದಾಟುವಷ್ಟರಲ್ಲೆ ಶ್ರೀಕಂಠಯ್ಯ ಮೊದಲಿನಂತಾದರು. ಕಚೇರಿಗೆ ಹೋಗಿ ತಮ್ಮ ವ್ಯವಹಾರಗಳು ಯಾವ ಸ್ಥಿತಿಯಲ್ಲಿವೆ ಎಂಬುದನ್ನು ಗಮನಿಸಿದರು. ಅಸಮಾಧಾನವಾಯಿತು. ತಮಗೆ ಕಾಹಿಲೆ ಎಂದರೆ ವ್ಯವಹಾರಕ್ಕೆ ಗ್ರಹಣ. ಸಂಪಾದನೆ ಶೂನ್ಯ. ಈ ಸಲ ಒದಗಿದ ಗಂಡಾಂತರದಿಂದ ಪಾರಾದುದೇನೋ ಸರಿ. ಆದರೆ ತಮ್ಮದೇನು ಶಾಶ್ವತ ಜೀವನವೆ? ಅಸ್ವಾಸ್ಥ್ಯ ಅನಿರೀಕ್ಷಿತವಾಗಿ ಒದಗಿತು. ಹಾಗೆಯೇ ಹೇಳದೆ ಕೇಳದೆ ಸಾವು ಕೂಡಾ ಒಮ್ಮೆ ಬಂತೆಂದರೆ?

ಈ ನಾಟ್ಯರಂಗದಿಂದ ತಮ್ಮ ನಿಷ್ಕ್ರಮಣ......

–ಅದನ್ನು ಕುರಿತ ಯೋಚನೆ ಮರಳಿ ಮರಳಿ ಶ್ರೀಕಂಠಯ್ಯನವರನ್ನು ಕಾಡಿತು.

ತಮ್ಮ ಬಳಿಕ ಯಾರು?

ತಾವು ರಾಷ್ಟ್ರದ ಪ್ರಧಾನಿಯಲ್ಲ, ನಿಜ. ತಾವು ಬಿಟ್ಟುಹೋಗುವ ಗದ್ದುಗೆಗಾಗಿ ಹೊಡೆದಾಟವೂ ಆಗುವುದಿಲ್ಲ......

ಆದರೆ ತಮ್ಮ ವ್ಯವಹಾರಗಳು ಮಾತ್ರ ಕೊನೆಗಾಣುವವು.

ಈ ಭೂಮಿಗೆ ಬಂದುದು ಕುಚೇಲನಾಗಿ; ಇಲ್ಲಿಂದ ಹೊರಡುವುದು ಕುಬೇರನಾಗಿ. ದೊರೆಯುವುದು ನರಕವೊ? ಸ್ವರ್ಗವೊ? ಇನ್ನೊಂದು ಜನ್ಮವುಂಟೆ ತಮಗೆ? ಏನಾಗಿ ಹುಟ್ಟಬೇಕು ತಾವು?

–ಅಲ್ಲ, ಹುಟ್ಟುವ ಅಗತ್ಯವಾದರೂ ಏನು? ಹುಟ್ಟಿ, ಮತ್ತೆ ದುಡಿದು, ಮತ್ತೆ ಗಳಿಸಿ, ಮತ್ತೊಮ್ಮೆ ಸಾಯುವುದೇ ತಾನೆ?

ಶ್ರೀಕಂಠಯ್ಯನವರಿಗೆ ಅನಿಸುತ್ತಿತ್ತು:

'ಮನುಷ್ಯಜೀವನದಲ್ಲಿ ಹುರುಳಿಲ್ಲ. ಅದು ವ್ಯರ್ಥ.'

ನನ್ನ ಮಗ ನನ್ನ ಮಗಳು—ಎಂಬ ವ್ಯಾಮೋಹವಾದರೂ ಅರ್ಥ ಉಳ್ಳದ್ದೆ? ಯಾಕಾಗಿ ಈ ದುಡಿಮೆ? ತಮ್ಮ ಸಂತಾನದ ಕುಡಿಗಳಿಗೋಸ್ಕರವೆ? ಆದರೆ ತಮ್ಮ ಮಗ, ಒಬ್ಬನೇ ಮಗ......

—ಇದು ಆಶ್ಚರ್ಯದ ಸಂಗತಿ. ಪುತ್ರ ತಮ್ಮ ಪ್ರತಿರೂಪವಾಗಲಿಲ್ಲ.

ಯಾಕಾದಾನು? ತಮ್ಮ ಬಾಲ್ಯದಲ್ಲಿದ್ದಂತೆ ತುತ್ತು ಕೂಳಿಗಾಗಿ ಹೋರಾಡುವ ಪ್ರಮೇಯವಿತ್ತೆ ಈ ಮಗನಿಗೆ? ಎಲ್ಲ ಅನುಕೂಲಗಳೂ ಇದ್ದವರ ಗತಿಯೇ ಹೀಗೆ. ಯಾವ ಹಂಬಲಗಳೂ ಇಲ್ಲ. ಎಂತಹ ಮಹತ್ವಾಕಾಂಕ್ಷೆಯೂ ಇಲ್ಲ. ಬೇಕಿದ್ದರೆ, ಆದರ್ಶ ಆದರ್ಶ ಅಂತ ಮಾತು. ಕನಸುಗಳು. ಕವಿಕಲ್ಪನೆಗಳು......

ಕನಸು ತಮಗೂ ಇದ್ದಿತು. ನಿದ್ದೆಯಲ್ಲೂ ಎಚ್ಚರದಲ್ಲೂ ಹಗಲೂ ಇರುಳೂ ಒಂದೇ ಬಗೆಯ ಕನಸು. ತಾವು ಮೇಲಕ್ಕೇಳಬೇಕು, ಆಳಬೇಕು; ಯಶಸ್ಸಿನ ಗೌರೀಶಂಕರವನ್ನೇರಬೇಕು.

ಆ ಕನಸು ಕೈಗೂಡಿತು.

ಈಗ ಪರ್ವತಾಗ್ರದ ಮೇಲಿಂದ ಕೆಳಕ್ಕೆ ನೋಡಿದಾಗ ತಮಗೆ ಕಾಣಿಸುತ್ತಿರುವುದೇನು? ಯಾಕೋ ದಿಗಿಲಾಗುತ್ತದಲ್ಲ? ಈ ಗಿರಿ ಅಚಲ. ತಮ್ಮ ಸಾಧನೆಯ ಹಾಗೆ. ಆದರೆ ಅದರ ಮೇಲೆ ಕುಳಿತಿರುವ ತಾವು? ಭರ‍್ರನೆ ಬಿರುಗಾಳಿ ಬೀಸಿದರೆ ಏನಾಗಬಹುದು?

ಎಂಥ ಬಿರುಗಾಳಿ? ಚೀಣೀಯರಿಂದ ಆಕ್ರಮಣವೇ ನಡೆಯಿತು. ತಲೆ ಕೆಳಗಾಯಿತೆ ರಾಷ್ಟ್ರವ್ಯವಸ್ಥೆ?

ಅಂತೂ ಆ ಆಕ್ರಮಣದ ಕಾರಣದಿಂದ ಮಗನೊಬ್ಬನನ್ನು ಬಲಿ— ಬಲಿ? ಬಲಿಯೆ?—ಅಲ್ಲ, ರಾಷ್ಟ್ರದ ಸೇವೆಗಾಗಿ ಅರ್ಪಿಸಿದಂತಾಯಿತು.

ಜಯರಾಮು ತೆರಳಿದ ಮೇಲೆ ಆತನದೊಂದು ಭಾವಚಿತ್ರವನ್ನು ಅಲ್ಬಮುಗಳಿಂದ ಆರಿಸಿ ಹೊರತೆಗೆದು ಪತ್ರಿಕೆಗಳಲ್ಲಿ ತಾವು ಪ್ರಕಟಣೆಗೆ ಕೊಡಲಿಲ್ಲವೆ? ಆತನಿಗೆ ಗೊತ್ತಾಗಿದ್ದರೆ ಅಡ್ಡಿಮಾಡುತ್ತಿದ್ದ...ಮೂರ್ಖ! ಅವನಿಗೇನು ತಿಳಿಯಬೇಕು ಅಂತಹ ಪ್ರಚಾರದ ಪ್ರಯೋಜನ?

ಅದು ಪ್ರಕಟವಾದ ಮೇಲೆ ಎಷ್ಟೊಂದು ಜನ ತಮ್ಮನ್ನು ಅಭಿನಂದಿಸಿದರು!

ಮುಖ್ಯಮಂತ್ರಿ ಹೇಳಲಿಲ್ಲವೆ?

'ಸಿಂಹದ ಹೊಟ್ಟೇಲಿ ಸಿಂಹವೇ ಹುಟ್ಟುತ್ತೆ. ಭೇಷ್.'

ತಲೆಕಾಯಿ. ತಮಗೆ ತಿಳಿಯದೆ ಸಿಂಹದ ಮರಿಯ ಯೋಗ್ಯತೆ?

ಆ ಮುಖ್ಯಮಂತ್ರಿಗೋ, ಹಾಗೆ ಹೊಗಳುವುದೂ ಒಂದು ನಾಟಕ. ಈ ಲೋಕದ ವ್ಯವಹಾರಗಳೇ ಒಂದು ಕಪಟನಾಟಕ. ಪಾತ್ರವನ್ನು ಚೆನ್ನಾಗಿ ಅಭಿನಯಿಸಿದರಾಯಿತು. ಪ್ರೇಕ್ಷಕರು ಚಪ್ಪಾಳೆ ತಟ್ಟುತ್ತಾರೆ. ಬಣ್ಣ ಬಳಿದ ಮುಖದ ಒಳ ಪದರದಲ್ಲಿ ನಿಜವಾಗಿಯೂ ಇರುವ ಭಾವನೆ ಯಾವುದು?–ಅಂತ ಯಾರು ಕೇಳುತ್ತಾರೆ? ತಥ್ಯಾಂಶ ಯಾರಿಗೆ ಬೇಕು? ಮೋಜನ್ನುಂಟುಮಾಡುವುದು ಮಿಥ್ಯವೊಂದೇ.

ಸಿಗರೇಟು ಸೇದುವುದನ್ನು ನಿಲ್ಲಿಸುವುದು ಮೇಲು, ಎಂದಿದ್ದರು ವೈದ್ಯರು. ಪಾನೀಯದಲ್ಲೂ ಪಥ್ಯ ಅಗತ್ಯ–ಎಂದೂ ನುಡಿದಿದ್ದರು, ನಗೆ ಬೀರಿ. ಇನ್ನು ಸನ್ಯಾಸಾಶ್ರಮ ಸ್ವೀಕರಿಸು, ಎಂದಹಾಗೆ. ಸ್ವಲ್ಪಮಟ್ಟಿಗೆ ಬಿಗಿಯಾಗಿರಬಹುದು. ತಾವೊಮ್ಮೆ ಸಾವಿನ ದವಡೆಯಿಂದ ಪಾರಾದವರು ಎಂಬುದನ್ನು ನೆನಪಿಡುವುದ ಕ್ಕೋಸ್ಕರ. ಪೂರ್ತಿಯಾಗಿ ಎಲ್ಲವನ್ನೂ ಬಿಟ್ಟುಬಿಡಬೇಕೆನ್ನುವುದು ಮಾತ್ರ ಆಗದ ಮಾತು. ಬೈರಾಗಿ ಆಗಲೆ ತಾವು?......

......ಕುಳಿತು ಯೋಚಿಸುತ್ತಿದ್ದ ಶ್ರೀಕಂಠಯ್ಯ ಸಿಗರೇಟಿನ ಡಬ್ಬಕ್ಕೆ ಕೈಹಾಕಿದರು.

ಹಚ್ಚಿದ ಸಿಗರೇಟು ಸ್ವಲ್ಪ ಕಹಿಯಾಗಿ ಕಂಡಿತು.

'ಅವಳ'ನ್ನು ನೋಡಬೇಕು ಎಂಬ ಬಯಕೆ ಅವರಲ್ಲಿ ಉದಿಸಿತು. ಇದು ಕಾವಿಲ್ಲದ ದೇಹವಲ್ಲ. ಗುಣವಾಗಿದೆಯೆ ಇಲ್ಲವೆ ಎಂಬುದನ್ನು ತಿಳಿಯುವುದಾದರೂ ಹೇಗೆ? ಶಕ್ತಿ ಕುಂದಿದ್ದರೆ ತಾವದನ್ನು ಮರಳಿ ಪಡೆಯಬೇಕು. ಮುಪ್ಪು ಅಡರಿಲ್ಲ ಎಂಬ ತಿಳಿವಳಿಕೆಯೇ ತಮಗೆ ಶ್ರೇಷ್ಠತಮ ಟಾನಿಕ್.

ಬಾಗಿಲ ಹೊರಗಡೆ ಕೆಮ್ಮಿನ ಸದ್ದು. ಯಾರು, ಎಂಬುದನ್ನು ಶ್ರೀಕಂಠಯ್ಯ ಬಲ್ಲರು.

"ಏನು ಶಾಂತಮಲ್ಲಪ್ಪ?"

ಸಾಹುಕಾರರು ಪ್ರಶ್ನಿಸಿದೊಡನೆ ಶಾಂತಮಲ್ಲಪ್ಪ ಅವರೆದುರು ನಿಂತ.

"ಇನ್‌ಕಮ್ ಟ್ಯಾಕ್ಸ್ ಆಫೀಸಿನಿಂದ ನೋಟೀಸು–"

"ಯಾವಾಗ ಬರಬೇಕಂತೆ?"

"ಸೋಮವಾರ."

"ಆಡಿಟರು ಏನೆಂದ್ರು ?"

"ಆಫೀಸರು ಹೊಸಬ್ನಂತೆ. ಹುಡುಗ. ಸ್ಟ್ರಿಕ್ಟಂತೆ."

"ಹುಂ."

"ಕಮಿಷನರಿಗೆ ತಾವು ಒಂದು ಮಾತು ಹೇಳೋದು ವಾಸಿ–ಅಂದ್ರು."

"ಆಗಲಿ. ಫೋನ್ ಮಾಡ್ತೀನಿ. ಆ ಆಫೀಸರ್ ಹೆಸರೇನು ?"

"ರಾಧೇಶ್ಯಾಮ್–ಅಂತ."

ತುಸು ಯೋಚಿಸಿ ಶ್ರೀಕಂಠಯ್ಯ ಕೇಳಿದರು:

"ಲೆಕ್ಕಪತ್ರ ಆತ ಒಪ್ಕೊಂಡ್ರೆ ಎಸೆಸ್‌ಮೆಂಟ್ ಎಷ್ಟಾಗಬಹುದು ?"

"ಎಂಬತ್ತು ಸಾವಿರ ಆದಾತು."

"ಎಂಬತ್ತು ಸಾವಿರ ! ಅಷ್ಟೊಂದು ಟ್ಯಾಕ್ಸ್ ಕೊಟ್ಟು ನಾನೇನು ದೇಶಾಂತರ ಹೋಗ್ಬೇಕೆ? ನೀನಿಟ್ಟಿರೋದು ಇದೆಂಥ ಲೆಕ್ಕ ಅಂತೀನಿ."

"ಹೋದ ವರ್ಷ ಅಷ್ಟು ಕೊಟ್ಟಿತ್ತು. ಈ ವರ್ಷ ವರಮಾನ ಕಡಿಮೆ ತೋರಿಸಿದ್ರೆ ತೊಂದರೆಯಾದಾತು–ಅಂದ್ರು ಆಡಿಟರು."

"ಅವನ ತಲೆ. ಹುಂ......ಫೋನ್‌ನಲ್ಲಿ ಬೇಡ. ಇವತ್ತು ಸಾಯಂಕಾಲ ಕ್ಲಬ್ಬಿಗೆ ಹೋಗಿ ಕಮಿಷನರನ್ನ ನೋಡ್ತೀನಿ......"

ಆಗಲಿ ಎನ್ನುವುದನ್ನು ತಲೆ ಬಾಗಿಸುವುದರ ಮೂಲಕ ಶಾಂತಮಲ್ಲಪ್ಪ ವ್ಯಕ್ತಪಡಿಸಿದ.

ಸಿಗರೇಟಿನ ಬೂದಿಯನ್ನು ಕುರ್ಚಿಯ ಮಗ್ಗುಲಲ್ಲಿ ನೆಲದ ಮೇಲೆ ಕೊಡವಿ ಶ್ರೀಕಂಠಯ್ಯ ಅಂದರು:

"ಸೋಮನಾಥ ಬಂದನೇನು ?"

"ಬ್ಯಾಂಕಿಗೆ ಹೋಗಿದಾರೆ."

"ಆತ ಬಂದ್ಕೂಡ್ಲೆ ಇಲ್ಲಿಗೆ ಕಳಿಸ್ಕೊಡು."

"ಹ್ಞ."

ಹೌದೋ ಅಲ್ಲವೋ ಎನ್ನುವಂತೆ ಶ್ರೀಕಂಠಯ್ಯನವರ ಕಣ್ಣೆವೆಗಳು ಚಲಿಸಿ, ಶಾಂತಮಲ್ಲಪ್ಪನಿಗೆ ಹೋಗಲು ಸಂಜ್ಞೆ ಇತ್ತುವು. ಆತ ತನ್ನ ಕೊಠಡಿಗೆ ಮರಳಿದ.

ಶ್ರೀಕಂಠಯ್ಯನವರ ಮೆದುಳು ಬಿಸಿಯೇರಿತು. ವರ್ಷಕ್ಕೆ ಎಂಬತ್ತು

ಸಾವಿರದಂತೆ ವರಮಾನ ತೆರಿಗೆ ತೆತ್ತರೆ ತಮಗುಳಿಯುವುದೇನು? ರಾಷ್ಟ್ರದ ಸೇವೆಗಾಗಿ ಅಮೂಲ್ಯ ಸಮಯವನ್ನು ವಿನಿಯೋಗಿಸುತ್ತಿರುವ ತಮಗೆ ಹೀಗಾದರೆ...

ಹೊಸ ಆಫೀಸರು. ಹುಡುಗ. ಸ್ಟ್ರಿಕ್ಟು.

ಅನನುಭವಿಗಳನ್ನು ತಂದು ಅದೇನು ಸಿದ್ಧಿಯಾಗುತ್ತೆ ಅಂತ ಅಧಿಕಾರಿಗಳಾಗಿ ಮಾಡುತ್ತಾರೊ......ಪ್ರಪಂಚಜ್ಞಾನ ಇದ್ದವರು ಅಧಿಕಾರ ಸ್ಥಾನಗಳಲ್ಲಿರಬೇಕು. ಯಾರೊಡನೆ ಹೇಗೆ ವರ್ತಿಸಬೇಕೆಂಬುದು ಅವರಿಗೆ ತಿಳಿದಿರಬೇಕು. ಅದು ಬಿಟ್ಟು ಅಂಕೆಯಿಲ್ಲದ ಕಪಿಗೆ ಪಟ್ಟಾಭಿಷೇಕ ಮಾಡಿದರೆ ಅದು ಲಂಕೆಯನ್ನು ಸುಡದೆ ಇದ್ದೀತೆ?

ರಾಜ್ಯದ ಸೂತ್ರಗಳನ್ನು ಹಿಡಿದಿರುವ ಜನ ಅಪ್ರಬುದ್ಧರು ಎನ್ನುವುದಕ್ಕೆ ಈ ಒಂದು ದೃಷ್ಟಾಂತ ಸಾಲದೆ?

ಅಲ್ಲಾ,–ಯುವಕರು ಯಾಕೆ ಧರ್ಮರಾಯನ ವಂಶಜರಾಗುತ್ತಾರೆ? ರಾಷ್ಟ್ರ ತಮ್ಮ ಭುಜಗಳ ಮೇಲೆಯೇ ನಿಂತಿದೆ ಎನ್ನುವ ಹಾಗೆ ಇವರ ಮಾತು, ಕೃತಿ.

ಇದೇ ಜಾತಿಯವನಲ್ಲವೆ ಜಯರಾಮು?

...ಸಿಗರೇಟನ್ನು ಹಿಡಿದಿದ್ದ ಕೈಬೆರಳುಗಳಿಗೆ ಬಿಸಿ ಏರಿದಂತೆ ಕಂಡಿತು. ಶ್ರೀಕಂಠಯ್ಯ ಅತ್ತ ನೋಡಿದರು. ಬೂದಿ ಡೊಂಕಾಗಿ ನಿಂತಿತ್ತು. ಬೆರಳುಗಳೆಡೆಯಲ್ಲಿ ಸಿಗರೇಟಿನ ಬೆಂಕಿ ಕಾಗದವನ್ನು ದಹಿಸುತ್ತಿತ್ತು. ಒಮ್ಮೆಲೆ ಬೆರಳುಗಳನ್ನು ಶ್ರೀಕಂಠಯ್ಯ ಅಗಲಿಸಿದರು. ಸಿಗರೇಟಿನ ತುಂಡು ಧೋತರದ ಮೇಲೆ ಬಿತ್ತು. ಇದರ ಮನೆ ಹಾಳಾಗ–ಎನ್ನುತ್ತ ಕೈಯಿಂದ ಕೊಡವಿದರು. ಧೋತರಕ್ಕಾಗಲೇ ತೂತು ಬಿದ್ದಿತ್ತು. ಅಂಗೈಯಿಂದ ತಟ್ಟಿ ಆ ಕಾವನ್ನು ಶ್ರೀಕಂಠಯ್ಯ ಆರಿಸಿದರು. ಚಪ್ಪಲಿಯ ಬಳಿ ಹೊಗೆಯಾಡಿಸುತ್ತಿದ್ದ ಸಿಗರೇಟಿನ ತುಣುಕನ್ನು ಸಿಟ್ಟಿನಿಂದ ತುಳಿದರು. ಅದು ಗತಪ್ರಾಣವಾಯಿತು. ಕಾಗದ ಬಿರಿದು ಕರುಳು ಹೊರಬಂತು. ನೆಟ್ಟನೋಟದಿಂದ ಶ್ರೀಕಂಠಯ್ಯ ಕೆಲ ನಿಮಿಷ ಅದನ್ನೇ ನೋಡಿದರು.

ದೃಷ್ಟಿಯನ್ನು ಅಲ್ಲಿಯೇ ಬಿಟ್ಟು ಮನಸ್ಸು ತನ್ನ ಪಯಣ ಮುಂದುವರಿಸಿತ್ತು.

ಮಗಳ ಮದುವೆಯೊಂದನ್ನು ಬೇಗನೆ ಮಾಡಿ ಮುಗಿಸಬೇಕು. ಶ್ರೀಸದನ ಅನಾಥವಾಗಬಾರದು. ಸೋಮನಾಥನನ್ನು ತಮಗಿಷ್ಟಬಂದಂತೆ ತಿದ್ದಿ ರೂಪಿಸಬೇಕು.

ಒಂದು ಶಂಕೆ:

ಮಗನನ್ನು ಸರಿದಾರಿಗೆ ಹಚ್ಚಲಾಗದೆ ಹೋದ ತಾವು ಅಳಿಯನ ವಿಷಯದಲ್ಲಿ ಜಯಶೀಲರಾಗುವುದುಂಟೆ?

ಯಾಕಾಗಬಾರದು?

ಈ ಏರ್ಪಾಟಿನ ಹೊರತು ಬೇರೆ ಯಾವುದು ಸಾಧ್ಯ?

......ತಾವು ಕೈಕೊಳ್ಳಬೇಕಾದ ಕ್ರಮಗಳ ಜಾಡುಹಿಡಿದು ಶ್ರೀಕಂಠಯ್ಯನವರ ಯೋಚನೆ ಸಾಗಿತು.

ಅದಕ್ಕೆ ಭಂಗ ಬಂದುದು ಸ್ಕೂಟರಿನ ಸಪ್ಪಳವಾದಾಗ. ಸೋಮನಾಥ ಬಂದನೆಂದು ಆ ಸದ್ದು ಸಾರಿತು.

ಆತ ಒಳಗೆ ಬರಬೇಕು. ತಮ್ಮ ಆದೇಶವನ್ನು ಶಾಂತಮಲ್ಲಪ್ಪ ಆತನಿಗೆ ತಿಳಿಸಬೇಕು......

ಕೆಲ ನಿಮಿಷಗಳು. ಅಸ್ಪಷ್ಟವಾದ ಮಾತು ಹೊರಗೆ.

"ಸಾರ್......"

ವಿನಯ ತುಂಬಿದ ಮೆಲುದನಿ.

ಶ್ರೀಕಂಠಯ್ಯ ತಿರುಗುಕುರ್ಚಿಯಲ್ಲಿ ತುಸು ಹೊರಳಿ, ಸೋಮನಾಥನ ವಂದನೆಯನ್ನು ಮೌನವಾಗಿ ಸ್ವೀಕರಿಸಿದರು. ದುಂಡಗಿನ ಸ್ಟೂಲನ್ನು ದೃಷ್ಟಿಯಿಂದ ಬೊಟ್ಟುಮಾಡಿ ತೋರಿಸಿ,

"ಕೂತ್ಕೊ,"

—ಎಂದರು.

ಸೋಮನಾಥ ಸಂಕೋಚಪಡುತ್ತ ಕುಳಿತುಕೊಂಡ.

ರಕ್ಷಣಾನಿಧಿ ಸಂಗ್ರಹ ಸಮಿತಿಯ ಆಫೀಸು ಕಾರ್ಯದರ್ಶಿಯಾಗಿ ನೇಮಕಗೊಂಡಾಗ, ಸ್ವಲ್ಪವೇ ಸಮಯದಲ್ಲಿ ತನ್ನ ಅದೃಷ್ಟದ ಬಾಗಿಲು ತೆರೆದುಕೊಳ್ಳುವುದೆಂದು ಆತ ಕನಸು ಕೂಡಾ ಕಂಡಿರಲಿಲ್ಲ. ಪರಿಣಾಮದ ಕಡೆಗೆ ಹೆಚ್ಚಿನ ಲಕ್ಷ್ಯವೀಯದೆ ಜಯಶ್ರೀಯ ಜತೆ ಸರಸವಾಡಲು ಅವನು ಸಿದ್ಧನಿದ್ದ. ರಾಜ್ಯಶಾಸ್ತ್ರದ ಪದವೀಧರನಿಗೆ, ವಾಗ್ಮಿಗೆ, ರಾಜಕೀಯ ಮಹತ್ವಾಕಾಂಕ್ಷೆ ಇದ್ದುದು ಸಹಜವೇ. ಆದರೆ, ಮುಟ್ಟಿದ ಮಣ್ಣು ಬಂಗಾರವಾಗುತ್ತದೆಂದು ಭ್ರಮಿಸುವಷ್ಟು ಆತ ಹುಚ್ಚನಾಗಿರಲಿಲ್ಲ.

ಆದರೆ, ಕೈಗೂ ತಿಳಿಯದಂತೆ ಕಣ್ಣಿಗೂ ತಿಳಿಯದಂತೆ, ಅವನು ಮುಟ್ಟಿದ್ದು ಚಿನ್ನವಾಗಿತ್ತು !

ಶ್ರೀಕಂಠಯ್ಯ ಒಂದೆರಡು ಕ್ಷಣ ಮೌನವಾಗಿದ್ದು ಸೋಮನಾಥನನ್ನು ದಿಟ್ಟಿಸಿದರು.

ಆ ದೃಷ್ಟಿಯನ್ನು ಇದಿರಿಸದೆ, ಅಗತ್ಯವಿದ್ದುದಕ್ಕಿಂತಲೂ ಹೆಚ್ಚಿನ ವಿನಯ ನಟಿಸಿ ಕಿರಿಯವನು ನೆಲವನ್ನು—ಸಾಹುಕಾರರ ಪಾದರಕ್ಷೆಗಳನ್ನು—ನೋಡಿದ.

ಶ್ರೀಕಂಠಯ್ಯನವರಿಗೆ ನೆನಪಿತ್ತು. ನಿರ್ಣಾಯಕ ಮಾತುಕತೆ ನಡೆದಾಗ ಹಿಂದೆ ಜಯರಾಮು ಅದೇ ಸ್ಟೂಲಿನ ಮೇಲೆ ಕುಳಿತಿದ್ದ. ಆತ ಧರಿಸಿದ್ದು ಜುಬ್ಬ, ಪಾಯಜಾಮ; ಈತನದು ಪ್ಯಾಂಟು, ಬುಶ್‌ಶರಟು. ಎರಡೂ ಬಿಳಿ. ಎರಡೂ ಖಾದಿ. ಆಗ ತಮಗೆ ಸೋಲಾಯಿತು. ಈಗಲೂ ಹಾಗೆಯೇ ಆದರೆ?

ನಿಧಾನವಾಗಿ ಶ್ರೀಕಂಠಯ್ಯ ಸಿಗರೇಟೊಂದನ್ನು ಡಬ್ಬದಿಂದ ಹೊರತೆಗೆದು, ಮುಚ್ಚಳ ಮುಚ್ಚಿ, ಅದರ ಮೇಲ್ಭಾಗಕ್ಕೆ ಸಿಗರೇಟನ್ನು ಕುಟ್ಟಿ, ತುಟಿಗಳ ನಡುವೆ ಇರಿಸಿ, ಕಡ್ಡಿಗೀರಿ ಅದರ ತುದಿಗೆ ಬೆಂಕಿ ಮುಟ್ಟಿಸಿದರು. ಒಂದೆರಡು ಸಲ ಹೊಗೆಯುಗುಳಿ ಅವರೆಂದರು:

"ನಿನ್ನ ಜಾತಕ ಒಂದಿಷ್ಟು ನೋಡಬೇಕಲ್ಲಪ್ಪ......"

ಸೋಮನಾಥ ಏನನ್ನೂ ಹೇಳಲಿಲ್ಲ.

"ನಿಮ್ಮ ತಾಯಿ ಜತೆ ನಾನು ಸ್ವಲ್ಪ ಮಾತಾಡಬೇಕು."

ಅದಕ್ಕೇನು? ಕರೆದುಕೊಂಡು ಬರುತ್ತೇನೆ—ಎಂದು ಹೇಳಲು ಹೊರಟ ಸೋಮನಾಥ, ಪದಗಳನ್ನು ಹಿಂದಕ್ಕೆ ತಳ್ಳಿದ, ಮೌನವೇ ಲೇಸು—ಎಂದು.

ಹುಡುಗ ಸುಮ್ಮನಿರುವನಲ್ಲ—ಎಂದು ವಿಸ್ಮಯವಾಯಿತು ಶ್ರೀಕಂಠಯ್ಯನವರಿಗೆ. ತಮ್ಮ ಮುಖದೆದುರು ಕವಿದ ಹೊಗೆಮೋಡ ಚೆದರಿದೊಡನೆ ಅವರೆಂದರು:

"ನನ್ನ ಒತ್ತಾಯಕ್ಕೋಸ್ಕರ ಈ ಮದುವೆಗೆ ನೀನು ಒಪ್ತಾ ಇಲ್ಲ ತಾನೆ?"

ಸೋಮನಾಥನ ಕಣ್ಣುಗಳಿಂದ ಫಳಕ್ಕನೆ ನೀರು ಚಿಮ್ಮಿತು. ವಿನಯದ ನಟನೆಯ ಹುಲ್ಲುಬೇಲಿಯನ್ನು ಅಂಗಾತ ಮಲಗಿಸಿ ಮಾನವ ಸಹಜವಾದ ಕೃತಜ್ಞತೆಯ ಭಾವನೆ ಹೊರಕ್ಕೆ ಧುಮುಕಿತು.

ಗದ್ಗದಿತನಾಗಿ ಅವನೆಂದ:

"ತಾವು ನನಗೆ ಪಿತೃಸಮಾನರು, ಸಾರ್. ತಾವು ಆಡಿದ್ದು ನನಗೆ ವೇದ ವಾಕ್ಯ. ತಾವು ಹಾಕಿದ ಗೆರೆ ನಾನು ದಾಟುವವನಲ್ಲ."

ಇದೇ ಸರಣಿಯಲ್ಲಿ ಒಂದು ಮಾತನ್ನು ತಮ್ಮ ಮಗನ ಬಾಯಿಯಿಂದ ಕೇಳುವ ಭಾಗ್ಯ ತಮಗಿಲ್ಲದೆ ಹೋಯಿತಲ್ಲ—ಎಂದು ಒಂದು ಕ್ಷಣ ಶ್ರೀಕಂಠಯ್ಯ ತಳಮಳಗೊಂಡರು. ನಿಟ್ಟುಸಿರುಬಿಟ್ಟು, ಚೇತರಿಸಿಕೊಂಡು, ಮುಗುಳು ನಗೆ ಸೂಸಿ ಅವರು ನುಡಿದರು:

"ಸಂತೋಷವಪ್ಪ. ನನ್ನ ಒಬ್ಬಳೇ ಮಗಳು ನಿನ್ನ ಕೈಹಿಡೀತಾಳೆ. ನೀನು ಈ ಮನೆಗೆ ಅಳಿಯನಾಗಿ ಬಾ. ಇಳಿ ವಯಸ್ಸಿನಲ್ಲಿ ನನಗೆ ಊರುಗೋಲಾಗು."

ಸೋಮನಾಥ ಪ್ಯಾಂಟಿನ ಕಿಸೆಯಿಂದ ಕರವಸ್ತ್ರ ಹೊರತೆಗೆದು ಕಣ್ಣುಗಳನ್ನು ಒರೆಸಿಕೊಂಡ.

ಶ್ರೀಕಂಠಯ್ಯ ಮತ್ತೂ ಅಂದರು:

"ಗಂಗಾಧರ ಶಾಸ್ತ್ರಿಗಳನ್ನ ಬರಹೇಳ್ತೀನಿ. ಅವರು ಮೊದಲು ನಿಮ್ಮ ತಾಯಿೊನ ಕಂಡು ಮಾತಾಡ್ತಾರೆ. ಜಾತಕಗಳನ್ನು ಹೋಲಿಸಿ ನೋಡ್ತಾರೆ. ಅದೇನೂ ಮುಖ್ಯವಲ್ಲ. ಆದರೂ ಪದ್ಧತಿ ಪ್ರಕಾರ ನಡೀಬೇಕಾದ್ದು ನಡೀಲಿ."

"ಆಗಲಿ, ಸಾರ್."

"ಮುಂದಿನ ವರ್ಷ ಜೂನ್ ಹೊತ್ತಿಗೆ ನೀನು ಲಾ ಕಾಲೇಜ್ ಸೇರ್ಕೊಂಡು ಬಿಡು. ಮನೇಲಿ ಒಟ್ಟು ನೀವೆಷ್ಟು ಜನ?"

"ತಮ್ಮ, ತಂಗಿ, ತಾಯಿ—ಇಷ್ಟೇ ಸಾರ್."

"ಅವರಿಬ್ಬರ ವಿದ್ಯಾಭ್ಯಾಸ?"

"ತಮ್ಮ, ಸೈನ್ಸ್ ಸೆಕೆಂಡ್ ಈಯರು. ತಂಗಿ, ಪಿ.ಯು.ಸಿ. ಮಾಡ್ಕೊಂಡು ಮನೇಲಿದಾಳೆ."

"ಸರಿ. ಗಂಡಸು ಅಂತ ನಿಮ್ಮ ಮನೇಲಿ ಒಬ್ಬ ಇದ್ದೇ ಇರ್ತಾನೆ. ಅವನ ವಿದ್ಯಾಭ್ಯಾಸ ಮುಗಿದು ಅವನಿಗೊಂದು ಉದ್ಯೋಗ ಸಿಗುವ ತನಕ ಅಲ್ಲಿಗೆ ಹೋಗೋದು ಬರೋದು ನೀನು ಸ್ವಲ್ಪ ಹೆಚ್ಚಾಗಿ ಮಾಡಿದರಾಯ್ತು. ಏನು ತೊಂದರೆ ಇದ್ದರೂ ಮುಚ್ಚುಮರೆ ಮಾಡದೆ ನನಗೆ ಹೇಳ್ತಿರಬೇಕು. ಸರಿಯೇನಪ್ಪ?"

"ಸರಿ, ಸಾರ್."

"ಜಯಾದು ಪರೀಕ್ಷೆ ಮಾರ್ಚ್‌ನಲ್ಲಿ. ಅದು ಮುಗಿದೇ ಮದುವೆ ಇಟ್ಕೋ ಬಹುದಾಗಿತ್ತು. ಆದರೆ ನನ್ನ ಮನಸ್ಸಿಗೆ ನೆಮ್ಮದಿಯಿಲ್ಲ. ಅಲ್ದೆ ಜಯಾ ತಾಯಿಗೂ ಕೊರಗು. ಈ ಡಿಸೆಂಬರ್ ಕೊನೆಯೊಳಗಾಗಿ ಮಂಗಲಕಾರ್ಯ ಮಾಡಿ ಮುಗಿಸೋದು ಯೋಗ್ಯ ಅನಿಸುತ್ತೆ......"

"ಅದೆಲ್ಲಾ ತಮಗೇ ಬಿಟ್ಟದ್ದು. ನಮ್ಮ ತಾಯಿಗಾಗಲೀ ನನಗಾಗಲೀ ಒಂದೂ ತಿಳೀದು, ಸಾರ್."

"ಸರೀನಪ್ಪ. ಹೋಗು. ಆಫೀಸು ಕೆಲಸ ಏನಾದರೂ ಇದ್ದರೆ ನೋಡು."

"ಹೂಂ,"

—ಎಂದು ಸೋಮನಾಥ ಎದ್ದು, ಲವಲವಿಕೆಯಿಂದ ಹೊರಗೆ ಹೋದ....

ಶ್ರೀಕಂಠಯ್ಯನವರೆದ್ದು ಹಜಾರಕ್ಕೆ ಬಂದು, ಶಾಂತಮಲ್ಲಪ್ಪನನ್ನು ಕರೆದು,

"ಗಂಗಾಧರ ಶಾಸ್ತ್ರಿಗಳನ್ನಿಷ್ಟು ಕರೆಸಬೇಕಲ್ಲಪ್ಪ,"

—ಎಂದರು.

"ಇವತ್ತೇ ಬರಹೇಳ್ಲಿ ?"

"ಕಾರು ಕೊಟ್ಟು ಅಜೀಜ್‌ನನ್ನು ಕಳಿಸು. ಮನೇಲಿದ್ದರೆ ಕರಕೊಂಡೇ ಬರಲಿ."

"ಹೇಳ್ತೀನಿ,"

—ಎಂದ ಶಾಂತಮಲ್ಲಪ್ಪ.

ಸಾಹುಕಾರರ ಆದೇಶವನ್ನು ಪಾಲಿಸಿದ ಬಳಿಕ ಆತ ಸಪ್ಪೆಮೋರೆಯೊಡನೆ ನಿತ್ಯಕಾರ್ಯಗಳಲ್ಲಿ ನಿರತನಾದ.

ವಿಷಯ ಏನು ಎಂಬುದನ್ನು ಅವನು ಬಲ್ಲ. ಸೋಮನಾಥ ಬಂದ ಹೊಸದರಲ್ಲಿ, ಹುಡುಗ ಚುರುಕಾಗಿದ್ದಾನೆ, ನೋಡಬೇಕು, ತನ್ನ ಹಿರೇ ಮಗಳನ್ನು ಇವನ ಕೊರಳಿಗೆ ಕಟ್ಟಿದರೂ ಕಟ್ಟಬಹುದು, ಸಂಪಾದಿಸಿ ಹಿಡಿಕೂಳು ಹಾಕೋ ಯೋಗ್ಯತೆ ಇವನಿಗೆ ಇರುತ್ತದೋ ಇಲ್ಲವೋ—ಎಂದೆಲ್ಲ ಶಾಂತಮಲ್ಲಪ್ಪ ಯೋಚಿಸಿದ್ದ. ಆಧುನಿಕ ಯುವಕರ ಬಗೆಗೆ ತಾತ್ಸಾರವಿದ್ದರೂ ಸೋಮನಾಥನ ವಿಷಯದಲ್ಲಿ ಶ್ರಮಪಟ್ಟು ಸ್ನೇಹಪರ ಧೋರಣೆಯನ್ನು ಅನುಸರಿಸಿದ್ದ. ತನ್ನ ಅಳಿಯನಾಗಲು ಈ ಹುಡುಗ ಒಪ್ಪಿದರೆ ಸಾಹುಕಾರರನ್ನು ಪ್ರಾರ್ಥಿಸಿ ತಾನೇ ಆತನಿಗೊಂದು ಕೆಲಸ ಕೊಡಿಸಬಹುದು—ಎಂದೂ ಯೋಚಿಸಿದ್ದ.

ಮನೆಯೊಡತಿ ಕಮಲಮ್ಮ ಹುಡುಗನ ಬಗೆಗೆ ತೋರಿದ ಆಸಕ್ತಿಯಿಂದ ಅವನು ಅಧೀರನಾಗಿರಲಿಲ್ಲ.

ಆದರೆ, ಜಯರಾಮು ವಿದಾಯ ನುಡಿಯಲು ಬಂದ ದಿನ ಶ್ರೀಕಂಠಯ್ಯ ತಳೆದ ನಿಲುಮೆ ಶಾಂತಮಲ್ಲಪ್ಪನ ವಿಚಾರಗಳನ್ನೆಲ್ಲ ತಲೆಕೆಳಗು ಮಾಡಿತು.

ಈಗ ಆತನಿಗೆ ಸೋಮನಾಥನನ್ನು ಕುರಿತು ಒಂದು ಬಗೆಯ ಅಸೂಯೆ. ನಿನ್ನೆ ಬಂದವನು ನಾಳೆ ತನ್ನ ಮೇಲೆಯೇ ಅಧಿಕಾರ ಚಲಾಯಿಸುವನಲ್ಲ !

ವಿವೇಕ ನುಡಿದಿತ್ತು: ಕಾದು ನೋಡು.

ನೋಡುವುದೇನು? ಗಂಗಾಧರ ಶಾಸ್ತ್ರಿಗಳನ್ನು ಕರೆದು ತರುವಲ್ಲಿಗೇ ಬಂದು ಮುಟ್ಟಿತ್ತಲ್ಲ ಪ್ರಕರಣ?

ಈಗ ಪಿಸುದನಿಯಲ್ಲಿ ಅಂತರ್ವಾಣಿಯೆನ್ನುತಿತ್ತು: ಸಹಿಸಿಕೋ. ಹುಡುಗನಿಗೆ ಹೊಂದಿಕೊಂಡು ಹೋಗು. ನಿನ್ನ ಹೆಣ್ಣು ಮಕ್ಕಳ ಮದುವೆಯ ಜವಾಬ್ದಾರಿ ಸಾಹುಕಾರರದು......

......ಶಾಸ್ತ್ರಿಗಳು ಬಂದರು. ಶ್ರೀಕಂಠಯ್ಯನವರಿಂದ ಆಜ್ಞಪ್ತರಾಗಿ, ಸೋಮನಾಥನೊಡಗೂಡಿ ಆತನ ಮನೆಗೆ ತೆರಳಿದರು.

......ಜಾತಕಗಳು ಸರಿಹೋಗುತ್ತವೆ; ಗಂಡಿನ ತಾಯಿಗೆ [ಸಾಹುಕಾರರ ಮಗಳನ್ನು ಆಕೆ ನೋಡದೇ ಇದ್ದರೂ] ಈ ಸಂಬಂಧ ಒಪ್ಪಿಗೆ—ಎಂಬ ವರದಿಯನ್ನು ಶಾಸ್ತ್ರಿಗಳು ಸಂಜೆ ಒಪ್ಪಿಸಿದರು.

ಸೋಮನಾಥ ಲಜ್ಜೆಯಿಂದ ಮುಖ ಕೆಂಪೇರಿಸಿಕೊಂಡು ತನ್ನ ಕಚೇರಿಯಲ್ಲಿ ಕುಳಿತ.

ಕಮಲಮ್ಮ ಶಾಸ್ತ್ರಿಗಳಿಂದ ವಿವರ ತಿಳಿದು ಸಮಾಧಾನದ ನಿಟ್ಟುಸಿರು ಬಿಟ್ಟರು.

ಜಯಶ್ರೀ ಕಾಲೇಜು ಮುಗಿಸಿಕೊಂಡು ಮನೆಗೆ ಬಂದಳು. ಶಾಸ್ತ್ರಿಗಳು ಅಲ್ಲಿದ್ದುದರ ಅರ್ಥ ಹೊಳೆಯಲು ಆಕೆಗೆ ಎರಡು ನಿಮಿಷ ಹಿಡಿಯಿತು. ಹೊಳೆದಾಗ ಆಕೆಯ ಮುಖ ಚುರುಗುಟ್ಟಿತು.

......ಶ್ರೀಕಂಠಯ್ಯ ಕ್ಲಬ್ಬಿಗೆ ಹೋಗಿ ಕಮಿಷನರನ್ನು ಕಾಣೋಣವೆ, ಕೋದಂಡಪುರಕ್ಕೆ ಹೋಗೋಣವೆ—ಎಂದು ಹೊಯ್ದಾಡಿದರು.

ಎರಡು ಕೆಲಸಗಳನ್ನೂ ಇವತ್ತೇ ಮುಗಿಸಬೇಕು; ಕ್ಲಬ್ಬಿಗೆ ಹೋಗಿ ಅಲ್ಲಿಂದ ಕೋದಂಡಪುರಕ್ಕೆ ತೆರಳಿದರಾಯಿತು—ಎಂದುಕೊಂಡರು.

೨೨

ಆ ದಿನ ಭಾನುವಾರ. ಜಯಶ್ರೀ ತಡವಾಗಿ ಏಳಬಹುದಾಗಿತ್ತು. ಆದರೂ ಆಕೆ ಬೇಗನೆದ್ದಳು.

ಪೀಠೋಪಕರಣಗಳ ಮೇಲಿನ ಧೂಳು ಝಾಡಿಸಿ, ಗಾಜುಗಳನ್ನು ಒರೆಸಿ, ಒರಗು ದಿಂಬುಗಳ ಹೊದಿಕೆಗಳನ್ನು ಬದಲಾಯಿಸಬೇಕೆಂದು ಬಹಳ ದಿನಗಳಿಂದ ಅವಳು ಯೋಚಿಸಿದ್ದಳು. ಸೋಮನಾಥನಾಗಲೀ ಶಾಂತಮಲ್ಲಪ್ಪನಾಗಲೀ ಬರುವ ದಿನವಲ್ಲ ಭಾನುವಾರ. ಲಚ್ಚಿಯ ನೆರವಿನೊಡನೆ ಒಪ್ಪ ಓರಣದ ಕೆಲಸ ಮುಗಿಸಬೇಕೆಂದು ಜಯಶ್ರೀ ನಿರ್ಧರಿಸಿದಳು.

ಆ ಕಾರ್ಯಕ್ರಮ ನಿರಾತಂಕವಾಗಿ ಸಾಗಲಿ ಎಂದು ಶ್ರೀಕಂಠಯ್ಯನವರೂ ಹಾರೈಸಿದರೇನೋ ಎಂಬಂತೆ, ಬೆಳಗಿನ ಉಪಾಹಾರದ ಬಳಿಕ ಅವರು ಹೊರ ಹೋದರು.

"ನೀವು ಸುಮ್ಕೆ ಪುಸ್ತಕ ಓದ್ಕೊಂಡಿರಿ, ಅಮ್ಮಣ್ಣಿ. ನಾ ಎಲ್ಲಾ ಸರ್ಮಾಡ್ತೀನಿ,"

—ಎಂದಳು ಲಚ್ಚಿ.

ಜಯಶ್ರೀ ಮಾರ್ನುಡಿದಳು:

"ನೀನು ಸರಿಮಾಡೋದು ನನಗೆ ತಿಳೀದಾ? ಸುಮ್ನೆ ಹೇಳಿದಷ್ಟು ಮಾಡು."

ದುಡಿಯುತ್ತ ಲಚ್ಚಿ ಅಂದಳು:

"ಮನೆಗೆ ಸಿಂಗಾರ ಮಾಡೋದು ಎಲ್ಲಾ ನೋಡಿದ್ರೆ, ಸುಬಕಾರ್‍ಯ ನಡೆಯೋ ಹಂಗೈತ್ರಲ್ಲಮ್ಮಣ್ಣಿ."

ಆ ಬಗೆಯ ಸಂಭಾಷಣೆ ಜಯಶ್ರೀಗೆ ಇಷ್ಟ.

"ನಡೀಬಾರದೇನು?"

"ಶಿವ ಶಿವಾ! ಬಾರದು ಅಂದೇನಾ?"

"ಯಾತಕ್ಕೆ ಗೋಳಾಡ್ತಿದೀಯಾ ಮತ್ತೆ?"

"ಸಂದರ್ಬ ಬ್ಯಾರೆ ಆಗಿದ್ರೆ ಗೋಳಾಡ್ತಿದ್ದೆ. ಈಗ ಯಾಕ್ಮಾಡ್ಲಿ?"

"ಅಂದರೆ?"

"ನಿಮಗೆ ಮದುವೆಯಾಗಿ ಗಂಡನ ಮನೆಗೆ ಒಂಟೋದ್ರೆ ನನ್ಗತಿ ಏನು ಅಂತ ದುಕ್ಕ ಆಗ್ತಿತ್ತು."

"ಓಹೋ!"

"ಈಗ ಅಂಗಿಲ್ವಲ್ಲ. ಮಾಡ್ಕೊಂಡ ಮಾರಾಯ್ರು ಇಲ್ಲಿಗೇ ಬಂದ್ಬುಡ್ತಾರೆ."

"ಸಾಕು! ಸಾಕೆ!"

"ಹೌದ್ರಾ? ಅಲ್ಲವ್ರಾ?"

"ಏನಾಯ್ತು ಬಂದ್ರೆ?"

"ಬೇಸಾಯ್ತದೆ. ನಾನೂ ನಿಮ್ಮ ಚಾಕ್ರಿ ಮಾಡ್ಕೊಂಡು ಇಲ್ಲೇ ಬಿದ್ದಿರ್ತೀನಿ."

ಸಿಹಿಯಾದ ಸಂವಾದ ಮುಗಿಯಬಾರದೆಂದು ಜಯಶ್ರೀ ಅಂದಳು:

"ಅದ್ಹ್ಯಾಗೆ ಬಿದ್ದಿರ್ತೀಯಾ? ಚಿಕ್ಕಣ್ಣ ನಿನ್ನ ಮಾಡ್ಕೊಳ್ತಾನಂತಲ್ಲ?"

"ಮಾಡ್ಕೊಳ್ಲಿ ಮಾರಾಯ್ನಾಗಿ."

"ಹೋಗೊಲ್ವೊ ಗಂಡನ ಮನೆಗೆ?"

"ಯಾಕೆ ಓಗ್ಬೇಕು? ಇರೋ ಅಟ್ಟಿಗೆ ಇನ್ನೊಂದು ರೂಮು ನೀವು ಕಟ್ಟಿಸ್ಕೊಟ್ರೆ ಸರ್ಹೋಗ್ತದೆ."

"ಪರವಾಗಿಲ್ಲ. ನಿನ್ನಂದೆ ಮನೆ ಅಳಿಯನ್ನೇ ಹುಡುಕಿದಾನೆ ಅನ್ನು!"

"ಸಾವುಕಾರ್ರು ಎಂಗೋ ಚಾಕರ್ರು ಅಂಗೇ."

"ನಾಲಿಗೆ ಉದ್ದ ಬಿಡ್ತಿದೀ ಕಣೇ ನೀನು."

"ಐ ಬುಡಿ! ಆದಿರೋದೇ ಅಂಗೆ......"

ಸುತ್ತಲೂ ಒಮ್ಮೆ ದೃಷ್ಟಿ ಹೊರಳಿಸಿ, ಸ್ವರ ತಗ್ಗಿಸಿ, ಜಯಶ್ರೀ ಕೇಳಿದಳು:

"ಚಿಕ್ಕಣ್ಣ ನಿಂಗಿಷ್ಟಾನಾ ಲಚ್ಚಿ?"

ಕಣ್ಣಾಲಿಗಳನ್ನು ತೇಲಿಸುತ್ತ ಲಚ್ಚಿ ಮರು ಪ್ರಶ್ನೆ ಹಾಕಿದಳು:

"ಸೋಮನಾಥಪ್ನೋರು ನಿಮಗಿಸ್ಟಾನಾ?"

"ಮಾತಿಗೆ ಪ್ರತಿ ಮಾತು ಆಡ್ತೀಯಲ್ಲೇ ನೀನು?"

"ಚಿಕ್ಕಣ್ಣ ದಿನಾ ನಿಮ್ನ ಕಾಲೇಜಿಗೆ ಕರಕೊಂಡೋಗ್ತಾನೆ. ಅವನು ಎಂಗವ್ನೆ ಅಂತ ನೀವೇ ಯೋಳ್ಬಾರ್ದಾ?"

"ಕಾರನ್ನೇನೋ ಚೆನ್ನಾಗೇ ಡ್ರೈವ್ ಮಾಡ್ತಾನಪ್ಪ."

"ಒಂದ್ಸಲಿ ಮಾತ್ರ ಎಣ್ಣೆ ಇಲ್ದೆ ನಿಂತೋಗಿತ್ತು."

"ಎಣ್ಣೆ ನಿನ್ತಲೆಗೆ. ಪೆಟ್ರೋಲ್ ಅನ್ನು."

"ಕಾರನ್ನೇನೋ ತೊಳ್ದು ಥಳ ಥಳ ಮಾಡ್ತಾನೆ."

"ನಿನ್ನೂ ಹಂಗೇನೇ ಥಳ ಥಳ ಇಟ್ಕೋತಾನೆ. ಚಿಂತಿಸ್ಬೇಡ."

"ಮೊದಲು ಮಾಡ್ಕೊಳ್ಳಿ. ಆಮ್ಯಾಕೆ ನೋಡಾನ."

ಹಿಂದಿನ ಮಾತೊಂದು ನೆನಪಾಗಿ ಜಯಶ್ರೀ ಕೇಳಿದಳು:

"ಸೋಮನಾಥ್ ನಿನ್ನ ದುರದುರನೆ ನೋಡ್ತಾರೇಂತ ಯಾವತ್ತೋ ಒಮ್ಮೆ ಅಂದೆಯಲ್ಲೇ......"

"ಓ, ಅದಾ?"

"ಈಗ್ಲೂ ಹಂಗೇ ನೋಡ್ತಾರಾ?"

"ಇಲ್ಲಪ್ಪ. ಮದುವೆ ಎಣ್ಣಿನ ಹಾಗೆ ತಲೆ ತಗ್ಗಿಸಿಕೊಂಡೇ ಇರ್ತಾರೆ ಯಾವಾಗಲೂ."

[ಅದು ನಿಜವೇ. ಈಗ ಶ್ರೀಸದನದಲ್ಲಿ ಸಭ್ಯ ಮನುಷ್ಯನಾಗಿದ್ದ ಸೋಮನಾಥ.]

"ಅಂತೂ ಅವರು ನಿನಗಿಷ್ಟ ಅನ್ನು."

"ಮಾಡ್ಕೊಳ್ಳೋರು ನೀವು. ನನಗೆ ಇಸ್ಟವಾದ್ರೇನು? ನಸ್ಟವಾದ್ರೇನು?"

ಮಾತು ಹೀಗೆಯೇ ಮುಂದುವರಿಯಬೇಕು. ಆದರೆ ಕಮಲಮ್ಮನ ಮಧ್ಯ ಪ್ರವೇಶ ತಡೆಯುಂಟುಮಾಡಿತು.

ಅವರು ಕೇಳಿದರು:

"ಇದೇನೇ ಇದು? ಕೂದಲು ಕೆದರ್ಕೊಂಡು ಹೀಗಿದೀಯಲ್ಲೇ? ಒಳ್ಳೇ ಮನೆಕೆಲಸದ ಗೀಳು ಹಿಡೀತಲ್ಲ ನಿಂಗೆ! ಸ್ನಾನ ಮಾಡೋಲ್ವೇನೆ?"

ಜಯಶ್ರೀ ಅಂದಳು:

"ಆಮೇಲೆ ಮಾಡ್ತೀನಮ್ಮ......"

ಒಳಗಿಂದೊಳಗೇ ಕಮಲಮ್ಮನಿಗೆ ಹಿಗ್ಗು. ಆ ದುರ್ದಿನದ ಬಳಿಕ ಜಯಶ್ರೀ

ಬದಲಾಗಿದ್ದಳು. ಬರುವವನು ಮನೆಯಳಿಯನೇ ಆದರೂ ಗೃಹಕೃತ್ಯ ಕಲಿತು ಕೊಳ್ಳುವುದು ತಪ್ಪಲ್ಲ. ಅಂತೂ ಚೆಲ್ಲುಚೆಲ್ಲಾಟ ಒಮ್ಮೆ ಕೊನೆಗಂಡಿತಲ್ಲ...

"ಸರಿ. ಕೆಲಸ ಮುಗಿದ್ಮೇಲೆಯೇ ಸ್ನಾನ ಮಾಡು."

–ಎಂದು ನುಡಿದು ಕಮಲಮ್ಮ ಒಳಹೋದರು.

ಆದರೆ, ಮುಂದೆ ಕೆಲ ನಿಮಿಷಗಳಲ್ಲಿ, ನಿರ್ಮಲೀಕರಣ ಕಾರ್ಯಕ್ಕೆ ಪೂರ್ಣ ವಿರಾಮವೇ ಬಿತ್ತು.

ತನ್ನ ತಾಯಿಯನ್ನು ಕರೆದುಕೊಂಡು ಸೋಮನಾಥ ಬಂದುಬಿಟ್ಟ.

ಹಜಾರದಲ್ಲಿದ್ದ ಜಯಶ್ರೀ ಒಳಕ್ಕೆ ಓಡಿಹೋದಳು.

ಸಂದರ್ಭವೇನೆಂಬುದನ್ನು ಗ್ರಹಿಸಿಕೊಂಡು ಲಚ್ಚಿ ಮುಸಿಮುಸಿ ನಗುತ್ತ, ಮನೆಯೊಡತಿಗೆ ಸುದ್ದಿ ಮುಟ್ಟಿಸಿದಳು.

ಅವರಿಲ್ಲದ ವೇಳೆಯಲ್ಲಿ ಬಂದರಲ್ಲ–ಎಂದು ಕಮಲಮ್ಮ ಕೊಂಚ ತಬ್ಬಿಬ್ಬಾದರೂ ಭಾವೀ ಬೀಗತಿಯನ್ನು ಇದಿರ್ಗೊಳ್ಳಲು ಹೊರಬಂದರು. ಅಲ್ಲಿ ಸಂಕೋಚಪಡುತ್ತ ನಿಂತಿದ್ದರು ಸೋಮನಾಥನ ತಾಯಿ. ಮಧ್ಯ ವಯಸ್ಸು ದಾಟಿದ್ದ ಬರಿಹಣೆಯ ಸಕೇಶಿ. ಆಕರ್ಷಕವಾಗಿದ್ದರೂ ದೈನ್ಯ ತುಳುಕಾಡುತ್ತಿದ್ದ ಮುಖಮುದ್ರೆ. ಸೋಮನಾಥ ಶೂ ಬಿಚ್ಚಿರಲಿಲ್ಲ. ಅವರು ಮಾತ್ರ ದ್ವಾರ ಮಂಟಪದಲ್ಲೇ ಚಪ್ಪಲಿಗಳನ್ನು ಬಿಟ್ಟುಬಂದಿದ್ದರು.

ಸೋಮನಾಥನೆಂದ:

"ಇವರು ನನ್ನ ತಾಯಿ."

"ಬನ್ನಿ, ಕೂತ್ಕೊಳ್ಳಿ,"

–ಎಂದರು ಕಮಲಮ್ಮ.

ಅವರ ಸ್ವರ ಕೇಳಿದಾಗ ಸೋಮನಾಥನ ತಾಯಿಗೆ–ಯಮುನಮ್ಮನಿಗೆ– ತುಸು ಹಾಯೆನಿಸಿತು. ದೊಡ್ಡವರು, ಎಂತೋ ಏನೋ, ಎಂದು ಅಳುಕುತ್ತ ಅವರು ಬಂದಿದ್ದರು.

ಅವರು ಹಜಾರದಲ್ಲಿ ಹಾಸಿದ್ದ ರತ್ನಗಂಬಳಿಯ ಮೇಲೆ ಕುಳಿತುಕೊಳ್ಳಲು ಅಣಿಯಾದರು.

"ಛೆ ! ಛೆ ! ಸೋಫಾದ ಮೇಲೆ ಕೂತ್ಕೊಳ್ಳಿ,"

–ಎಂದರು ಕಮಲಮ್ಮ.

ಸೋಮನಾಥನೂ ಅಂದ:

"ಮೇಲೆ ಕೂತ್ಕೋಮ್ಮಾ."

ಯಮುನಮ್ಮ ಮೈಮುದುರಿಕೊಂಡು ಸೋಫಾದ ಅಂಚಿನ ಮೇಲೆ ಕುಳಿತರು. ಅವರ ಎದುರುಬದಿಯಲ್ಲಿ ಕಮಲಮ್ಮ ಆಸೀನರಾದರು.

ಯಮುನಮ್ಮನನ್ನು ನೋಡುತ್ತ ಅವರೆಂದರು:

"ನೀವು ಬರೋದು ಸಾಹುಕಾರ್‍ರಿಗೆ ಗೊತ್ತಿಲ್ಲಾಂತ ಕಾಣುತ್ತೆ."

ನಿಂತೇ ಇದ್ದ ಸೋಮನಾಥ ತಾಯಿಯ ಪರವಾಗಿ ಉತ್ತರವಿತ್ತ:

"ಇಲ್ಲ. ಸಾಹುಕಾರರಿಲ್ದೇಹೋದ್ರೂ ನೀವು ಇದ್ದೇ ಇರ್‍ತೀರಿ ಅಂತ ಬಂದ್ವಿ."

"ನಾನೆಲ್ಲಿಗೆ ಹೋಗ್ತೀನಿ ಮನೆಬಿಟ್ಟು? ಒಳ್ಳೇದೇ ಆಯ್ತು. ಮಧ್ಯಾಹ್ನದ ಹೊತ್ತಿಗೆ ಅವರೂ ಬರಬಹುದು. ಇಲ್ಲೇ ಇದ್ದು ಊಟಮಾಡ್ಕೊಂಡು ಹೋಗುವಿರಂತೆ."

ಒಣಗಿದ್ದ ತುಟಿಗಳನ್ನು ಬೇರ್ಪಡಿಸಿ ಯಮುನಮ್ಮ ಅಂದರು:

"ಬೇಡಿ, ಬೇಡಿ. ಹೋಗಿ ಬರೋಣ ಅಂದ ಸೋಮು. ನಾನು ಮನೆ ನೋಡಿರಲಿಲ್ಲ. ಇನ್ನು ಹೊರಟುಬಿಡ್ತೀವಿ."

ಕಮಲಮ್ಮನಿಗೆ ಅಳುಬಂತು.

"ಇದೇನಪ್ಪ ಸೋಮನಾಥ? ನಿಮ್ಮಮ್ಮಿಗೆ ಹೇಳ್ಬಾರದೇನಪ್ಪ? ನೀನೇನು ಈ ಮನೆಗೆ ಹೊರಗಿನವನೆ? ಯಾಕಪ್ಪ ಸಂಕೋಚ?"

"ಆಗಲಿ, ಇದ್ದು ಹೋಗ್ತೀವಿ,"

—ಎಂದ ಸೋಮನಾಥ, ತಾಯಿಯ ಪರವಾಗಿಯೂ ತಾನೇ ತೀರ್ಮಾನ ಕೈಗೊಂಡು.

"ಜಯಾ, ಏ ಜಯಾ!"

—ಎಂದು ಕಮಲಮ್ಮ ಮಗಳನ್ನು ಕರೆದರು.

"ಸ್ನಾನಕ್ಕೋಗವ್ರೆ,"

—ಎಂದಳು ಲಚ್ಚಿ.

"ಸ್ನಾನ ಮಾಡೇ ಅಂತ ಆಗ಼್ೇ ಹೇಳ್ದೆ. ಮನೆಧೂಳು ಝಾಡಿಸೋ ಕೆಲಸ ಇಟ್ಕೊಂಬಿಟ್ಲು."

—ಹೆಮ್ಮೆಪಟ್ಟುಕೊಂಡೇ ಕಮಲಮ್ಮ ಅಂದರು.

"ಸ್ನಾನ ಮಾಡ್ಕೊಂಡು ಬೇಗ್ನೆ ಬರ್ಬೇಕಂತೆ ಅಂತ ಹೇಳು,"

–ಎಂದರು ಲಚ್ಚಿಗೆ.

"ಪಾಪ, ನಿಧಾನವಾಗಿ ಬರ಼್್ಲಿ,"

–ಎಂದು ನುಡಿದರು ಯಮುನಮ್ಮ.

ಸೋಮನಾಥ, ಒಳಬಂದಾಗಲೇ ಜಯಶ್ರೀಯನ್ನು ನೋಡಿದ್ದ. ಅವರ ದೃಷ್ಟಿಗಳು ಸಂಧಿಸಿದ್ದುವು. ಕೆದರಿದ ಕೇಶರಾಶಿಯೂ ಪೌಡರಿನ ಲೇಪನವಿಲ್ಲದ ಮುಖವೂ ಅವನಿಗೆ ಮೋಹಕವಾಗಿ ಕಂಡಿದ್ದುವು.

ಆತ ತಾಯಿಯನ್ನು ಕಮಲಮ್ಮನ ಜತೆ ಬಿಟ್ಟು ತನ್ನ ಕಚೇರಿಯಿದ್ದ ಕೊಠಡಿ ಯತ್ತ ಸಾಗಿ, ಬಾಗಿಲು ತೆರೆದು, ಒಳಸೇರಿದ. ಮಗ ಹೋದ ದಿಕ್ಕನ್ನು ಯಮು ನಮ್ಮನ ದೃಷ್ಟಿ ಹಿಂಬಾಲಿಸಿತು.

ಕಮಲಮ್ಮ ವಿವರಿಸಿದರು:

"ಅದೇ ಅವರ ಯುದ್ಧದ ಆಫೀಸು. ಈಗ ಕೆಲಸ ಸ್ವಲ್ಪ ಕಮ್ಮಿ ಅಂತಲೇ ಅನ್ಬೇಕು."

ಯಮುನಮ್ಮ ಅಂದರು:

"ಏನು ಯುದ್ಧವೋ ಏನು ಕಥೆನೋ ನನಗೊಂದೂ ಅರ್ಥವಾಗೋ ಲ್ಲರೀ......"

"ನನಗೂ ಅಷ್ಟೇನಮ್ಮ,"

–ಎಂದರು ಕಮಲಮ್ಮ. ಅವರ ಕಣ್ಣುಗಳು ಮಂಜಾದುವು. ಅದು ರುವ ಧ್ವನಿಯಲ್ಲಿ ಅವರು ಮುಂದುವರಿಸಿದರು:

"ಜಯರಾಮು–ನನ್ನ ಮಗ–ಡಾಕ್ಟರು. ಯುದ್ಧಕ್ಕೆ ಹೋಗ್ಬಿಟ್ಟಿದಾನೆ..."

ತಾಯ್ತನದ ಸಮಾನ ನೆಲೆಯ ಮೇಲೆ ಆ ಇಬ್ಬರೂ ಈಗ ಅನ್ಯೋನ್ಯ ಮಾತುಕತೆಯಲ್ಲಿ ನಿರತರಾದರು. ಈ ಅಂತರ ಬಹಳ ಎಂದುಕೊಂಡಿದ್ದರಲ್ಲ ಯಮುನಮ್ಮ? ಕೆಲವೇ ನಿಮಿಷಗಳಲ್ಲಿ ಅವರಿಬ್ಬರ ನಡುವೆ ಭಾವಸೇತುವೆ ಏರ್ಪಟ್ಟಿತು.

ಲಚ್ಚಿ ಒಂದಲ್ಲ ಎರಡಲ್ಲ ಮೂರು ಸಾರೆ ಮೇಲಣ ಕೊಠಡಿಗೆ ಹೋಗಿ ಬರ ಬೇಕಾಯಿತು, ಬೇರೆ ಬೇರೆ ಸೀರೆಗಳನ್ನು ಜಯಶ್ರೀಗಾಗಿ ಒಯ್ಯಲು.

ಕೊನೆಗೊಮ್ಮೆ ರೇಶಿಮೆಯ ಬಿಳಿಯ ಸೀರೆಯುಟ್ಟು, ತಲೆಗೂದಲ್ಲ ತುದಿ

ಗಷ್ಟೆ ಗಂಟುಹಾಕಿ, ಹಣೆಗೆ ಕುಂಕುಮವಿಟ್ಟು ಫೋಮ್‌ರಬ್ಬರಿನ ತೆಳು ಚಪ್ಪಲಿ ಮೆಟ್ಟಿಕೊಂಡು ಜಯಶ್ರೀ ಬಂದಳು.

ತಾಯಿಯ ಅಪೇಕ್ಷೆಯಂತೆ ಯಮುನಮ್ಮನ ಪಾದಗಳಿಗೆ ನಮಿಸಿ, ಮಹಡಿಯ ಮೆಟ್ಟಲುಗಳನ್ನೇರಿ ತನ್ನ ಕೋಣೆಗೆ ಹೋದಳು. [ಹಿಂದೆ ಅವಳದಾಗಿದ್ದ ಕೊಠಡಿಯಲ್ಲ ಅದು. ಆ ದಿನದ ಘಟನೆಯ ಬಳಿಕ ಅದನ್ನು ತ್ಯಜಿಸಿ ಜಯರಾಮುವಿನ ಕೋಣೆಯಲ್ಲಿ ಆಕೆ ಬೀಡುಬಿಟ್ಟಿದ್ದಳು.]

ಭಟ್ಟ ಉತ್ಸಾಹದಿಂದ ವಿಶೇಷ ಅಡುಗೆಯ ತಯಾರಿಗೆ ತೊಡಗಿದ.

ಸ್ವಲ್ಪ ಹೊತ್ತಿನ ಬಳಿಕ ಯಮುನಮ್ಮ ಸೆರಗಿನ ತುದಿಯಿಂದ ಕಣ್ಣುಗಳನ್ನು ಒತ್ತಿಕೊಂಡರು. ನಿಧಾನವಾಗಿ ಅವರೆಂದರು:

"ನಾನು ಹೆಣ್ಣುಹೆಂಗಸು......ಈಗ ಅವರಿರಬೇಕಾಗಿತ್ತು......ಯಾವುದಕ್ಕೂ ಅದೃಷ್ಟ ಬೇಕು. ಸೋಮು ಹಿರೇ ಹುಡುಗ. ಒಂಭತ್ತು ತಿಂಗಳು ಹೊತ್ತು ಹೆತ್ತು ಸಾಕಿ ದೊಡ್ಡವನಾಗಿ ಮಾಡಿ, ನಿಮ್ಮ ಉಡೀಲಿ ಹಾಕ್ತಿದೀನಿ. ಇನ್ನು ಏನಿದ್ದರೂ ಅವನಿಗೆ ನೀವೇ ತಾಯಿತಂದೆ."

ಕಮಲಮ್ಮ ಮುಗ್ಧಮನಸ್ಸಿನಿಂದ ಆಕೆಯನ್ನು ಸಂತೈಸಿದರು:

"ನೀವೇನೂ ವ್ಯಥೆಪಡಬಾರ್ದು. ಇದೇನು ಬೇರೆ ಊರೆ? ಕಲ್ಕತ್ತವೆ, ದಿಲ್ಲಿಯೆ? ಭಾಗ್ಯನಗರದಲ್ಲೇ ಇರೋದಿಲ್ವೆ ನಿಮ್ಮ ಮಗ?"

ಎಷ್ಟು ಹೇಳಿದರೂ, ಯಮುನಮ್ಮನ ದುಃಖ ಮಾಯವಾಗಲು ಸ್ವಲ್ಪ ಹೊತ್ತು ಹಿಡಿಯಿತು.

......ಶ್ರೀಕಂಠಯ್ಯ ಹನ್ನೆರಡರ ಸುಮಾರಿಗೆ ಬಂದರು.

ವಿನಯಶೀಲರಾಗಿ ಮೃದುವಾಗಿ ಯಮುನಮ್ಮನನ್ನು ಮಾತನಾಡಿಸಿ, ತಮ್ಮ ಪತ್ನಿಯನ್ನೂ ಮಗಳನ್ನೂ ಅವರು ದಂಗುಬಡಿಸಿದರು.

"ನಿಮ್ಮ ಮಗನ ಭವಿಷ್ಯದ ಜವಾಬ್ದಾರಿ ನನಗಿರಲಿ,"

–ಎಂದರು.

"ಎಲ್ಲಾ ತಮ್ಮ ಚಿತ್ತ,"

–ಎಂದು ಇತಿಶ್ರೀ ನುಡಿದರು ಯಮುನಮ್ಮ.

......ಗಂಡಸರು [ಶ್ರೀಕಂಠಯ್ಯ ಹಾಗೂ ಸೋಮನಾಥ] ಮೊದಲು ಊಟಮಾಡಿದರು, ಭೋಜನದ ಮೇಜಿನ ಸುತ್ತು ಕುಳಿತು.

ಹೆಂಗಸರು [ಕಮಲಮ್ಮ ಮತ್ತು ಯಮುನಮ್ಮ] ಮಣೆಗಳ ಮೇಲೆ ಎಲೆಗಳ ಎದುರು ಕುಳಿತರು. ಜಯಶ್ರೀ, ಭಟ್ಟನ ಸೂಚನೆಗಳನ್ನು ಅನುಸರಿಸಿ ಬಡಿಸಿದಳು.

"ಜಯಾನೂ ನಮ್ಜತೇನೇ ಕೂತ್ಕೊಳ್ಳಿ. ಬಾ ಮಗು,"

—ಎಂದರು ಯಮುನಮ್ಮ.

ಜಯಶ್ರೀ ನಿಮಿಷವೂ ತಡಮಾಡದೆ ಅವರ ಅಪೇಕ್ಷೆಯಂತೆ ನಡೆದಳು.

......ಜಟಕಾಗಾಡಿಯಲ್ಲಿ ಬಂದು ಶ್ರೀಸದನದಿಂದ ಸಾಕಷ್ಟು ದೂರದಲ್ಲಿ ಇಳಿದು ಕಾಲ್ನಡಿಗೆಯಿಂದ ಬಂಗಲೆಯನ್ನು ತಲಪಿದ್ದ ಸೋಮನಾಥನೂ ಅತನ ತಾಯಿಯೂ ಊಟವಾದ ಬಳಿಕ ದೊಡ್ಡ ಕಾರಿನಲ್ಲಿ ಕುಳಿತು ತಮ್ಮ ಮನೆಗೆ ತೆರಳಿದರು. ......

೨೩

ಒಂದು ವಾರ ಕಳೆದ ಬಳಿಕ ಒಂದು ಸಂಜೆ ಶಾಂತಮಲ್ಲಪ್ಪನೂ ರಕ್ಷಣಾನಿಧಿ ಸಂಗ್ರಹ ಸಮಿತಿಯ ಸಿಬ್ಬಂದಿಯೂ ಮನೆಗೆ ಹೋದಮೇಲೆ, ಸೋಮನಾಥ ನನ್ನು ಕಮಲಮ್ಮ ಒಳಗೆ ಕರೆದರು. ಸಾಹುಕಾರರು ಮನೆಯಲ್ಲಿರಲಿಲ್ಲ.

"ಮಗೂ ಏನೂ ತಿಳ್ಕೋಬೇಡ. ನಿನ್ನನ್ನ ಒಂದು ಮಾತು ಕೇಳ್ತೀನಿ,"

—ಎಂದರು ಕಮಲಮ್ಮ.

ಸೋಮನಾಥನ ಎದೆಗುಂಡಿಗೆ ತೀವ್ರಗತಿಯಿಂದ ಬಡಿಯಿತು.

"ಹೇಳಿ,"

—ಎಂದ ಆತ.

"ಜಯಾ ಯಾಕೋ ಒಂದು ಥರಾ ಇದಾಳೆ. ನೀನು ಅವಳ ಹತ್ತಿರ ಈಚೆಗೆ ಮಾತಾಡಿಲ್ವಾ?"

ಸೋಮನಾಥನ ಮುಖ ಮ್ಲಾನವಾಯಿತು.

"ಇಲ್ಲ."

"ಆಫೀಸು ಕೆಲಸ ಮುಗೀತೇನು?"

"ಹೂಂ."

"ಇನ್ನೇನು ಜಯಾ ಬರೋ ಹೊತ್ತು. ಇದ್ದುಬಿಟ್ಟು ಮಾತಾಡಿಸಿ ಹೋಗ್ತೀಯಾ?"

"ಆಗಲಮ್ಮ."

ಕಮಲಮ್ಮ ಒಳಹೋದರು. ಅವರ ಮನಸ್ಸಿನೊಳಗೆ ಒಂದು ನಗೆ ಮೊಗ್ಗು ಬಿರಿಯಿತು.

ಸೋಮನಾಥ ಹುಬ್ಬುಗಂಟಿಕ್ಕಿಕೊಂಡು ತನ್ನ ಕೊಠಡಿಗೆ ನಡೆದ. ಅಲ್ಲಿದ್ದ ಪುಸ್ತಕಗಳನ್ನು ಫೈಲುಗಳನ್ನು ಪತ್ರಿಕೆಗಳನ್ನು ನೋಡಿ ಅವನಿಗೆ ಸಿಟ್ಟುಬಂತು. ಆ

ಬಂಗಲೆ ಸೆರೆಮನೆಯಾಗಿ ಕಂಡಿತು. ಇಲ್ಲಿಂದ ಹೊರಟುಬಿಡಬೇಕು, ತನ್ನ ಸ್ವಾತಂತ್ರ್ಯ ವನ್ನು ಸಾರಬೇಕು, ಮತ್ತೆಂದೂ ಈ ಜನರ ಮುಖ ನೋಡಬಾರದು—ಎನ್ನಿಸಿತು.

ಅಷ್ಟರಲ್ಲಿ ಕಾರು ಬಂತು. ಸೋಮನಾಥನ ಸ್ಕೂಟರು ಷೆಡ್ಡಿನ ಪಕ್ಕದಲ್ಲಿದ್ದುದನ್ನು ಜಯಶ್ರೀ ನೋಡಿದಳು.

ಮೆಟ್ಟಲುಗಳನ್ನೇರಿ ಹಜಾರವನ್ನು ದಾಟುತ್ತಿದ್ದ ಜಯಶ್ರೀ, ಸೋಮನಾಥನ ಕೊಠಡಿ ಸಮೀಪಿಸಿದೊಡನೆ ದೃಷ್ಟಿಯನ್ನು ನೆಲದತ್ತ ಹೊರಳಿಸಿದಳು. ಸೋಮನಾಥನಿಗೆ ಕಾರಿನ ಸಪ್ಪಳ ಕೇಳಿಸಿತ್ತು. ಆತ ಬಾಗಿಲಿನ ಚೌಕಟ್ಟಿನೊಳಗೆ ಪ್ರತಿಮೆಯಂತೆ ನಿಂತಿದ್ದ.

ಜಯಶ್ರೀ ತನ್ನೆದುರು ಹಾದುಹೋದಾಗ ಅವನೆಂದ:

"ಜಯಾ—"

ಅವಳು ಎರಡು ಹೆಜ್ಜೆ ಮುಂದೆ ಹೋಗಿ ನಿಂತು, ತಲೆಯೆತ್ತಿ ನೋಡದೆಯೆ,

"ಏನು?"

—ಎಂದು ಕೇಳಿದಳು.

"ನಾನು ನಿಮ್ಮ ಹತ್ತಿರ ಮಾತಾಡ್ಬೇಕು."

"ಹೂಂ,"

—ಎಂದು ಜಯಶ್ರೀ ಮಹಡಿಯ ಸೋಪಾನಗಳನ್ನು ಏರಿದಳು.

ಪುಸ್ತಕಗಳನ್ನಿರಿಸಿ ಇವಳು ಇಳಿದು ಬರುವಳೆಂದೆ? ಅಥವಾ ಅವಳನ್ನು ಹಿಂಬಾಲಿಸಿ ತಾನು ಹೋಗಬೇಕೆಂದೆ?

—ಒಂದು ಕ್ಷಣ ಸೋಮನಾಥ ನಿಂತಲ್ಲೆ ನಿಂತಿದ್ದು, ಬಳಿಕ ಪಾದಗಳನ್ನು ಕದಲಿಸಿ, ಜಯಶ್ರೀಯನ್ನು ಹಿಂಬಾಲಿಸಿದ.

ಪುಸ್ತಕಗಳಿಗೆ ಹಾಸಿಗೆಯ ವಿಶ್ರಾಂತಿ ಕೊಡಿಸಿ, ಬಾಗಿಲಿಗೆ ಬೆನ್ನುಮಾಡಿ ಜಯಶ್ರೀ ನಿಂತಿದ್ದಳು. ಸೋಮನಾಥ ಹತ್ತಿ ಬರುತ್ತಿದ್ದ ಸದ್ದು ಅವಳ ಕಿವಿಗೆ ಬಿದ್ದಿತ್ತು.

ಆ ಸದ್ದು ನಿಂತಿತು. ಕೊಠಡಿಯ ದ್ವಾರದಲ್ಲಿ ಸೋಮನಾಥನಿದ್ದ.

ಮೃದುವಾಗಿ ಆತನೆಂದ:

"ಜಯಾ......"

ಜಯಶ್ರೀ ಹೊರಳಿ ನೋಡಿದಳು. ಅವಳ ಕಾಲುಗಳಲ್ಲಿ ಬಲವಿರಲಿಲ್ಲ. ತುಟಿಗಳು ಅದುರುತ್ತಿದ್ದುವು. ಕಣ್ಣಾಲಿಗಳು ತೇಲುತ್ತಿದ್ದುವು.

ಮತ್ತೊಮ್ಮೆ ಸೋಮನಾಥ "ಜಯಾ" ಎನ್ನಲು ತುಟಿ ತೆರೆಯುವ ವೇಳೆಗೆ, ಜಯಶ್ರೀ ಆತನ ಎದೆಯಲ್ಲಿ ತನ್ನ ತಲೆಯನ್ನಿರಿಸಿದ್ದಳು. ಬೀಳುತ್ತಿದ್ದವಳಿಗೆ ಆತ ಆಧಾರವಾದ.

ಸಂಜೆಯ ಬೆಳಕು. ಇದು ಜಯರಾಮುವಿನ ಕೊಠಡಿ. ಇದರ ಎದುರಿನ ಕೋಣೆಯಲ್ಲಿರಬೇಕು ತ್ಯಾಗರಾಜನ ನೆರಳು. ಅದಕ್ಕೀಗ ಬೀಗ ತಗಲಿಸಿರುವರಲ್ಲ?

......ಸೋಮನಾಥ ತನ್ನ ಅಂಗೈಯಿಂದ ಜಯಶ್ರೀಯ ಬೆನ್ನನ್ನು ತೀಡುತ್ತಿದ್ದ. ಬಾರಿಬಾರಿಗೂ 'ಬ್ರಾ'ದ ಕೊಕ್ಕೆ ಅವನ ಬೆರಳಿಗೆ ತಗಲುತ್ತಿತ್ತು.

ಹಿಂದಿನ ಘಟನೆಯ ನೆನಪನ್ನು ಬದಿಗೆ ತಳ್ಳಿ, ಜಯಶ್ರೀಯ ತಲೆಗೂದಲ ಸುವಾಸನೆಯನ್ನು ಆಘ್ರಾಣಿಸುತ್ತ, ನಾಲ್ಕು ಹನಿ ಕಣ್ಣೀರನ್ನು ಆಕೆ ಸುರಿಸಲು ಸೋಮನಾಥ ಅವಕಾಶವಿತ್ತ.

ಅದು ಹರ್ಷಾಶ್ರು. ಆತ ಬಲ್ಲ.

ಕಮಲಮ್ಮನ ಕಳವಳಕ್ಕೆ ಆಧಾರವಿರಲಿಲ್ಲ.

ಮನಸ್ಸಿನಲ್ಲೇ ಸೋಮನಾಥನೆಂದುಕೊಂಡ:

"ಇವಳು ನನ್ನವಳು, ಇವಳು ನನ್ನವಳು."

ಜಯಶ್ರೀ ಸೋಮನಾಥನ ವಕ್ಷಸ್ಥಲದಿಂದ ತಲೆಯೆತ್ತಿ, ಆತನ ನೋಟವನ್ನು ಸಂಧಿಸಿದಳು. ಅವಳ ಅರೆಬಿರಿದ ರಕ್ತಹೀನ ತುಟಿಗಳು ಮೌನವಾಗಿ ಏನನ್ನೋ ಹೇಳಲೆತ್ನಿಸುತ್ತಿದ್ದುವು. ಆ ಮೂಕಭಾಷೆಯನ್ನು ತಿಳಿಯದವನೆ ಸೋಮನಾಥ? ಅವನು ಸಮರ್ಪಕವಾಗಿ ಉತ್ತರಿಸಿದ.

ಜಯಶ್ರೀಗೆ ಬೇಕಾಗಿದ್ದುದೂ ಅಷ್ಟೆ. ಅವಳು ಶಾಂತವಾದಳು. ಹಿಡಿತದಿಂದ ಬಿಡಿಸಿಕೊಂಡು ಮೇಜಿನ ಬಳಿಗೆ ಹೋಗುತ್ತ ಆಕೆ ಕೇಳಿದಳು:

"ಮಾತಾಡ್ಬೇಕು ಅಂದಿರಲ್ಲ?"

"ನೀವು—"

"ನೀವು? ನೀನು ಅಂತ ಅನ್ನಿ. ನನಗದೇ ಇಷ್ಟ."

"ನೀನು ಯಾಕೋ ಸಪ್ಪಗಿದೀ ಅಂದ್ರು ನಿಮ್ಮಮ್ಮ. ಸ್ವಲ್ಪ ಮಾತಾಡಿಸು ಅಂತ ಹೇಳಿದ್ರು."

ಜಯಶ್ರೀ ಸಣ್ಣನೆ ನಕ್ಕಳು.

"ನಮ್ಮಮ್ಮ ಇಷ್ಟು ಒಳ್ಳೆಯವಳೂಂತ ನನಗೆ ಗೊತ್ತಿರ್ಲಿಲ್ಲ."

"ಜಯಾ, ನನ್ನ ಸಮಾಧಾನಕ್ಕೆ ಒಂದು ಮಾತು ಕೇಳ್ತೀನಿ. ಈ ಮದುವೆ ನಿನಗೆ ಒಪ್ಪಿಗೆ ತಾನೆ?"

"ಇನ್ನೂ ಕೇಳ್ತೀರಲ್ಲ ಈ ಪ್ರಶ್ನೇನ?"

"ಹಾಗಾದರೆ ಯಾಕೆ ನೀನು ನನ್ನ ಜತೆ ಸಂಕೋಚದಿಂದ ನಡಕೋತೀಯಾ."

"ಹಿಂದೆ ನಿರ್ಲಜ್ಜವಾಗಿ ಮಾತಾಡ್ತಿದ್ದೆ, ಅಲ್ವೆ?"

"ಹಾಗಲ್ಲ–"

"ಈಗ ನಾನು ಬೇರೆ ಜಯಶ್ರೀ."

"ಸಂತೋಷ, ಜಯಾ. ಈ ತಿಂಗಳ ಕೊನೇಲಿ ಮುಹೂರ್ತ ಇದೆ ಅಂತ ಶಾಸ್ತ್ರಿಗಳು ಅಂದ್ರು. ಬೇಸಗೇಲಿ ನಿನ್ನ ಫೈನಲ್ ಮುಗಿದ್ಮೇಲೆ ಆಗಿದ್ರೆ ಚೆನ್ನಾಗಿತ್ತೇನೊ?"

"ಇಲ್ಲ. ಹಾಗೇನಿಲ್ಲ."

"ಪರೀಕ್ಷೆಗೆ ನೀನು ಕೂತ್ಕೋಬೇಕು. ಸಹಾಯ ಮಾಡ್ತೀನಿ."

ಜಯಶ್ರೀ ಕುಡಿಗಣ್ಣ ನೋಟ ಬೀರಿ ನಸುನಗುತ್ತ ಕೇಳಿದಳು:

"ಕಾಲೇಜ್ನಲ್ಲಿ ರೋಮಿಯೋ ಅಂತ ನಿಮಗೆ ಹೆಸರಿತ್ತಂತೆ. ಈ ವರೆಗೆ ಎಷ್ಟು ಹುಡುಗೀರಿಗೆ ಸಹಾಯ ಮಾಡಿದೀರಾ?"

ರಕ್ತರಂಜಿತವಾದ ಅವಳ ತುಟಿಗಳನ್ನೂ ಕೆನ್ನೆಗಳನ್ನೂ ನೋಡುತ್ತ ಸೋಮನಾಥ ಎರಡು ಹೆಜ್ಜೆ ಮುಂದುವರಿದ.

ಕಿಟಕಿಯಿಂದ ಕೆಳಗಿಣಿಕಿ ನೋಡಿ ಜಯಶ್ರೀ ಅಂದಳು:

"ಲಚ್ಚಿ ಬರ್ತಿದಾಳೆ."

ಸೋಮನಾಥನ ಪಾದಗಳು ಬೇರುಬಿಟ್ಟುವು. ಅವನೆಂದ:

"ನನ್ನ ಬದುಕಿನಲ್ಲಿ ನೀನೇ ಮೊದಲನೆಯವಳು ಜಯಾ, ನಂಬು."

ಲಚ್ಚಿ ಬಾಗಿಲಿನ ಬಳಿ ನಿಂತು ಗಾಂಭೀರ್ಯ ನಟಿಸುತ್ತ ಅಂದಳು:

"ನಿಮಗೆ ಇಬ್ಬರ್ಗೂ ಕಾಫಿ ತಿಂಡಿ ಇಲ್ಲಿಗೇ ಕಳಿಸ್ಬೇಕೋ ಅಥ್ವಾ ಕೆಳಕ್ಬರ್ತೀರೋ ಅಂತ ಕೇಳ್ಕೊಂಬಾ ಅಂದ್ರು ಅಮ್ಮಾವ್ರು."

"ಬರ್ತೀವಿ, ಹೋಗು,"

–ಎಂದಳು ಜಯಶ್ರೀ.

......ಅವರ ಕಾಫಿ ತಿಂಡಿ ಮುಗಿಯುವ ವೇಳೆಗೆ ಶ್ರೀಕಂಠಯ್ಯನವರ ಆಗಮನವಾಯಿತು.

"ಇನ್ನೂ ಹೋಗಿಲ್ವೆ ಮನೆಗೆ?"

–ಎಂದು ಸೋಮನಾಥನನ್ನು ಅವರು ಕೇಳಿದರು. ಪ್ರಶ್ನಿಸಿದ ಮರು ಕ್ಷಣ, ಹೀಗೆ ಕೇಳದಿದ್ದರೂ ಆಗುತ್ತಿತ್ತು–ಎಂದುಕೊಂಡರು.

"ಹೊರಡ್ತೀನಿ,"

–ಎಂದ ಸೋಮನಾಥ.

"ಸ್ವಲ್ಪ ಹೊತ್ತು ಇದ್ದು ಹೋಗೂಂತ ನಾನೇ ಅಂದೆ,"

–ಎಂದರು ಕಮಲಮ್ಮ.

"ಒಳ್ಳೇದೇ ಆಯ್ತು. ಏನವಸರ?"

–ಎಂದು ಶ್ರೀಕಂಠಯ್ಯ ಕತ್ತಿನಿಂದ ಶಾಲು ತೆಗೆದು,

"ಡಿಸೆಂಬರ್ ಇಪ್ಪತ್ತಾರು ಮುಹೂರ್ತ ಪ್ರಶಸ್ತವಾಗಿದೆ. ಇನ್ನು ಬಹಳ ದಿನವಿಲ್ಲ. ಏರ್ಪಾಟುಗಳನ್ನ ಬೇಗ ಬೇಗ್ನೆ ಮಾಡ್ಬೇಕು,"

–ಎಂದರು.

"ಈ ವಿಷಯ ನಿಮ್ಮ ತಾಯಿಗಿಷ್ಟು ತಿಳಿಸಯ್ಯ,"

–ಎಂದೂ ನುಡಿದರು.

ಕ್ಷಣ ತಡೆದು, ಹೊರಟುನಿಂತ ಸೋಮನಾಥನತ್ತ ನೋಡಿ,

"ಸ್ಕೂಟರ್ ಇಲ್ಲೇ ಇರ್ಲಿ. ಅಜೀಜ್ ಡ್ರಾಪ್ ಕೊಡ್ತಾನೆ,"

–ಎಂದರು. ಸ್ಕೂಟರ್‌ನಲ್ಲಿ ಹೋಗಿ ಏನಾದರೂ ಮಾಡಿಕೊಂಡು ಮದುವೆಯ ವೇಳೆಗೆ ಆತಂಕ ಉಂಟಾಗುವುದು ಬೇಡ ಎಂಬ ಯೋಚನೆ ಅವರದು.

ಸೋಮನಾಥ ಏನನ್ನೂ ಹೇಳಲಿಲ್ಲ.

ಶ್ರೀಕಂಠಯ್ಯ ಸ್ಪಷ್ಟವಾಗಿ ಅಂದರು:

"ಇನ್ನು ನಿನ್ನ ವಾಹನವನ್ನು ಮಾರಿಬಿಡೋದು ವಾಸಿ. ಈಗ ಒಳ್ಳೇ ಬೆಲೆ ಇದೆಯಂತಲ್ಲ? ಕೊಟ್ಟುಬಿಡು. ಮುಂದೆ ಅದು ನಿನಗೆ ಬೇಕಾಗೋದಿಲ್ಲ."

"ಆಗಲಿ, ಸಾರ್,"

–ಎಂದ ಸೋಮನಾಥ, ಮಾವಯ್ಯ ಎಂದು ಇವರನ್ನು ಸಂಬೋಧಿಸುವುದು ಹೇಗೆ? ಎಂಬ ಸಮಸ್ಯೆಗೆ ದಾರಿ ಹುಡುಕಲೆತ್ನಿಸುತ್ತ......

......ಕಾರಿನಲ್ಲಿ ಅಜೀಜನ ಪಕ್ಕದಲ್ಲೆ ಕುಳಿತ ಸೋಮನಾಥ, ಡ್ರೈವರ್ ವಾಹನ ನಡೆಸುತ್ತಿದ್ದ ರೀತಿಯನ್ನು ಲಕ್ಷ್ಯವಿಟ್ಟು ನೋಡಿದ.

೨೪

ಜಯರಾಮು ತೇಜಪುರಕ್ಕೆ ಹೊರಟುಹೋದ ಬಳಿಕ, ಅಲ್ಲಿಂದ ಆತನ ಕಾಗದ ಎಂದು ಬರುವುದೋ ಎಂದು ಕಮಲಮ್ಮ ದಿನವೂ ಚಡಪಡಿಸಿದರು. ಬಾಯಿಬಿಟ್ಟು ಶ್ರೀಕಂಠಯ್ಯನವರನ್ನು ಅವರು ಕೇಳಲಿಲ್ಲ. ಮಗಳೊಡನೆಯೂ ಸೋಮನಾಥನೊಡನೆಯೂ ಅದರ ಪ್ರಸ್ತಾಪ ಮಾಡುವುದನ್ನು ಒಂದು ದಿನವೂ ಮರೆಯಲಿಲ್ಲ.

ದಿನದ ಅಂಚೆ ಬಂದಾಗ, ಆ ಕವರಿನ ಮೇಲಿರುವುದು ಮಗನ ಹಸ್ತಾಕ್ಷರ ವಲ್ಲವಷ್ಟೆ?– ಎನಿಸುತಿತ್ತು ಶ್ರೀಕಂಠಯ್ಯನವರಿಗೆ. ಮರುಕ್ಷಣವೇ ತಮ್ಮನ್ನು ತಾವೇ ಟೀಕಿಸಿಕೊಳ್ಳುತ್ತಿದ್ದರು. ಮಗನ ನೆನಪನ್ನು ಬದಿಗೆ ತಳ್ಳುತ್ತಿದ್ದರು. ಆದರೆ ದಿನಪತ್ರಿಕೆಯನ್ನು ತೆರೆದಾಗ, ಜಯರಾಮು ಆ ಪುಟಗಳಲ್ಲಿ ಹಣಿಕಿ ಹಾಕಿದಂತೆ ಆಗುತ್ತಿತ್ತು.

ಮೇಜರ್ ಜಯರಾಮುವಿಗಾದರೋ ತೇಜಪುರದ ಮಿಲಿಟರಿ ಆಸ್ಪತ್ರೆಯಲ್ಲಿ ಬಿಡುವಿಲ್ಲದ ದುಡಿಮೆ. ಅಂಥದರಲ್ಲೂ ಆತ, ತಾನು ತೇಜಪುರ ತಲಪಿದ ನಾಲ್ಕನೆಯ ದಿನವೇ, ಶಿವರಾಮ್ ಮೆಡಿಕಲ್ ಕಾಲೇಜಿನ ಡೀನರಿಗೊಂದು ಪತ್ರ ಬರೆದ. ತಾಯಿಯ, ತಂದೆಯ ನೆನಪು ಆತನಿಗೆ ಆಗಲೇ ಇಲ್ಲ ಎಂದಲ್ಲ. ಆದರೆ, ಮಗನಿಂದೊಂದು ಕಾಗದ ಪಡೆಯಲು ಹೆತ್ತವರು ಮತ್ತೂ ಒಂದು ವಾರ ಕಾಯಬೇಕಾಯಿತು.

ಪತ್ರ ಕೈಸೇರಿದಾಗ ಶ್ರೀಕಂಠಯ್ಯ ನಿರ್ವಿಕಾರಭಾವದಿಂದ ಅದನ್ನೋದಿದರು.

'ಪ್ರೀತಿಯ ತಾಯಿ ಹಾಗೂ ತಂದೆಗೆ.'

ತಮ್ಮೊಬ್ಬರಿಗೇ ಬರೆದುದಲ್ಲ. ತಾಯಿ ಹಾಗೂ ತಂದೆಗೆ.

ಕಾಗದವನ್ನು ಮನೆಗೆ ತಂದು ಅವರು ಜಯಶ್ರೀಯ ಕೈಗಿತ್ತರು.

"ಜಯರಾಮು ಬರೆದಿದಾನೆ ನಿಮ್ಮಮ್ಮನಿಗೆ ಕೊಡು," —ಎಂದರು.

ಕಮಲಮ್ಮ ಮಗಳ ಕೈಯಲ್ಲಿ ಒಮ್ಮೆ ಓದಿಸಿದರು. ಬಳಿಕ ತಾವೇ ಪದಕ್ಕೆ ಪದ ಜೋಡಿಸಿ ಎರಡು ಸಾರೆ ಓದಿಕೊಂಡರು. ಕಾಗದ ಚುಟುಕಾಗಿ ಇದ್ದುದರಿಂದ ಆ ಓದು ಸುಲಭವೂ ಆಯಿತು......

"ನಾನು ಈ ಊರಿಗೆ ಕ್ಷೇಮವಾಗಿ ಬಂದು ತಲಪಿದೆ. ಆ ದಿನವೇ ಹಾಜರಾದೆ. ನನ್ನಂತೆಯೇ ದೇಶದ ಬೇರೆ ಬೇರೆ ಭಾಗಗಳಿಂದ ಬಂದವರು ಇಲ್ಲಿ ಬಹಳ ಜನರಿದ್ದಾರೆ. ಶಿಕ್ಷಣ ಹಾಗೂ ದುಡಿಮೆ ಜತೆಯಾಗಿಯೇ ಸಾಗಿವೆ. ಯುದ್ಧದಲ್ಲಿ ಗಾಯಗೊಂಡವರ ಚಿಕಿತ್ಸೆಯಲ್ಲಿ ನಾವು ನಿರತರಾಗಿದ್ದೇವೆ. ಮೈ ಕೊರೆಯುವ ಚಳಿಯನ್ನಾಗಲೀ ಇತರ ಅನನುಕೂಲಗಳನ್ನಾಗಲೀ ಗಮನಿಸದೆ, ಉತ್ಸಾಹದಿಂದಲೂ ಶ್ರದ್ಧೆಯಿಂದಲೂ ನಾವು ದುಡಿಯುತ್ತಿದ್ದೇವೆ. ಡಾಕ್ಟರಾಗಿದ್ದುಕೊಂಡು ರಾಷ್ಟ್ರಕ್ಕೆ ಉಪಯುಕ್ತ ಸೇವೆ ಸಲ್ಲಿಸುತ್ತಿದ್ದೇನೆಂದು ನನಗೆ ಹೆಮ್ಮೆ.

"ಇದನ್ನು ಬರೆಯುತ್ತಿರುವ ಘಳಿಗೆಯಲ್ಲಿ ಯುದ್ಧರಂಗ ಸ್ತಬ್ಧವಾಗಿದೆ. ಚೀಣೀಯರು ಅಭಿಯೋಗಕ್ಕೆ ಪೂರ್ವದ ರೇಖೆಗೆ ಹಿಂದಕ್ಕೆ ಸರಿಯುತ್ತಿರುವಂತೆ ಕಾಣುತ್ತಿದೆ. ಹಿಮರಾಶಿಯಲ್ಲಿ ಗೋರಿ ಕಂಡೇವೆಂದು ಅವರು ಹೆದರಿದರೋ, ಬಯಲಿಗಿಳಿದರೆ ತಮಗೆ ಪರಾಭವವಾದೀತೆಂದು ಅಂಜಿದರೋ, ಅಥವಾ ಭಾರತದಲ್ಲಿ ಕಂಡುಬಂದ ಐಕ್ಯದ ಎದುರು ಕಂಗಾಲಾದರೋ ಹೇಳುವುದು ಕಷ್ಟ. ಹಾಗೇಯೇ ಚಳಿಗಾಲ ದಾಟಿದೊಡನೆ ಅವರು ಮತ್ತೆ ಬರುವ ಸಂಭವವೂ ಇಲ್ಲದಿಲ್ಲ. ನಾವು ಸದಾ ಜಾಗೃತರಾಗಿ ಸನ್ನದ್ಧರಾಗಿ ಇರಬೇಕಾಗಿದೆ.

"ನೀವಿಬ್ಬರೂ ಆರೋಗ್ಯವಾಗಿದ್ದೀರೆಂದು ನಂಬಿಕೆ. ಜಯಶ್ರೀಯ ವ್ಯಾಸಂಗ ಮುಂದುವರಿಯುತ್ತಿದೆ ಎಂದು ಭಾವಿಸಿದ್ದೇನೆ. ಅವಳಿಗೆ ನನ್ನ ಒಲವು. ಮದುವೆಯ ದಿನ ನಿಶ್ಚಯವಾಯಿತೆ? ಭಾವನಾಗಲಿರುವ ಶ್ರೀ ಸೋಮನಾಥರಿಗೆ ನನ್ನ ವಂದನೆಗಳು.

ಇಂತಿ,

ಬೇಡುವ ಆಶೀರ್ವಾದಗಳು,

ಜಯರಾಮು"

ಓದಿದ ಮೇಲೆ ಒಂದು ಬಗೆಯ ಅತೃಪ್ತಿ ಕಮಲಮ್ಮನಿಗೆ. ಕಾಗದದಲ್ಲಿ ಯಾವುದೋ ಕೊರತೆ ಇದ್ದಂತೆ ಅವರಿಗೆ ಅನಿಸಿತು. ಮಗ ತಮ್ಮಿಂದ ದೂರವಾದ, ಇಂಥ ಎಷ್ಟು ಕಾಗದಗಳನ್ನು ಆತ ಬರೆದರೂ ಸಾಮಿಪ್ಯದ ಕಲ್ಪನೆ ಉಂಟಾಗದು ಎಂದು ತೋರಿತು. ನ್ಯಾಯವಾಗಿ ನೋಡಿದರೆ ಮಗನ ಮದುವೆ ಮೊದಲು ಆಗಬೇಕಿತ್ತು. ಅಥವಾ ಇಬ್ಬರದನ್ನೂ ಒಟ್ಟಿಗೇ ನಡೆಸುವುದೂ ಸಾಧ್ಯವಿತ್ತು. ಈಗ ಅದಿಲ್ಲ. ಜಯಶ್ರೀಯ ಮದುವೆಯ ವೇಳೆಗಾದರೂ ಮಗ ಬರುವನೋ ಇಲ್ಲವೋ......

ಶ್ರೀಕಂಠಯ್ಯನವರಿಗಾದರೂ ಕಾಗದ ತೃಪ್ತಿಯನ್ನುಂಟುಮಾಡಲಿಲ್ಲ. ರಾಗೋದ್ವೇಗದ ಒಕ್ಕಣೆಯನ್ನು ಅವರು ನಿರೀಕ್ಷಿಸಿರಲಿಲ್ಲವಾದರೂ, ಜಯರಾಮು ಬರೆದಿದ್ದುದು ಬಹಳ ಸಪ್ಪೆ ಎಂದು ಅವರಿಗೆ ಭಾಸವಾಯಿತು. ತೋಪುಗಳು ಗರ್ಜಿಸುವ ಆ ಹಿಮಕಾಡಿಗೆ ಹೋಗುವ ಅಗತ್ಯವಿರಲಿಲ್ಲ. ಹೋಗಲೇಬೇಕು ಎಂದಿದ್ದರೂ ಅವಸರಪಡಬೇಕಾದುದಿರಲಿಲ್ಲ. ತಂಗಿಯ ಮದುವೆ ಮುಗಿಸಿಕೊಂಡು......ಇದನ್ನೆಲ್ಲ ಯೋಚಿಸಿ ವ್ಯರ್ಥ ತಲೆಕೆಡಿಸಿಕೊಳ್ಳುವುದರಿಂದ ಏನು ಪ್ರಯೋಜನ?—ಎಂದು ಶ್ರೀಕಂಠಯ್ಯ ಸುಮ್ಮನಾದರು.

ಆ ರಾತ್ರೆ ಶ್ರೀಕಂಠಯ್ಯ ಊಟ ಮುಗಿಸಿ ತಮ್ಮ ಕೋಣೆಗೆ ಮರಳಿದಾಗ ಕಮಲಮ್ಮ ಅವರನ್ನು ಹಿಂಬಾಲಿಸಿದರು.

"ಮದುವೆಗೆ ಒಂದು ವಾರ ಇರುವಾಗಲೇ ಬಂದುಬಿಡೂಂತ ಜಯೂಗೆ ಬರೀತೀರಾ?"

—ಎಂದು ಕೇಳಿದರು.

"ಹ್ಞ—ಹ್ಞ. ಅದಕ್ಕೇನಂತೆ? ಬರೆಯೋಣ ಬರೆಯೋಣ,"

—ಎಂದರು ಶ್ರೀಕಂಠಯ್ಯ.

೨೫

ಭಾಗ್ಯನಗರದಲ್ಲಿ ಮನೆಮಾತಾಯಿತು ಸಾಹುಕಾರ ಶ್ರೀಕಂಠಯ್ಯನವರ 'ಸ್ವಗೃಹ'ದಲ್ಲಿ ನಡೆಯಲಿದ್ದ ವಿವಾಹಮಹೋತ್ಸವ. ರಾಜಧಾನಿಯೊಂದರಲ್ಲೇ ಏಕೆ ಇಡಿಯ ಕಿಷ್ಕಿಂಧೆಯ ಮೂಲೆ ಮೂಲೆಗಳಿಗೆ ಪ್ರತಿಷ್ಠಿತರಿಗೆ ಆಮಂತ್ರಣ ಪತ್ರಿಕೆಗಳು ಹೋದುವು. ಭಾರತದ ಎಲ್ಲಾ ಮುಖ್ಯ ನಗರಗಳಿಗೂ ಅಂಚೆ ಕರೆಯೋಲೆಗಳನ್ನು ಒಯ್ದಿತು. ಆಹ್ವಾನಿತರ ಪಟ್ಟಿಯನ್ನು ಸಿದ್ಧಗೊಳಿಸಲು ಶ್ರೀಕಂಠಯ್ಯನವರ ನಗರ ಕಚೇರಿಯೂ ರಕ್ಷಣಾನಿಧಿ ಸಂಗ್ರಹ ಸಮಿತಿಯ ಸಿಬ್ಬಂದಿಯೂ ಶಾಂತಮಲ್ಲಪ್ಪನೂ ಒಂದು ವಾರ ಹಗಲಿರುಳೂ ದುಡಿಯಬೇಕಾಯಿತು.

ಶ್ರೀಸದನದ ಉದ್ಯಾನವೂ ಹಿತ್ತಲೂ ಸಾಲಂಕೃತ ಚಪ್ಪರದಿಂದ ಮುಚ್ಚಲ್ಪಟ್ಟಿತು. ನಗರದ ಪ್ರಮುಖ ವಿಶ್ರಾಂತಿಗೃಹಗಳಲ್ಲಿ ನೂರಾರು ಕೊಠಡಿಗಳು ಪರವೂರುಗಳಿಂದ ಬರುವ ಆಮಂತ್ರಿತರಿಗಾಗಿ ಶ್ರೀಕಂಠಯ್ಯನವರಿಂದ ಕಾಯ್ದಿರಿಸಲ್ಪಟ್ಟುವು.

ಆ ಮದುವೆ ಶ್ರೀಕಂಠಯ್ಯನವರ ಪ್ರಭಾವದ ಸಾಮರ್ಥ್ಯದ ಸತ್ವಪರೀಕ್ಷೆಯ ಸನ್ನಿವೇಶ. ಸೇವಾದಳದವರು ಸ್ವಯಂಸೇವಕರಾಗಿ ದುಡಿದರು. ಪುರಸಭೆಯ ವಾಹನಗಳು ಮದುವೆಮನೆಗೆ ನೀರು ಹೊತ್ತುವು. ವಿದ್ಯುಚ್ಛಕ್ತಿ ಮಂಡಲದೊಂದು ಘಟಕ ಹಗಲಿರುಳೂ ಅಲ್ಲಿ ದೀಪಗಳಿಗೆ ಕಾವಲಾಯಿತು.

ವಿವಾಹದ ದಿನ ಮುಹೂರ್ತದ ವೇಳೆಯಲ್ಲೂ ಆರತ್ಯಕ್ಷತೆಯ ಸಮಯದಲ್ಲೂ ರಾತ್ರೆಯ ಭೋಜನಕೂಟದ ಹೊತ್ತಿನಲ್ಲೂ ಶ್ರೀಸದನದತ್ತ ಹೊರಳಿದ ಎಲ್ಲ ರಸ್ತೆಗಳಲ್ಲೂ ಕಾರುಗಳು, ಟ್ಯಾಕ್ಸಿಗಳು, ಅಟೋ ರಿಕ್ಷಾಗಳು ಹಾಗೂ ಪಾದಚಾರಿಗಳ ಮೆರವಣಿಗೆಯೊಂದೇ ಕಂಡುಬರುತ್ತಿತ್ತು. ಸಚಿವಸಂಪುಟದಿಂದ ಹಿಡಿದು ಶ್ರೀಸಾಮಾನ್ಯನ ತನಕ, ತ್ಯಾಗರಾಜನೊಬ್ಬನ ಹೊರತಾಗಿ, ಆ ದಿನ ಶ್ರೀಸದನಕ್ಕೆ ಬರದವರಿಲ್ಲ.

ಆರತ್ಯಕ್ಷತೆಗೆ ಜಯಶ್ರೀ–ಸೋಮನಾಥರ ಜೋಡಿ ಕುಳಿತಾಗ ಮೂವೀ ಕ್ಯಾಮೆರಾ ವಿವಾಹಮಹೋತ್ಸವದ ಉತ್ತರಾರ್ಧದ ಚಿತ್ರೀಕರಣಕ್ಕೆ ಸಿದ್ಧವಾಯಿತು.

ಬೆಳಗ್ಗಿನಿಂದಲೂ ಶುಭಾಶಯಗಳನ್ನು ಹೊತ್ತು ತಂತಿಗಳು ಹದಿನೈದು ನಿಮಿಷಗಳಿಗೊಮ್ಮೆ ಬರುತ್ತಿದ್ದುವು. ಅಲಂಕರಿಸಿದ ಒಂದು ಮೇಜಿನ ಮೇ. ಆ ಲಕೋಟೆಗಳನ್ನೂ ಅವುಗಳ ಒಳಗಿದ್ದ ಹಾಳೆಗಳನ್ನೂ ಹೇರಿದ್ದರು. ಅದರ ಮಗ್ಗುಲಲ್ಲಿ ಸಾಲಾಗಿ ಇರಿಸಿದ್ದ ಎರಡು ಮೂರು ಮೇಜುಗಳ ಮೇಲೆ ಉಡುಗೊರೆಗಳ ರಾಶಿ ಇತ್ತು.

'ರಿಸೆಪ್ಷನ್' ನಡೆದಿದ್ದಾಗ ಒಮ್ಮೆ ಬಂದ ಕೆಲ ಶುಭಾಶಯಗಳಿಂದ ಒಂದನ್ನೆತ್ತಿ ಶ್ರೀಕಂಠಯ್ಯ ಮಗಳಿಗೆ ಕೊಟ್ಟರು. ಲಿಪಿ ಲ್ಯಾಟಿನ್, ಭಾಷೆ ಬೇರೆ. ಸಹಿ ಸ್ಪಷ್ಟವಾಗಿತ್ತು: ಜಯರಾಮು.

ಓದಿ ಅರ್ಥಮಾಡಿಕೊಳ್ಳಲಾರದೆ ಅದನ್ನು ಆಕೆ ಸೋಮನಾಥನ ಕೈಗಿತ್ತಳು. ಆತ ಒಂದು ನಿಮಿಷದ ಮೌನಪ್ರಯತ್ನದ ಬಳಿಕ ಸ್ಪಷ್ಟವಾಗಿ ಉಚ್ಚರಿಸಿದ:

"ನಿಮ್ಮ ಬದುಕು ಬಂಗಾರವಾಗಲಿ......"

......ಆ ದಿನದ ಪೂರ್ವ ವೈಭವವನ್ನು ಕಣ್ಣಾರೆ ನೋಡಿದ ಪ್ರತಿಯೊಬ್ಬರೂ ಅಂದರು:

"ಇದು ಭಾಗ್ಯನಗರದಲ್ಲಿ ಈ ಶತಮಾನದಲ್ಲಿ ಕಂಡಿರದ ಕೇಳಿರದ ಶ್ರೀಮಂತ ವಿವಾಹ."

ಖರ್ಚು ಎಷ್ಟಾಯಿತು? ಒಂದು ಲಕ್ಷ ಆಗಿರಬಹುದು, ಎಂದರು ಕೆಲವರು. ಎರಡು ಲಕ್ಷಕ್ಕೆ ಕಡಮೆಯಾಗದು, ಎಂದರು ಬೇರೆ ಕೆಲವರು. ಊಹೂಂ, ಮೂರೋ ನಾಲ್ಕೋ ಆಗಿರಬೇಕು, ಎಂದರು ಮತ್ತೆ ಕೆಲವರು.

೦ ೦ ೦ ೦

ಮದುವೆಯ ಮಾರನೆಯ ಬೆಳಗ್ಗೆ ಶ್ರೀಕಂಠಯ್ಯ ತಡವಾಗಿ ಎದ್ದರು. ಚಪ್ಪರ ಬಿಕೋ ಎನ್ನುತಿತ್ತು. ಆಗಿರುವ ಶ್ರಮದಿಂದ ಚೇತರಿಸಿಕೊಳ್ಳಲು ಇನ್ನು ಒಂದು ವಾರವಾದರೂ ಬೇಕು–ಎಂದುಕೊಂಡರು ಶ್ರೀಕಂಠಯ್ಯ.

ನೂತನ ದಂಪತಿಗಳ ಮೊದಲ ಇರುಳು ಕಳೆದಿತ್ತು. ಏಳಲು ಮನಸ್ಸಾಗದೆ ಜಯಶ್ರೀ ಇನ್ನೂ ಮಲಗಿಯೇ ಇದ್ದಳು.

ಸೋಮನಾಥ ಎದ್ದು ನಿಧಾನವಾಗಿ ಇಳಿದುಬಂದ. ನಿದ್ದೆಗೆಟ್ಟಿದ್ದನಲ್ಲ? ಕಣ್ಣುಗಳು ಕೆಂಪಗಾಗಿದ್ದುವು. ದ್ವಾರಮಂಟಪದ ಹೊಸ್ತಿಲಲ್ಲಿ ನಿಂತು ಆತ ಸುತ್ತಲೂ ನೋಡಿದ. ಅಸ್ತವ್ಯಸ್ತವಾಗಿ ಬಿದ್ದಿದ್ದ ಪೀಠೋಪಕರಣಗಳೆಷ್ಟು! ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿದ್ದ ಹೂಗಳೆಷ್ಟು!–ಅಲಂಕಾರದ ಸಾಮಗ್ರಿಗಳೆಷ್ಟು! ಈ ಸಾಮ್ರಾಜ್ಯ ದೊಡ್ಡದು–ಎಂದು ಸೋಮನಾಥನಿಗೆನಿಸಿತು. ತನ್ನ ಹೊಣೆಗಾರಿಕೆ—

ವಾಬುದಾರಿ ಗುರುತರವಾದುದು–ಎಂದು ತೋರಿತು.

ಸೇವಾದಳದ ಸ್ವಯಂಸೇವಕರು ಕೆಲವರು ಚಪ್ಪರದ ಮೂಲೆಗಳಲ್ಲಿ ಜಮಖಾನ ಹೊದೆದುಕೊಂಡು ಇನ್ನೂ ನಿದ್ದೆಮಾಡುತ್ತಿದ್ದರು.

ಮನೆ ಚಾಕರರು ಎಲ್ಲಿಗೆ ಹೋದರೊ?

ಮಾಲಿ ಮಾರಣ್ಣ ತನ್ನ ಹೂಗಿಡಗಳಿಗೊದಗಿದ ದುರ್ಗತಿಗಾಗಿ ಮರುಗುತ್ತ ಒಂದೆಡೆ ನಿಂತಿದ್ದ.

ಆತನೇ ಜಗ್ಗನಿರಬಹುದೆಂದು ಭಾವಿಸಿ ಸೋಮನಾಥ ಧ್ವನಿ ಏರಿಸಿ,

"ಜಗ್ಗಾ! ಏ ಜಗ್ಗಾ!"

–ಎಂದು ಕರೆದ.

ಮಾರಣ್ಣ ಮಿಸುಕಲಿಲ್ಲ. ಬದಲು, ಜಗ್ಗ ದೂರದಲ್ಲಿ ತನ್ನ ಕಣ್ಣಿಗೆ ಬೀಳಲು,

"ಚಿಕ್ಕ ಯುಜಮಾನ್ರು ಕೂಗ್ತಾ ಅವರೆ, ಜಗ್ಗಾ,"

–ಎಂದು ರಾಗವಾಗಿ ನುಡಿದ.

ಶ್ರೀಸದನದ ಆವರಣದಲ್ಲಿ ಆ ಮಾತು ಅಲೆಯಲೆಯಾಗಿ ಹಬ್ಬಿಕೊಂಡಿತು.

ನಿರಂಜನರ ಕೃತಿಗಳು

ಕಾದಂಬರಿ

ವಿಮೋಚನೆ.
ಬನಶಂಕರಿ.
ಸೌಭಾಗ್ಯ.
ಅಭಯ.
ದೂರದ ನಕ್ಷತ್ರ
ನವೋದಯ.
ರಂಗಮ್ಮನ ವಠಾರ.
ಪಾಲಿಗೆ ಬಂದ ಪಂಚಾಮೃತ
ಏಕಾಂಗಿನಿ
ಚಿರಸ್ಮರಣೆ
ಕೊನೇ ನಮಸ್ಕಾರ
ಮಿಣುಕುಹುಳ.
ವಿಲಾಸಿನಿ.
ಅಂಜನ.
ವಿಶಾಲಾಕ್ಷಿ
ದೀಕ್ಷೆ
ಕಲ್ಯಾಣ ಸ್ವಾಮಿ.
ತೊಟ್ಟಿಲು ತೂಗದ ಕೈ.
ಹೆಣ್ಣಾಗಿ ಕಾಡಿತ್ತು ಮಾಯೆ
ಸ್ವಾಮಿ ಅಪರಂಪಾರ
ಬಂಗಾರದ ಜಿಂಕೆ.

ನಾಟಕ

ಸಂಗಮಸ್ನಾನ
ಆಹ್ವಾನ

ಜೀವನವೃತ್ತ

ಋತುರಾಜ

ಕಥಾಸಂಗ್ರಹ

ಸಂಧಿಕಾಲ
ರಕ್ತಸರೋವರ
ಅನ್ನಪೂರ್ಣಾ
ಕೊನೆಯ ಗಿರಾಕಿ
ಶಾರದ ಹುಡುಗ
ಕಾತ್ಯಾಯಿನಿ
ಒಂಟಿ ನಕ್ಷತ್ರ ನಕ್ಕಿತು
ಯಾವ ಜನ್ಮದ ಶಾಪ?

ಲೇಖನ ಸಂಕಲನ

ಐದು ನಿಮಿಷ
ಕಾಲಕ್ಷೇಪ

ಪತ್ರ ಸಂಕಲನ

ಸಾಧನಾ
ಪುಷ್ಪಹಾರ

ರಾಜಕೀಯ

ಹಿಮಾಲಯದ ದಳ್ಳುರಿ

ಭಾಷಾಂತರ

ತಾಯಿ
ನೀತಿಕಥೆಗಳು
ಮದುವಣಗಿತ್ತಿ
ಮಾನವನ ಪಾಡು
ಅಧಃಪತನ
ನನ್ನ ಬಾಲ್ಯ
ಜನತೆಯ ನಡುವೆ
ನನ್ನ ವಿಶ್ವವಿದ್ಯಾಲಯ

"ನಿರಂಜನ"

—ಕನ್ನಡ ಸಾಹಿತ್ಯಪ್ರಪಂಚದಲ್ಲಿ ಪ್ರವೇಶ ಇರುವ ಎಲ್ಲರೂ [illegible] ಹೆಸರು:

ಚುರು[illegible] ಶೈಲಿ, ಮಿಂಚಿನ ಮಾತು, ಪ್ರಭಾವಿ ಕಥನತಂತ್ರ [illegible] ಹೆಸರೂ ಹೌದು.

ಬರೆದ ಕ[illegible] ಸಂಖ್ಯೆ ಇಪ್ಪತ್ತೊಂದು. [illegible]ರ ಕಾದಂಬರಿಯೂ ಒಂ[illegible] ವ್ಯಕ್ತಿತ್ವವನ್ನು ಪಡೆದಿದೆ. ಅವರ [illegible] ಮಿಂಚಿನ ಝಳಕೂ ಇ[illegible]. ಚೆಲುವೆಯ ಬೆಳಕೂ ಇದೆ. ಪ್ರತಿಭೆ[illegible] ಜೊತೆನೆ ಬೆರೆತು ನಿ[illegible] ಸಾಹಿತ್ಯವನ್ನು ರೂಪಿಸುತ್ತಿದೆ.

ಬಂಗಾರದ [illegible] ಇಪ್ಪತ್ತನೆಯ ಶತಮಾನದ ಕ್ಷತ್ರಿಯ ಜೀವನ[illegible]ಕ ಪ್ರತಿಬಿಂ[illegible] ಜಿಂಕೆಗಿಂತಲು ಬಂಗಾರದ [illegible]ಪ[illegible]ವ [illegible] ನಮಗೆ ಹೆ[illegible] ಕಾಣುತ್ತದೆ. ಈ ಕಾ[illegible]ಬರಿ[illegible] ಶ್ರೀಕಂಠಯ್ಯ, ಜಂಬೂಶ್ರೀ, ತ್ಯಾಗರಾಜನ್ ಇಂಥ ಪಾತ್ರಗಳು ನಮ್ಮ ಸು[illegible] ಕಮಲಮ್ಮನಂ[illegible] ಸಾತ್ವಿಕ ಚೇತನಗಳು, ಜಯರಾಮು[illegible]ಥ ಆದ[illegible] ಈ ಕೃತಿಯ ಜೀವನದ ನಡುವೆಯ ಬೆಳಕಾಗಿ ಎದ್ದು ಕಾಣುತ್ತಾರೆ. [illegible] ಪಾ[illegible] ಬಂದು ಹೋ[illegible]ವ—ಲೀಲಾ ಸುಖ್‌ಠಣ್‌ಕರ್, ಸೋಮನಾಥ, [illegible]ನ [illegible]ನ [illegible]ಥವರೂ ಬೀರುವ ಪ್ರಭಾವ ಕಮ್ಮಿ[illegible]ದೇನಲ್ಲ. [illegible] ಪಾತ್ರ ಕೂಡ ಜೀವನದ ಯಾವುದೋ ಒಂದು ಪಿಲಿಸ್ಸ[illegible] [illegible]ಬಿಂಬಿಸಲು ಮರೆಯಲಿಲ್ಲ.

[illegible]ದ ಜ[illegible] ಹೆಸರೇ ಸೂಚಿ[illegible]ಂತೆ ತೀರ ಹೊಸ[illegible]